ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೨

೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೭೧

ಲೇಖಕರಿಗೆ ಸೂಚನೆಗಳು

೧. ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨. ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩. ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಆವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪. ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫. ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸ ಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮. ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು–೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧ ಸಂಚಿಕೆ ೨

೨

ಫೆಬ್ರುವರಿ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೧

MANAVIKA KARNATAKA, Kannada quarterly of the University of Mysore. Volume 1, Number 2, February 1971. Edited by H. S. Krishnaswamy Iyengar and Dr. A. V. Narasimha Murthy.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್

ಡಾ. ಎ. ವಿ. ನರಸಿಂಹಮೂರ್ತಿ

ಪ್ರಕಾಶಕರು

ಡಾ. ಪ್ರಭುಶಂಕರ

ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

ಮುದ್ರಕರು

ಎಚ್. ನರಸಣ್ಣ

ಡೆಪ್ಯೂಟಿ ಡೈರೆಕ್ಟರ್, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ವಿಷಯಸೂಚಿ

ಸೇರಿರಲಿ ಅವರು ಈ ಬಹುಮಾನ ಪಡೆಯಲರ್ಹರು. ಪ್ರತಿ ವರ್ಷ ಡಿಸೆಂಬರ್ ೧೦ನೆಯ ತಾರೀಖು (ಆಲ್‌ಫ್ರೆಡ್ ಬರ್‌ನಾರ್ಡ್ ನೊಬೆಲ್ ಕಾಲವಾದ ದಿನ) ಬಹುಮಾನ ವಿತರಣೆ ಮಾಡಲಾಗುತ್ತದೆ. ಶಾಂತಿ ಪ್ರತಿಪಾದನೆಗಾಗಿ ಕೊಡುವ ಬಹುಮಾನವನ್ನು ಆಸ್ಲೋ ನಗರದಲ್ಲೂ ವಿಜ್ಞಾನಿಗಳಿಗೆ ಕೊಡುವ ಬಹುಮಾನ ವನ್ನು ಸ್ಟಾಕ್‌ಹೋಂನಲ್ಲೂ ವಿತರಣೆ ಮಾಡಲಾಗುತ್ತದೆ. ೧೯೦೧ ರಿಂದ ಈ ಬಹುಮಾನ ಕೊಡಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಬಹುಮಾನವನ್ನು ಸಂಸ್ಥೆಗಳಿಗೆ ಕೊಡಲಾಗಿದೆ. ಒಂದೇ ಬಹುಮಾನವನ್ನು ಇಬ್ಬರು ವಿಜ್ಞಾನಿಗಳಿಗೆ ಒಟ್ಟಾಗಿ ಕೊಡಲಾಗಿದೆ.

೧೯೬೯ರ ವರೆಗೆ ಸಮಾಜಶಾಸ್ತ್ರಗಳಿಗೆ ನೊಬೆಲ್ ಬಹುಮಾನ ಕೊಡುತ್ತಿರ ಲ್ಲಿಲ್ಲ. ಸಮಾಜಶಾಸ್ತ್ರಗಳಲ್ಲಿ ಮಾಡಿದ ಪರಿಶೋಧನೆ ಭೌತ ವಿಜ್ಞಾನಗಳಲ್ಲಿ ಅಥವಾ ಪ್ರಕೃತಿ ವಿಜ್ಞಾನಗಳಲ್ಲಿ ಮಾಡುವ ಪರಿಶೋಧನೆಗೆ ಸಮನಾಗಿರುವುದಿಲ್ಲ ಮತ್ತು ಮಾನವನ ಜ್ಞಾನಭಿವೃದ್ಧಿಗೆ ಸರಿಸಮಾನವಾದ ಹೊಸ ವಿಷಯಗಳನ್ನು ಸಮಾಜ ಶಾಸ್ತ್ರಗಳು ಒದಗಿಸಲಾರವು ಎಂಬ ಭಾವನೆ ಇದುವರೆಗಿತ್ತು. ಆದರೆ ಕಳೆದ ೪೦ ವರ್ಷಗಳಿಂದ (೧೯೩೦ರಿಂದ) ಅರ್ಥಶಾಸ್ತ್ರದಲ್ಲಿ ಬೆಳದು ಬಂದಿರುವ ಸಂಶೋಧನ ರೀತಿಯನ್ನು ಮತ್ತು ಅದರಿಂದ ಉಂಟಾಗುವ ಪ್ರಯೋಜನವನ್ನು ಗಣನೆಗೆ ತೆಗೆದುಕೊಂಡು ನೊಬಲ್ ಪಾರಿತೋಷಕ ಸಮಿತಿಯವರು ಅರ್ಥಶಾಸ್ತ್ರಜ್ಞರಿಗೂ ಬಹುಮಾನ ಕೊಡಲು ತೀರ್ಮಾನಿಸಿದರು. ಸಮಾಜಶಾಸ್ತ್ರಗಳ ಪೈಕಿ ಇಂಥ ದೊಡ್ಡ ಗೌರವಸ್ಥಾನವನ್ನು ಮೊಟ್ಟಮೊದಲಿಗೆ ಪಡೆದದ್ದು ಅರ್ಥಶಾಸ್ತ್ರ. ಸ್ವೀಡನ್‌ದೇಶದ ಕೇಂದ್ರ ಬ್ಯಾಂಕಾದ ಬ್ಯಾಂಕ್ ಆಫ್ ಸ್ವೀಡನ್ ತನ್ನ ೩೦೦ನೆಯ ವಾರ್ಷಿಕೋತ್ಸವ ವನ್ನು ಆಚರಿಸಿದಾಗ ಅದರ ಸವಿನೆನಪಿಗಾಗಿ ಒಂದು ಕೊಡುಗೆಯನ್ನು ನೊಬೆಲ್ ಪಾರಿತೋಷಕ ಸಮಿತಿಯವರಿಗೆ ಕೊಟ್ಟಿತು. ಅರ್ಥಶಾಸ್ತ್ರದಲ್ಲಿ ಅತ್ಯಂತ ಪ್ರತಿಭೆ ಯನ್ನು ತೋರಿಸಿದವರಿಗೆ ಆ ಕೊಡುಗೆಯನ್ನು ಉಪಯೋಗಿಸಿಕೊಂಡು ನೊಬೆಲ್ ಪ್ರಶಸ್ತಿ ಕೊಡಬೇಕೆಂದು ಸ್ವೀಡನ್ ದೇಶದ ಕೇಂದ್ರ ಬ್ಯಾಂಕು ನೊಬೆಲ್ ಪಾರಿ ತೋಷಕ ಸಮಿತಿಯವರಿಗೆ ಸೂಚಿಸಿತು. ಅದರ ಪ್ರಕಾರ ಮೊದಲ ಬಾರಿಗೆ೧೯೬೯ರಲ್ಲಿ ಇಬ್ಬರು ಸುಪ್ರಸಿದ್ಧ ಅರ್ಥಶಾಸ್ತ್ರಜ್ಞರಿಗೆ ಒಟ್ಟಾಗಿ ಪ್ರಶಸ್ತಿ ಕೊಡಲಾಯಿತು. ಪ್ರಶಸ್ತಿ ನಗದು ಬಹುಮಾನವನ್ನು ಒಳಗೊಂಡಿರುತ್ತದೆ. ಅದರ ಪ್ರಕಾರ ೭೩,೦೦೦ ಅಮೆರಿಕನ್ ಡಾಲರುಗಳ ಮೊತ್ತದ ಹಣವನ್ನು (೫,೪೭,೨೫೦ ರೂಪಾಯಿಗಳು) ನಾರ್ವೆಯ ರ್‍ಯಾಗ್‌ನರ್ ಫ್ರಿಷ್ ಮತ್ತು ಹಾಲೆಂಡಿನ ಜಾನ್ ಟಿನ್‌ಬರ್ಗನ್‌ಗಳಿಗೆ ಸಮನಾಗಿ ಕೊಡಲಾಯಿತು.

ರ್‍ಯಾಗ್‌ನರ್ ಫ್ರಿಷ್ ಮತ್ತು ಜಾನ್ ಟಿನ್‌ಬರ್ಗನ್‌ಗಳು ಅರ್ಥಮಾಪನ ಶಾಸ್ತ್ರದ ಬೆಳೆವಣಿಗೆಗೆ (ಎಕೊನಾಮಿಟ್ರಿಕ್ಸ್) ಮತ್ತು ಗಣಿತ ಶಾಸ್ತ್ರವನ್ನು ಅರ್ಥ ಶಾಸ್ತ್ರದೊಂದಿಗೆ ಅಳವಡಿಸಿಕೊಂಡು ಅರ್ಥಶಾಸ್ತ್ರದ ಮಾದರಿಗಳನ್ನು (ಎಕನಾ

ಮಿಕ್ಸ್ ಮಾಡೆಲ್ಸ್) ರೂಪಿಸುವುದರಲ್ಲಿ ಬಹಳವಾಗಿ ಶ್ರಮಿಸಿದ್ದಾರೆ. ಅರ್ಥಶಾಸ್ತ್ರದ ಸೂತ್ರಗಳು, ಸಿದ್ಧಾಂತಗಳು ಮತ್ತು ಅವುಗಳ ಅನ್ಯೋನ್ಯ ಸಂಬಂಧಗಳನ್ನು ಗಣಿತೋಕ್ತಿಗಳ ರೂಪದಲ್ಲಿ ನಿರೂಪಿಸಿ ಈ ಉಕ್ತಿಗಳನ್ನು ಪ್ರತ್ಯಕ್ಷ ಸನ್ನಿವೇಶದಲ್ಲಿ ಪರೀಕ್ಷಿಸಿ ಅರ್ಥಶಾಸ್ತ್ರದ ತತ್ತ್ವಗಳನ್ನು ಬೆಳೆಸುವುದಕ್ಕೆ ಅರ್ಥಮಾಪನಶಾಸ್ತ್ರ ಪ್ರಯೋಜನಕಾರಿಯಾಗಿರುವುದರಿಂದ ಇಂದು ಅರ್ಥಶಾಸ್ತ್ರದಲ್ಲಿ ಅರ್ಥಮಾಪನ ಶಾಸ್ತ್ರ ವಿಶಿಷ್ಟಸ್ಥಾನ ಪಡೆದಿದೆ. ಇಂಥ ಪ್ರಮುಖ ಶಾಸ್ತ್ರವನ್ನು ರೂಪಗೊಳಿಸು ವುದರಲ್ಲಿ ರ್‍ಯಾಗನರ್ ಫ್ರಿಷ್ ಮತ್ತು ಟಿನ್‌ಬರ್ಗನ್‌ಗಳು ತಮ್ಮ ಪ್ರತಿಭೆ ತೋರಿಸಿದ್ದಾರೆ.

ಬಹಳ ಕಾಲದಿಂದಲೂ ಆರ್ಥಿಕ ಕ್ಷೇತ್ರದಲ್ಲಿ ಉಂಟಾಗುತಿದ್ದ ಘಟನೆಗಳ ವಿಷಯವಾಗಿಯೂ ಅವುಗಳ ಸಾಪೇಕ್ಷ ಪರಿಣಾಮಗಳನ್ನು ಕುರಿತೂ ಅರ್ಥ ಶಾಸ್ತ್ರಜ್ಞರು ಯುಕ್ತ ವಿವರಣೆ ಕೊಡುತ್ತಿದ್ದರು. ಆದರೆ ಆ ವಿವರಣೆಗಳನ್ನು ಕೊಡು ವಾಗ ಅವರು ಕೆಲವು ಪರಿಕಲ್ಪನೆಗಳನ್ನು ಮಾಡಿಕೊಳ್ಳುತ್ತಿದ್ದರು. ಲೆಕ್ಕಹಾಕಿ ಆರ್ಥಿಕ ಪರಿಣಾಮಗಳನ್ನು ಸ್ಫುಟವಾಗಿ ತಿಳಿಸಲಾಗುತ್ತಿರಲಿಲ್ಲ. ಆದ್ದರಿಂದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರತ್ಯಕ್ಷವಾಗಿರುತ್ತಿದ್ದ ಅಂಶಗಳು ಅನೇಕ ಸಾರಿ ಅರ್ಥಶಾಸ್ತ್ರಜ್ಞರು ಇತ್ತಿದ್ದ ವಿವರಣೆಗೆ ವಿರುದ್ಧವಾಗಿರುತ್ತಿದ್ದುವು. ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಯಾವ ಆರ್ಥಿಕ ತತ್ತ್ವಗಳು ಮತ್ತು ನಿಯಮಗಳು ಸಾಧು ಅಥವಾ ಅನ್ವಯಾರ್ಹ ಎಂಬುದನ್ನು ಪ್ರಯೋಗಸಿದ್ಧ ರೀತಿಯಲ್ಲಿ ತಾಳೆ ನೋಡಿ ತನಿಖೆ ನಡೆಸಿದ ಹೊರತು ಸರಿಯಾದ ಆರ್ಥಿಕ ನೀತಿ ರೂಪಿಸಲು ಆಗುತ್ತಿರಲಿಲ್ಲ. ಈ ಅಗತ್ಯವನ್ನು ಪೂರ್ತಿ ಮಾಡುವ ಉದ್ದೇಶದಿಂದ ಅರ್ಥಮಾಪನಶಾಸ್ತ್ರವನ್ನು ಟಿನ್‌ಬರ್ಗನ್ ಮತ್ತು ರ್‍ಯಾಗ್‌ನರ್ ಫ್ರಿಷ್ ಬೆಳೆಸಿದರು. ಆರ್ಥಿಕ ಚರಗಳ ಎಲ್ಲ ವಿಧವಾದ ಸಂಬಂಧ ಗಳನ್ನೂ ಪರಿಮಾಣೀಕರಿಸಿದ ಅನಂತರವೇ ದೊರೆಯುವ ಜ್ಞಾನವನ್ನು ಆರ್ಥಿಕ ಧೋರಣೆಗೆ ಮಾರ್ಗದರ್ಶಕವಾಗಿ ಬಳಸಲು ಸಾಧ್ಯ ಎಂಬುದನ್ನು ಅರ್ಥಮಾಪನ ಶಾಸ್ತ್ರದ ಮೂಲಕ ತೋರಿಸಿಕೊಟ್ಟರು. ಇಂಥ ಮಹತ್‌ಸಾಧನೆಗಾಗಿ ಇವರಿಬ್ಬರಿಗೆ ನೊಬೆಲ್ ಪ್ರಶಸ್ತಿ ದೊರೆಯಿತು.[1]

೧೯೬೯ರಲ್ಲಿ ಇವರಿಬ್ಬರಿಗೆ ಪ್ರಶಸ್ತಿ ದೊರೆತಾಗ, ಸಾಮ್ಯುಯೆಲ್‌ಸನ್ ಈ ರೀತಿ ತಮ್ಮ ಸಂತಸ ಸೂಚಿಸಿದರು : "ಆಸ್ಲೋ ವಿಶ್ವವಿದ್ಯಾನಿಲಯದ ರ್‍ಯಾಗ್‌ನರ್-ಫ್ರಿಷ್ ಮತ್ತು ಹಾಲೆಂಡಿನ ಅರ್ಥಶಾಸ್ತ್ರ ಪ್ರೌಢಶಾಲೆಯ ಜಾನ್ ಟಿನ್‌ಬರ್ಗನ್ ಗಳನ್ನು ನೊಬೆಲ್ ಪ್ರಶಸ್ತಿಗೆ ಅರ್ಹರೆಂದು ಆರಿಸುವುದರ ಮೂಲಕ ಸ್ವೀಡನ್ ದೇಶದ ವಿಜ್ಞಾನಿಗಳ ಸಭೆ ತನ್ನ ಕಾರ್ಯವನ್ನು ಒಳ್ಳೆಯ ಮಧುರ ವಾತಾವರಣದಲ್ಲಿ ಆರಂಭಿಸಿದೆ. ಈ ಇಬ್ಬರು ಅರ್ಥಮಾಪನಶಾಸ್ತ್ರಜ್ಞರನ್ನು ಗೌರವಿಸುವುದರ

---

[1] "The official Announcement of the Royal Academy of Sciences", *The Swedish Journal of Economics,* Dec. 1966, p. 300

ಮೂಲಕ ಪ್ರಪಂಚದ ಆದ್ಯಂತ ಅರ್ಥಶಾಸ್ತ್ರದ ಮಹತ್ವವನ್ನು ಎತ್ತಿ ಹಿಡಿಯಲಾಗಿದೆ. ಗಣಿತಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರಗಳು ಎಷ್ಟರ ಮಟ್ಟಿಗೆ ಅರ್ಥಶಾಸ್ತ್ರದೊಡನೆ ಅಳವಡಿಸಲ್ಪಟ್ಟು ಅರ್ಥಶಾಸ್ತ್ರದ ಬೆಳೆವಣಿಗೆಗೆ ಕಾರಣವಾಗಿವೆ ಎಂಬುದರ ವಿಷಯ ದಲ್ಲಿ ಅರ್ಥಶಾಸ್ತ್ರಜ್ಞರುಗಳ ಗಮನ ಸೆಳೆದಿದೆ. ಫ್ರಿಷ್ ಮತ್ತು ಟಿನ್‌ಬರ್ಗನ್‌ಗಳು ಆಧುನಿಕ ಅರ್ಥಶಾಸ್ತ್ರದ ಮೂಲಕರ್ತರಾಗಿದ್ದಾರೆ. ಈ ಇಬ್ಬರು ಅಸಾಧಾರಣ ಪ್ರತಿಭಾವಂತ ಅರ್ಥಶಾಸ್ತ್ರಜ್ಞರಿಗೆ ಇಂಥ ಪ್ರಶಸ್ತಿ ದೊರೆತಿದ್ದಕ್ಕಾಗಿ ಜಗತ್ತಿನ ಎಲ್ಲ ಕಡೆ ಇರುವ ಅರ್ಥಶಾಸ್ತ್ರಜ್ಞರು ಮೆಚ್ಚಿಗೆ ಸೂಚಿಸಿದ್ದಾರೆ."[2]

ಮೇಲ್ಕಂಡ ಹೇಳಿಕೆ ಬಹುಮಟ್ಟಿಗೆ ಸ್ಯಾಮ್ಯುಯೆಲ್‌ಸನ್ನರಿಗೂ ಅನ್ವಯ ವಾಗುತ್ತದೆ. ಅಕ್ಟೋಬರ್ ೨೬, ೧೯೭೦ರಂದು ಸ್ವೀಡನ್ ದೇಶದ ವಿಜ್ಞಾನಿಗಳ ಸಭೆ ಸ್ಯಾಮ್ಯುಯೆಲ್‌ಸನ್ನರಿಗೆ ನೊಬೆಲ್ ಪ್ರಶಸ್ತಿ ಕೊಡಲಾಗಿದೆಯೆಂಬುದನ್ನು ಪ್ರಕಟಿಸುತ್ತ ಈ ರೀತಿ ಹೇಳಿದೆ: "ಆರ್ಥಿಕ ತತ್ತ್ವಗಳನ್ನು ಬೆಳೆಸುವಾಗ ಶಾಸ್ತ್ರೀಯ ರೀತಿಯ ವಿಶ್ಲೇಷಣೆಯನ್ನು ಉಪಯೋಗಿಸುವ ವಿಧಾನವನ್ನು ಅರ್ಥ ಶಾಸ್ತ್ರದಲ್ಲಿ ಅಳವಡಿಸುವುದರಲ್ಲಿ ೫೫ ವರ್ಷದ ಪ್ರಾಧ್ಯಾಪಕ ಸ್ಯಾಮ್ಯುಯೆಲ್‌ಸನ್ ರವರು ಉಳಿದ ಎಲ್ಲ ಅರ್ಥಶಾಸ್ತ್ರಜ್ಞರಿಗಿಂತ ಬಹಳ ಪ್ರತಿಭೆ ತೋರಿಸಿದ್ದಾರೆ."[3]

ಸ್ಯಾಮ್ಯುಯಲ್‌ಸನ್ನರ ವಿಷಯದಲ್ಲಿ ವಿಮರ್ಶಾತ್ಮಕ ಭಾವನೆ ಹೊಂದಿರುವ ಷಿಕಾಗೋ ವಿಶ್ವವಿದ್ಯಾನಿಲಯದ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಮಿಲ್ಟನ್ ಫ್ರೀಡ್‌ಮನ್ ಸ್ಯಾಮ್ಯುಯೆಲ್‌ಸನ್ನರಿಗೆ ನೊಬೆಲ್ ಪ್ರಶಸ್ತಿ ದೊರೆತಾಗ ಹೀಗೆ ಹೇಳಿ ದ್ದಾರೆ: "ಅನೇಕ ವರ್ಷಗಳ ಕಾಲ ಮಾಡಿದ ವೈಜ್ಞಾನಿಕರೀತಿಯ ಕೆಲಸಕ್ಕಾಗಿ ಸ್ಯಾಮ್ಯುಯೆಲ್‌ಸನ್ನರಿಗೆ ಅರ್ಹ ಪ್ರಶಸ್ತಿದೊರಕಿದೆ."[4]

ಜೀವನ ಚರಿತ್ರೆ

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿರುವ ಇಂಡಿಯಾನ ರಾಜ್ಯದ ಗೇರಿ ಪಟ್ಟಣದಲ್ಲಿ ೧೯೧೫ರ ಮೇ ೧೫ ರಂದು ಸ್ಯಾಮ್ಯುಯೆಲ್‌ಸನ್ ಜನಿಸಿದರು. ೧೯೩೫ರಲ್ಲಿ ಷಿಕಾಗೋ ವಿಶ್ವವಿದ್ಯಾನಿಲಯದ ಬಿ. ಎ. ಪದವೀಧರರಾದರು. ಅನಂತರ ಹಾರ್ವರ್ಡ್ ವಿಶ್ವವಿದ್ಯಾನಿಲಯ ಸೇರಿದರು. ೧೯೩೬ರಲ್ಲಿ ಅರ್ಥಶಾಸ್ತ್ರದಲ್ಲಿ ಎಂ. ಎ. ಪದವಿಯನ್ನೂ ೧೯೪೧ರಲ್ಲಿ ಪಿಎಚ್.ಡಿ. ಪದವಿಯನ್ನೂ ಹಾರ್ವರ್ಡ್ ವಿಶ್ವ ವಿದ್ಯಾನಿಲಯದಿಂದ ಪಡೆದರು. ವಿದ್ಯಾರ್ಥಿ ದೆಶೆಯಲ್ಲಿ ಅವರು ತೋರಿದ ಪ್ರತಿಭೆಗಾಗಿ ೧೯೪೧ರಲ್ಲಿ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಡೇವಿಡ್ ಎ. ವೆಲ್ಸ್ ಬಹುಮಾನ

---

[2] Samuelson, Paul A., "Two Remarkable Men", *News Week*, November 17, 1969, p. 44

[3] *Economic Times,*" October 1970, p. 5

[4] Friedman, Milton, *News Week*, November 9, 1970, p. 53

ಪಡೆದರು. "ಅರ್ಥಶಾಸ್ತ್ರ ವಿಶ್ಲೇಷಣೆಯ ತಳಹದಿಗಳು" (ಫೌಂಡೇಷನ್ಸ್ ಆಫ್ ಎಕನಾಮಿಕ್ ಅನಾಲಿಸಿಸ್) ಎಂಬ ಪ್ರಬಂಧವನ್ನು ಅವರ ಪಿಎಚ್.ಡಿ. ಪರೀಕ್ಷೆಯ ಅಂಗವಾಗಿ ಬರೆದರು. ಅನಂತರ ಅದನ್ನೇ ಪುಸ್ತಕದ ರೂಪದಲ್ಲಿ ಪ್ರಕಟಿಸಿದರು. ಇಂದಿಗೂ ಆ ಪುಸ್ತಕವನ್ನು ಅರ್ಥಮಾಡಿಕೊಳ್ಳಬಲ್ಲಂಥ ಅರ್ಥಶಾಸ್ತ್ರಜ್ಞರು ಕೇವಲ ಕೆಲವರೇ ಇರುವರೆನ್ನಬಹುದು. ಅನೇಕ ವಿಶ್ವವಿದ್ಯಾನಿಲಯಗಳು ಅವರನ್ನು ಗೌರವಿಸಿವೆ. ೧೯೬೧ರಲ್ಲಿ ಓಬರ್ಲಿನ್ ಕಾಲೇಜು ಮತ್ತು ಷಿಕಾಗೋ ವಿಶ್ವವಿದ್ಯಾನಿಲಯ, ೧೯೬೨ರಲ್ಲಿ ರಿಪನ್ ಕಾಲೇಜು, ೧೯೬೪ರಲ್ಲಿ ಬಾಸ್ಟನ್ ಕಾಲೇಜು, ೧೯೬೬ರಲ್ಲಿ ಪೂರ್ವ ಆಂಗ್ಲಿಯ ವಿಶ್ವವಿದ್ಯಾನಿಲಯ ಮತ್ತು ಇಂಡಿಯಾನ ವಿಶ್ವವಿದ್ಯಾನಿಲಯ ಮತ್ತು ೧೯೬೭ರಲ್ಲಿ ಮಿಷಿಗನ್ ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ನೀಡಿದುವು.

೧೯೪೦ರಿಂದ ಸ್ಯಾಮ್ಯುಯೆಲ್‌ಸನ್ ವಿಶ್ವವಿಖ್ಯಾತ ಸಂಸ್ಥೆಯಾದ ಮ್ಯಾಸಚುಸೆಟ್ಸ್ ತಾಂತ್ರಿಕಸಂಸ್ಥೆಯಲ್ಲಿ (ಎಂ.ಐ.ಟಿ.) ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ. ಇದಲ್ಲದೆ ಇವರು ಅನೇಕ ಸಂಸ್ಥೆಗಳಿಗೆ ಸಲಹೆಗಾರರಾಗಿದ್ದಾರೆ. ಸರ್ಕಾರದಿಂದ ನೇಮಿತವಾದ ಅನೇಕ ಸಮಿತಿಗಳ ಸದಸ್ಯರಾಗಿದ್ದಾರೆ. ೧೯೪೧–೪೩ರಲ್ಲಿ ಅಮೆರಿಕದ ರಾಷ್ಟ್ರೀಯ ಸಂಪನ್ಮೂಲಗಳ ಯೋಜನಾಸಮಿತಿಗೆ, ೧೯೪೫ರಲ್ಲಿ ಯುದ್ಧಸಾಮಗ್ರಿಗಳ ಉತ್ಪಾದನ ಸಮಿತಿಗೆ ಮತ್ತು ೧೯೪೫–೫೨ರಲ್ಲಿ ಅಮೆರಿಕದ ಖಜಾನೆಗೆ ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ೧೯೪೯–೫೦ರಲ್ಲಿ ಅರ್ಥಮಾಪನ ಶಾಸ್ತ್ರ ಸಂಘದ ಉಪಾಧ್ಯಕ್ಷರಾಗಿ ಮತ್ತು ೧೯೫೧ರಲ್ಲಿ ಅದರ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ೧೯೫೧ರಲ್ಲಿ ಅಮೆರಿಕನ್ ಅರ್ಥಶಾಸ್ತ್ರ ಸಂಘದ ಉಪಾಧ್ಯಕ್ಷರಾಗಿಯೂ ೧೯೬೦–೬೧ರಲ್ಲಿ ಅದರ ಅಧ್ಯಕ್ಷರಾಗಿಯೂ ಇದ್ದರು. ಕೆಲವು ಕಾಲ "ಎಕಾನೊಮಿಟ್ರಿಕ" ನಿಯತಕಾಲಿಕೆಯ ಪ್ರಕಟನ ಮಂಡಳಿಯ ಸದಸ್ಯರಾಗಿದ್ದರು. ೧೯೪೯ರಿಂದ ರ್‍ಯಾಂಡ್ ಕಾರ್ಪೊರೇಷನ್ ಮತ್ತು ೧೯೬೦ರಿಂದ ಆರ್ಥಿಕ ಅಭಿವೃದ್ಧಿ ಸಂಶೋಧನ ಮಂಡಳಿಯ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ. ೧೯೬೦ರಲ್ಲಿ ಅಧ್ಯಕ್ಷ ಐಸನ್‌ಹೌವರ್ ನೇಮಿಸಿದ್ದ, ರಾಷ್ಟ್ರೀಯ ಗುರಿಗಳನ್ನು ಸಾಧಿಸಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳ, ನಿರೂಪಣಮಂಡಳಿಯ ಸಲಹೆಗಾರರಾಗಿದ್ದರು. ೧೯೬೦-೬೧ರಲ್ಲಿ ಹಣ ಮತ್ತು ಉದ್ದರಿ ಆಯೋಗದ (ಕಮಿಷನ್ ಆನ್ ಮನಿ ಅಂಡ್ ಕ್ರೆಡಿಟ್) ಸಲಹೆಗಾರರಾಗಿದ್ದರು. ಕೆನೆಡಿಯವರ ಅಧ್ಯಕ್ಷ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾಗ ಮತ್ತು ಅವರು ಅಧ್ಯಕ್ಷರಾದ ಮೇಲೆ ಸ್ಯಾಮ್ಯುಯೆಲ್‌ಸನ್ ಅವರ ಆರ್ಥಿಕ ಸಲಹೆಗಾರರಾಗಿದ್ದರು. ೧೯೬೧ರಲ್ಲಿ ಅಮೆರಿಕದ ಆರ್ಥಿಕ ಪರಿಸ್ಥಿತಿಯ ವಿಷಯವಾಗಿ ತಯಾರಿಸಿದ ವರದಿಯ ಲೇಖಕರಾಗಿದ್ದರು. ಅಧ್ಯಕ್ಷ ಕೆನೆಡಿ ಮತ್ತು ಜಾನ್‌ಸನ್‌ಗಳ ಕಾಲದಲ್ಲಿ ರೂಪಿತವಾದ ಉದಾರ ಆರ್ಥಿಕನೀತಿಯ ಬೆಂಬಲಿಗರೆಂದೂ ಅಧ್ಯಕ್ಷ ನಿಕ್ಸನರ ಆರ್ಥಿಕ

ನೀತಿಯ ವಿಮರ್ಶಕರೆಂದೂ ಸ್ಯಾಮ್ಯುಯೆಲ್‌ಸನ್ ಅಮೆರಿಕದ ಜನತೆಗೆ ಪರಿಚಿತ ರಾಗಿದ್ದಾರೆ.

ಸ್ಯಾಮ್ಯುಯೆಲ್‌ಸನ್ ಅಮೆರಿಕದ ಕಲೆಗಳ ಮತ್ತು ವಿಜ್ಞಾನಿಗಳ ಅಕೆಡಮಿಯ ಮತ್ತು ಅಮೆರಿಕದ ತತ್ತ್ವಶಾಸ್ತ್ರಸಂಘದ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಅರ್ಥಶಾಸ್ತ್ರದ ಬೆಳೆವಣಿಗೆಗೆ ಸ್ಯಾಮ್ಯುಯೆಲ್‌ಸನ್ನರ ಕೊಡುಗೆ

ಇವರು ಪ್ರಕಟಿಸಿರುವ ಕೆಲವು ಪ್ರಸಿದ್ಧ ಗ್ರಂಥಗಳಿವು :

(೧) ಅರ್ಥಶಾಸ್ತ್ರ ವಿಶ್ಲೇಷಣೆಯ ತಳಹದಿಗಳು (ಫೌಂಡೇಷನ್ಸ್ ಆಫ್ ಎಕೊನಾಮಿಕ್ ಅನಾಲಿಸಿಸ್, ೧೯೪೭). ೧೯೬೫ರಲ್ಲಿ ಇದರ ಎರಡನೆಯ ಆವೃತ್ತಿ ಹೊರಬಂತು.

(೨) ಅರ್ಥಶಾಸ್ತ್ರ—ಒಂದು ಪ್ರಾಥಮಿಕ ವಿಶ್ಲೇಷಣೆ (ಎಕೊನಾಮಿಕ್ಸ್—ಅನ್ ಇಂಟ್ರೊಡಕ್ಟರಿ ಅನಾಲಿಸಿಸ್). ಇದು ಹಲವು ಮುದ್ರಣಗಳನ್ನು ಕಂಡಿದೆ. ೧೯೪೮, ೧೯೫೨, ೧೯೫೫, ೧೯೫೮, ೧೯೬೧, ೧೯೬೪, ೧೯೬೭ ಮತ್ತು ೧೯೭೦ರಲ್ಲಿ ಪರಿಷ್ಕೃತಗೊಂಡಿದೆ.

(೩) ಅರ್ಥಶಾಸ್ತ್ರದ ಅಧ್ಯಯನಗಳು (ರೀಡಿಂಗ್ಸ್ ಇನ್ ಎಕೊನಾಮಿಕ್ಸ್) ಆರ್. ಎಲ್. ಬಿಷಪ್ ಮತ್ತು ಜೆ. ಆರ್. ಕೋಲ್‌ಮನರೊಂದಿಗೆ. ೧೯೫೨, ೧೯೫೫, ೧೯೫೮ ಮತ್ತು ೧೯೬೭ರಲ್ಲಿ ಈ ಪುಸ್ತಕ ಪರಿಷ್ಕಾರಗೊಂಡು ಪ್ರಕಟವಾಗಿದೆ.

(೪) ಏಕಪರಿಮಾಣಾತ್ಮಕ ಕಾರ್ಯಕ್ರಮ ಮತ್ತು ಆರ್ಥಿಕ ವಿಶ್ಲೇಷಣೆ (ಲೀನಿಯರ್ ಪ್ರೊಗ್ರಾಮಿಂಗ್ ಅಂಡ್ ಎಕೊನಾಮಿಕ್ ಅನಾಲಿಸಿಸ್), ೧೯೫೮.

(೫) ಸ್ಯಾಮ್ಯುಯೆಲ್‌ಸನ್ನರ ವೈಜ್ಞಾನಿಕ ಪ್ರಬಂಧ ಸಂಕಲನ (ದಿ ಕಲೆಕ್ಟೆಡ್ ಸೈಂಟಿಫಿಕ್ ಪೇಪರ್ಸ್ ಆಫ್ ಪಿ. ಎ. ಸ್ಯಾಮ್ಯುಯೆಲ್‌ಸನ್), ೧೯೬೬.

ಇವಲ್ಲದೆ ಅನೇಕ ಅರ್ಥಶಾಸ್ತ್ರದ ಲೇಖನಗಳನ್ನು ಬರೆದಿದ್ದಾರೆ. ಇವು ಪ್ರಪಂಚದ ಸುಪ್ರಸಿದ್ಧ ನಿಯತ ಕಾಲಿಕೆಗಳಲ್ಲಿ ಪ್ರಕಟವಾಗಿವೆ, ಪ್ರಕಟವಾಗುತ್ತಲೂ ಇವೆ.

ಅಭಿಜಾತ ಅರ್ಥಶಾಸ್ತ್ರಜ್ಞರ ಬರವಣಿಗೆಯಲ್ಲಿ ಸ್ಯಾಮ್ಯುಯೆಲ್‌ಸನ್ ಅನೇಕ ತರ್ಕದೋಷಯುಕ್ತ ಮತ್ತು ಅಸಮಂಜಸ ಪ್ರತಿಪಾದನೆಗಳನ್ನು ಕಂಡರು. ಅವುಗಳಲ್ಲಿದ್ದ ಅಸಂಬದ್ಧ ತರ್ಕವನ್ನು ಸರಿಪಡಿಸಲು, ಸ್ಯಾಮ್ಯುಯೆಲ್‌ಸನ್ ಗಣಿತ ಶಾಸ್ತ್ರದ ತತ್ತ್ವಗಳನ್ನು ಅರ್ಥಶಾಸ್ತ್ರದಲ್ಲಿ ಪ್ರಯೋಗಿಸಿದರು. ಅದರ ಪರಿಣಾಮ ವಾಗಿ ಆರ್ಥಿಕ ತತ್ತ್ವಗಳಿಗೆ ಹೊಸ ನಿರೂಪಣೆ ಕೊಟ್ಟರು. ಪ್ರಾಚೀನಕಾಲದ ಅರ್ಥಶಾಸ್ತ್ರಜ್ಞರು ಉತ್ಪಾದನೆ, ಅನುಭೋಗ, ವ್ಯಾಪಾರ ಚಕ್ರಗಳು ಮತ್ತು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ತತ್ತ್ವಗಳನ್ನು

ನಿರೂಪಿಸಿದ್ದಾರೆ. ಈ ತತ್ತ್ವಗಳನ್ನು ಗಣಿತಶಾಸ್ತ್ರದ ನಿಯಮಗಳೊಡನೆ ಅಳವಡಿಸಿದರೆ ಅರ್ಥಶಾಸ್ತ್ರದ ಸಮಸ್ಯೆಗಳಿಗೆ ಅನ್ವಯಿಸುವಂತೆ ಒಂದೇ ಆರ್ಥಿಕ ತತ್ತ್ವವನ್ನು ನಿರೂಪಿಸಬಹುದೆಂದು ಸ್ಯಾಮ್ಯುಯೆಲ್‌ಸನ್ ತೋರಿಸಿಕೊಟ್ಟಿದ್ದಾರೆ. ಸ್ಯಾಮ್ಯುಯೆಲ್‌ಸನ್ ಅರ್ಥಶಾಸ್ತ್ರ ವಿಷಯದಲ್ಲಿ ತಮ್ಮ ಸಾಮರ್ಥ್ಯವನ್ನು ಷಿಕಾಗೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದಾಗಲೇ ತೋರಲಾರಂಭಿಸಿದರು. ಷಿಕಾಗೋ ವಿಶ್ವವಿದ್ಯಾನಿಲಯ ನಿರುಪಾಧಿಕ ಅರ್ಥವ್ಯವಸ್ಥೆಯ ಚಿಂತನೆಯ ಕೇಂದ್ರವಾಗಿತ್ತು. ಹೆನ್ರಿ ಸೈಮನ್ಸ್ ಮತ್ತು ಫ್ರಾಂಕ್ ನೈಟ್ ಆಗ ಮೇಲ್ಕಂಡ ವಿಚಾರಸರಣಿಯ ಪೋಷಕರಾಗಿದ್ದರು. ಅಂಥ ವಾತಾವರಣದಲ್ಲಿ ಓದಿದ ಸ್ಯಾಮ್ಯುಯೆಲ್‌ಸನ್ ಪ್ರಾರಂಭದಲ್ಲಿ ಕೇನ್ಸರ ವಿಚಾರಧಾರೆಯನ್ನು ಪ್ರತಿಭಟಿಸುತ್ತಿದ್ದರು. ಆದರೆ ಕೊನೆಯಲ್ಲಿ ತಾವೇ ಕೇನ್ಸರ ವಿಚಾರಧಾರೆಗೆ ಶರಣಾದರೆಂದು ಒಪ್ಪಿಕೊಳ್ಳುತ್ತಾರೆ. ಆಗಿನಿಂದಲೂ ಅವರು ಕೇನ್ಸ್ ಅರ್ಥಶಾಸ್ತ್ರದ ಪ್ರತಿಪಾದಕರಾಗಿರುವುದಲ್ಲದೆ "ನವ್ಯ ಅರ್ಥಶಾಸ್ತ್ರದ" ವ್ಯಾಪ್ತಿಯನ್ನು ವಿಸ್ತರಿಸಲು ಕಾರಣರಾಗಿದ್ದಾರೆ.

೧೯೪೭ರಲ್ಲಿ ಸ್ಯಾಮ್ಯುಯೆಲ್‌ಸನ್ "ಅರ್ಥಶಾಸ್ತ್ರ ವಿಶ್ಲೇಷಣೆಯ ತಳಹದಿಗಳು" ಎಂಬ ಪುಸ್ತಕ ಪ್ರಕಟಿಸಿದರು. ಇದರಿಂದ ಅವರೊಬ್ಬ ಪ್ರತಿಭಾವಂತ ಗಣಿತೀಯ ಅರ್ಥಶಾಸ್ತ್ರಜ್ಞ ಎಂಬ ಕೀರ್ತಿ ಪಡೆದರು. ಅರ್ಥಶಾಸ್ತ್ರದಲ್ಲಿ ಅದೊಂದು ಅಪೂರ್ವಕೃತಿ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಈ ಪುಸಕ್ತದಲ್ಲಿ ಸ್ಥಿತ ಆರ್ಥಿಕಸಿದ್ಧಾಂತ ಮತ್ತು ಆರ್ಥಿಕಚಲನ ಸಿದ್ಧಾಂತಗಳನ್ನು ವಿಶ್ಲೇಷಣೆಮಾಡಿದ್ದಾರೆ. ಜೊತೆಗೆ ಈ ಎರಡು ಸಿದ್ಧಾಂತಗಳನ್ನು ಅನುರೂಪತೆಯ ತತ್ತ್ವದ ಮೂಲಕ (ಕರೆಸ್ಪಾಂಡೆನ್ಸ್ ಪ್ರಿನ್ಸಿಪಲ್) ಒಟ್ಟುಗೂಡಿಸಿ ಅರ್ಥಶಾಸ್ತ್ರದ ತತ್ತ್ವಗಳ ಬೆಳವಣಿಗೆಯಲ್ಲಿ ಹೊಸ ಬೆಳಕನ್ನು ಚೆಲ್ಲಿದ್ದಾರೆ. ಜೊತೆಗೆ ಈ ಪುಸ್ತಕ ಆರ್ಥಿಕ ಅಧ್ಯಯನಕ್ರಮಗಳಿಗೆ ಅಡಿಪಾಯ ಒದಗಿಸಿದೆ. ಬೆಲೆ ಸಿದ್ಧಾಂತ ವಿಶ್ಲೇಷಣೆಗೇ ಈ ಪುಸ್ತಕ ಬಹಳಮಟ್ಟಿಗೆ ಮೀಸಲಾಗಿದ್ದರೂ ಅರ್ಥಶಾಸ್ತ್ರದ ಉಳಿದ ಕ್ಷೇತ್ರಗಳಾದ ಹಣ ಮತ್ತು ಬ್ಯಾಂಕಿಂಗ್ ವ್ಯವಸ್ಥೆ, ಅಂತರರಾಷ್ಟ್ರೀಯ ವ್ಯವಹಾರ ಚಕ್ರಗಳು, ತೆರಿಗೆ ಸಮಸ್ಯೆ ಮತ್ತು ಉದ್ಯೋಗ ಮೀಮಾಂಸೆ ಮುಂತಾದವಕ್ಕೂ ಸಂಬಂಧಿಸಿದಂತೆ ಸಮಸ್ಯೆಗಳ ವಿಶ್ಲೇಷಣೆ ಮಾಡಿ ಅವುಗಳ ಪರಿಣಾಮಗಳನ್ನು ವಿವರಿಸಲಾಗಿದೆ. ಗಣಿತೀಯ ಮಾರ್ಗದಲ್ಲಿ (ಮ್ಯಾಥಮಾಟಿಕಲ್ ಅಪ್ರೋಚ್) ಅರ್ಥಶಾಸ್ತ್ರ ಸಮಸ್ಯೆಗಳನ್ನು ವಿಶ್ಲೇಷಿಸಿದರೆ ಅರ್ಥಶಾಸ್ತ್ರ ಎಷ್ಟು ವೈಜ್ಞಾನಿಕ ರೀತಿಯಲ್ಲಿ ಕರಾರುವಾಕ್ಕಾದ ಸೂತ್ರಗಳನ್ನು ಒದಗಿಸಬಲ್ಲುದು ಎಂಬುದಕ್ಕೆ ಸ್ಯಾಮ್ಯುಯೆಲ್‌ಸನ್ನರ ಈ ಪುಸ್ತಕ ಒಳ್ಳೆಯ ನಿದರ್ಶನ.

ಸ್ಯಾಮ್ಯುಯೆಲ್‌ಸನ್ನರ ಪುಸ್ತಕಗಳ ಪೈಕಿ ಬಹಳ ಪ್ರಖ್ಯಾತವಾದದ್ದೆಂದರೆ "ಅರ್ಥಶಾಸ್ತ್ರ: ಒಂದು ಪ್ರಾಥಮಿಕ ವಿಶ್ಲೇಷಣೆ" (ಎಕೊನಾಮಿಕ್ಸ್: ಅನ್

ಇಂಟ್ರೊಡಕ್ಟರಿ ಅನಾಲಿಸಿಸ್). ಅದರ ಎಂಟನೆಯ ಪರಿಷ್ಕರಣ ಈಗ (೧೯೭೦ರಲ್ಲಿ) ಹೊರಬಿದ್ದಿದೆ. ೧೯೪೮ರಲ್ಲಿ ಮೊದಲ ಬಾರಿಗೆ ಪ್ರಕಟವಾದ ಮೇಲೆ ಈವರೆಗೆ ಇದರ ಹತ್ತು ಲಕ್ಷ ಪ್ರತಿಗಳಿಗಿಂತಲೂ ಹೆಚ್ಚು ಮಾರಾಟವಾಗಿದೆ. ಸುಮಾರು ೩೦ ದೇಶಗಳ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಈ ಪುಸ್ತಕವನ್ನು ಅರ್ಥಶಾಸ್ತ್ರದ ಮೊದಲನೆಯ ಬಿ.ಎ. ತರಗತಿಯ ವಿದ್ಯಾರ್ಥಿಗಳು ಪಠ್ಯಪುಸ್ತಕ ವನ್ನಾಗಿ ಉಪಯೋಗಿಸುತ್ತಿದ್ದಾರೆ. ಈ ಪುಸ್ತಕವನ್ನು ಫ್ರೆಂಚ್, ಸ್ಪಾನಿಷ್, ಜಪಾನೀ ಮತ್ತು ಚೀನೀ ಭಾಷೆಗಳಿಗೆ ತರ್ಜುಮೆಮಾಡಿ ಪ್ರಪಂಚದ ವಿವಿಧ ಭಾಗಗಳಲ್ಲಿ ಉಪಯೋಗಿಸುತ್ತಿದ್ದಾರೆ. ಇಂಥ ಮಹತ್ತ್ವ ಅರ್ಥಶಾಸ್ತ್ರದ ಮತ್ತಾವ ಪುಸ್ತಕಕ್ಕೂ ದೊರೆತಿಲ್ಲವೆಂದು ಹೇಳಬಹುದು. ಸಾಮಾನ್ಯ ತಿಳಿವಳಿಕೆಯುಳ್ಳ ಜನರೂ ಈ ಪುಸ್ತಕವನ್ನು ಓದಬಹುದು. ಬೇರೆ ಅರ್ಥಶಾಸ್ತ್ರಜ್ಞರ ಪುಸ್ತಕದಲ್ಲಿ ನಮೂದಿಸಿರುವಂಥ ಗೂಢ ನುಡಿಕಟ್ಟುಗಳು (ಹಿಡನ್ ಫ್ರೇಸಸ್) ಇದರಲ್ಲಿ ಕಂಡುಬರುವುದಿಲ್ಲ. ಆದ್ದರಿಂದಲೆ ಸ್ಯಾಮುಯಲ್‌ಸನ್ನರ ಈ ಪುಸ್ತಕ ಓದುಗರಿಗೆ ಸಂತೋಷವನ್ನುಂಟುಮಾಡುತ್ತದೆ. ಈ ಪುಸಕ್ತದ ಪ್ರತಿಯೊಂದು ಪರಿಷ್ಕರಣವೂ ಅರ್ಥಶಾಸ್ತ್ರ ಯಾವ ದಿಕ್ಕಿನಲ್ಲಿ ಬೆಳೆಯುತ್ತಿದೆ ಎಂಬುದನ್ನು ತೋರಿಸುತ್ತದೆ. ಮೊದಲನೆಯ ಪರಿಷ್ಕರಣದಲ್ಲಿ ನಿರುದ್ಯೋಗಸಮಸ್ಯೆಗೆ ಮಹತ್ತ್ವಕೊಡಲಾಗಿದೆ. ಮೂರು ಮತ್ತು ನಾಲ್ಕನೆಯ ಪರಿಷ್ಕರಣಗಳಲ್ಲಿ ಹಣದುಬ್ಬರಸಮಸ್ಯೆಗೆ ಪ್ರಾಮುಖ್ಯ ಕೊಡಲಾಗಿದೆ. ಐದು ಮತ್ತು ಆರನೆಯ ಪರಿಷ್ಕರಣಗಳಲ್ಲಿ ಹಣಕಾಸು ಮತ್ತು ರಾಜ್ಯಾದಾಯದ ನೀತಿಗಳಿಗೆ ಅಗ್ರಸ್ಥಾನ ಕೊಡಲಾಗಿದೆ. ಏಳನೆಯ ಪರಿಷ್ಕರಣದಲ್ಲಿ ವರಮಾನ ನೀತಿ, ತಾಂತ್ರಿಕ ನಿರುದ್ಯೋಗ, ಬಡತನ ನಿವಾರಣೆ, ವಿದೇಶೀ ವಿನಿಮಯ ದರ, ಪೂರ್ಣ ಉದ್ಯೋಗ ಮತ್ತು ರಾಜ್ಯಾದಾಯದಲ್ಲಿನ ಅಡಚಣೆಗೆ ಸಂಬಂಧ ಪಟ್ಟ ಸಮಸ್ಯೆಗಳನ್ನು ಕುರಿತು ಚರ್ಚಿಸಲಾಗಿದೆ. ಎಂಟನೆಯ ಪರಿಷ್ಕರಣದಲ್ಲಿ ವರಮಾನದಲ್ಲಿರುವ ಅಸಮಾನತೆ ಮತ್ತು ವರ್ಣಭೇದ ಸಮಸ್ಯೆಗಳ ಅಧ್ಯಯನ ನಡೆಸಲಾಗಿದೆ.

ಸ್ಯಾಮ್ಯುಯೆಲ್‌ಸನ್ನರ ಬಹು ಮುಖ್ಯ ಕೊಡುಗೆಗಳು ಅವರ ಲೇಖನಗಳಲ್ಲಿ ಕಂಡುಬರುತ್ತವೆ. ೧೯೬೦ರ ಮಧ್ಯಭಾಗದ ವರೆಗೆ ಅವರು ಬರೆದು ಪ್ರಕಟಿಸಿದ್ದ ೧೨೯ ಲೇಖನಗಳನ್ನು ಕ್ರೋಡೀಕರಿಸಿ ಪುಸ್ತಕದ ರೂಪದಲ್ಲಿ ೧೯೬೬ರಲ್ಲಿ ಪ್ರಕಟಿಸ ಲಾಯಿತು. ಇದು ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ. ಈ ಪ್ರಬಂಧಗಳು ಹೆಚ್ಚುಕಡಿಮೆ ಅರ್ಥಶಾಸ್ತ್ರದ ವ್ಯಾಪ್ತಿಗೊಳಪಟ್ಟಿರುವ ಎಲ್ಲ ವಿಷಯಗಳಿಗೂ ಸಂಬಂಧಿಸಿವೆ ಎನ್ನಬಹುದು. ಅಲ್ಲಿ ಚರ್ಚಿಸಿರುವ ಕೆಲವು ಮುಖ್ಯ ವಿಷಯಗಳು ಹೀಗಿವೆ: (೧) ಅನುಭೋಗಿಯ ವರ್ತನೆ—ಇಲ್ಲಿ ಪ್ರಕಟಿತ ಆದ್ಯತೆ ಸಿದ್ಧಾಂತವನ್ನು (ದಿ ಥಿಯೊರಿ ಆಫ್ ರಿವೀಲ್ಡ್ ಪ್ರಿಫರೆನ್ಸ್) ಬೆಳೆಸಲಾಗಿದೆ. (೨) ಅಂತರ ರಾಷ್ಟ್ರೀಯ ವ್ಯಾಪಾರ—ಇದರಲ್ಲಿ ಉತ್ಪಾದನಾಂಗದ ವೆಚ್ಚದ ಸಮೀಕರಣ

ಸಿದ್ಧಾಂತವನ್ನು (ಫ್ಯಾಕ್ಟರ್-ಪ್ರೈಸ್ ಈಕ್ವೈಲೈಸೇಷನ್ ಥಿಯೊರಮ್) ಬೆಳಸ ಲಾಗಿದೆ. (೩) ವ್ಯವಹಾರ ಚಕ್ರಗಳು—ಇಲ್ಲಿ ಬಂಡವಾಳ ಹೂಡಿಕೆಯ ಗುಣಕ ತತ್ತ್ವ ಮತ್ತು ವೇಗವರ್ಧಕ ತತ್ತ್ವಗಳನ್ನು ಒಂದುಗೂಡಿಸಿ ಅವು ಹೇಗೆ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತವೆ ಎಂಬುದನ್ನು ತೋರಿಸಲಾಗಿದೆ. ಇವಲ್ಲದೆ, ಏಕಪರಿಮಾಣಾತ್ಮಕ ಕಾರ್ಯಕ್ರಮ, ಬಂಡವಾಳ ಸಿದ್ಧಾಂತ, ಮಾರುಕಟ್ಟೆಯ ಕಾರ್ಯವಿಧಾನ(ಮಾರ್ಕೆಟ್ ಮೆಕ್ಯಾನಿಸಂ),ಸುಖೀ ಅರ್ಥಶಾಸ್ತ್ರ, ಗಣಿತೀಯ ಅರ್ಥಶಾಸ್ತ್ರ ಮತ್ತು ಇನ್ನೂ ಅನೇಕ ಕ್ಲಿಷ್ಟ ಆರ್ಥಿಕ ವಿಚಾರಗಳನ್ನು ಕುರಿತು ಬರೆದ ಲೇಖನಗಳಿವೆ.

ಸ್ಯಾಮ್ಯುಯೆಲ್‌ಸನ್ ಮತ್ತು ಇತರರಿಂದ ಪರಿಷ್ಕೃತವಾದ "ರೀಡಿಂಗ್ಸ್ ಇನ್ ಎಕೊನಾಮಿಕ್ಸ್" ಎಂಬ ಪುಸ್ತಕದಲ್ಲಿ ಹಳೆಯ ಮತ್ತು ಹೊಸ ಅರ್ಥಶಾಸ್ತ್ರ ಗಳನ್ನು ಮಿಳನಮಾಡಿ ಸುಲಭ ಶೈಲಿಯಲ್ಲಿ ಬರೆಯಲಾಗಿದೆ. ಇದು ಅರ್ಥಶಾಸ್ತ್ರದ ವಿದ್ಯಾರ್ಥಿಗೆ ಒಂದು ಪರಾಮರ್ಶ ಗ್ರಂಥದಂತಿದೆ.

ಸ್ಯಾಮ್ಯುಯೆಲ್‌ಸನ್ ವಿಚಾರ ಮಾರ್ಗ

ಪುಸ್ತಕ ಪ್ರಕಾಶನ ಸಂಸ್ಥೆಯೊಂದರ ಪ್ರತಿನಿಧಿಯೊಬ್ಬರು ಸ್ಯಾಮ್ಯುಯೆಲ್‌ಸನ್ನ ರಿಗೆ ಅರ್ಥಶಾಸ್ತ್ರದ ಮತ್ತು ಅರ್ಥಶಾಸ್ತ್ರಜ್ಞರ ವಿಷಯದಲ್ಲಿ ಹಾಕಿದ ಪ್ರಶ್ನೆಗಳಿಗೆ ಸ್ಯಾಮ್ಯುಯೆಲ್‌ಸನ್ ನೀಡಿದ ಉತ್ತರ ಗಮನಾರ್ಹವಾಗಿದೆ: "ವಾಲ್‌ಸ್ಟ್ರೀಟಿನವರ (ನ್ಯೂಯಾರ್ಕಿನ ವ್ಯವಹಾರವಿದರ ಬೀದಿ) ಭಾಷೆಯಲ್ಲಿ ಹೇಳುವುದಾದರೆ, ಅರ್ಥ ಶಾಸ್ತ್ರ ಒಂದೇ ಸಮನೆ ಬೆಳೆಯುತ್ತಿರುವ ಒಂದು ಕೈಗಾರಿಕೆ. ಕಾಲೇಜುಗಳಲ್ಲಿ ಅರ್ಥಶಾಸ್ತ್ರ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಲೇ ಇದೆ. ವಿದ್ಯಾಭ್ಯಾಸದ ಒಟ್ಟು ಮಾರುಕಟ್ಟೆಯಲ್ಲಿ ಅರ್ಥಶಾಸ್ತ್ರದ್ದು ಸಿಂಹಪಾಲು. ಬರಬರುತ್ತಾ ಅರ್ಥಶಾಸ್ತ್ರದ ಅಧ್ಯಯನ ಜಟಿಲವಾಗುತ್ತಿದೆ. ಕಾರಣ: ಗಣಿತಶಾಸ್ತ್ರದ ಪರಕಾಯಪ್ರವೇಶ. ಅದು ಅರ್ಥಶಾಸ್ತ್ರವನ್ನೂ ಹೊಕ್ಕಿದೆ. ಸಂಶೋಧನೆಯ ದೂರದೃಷ್ಟಿಯಿಂದ ನೋಡಿದರೆ ಇದು ಒಳ್ಳೆಯ ಪರಿವರ್ತನೆಯೆಂದೇ ಕಾಣುತ್ತದೆ. ಜೊತೆಗೆ ಅರ್ಥ ಶಾಸ್ತ್ರ ವಾಸ್ತವಿಕ ಪ್ರಪಂಚದ ಜಟಿಲ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡುವ ಶಾಸ್ತ್ರ ಎಂದು ವಿದ್ಯಾರ್ಥಿಗಳಿಗೆ ಮನದಟ್ಟಾಗಬೇಕಾದರೆ ಇದು ಅತ್ಯಾವಶ್ಯಕ."[5]

ಹಿಂದಿನ ಪುಟಗಳಲ್ಲಿ ನಾವು ತಿಳಿದುಕೊಂಡಿರುವಂತೆ ಸ್ಯಾಮ್ಯುಯೆಲ್‌ಸನ್ ಹತ್ತಾರು ಸಂಸ್ಥೆಗಳೊಡನೆ ವಿವಿಧ ರೀತಿಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದರೂ ಅರ್ಥಶಾಸ್ತ್ರದ ಬೋಧನೆ ಮತ್ತು ಸಂಶೋಧನೆಗಳಲ್ಲಿ ಅವರಿಗಿರುವ ಉತ್ಸಾಹ ಎಂದಿಗೂ ಕುಗ್ಗಿಲ್ಲ. ತಮಗೆ ಸರಿ ಎಂದು ತೋರಿದ ಅಭಿಪ್ರಾಯವನ್ನು ನಿರ್ಭಯ

---

[5] "Interview with Text Book Author Professor Paul A. Samuelson", *Business Week Pamphlet*, 1969

ವಾಗಿ ಸೂಚಿಸುತ್ತಾರೆ. ಅನೇಕ ಸಂದರ್ಭಗಳಲ್ಲಿ ಸರ್ಕಾರದ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಉಗ್ರವಾಗಿ ಟೀಕಿಸಿದ್ದಾರೆ ಮತ್ತು ಟೀಕಿಸುತ್ತಲೂ ಇದ್ದಾರೆ.

ಅಮೆರಿಕದ ಆರ್ಥಿಕ ಪ್ರಗತಿಯ ವಿಷಯದಲ್ಲಿ ಇವರು ಆಶಾವಾದಿಗಳು. ಸದ್ಯದಲ್ಲಿ ಅಮೆರಿಕದ ಆರ್ಥಿಕ ಪ್ರಗತಿ ಕುಂಠಿತವಾಗಿದ್ದರೂ ಸರಿಯಾದ ವರಮಾನ ನೀತಿಯನ್ನು ಅಮೆರಿಕದ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಅಳವಡಿಸಿ ಕೊಂಡರೆ ಈಗಿನ ಪರಿಸ್ಥಿತಿಯಿಂದ ಪಾರಾಗಬಹುದು. ಇದನ್ನು ಸಾಧಿಸಲು ವ್ಯಾಪಕವಾದ ಹಣಕಾಸು ಮತ್ತು ರಾಜ್ಯಾದಾಯವೆಚ್ಚದ ನೀತಿಗಳನ್ನು ಅಮೆರಿಕನ್ ಸರ್ಕಾರ ಅನುಸರಿಸಬೇಕು ಎಂದು ಅವರು ಪ್ರತಿಪಾದಿಸುತ್ತಾರೆ. ಹಣದುಬ್ಬರದ ಭೀತಿಯಿಂದ ಸರ್ಕಾರ ಈಗ ಅನುಸರಿಸುತ್ತಿರುವ ವಿಧಾನಗಳನ್ನು ಮುಂದುವರಿಸಿದರೆ ಬರುವ ವರ್ಷ ನಿರುದ್ಯೋಗ ಇನ್ನಷ್ಟು ಬೆಳೆಯುತ್ತದೆ. ಪಟ್ಟಣಗಳಲ್ಲಿರುವ ಅಲ್ಪ ಸಂಖ್ಯಾತವರ್ಗದ ಜನ ನಿರುದ್ಯೋಗಕ್ಕೆ ಬಲಿಯಾಗುತ್ತಾರೆ. ಆದ್ದರಿಂದ ನಮ್ಮ (ಅಮೆರಿಕನ್ ಜನರ) ಪ್ರಥಮ ಪ್ರಾಶಸ್ತ್ಯ ಹಣದುಬ್ಬರದ ವಿರುದ್ಧ ಹೋರಾಡು ವುದಲ್ಲ. ಅದರ ಬದಲು ಸರ್ಕಾರ ಸರಿಯಾದ ನಿರ್ದೇಶನ ಕೊಟ್ಟು ವರಮಾನ ನೀತಿಯನ್ನು ರೂಪಿಸಿ ಆರ್ಥಿಕ ವ್ಯವಸ್ಥೆಯನ್ನು ಪ್ರಗತಿಪಥದಲ್ಲಿ ಕೊಂಡೊಯ್ಯ ಬೇಕು. ಸದಾಕಾಲದಲ್ಲೂ ಮಾರುಕಟ್ಟೆಯ ಬೆಲೆಯ ವಿನ್ಯಾಸ ಪದ್ಧತಿ ಶ್ರೇಷ್ಠ ತರವಾದ ಆರ್ಥಿಕ ಲಕ್ಷಣ ಎಂಬ ಭಾವನೆ ಇರಬೇಕಾಗಿಲ್ಲ. ಆವಶ್ಯಕವಿದ್ದಾಗ ಸರ್ಕಾರದ ನಿರ್ದೇಶನವೂ ಆರ್ಥಿಕ ವ್ಯವಸ್ಥೆಯಲ್ಲಿ ಸರ್ಕಾರದ ಪ್ರವೇಶವೂ ಸೂಕ್ತ ಎಂಬುದು ಸ್ಯಾಮ್ಯುಯೆಲ್‌ಸನ್ ಅಭಿಪ್ರಾಯ.

ತಮ್ಮ ಬರವಣಿಗೆಗಳ ಮೂಲಕವಷ್ಟೇ ಅಲ್ಲ, ಮ್ಯಾಸಚುಸೆಟ್ಸ್ ತಾಂತ್ರಿಕ ಶಾಲೆಯ ಅರ್ಥಶಾಸ್ತ್ರದ ವಿಭಾಗವನ್ನು ಅಭಿವೃದ್ಧಿ ಪಡಿಸಿ ತನ್ಮೂಲಕವೂ ಅವರು ಕೀರ್ತಿ ಗಳಿಸಿದ್ದಾರೆ. ಅರ್ಥಶಾಸ್ತ್ರ ಅಧ್ಯಯನದಲ್ಲಿ ಎಂ. ಐ. ಟಿ. ಪ್ರಪಂಚದಲ್ಲೇ ಪ್ರಮುಖ ಕೇಂದ್ರವೆನಿಸಿದೆ. ಆದ್ದರಿಂದ ಸ್ವೀಡನ್‌ದೇಶದ ವಿಜ್ಞಾನಿಗಳ ಸಭೆ ನೊಬೆಲ್ ಪ್ರಶಸ್ತಿಯ ಪ್ರಕಟನೆ ಹೊರಡಿಸಿದಾಗ ಸ್ಯಾಮ್ಯುಯೆಲ್‌ಸನ್ನರ ವಿಷಯದಲ್ಲಿ ಉಲ್ಲೇಖಿಸಿದ ಮಾತುಗಳು ಅರ್ಥಗರ್ಭಿತವಾಗಿವೆ ಎನ್ನಬಹುದು. ಅರ್ಥಶಾಸ್ತ್ರದ ಹಿರಿಮೆಯನ್ನು ಎತ್ತಿಹಿಡಿಯುವುದರಲ್ಲಿ ಉಳಿದ ಪ್ರಖ್ಯಾತ ಅರ್ಥ ಶಾಸ್ತ್ರಜ್ಞರಿಗಿಂತ ಅಧಿಕವಾಗಿ ೫೫ ವರ್ಷದ ಸ್ಯಾಮ್ಯುಯೆಲ್‌ಸನ್ ದುಡಿದಿದ್ದಾರೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಪ್ರೊ. ಬಿ. ಕೃಷ್ಣನ್

ಸಮಾಜ ವಿಜ್ಞಾನಗಳ ಸ್ವರೂಪ ಮತ್ತು ಪ್ರಾಮುಖ್ಯ*

'ಮಾನವಿಕ ಕರ್ಣಾಟಕ' ಸಮಾಜ ವಿಜ್ಞಾನಗಳು ಮತ್ತು ಸಾಹಿತ್ಯೇತರ ಮಾನವಿಕಗಳಿಗೆ ಮೀಸಲಾಗಿದೆ. ಸಮಾಜ ವಿಜ್ಞಾನಗಳಲ್ಲಿ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾಮಾಜಿಕ ಮನೋವಿಜ್ಞಾನ ಇವೇ ಮೊದಲಾದವು ಪ್ರಮುಖವಾಗಿವೆ. ಸಮಾಜ ವಿಜ್ಞಾನಗಳು ಮತ್ತು ಭೌತ ವಿಜ್ಞಾನಗಳು ಸಾಧಿಸಿರುವ ಪ್ರಗತಿಯನ್ನು ಕೆಲವರು ಹೋಲಿಸಿ, ಸಮಾಜವಿಜ್ಞಾನಗಳ ಸಾಧನೆಯನ್ನು ಒರೆಹಚ್ಚಲು ಯತ್ನಿಸುತ್ತಾರೆ. ಇದು ಅಷ್ಟು ಪ್ರಯೋಜನಕಾರಿಯಲ್ಲ. ಭೌತ ವಿಜ್ಞಾನಗಳು ಬಾಹ್ಯಪ್ರಪಂಚದ ಘಟನೆಗಳ ಅಧ್ಯಯನವನ್ನು ನಡೆಸಿ ಅವುಗಳನ್ನು ಹತೋಟಿಯಲ್ಲಿಡಲು ಪ್ರಯತ್ನಿಸುತ್ತವೆ. ಕೆಲವು ಘಟನೆಗಳನ್ನು ಪರೀಕ್ಷಿಸಿ ಸರ್ವಸಾಮಾನ್ಯ ನಿಯಮಗಳನ್ನು ಅವಕ್ಕೆ ಸಂಬಂಧಪಟ್ಟ ವಿಜ್ಞಾನಿಗಳು ಪ್ರತಿಪಾದಿಸುತ್ತಾರೆ. ಅವರ ಸೂತ್ರಗಳು ಬೇಗನೆ ಬದಲಾಯಿಸುವ ಹಾಗಿರುವುದಿಲ್ಲ. ಅವಕ್ಕೆ ಕಾಲಾವಕಾಶವಿರುತ್ತದೆ. ಆದರೆ ಸಮಾಜವಿಜ್ಞಾನಗಳ ವಿಚಾರವೇ ಬೇರೆಯಾಗಿರುತ್ತದೆ. ಅವುಗಳ ಅಧ್ಯಯನ ವ್ಯಕ್ತಿ ಮತ್ತು ಸಮಾಜದ ನಡವಳಿಕೆಗೆ ಸಂಬಂಧಪಟ್ಟಿರುವುದರಿಂದ, ಅವನ್ನು ನಡೆಸಿದ ಕಾಲ, ದೇಶ ಮತ್ತು ವ್ಯಕ್ತಿ ಸಮೂಹಕ್ಕೆ ಮಾತ್ರ ಪರಿಶೋಧನೆಗಳು ಹೆಚ್ಚಾಗಿ ಅನ್ವಯವಾಗುತ್ತವೆ. ಅಲ್ಲಿ, ಇಲ್ಲಿ ನಡೆಸಿದ ಕೆಲವು ಪರಿಶೋಧನೆಗಳ ಆಧಾರದ ಮೇಲೆ ಸರ್ವಸಾಮಾನ್ಯವಾದ ನಿಯಮಗಳನ್ನು ಪ್ರತಿಪಾದಿಸುವುದು ಸಮಾಜ ವಿಜ್ಞಾನಗಳಿಗೆ ಸಾಧ್ಯವಾಗದು. ಸಮಾಜ ಸ್ಥಿರತೆಯಿಂದ ಕೂಡಿರುವುದಿಲ್ಲ. ಅದು ಬದಲಾಯಿಸುತ್ತಿರುತ್ತದೆ. ಈ ಬದಲಾವಣೆಗೆ ಅನೇಕ ಕಾರಣಗಳಿರಬಹುದು. ವಿಜ್ಞಾನದ ಮುನ್ನಡೆ, ಬೇರೆ ಸಂಸ್ಕೃತಿಯವರ ಸಂಪರ್ಕ, ಆರ್ಥಿಕ ಮತ್ತು ರಾಜಕೀಯ ಧೋರಣೆಗಳು, ವಿದ್ಯಾ ಪ್ರಸರಣ, ಜನವಿಸ್ತಾರ, ಒಳಜಗಳಗಳು, ಇನ್ನೂ ಅನೇಕ ಸಮಸ್ಯೆಗಳು ಸಮಾಜದ

---

* ೧೯೭೦ರ ನವೆಂಬರ್ ೧೧ರಂದು ರಾಷ್ಟ್ರಕವಿ ಶ್ರೀ ಕುವೆಂಪು ಅವರ ಸಮ್ಮುಖದಲ್ಲಿ ಮಾನವಿಕ ಕರ್ಣಾಟಕದ ಮೊದಲ ಸಂಚಿಕೆಯನ್ನು ಬಿಡುಗಡೆ ಮಾಡುತ್ತ ಪ್ರೊ. ಕೃಷ್ಣನ್ ಮಾಡಿದ ಭಾಷಣದಿಂದ ಉದ್ಧೃತ.

ಬದಲಾವಣೆಗೆ ಕಾರಣಗಳಾಗಬಹುದು. ಈ ಬದಲಾವಣೆಯ ವೇಗ ಒಂದೇ ಸಮನಾಗಿರುವುದಿಲ್ಲ. ಕೆಲವು ವೇಳೆ ಚಲನೆ ಮುಂಗಾಮಿಯಾಗುವುದಕ್ಕಿಂತ ಹಿಂಗಾಮಿಯಾಗಬಹುದು. ಒಬ್ಬ ವ್ಯಕ್ತಿಯ ನಡತೆ ಅಥವಾ ವರ್ತನೆ, ಹೆಚ್ಚಾಗಿ ಆಗಿರುವ ಗುಂಪಿನ ನಡವಳಿಕೆ, ಪದ್ಧತಿಗಳು, ಗುಂಪಿನ ಮೌಲ್ಯಗಳು ಮತ್ತು ನಂಬಿಕೆಗಳು ಇವುಗಳ ಪ್ರಭಾವದಿಂದ ಕೂಡಿರುತ್ತದೆ. ಆದ್ದರಿಂದ ಆಯಾ ಕಾಲದ ಸಮಸ್ಯೆಗಳ ದೃಷ್ಟಿಯಿಂದ ಸಮಾಜ ವಿಜ್ಞಾನಗಳು ತಮ್ಮ ಪರಿಶೋಧನೆಗಳನ್ನು ಮುಂದುವರಿಸಿ ಮಾನವ ಪ್ರಗತಿಗೆ ಸಹಾಯಕವಾಗಬೇಕು.

ಸಮಸ್ಯೆಗಳು ಮಾನವಕುಲ ಹುಟ್ಟಿದಾಗಿನಿಂದಲೂ ಇದ್ದೇ ಇವೆ. ಅವುಗಳ ವಿಸ್ತರಣ, ಕಾಲ ದೇಶಗಳಿಗೆ ಹೊಂದಿಕೊಂಡಿರುವಂತೆ ಇರುತ್ತದೆ. ವಿದ್ಯಾರ್ಥಿಗಳ ಶಿಸ್ತಿನ ವಿಚಾರದಲ್ಲಿ ಹಿಂದಿನವರು ಅಷ್ಟು ಒಳ್ಳೆಯ ಅಭಿಪ್ರಾಯವಿಟ್ಟಿದ್ದಿಲ್ಲ. ಉಪಾಧ್ಯಾಯರನ್ನು ಕಂಡರೆ ವಿದ್ಯಾರ್ಥಿಗಳಿಗೆ ಗೌರವವಿಲ್ಲ. ಅವರು ತರಗತಿಗೆ ಬಂದಾಗ ವಿದ್ಯಾರ್ಥಿಗಳು ಎದ್ದು ನಿಲ್ಲುವುದಿಲ್ಲ ಎಂದು ಮುಂತಾಗಿ ಸಾಕ್ರೆಟೀಸ್ ಅವನ ಕಾಲದ ವಿದ್ಯಾರ್ಥಿಗಳನ್ನು ಕುರಿತು ಹೇಳಿದನೆಂದು ಉಲ್ಲೇಖಿಸಲಾಗಿದೆ.

ಅದರ ಪ್ರಮಾಣ ಈಗ ಸ್ವಲ್ಪ ಹೆಚ್ಚಾಗಿರಬಹುದು. ಪ್ರದರ್ಶನ ಸ್ವಲ್ಪಮಟ್ಟಿಗೆ ಉಗ್ರವಾಗಿರಬಹುದು. ಜ್ಞಾನದಾಹದಿಂದ ಕೂಡಿದ ವಿದ್ಯಾರ್ಥಿಗಳು ಆಗಲೂ ಇದ್ದರು, ಈಗಲೂ ಇದ್ದಾರೆ. ಅವರು ವಿದ್ಯಾರ್ಜನೆಯ ಕಡೆ ಹೆಚ್ಚು ಗಮನ ಕೊಟ್ಟು ತಮ್ಮ ಕಾಲವನ್ನು ಫಲದಾಯಕವಾಗಿ ಮಾಡಿಕೊಳ್ಳುತ್ತಾರೆ.

ಈಗ ನಮ್ಮ ದೇಶದ ಸಮಸ್ಯೆಗಳ ಕಡೆ ಗಮನ ಹರಿಸಿದರೆ ಹಲವಾರು ಬಗೆಯ ಸಮಸ್ಯೆಗಳು ಎದ್ದು ನಿಲ್ಲುತ್ತವೆ. ಆರ್ಥಿಕ ಮುಗ್ಗಟ್ಟು, ಅವಿದ್ಯಾವಂತರ ಸಂಖ್ಯೆ, ಪ್ರಾಂತೀಯ ಮತೀಯ ಜಾತೀಯ ಅಂತರ ಮತ್ತು ಒಳಜಗಳಗಳು, ಅಧಿಕಾರ ವರ್ಗ ಮತ್ತು ಕಾರ್ಮಿಕರ ಮಧ್ಯೆ ಸಂಘರ್ಷಣೆ, ರಾಜಕೀಯ ಪಕ್ಷಗಳ ಅಧಿಕಾರ ಮೋಹದಿಂದ ಕೂಡಿದ ಹೋರಾಟ, ಅಂತರರಾಷ್ಟ್ರೀಯ ಕಲಹ, ದೇಶದ ಮೇಲೆ ಅದರ ಪರಿಣಾಮ, ಅಪರಾಧ ಮತ್ತು ಬಾಲಾಪರಾಧಗಳ ಸಮಸ್ಯೆ, ಇತರ ಸಾಮಾಜಿಕ ರೋಗರುಜಿನಗಳು, ಹೀಗೆ ಅವುಗಳ ಪಟ್ಟಿಯನ್ನು ಬೆಳೆಸುತ್ತಾ ಹೋಗಬಹುದು. ಈಗಿನ ಶಿಕ್ಷಣ ಪದ್ಧತಿ ಅಸಮರ್ಪಕವೆಂದು ಶಿಕ್ಷಣವೇತ್ತರು ಹೇಳುತ್ತ ಬಂದಿದ್ದಾರೆ. ನಾವು ನಡೆಸುತ್ತಿರುವ ಪರೀಕ್ಷಾ ವಿಧಾನ ನಿಜವಾಗಿಯೂ ವಿದ್ಯಾರ್ಥಿಯ ಸಾಧನೆಯನ್ನು ಅಳೆಯುತ್ತಿಲ್ಲವೆಂಬುದು ಎಲ್ಲರ ಗಮನಕ್ಕೆ ಬಂದಿದೆ. ಇವುಗಳೆಲ್ಲವನ್ನೂ ಆದಷ್ಟು ಸಮರ್ಪಕವಾಗಿ ಬಗೆಹರಿಸಲೂ ಸಮಾಜ ವಿಜ್ಞಾನಗಳ ಪರಿಶೋಧನೆ ಅತ್ಯಾವಶ್ಯಕವಾಗಿದೆ. ಅನೇಕ ವೇಳೆ ಸಮಾಜ ವಿಜ್ಞಾನಗಳ ಪರಿಶೋಧನೆಗಳ ಫಲಿತಾಂಶಗಳನ್ನು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಲು ಉಪಯೋಗಿಸಿಕೊಳ್ಳಲು ಸಮಾಜದ ಮುಂದಾಳುತನ ವಹಿಸಿರುವವರು ವಿಳಂಬ ಮಾಡುತ್ತಾರೆ. ಹೊಸದೊಂದು ವಿಧಾನವನ್ನು ಸುಲಭವಾಗಿ ಜನ ಒಪ್ಪಿಕೊಳ್ಳು

ವುದಿಲ್ಲ. ಇದರ ನಿದರ್ಶನವನ್ನು ನಾವು ಹಿಂದಿನಿಂದಲೂ ನೋಡಬಹುದು. ಹಲವಾರು ವಿಜ್ಞಾನಿಗಳು ತಮ್ಮ ನೂತನ ತತ್ತ್ವವನ್ನು ವಿವರಿಸುವಾಗ ಅವಹೇಳನ ವನ್ನೂ ಕೆಲವು ಸಲ ದೇಹದಂಡನೆಯನ್ನೂ ಅನುಭವಿಸಿದ್ದಾರೆ. ಇದಕ್ಕೆ ಜನರ ಮಾನಸಿಕ ಜಡತೆ ಒಂದು ಕಾರಣ. ಅದರ ವಿಷಯವಾಗಿ ಹೊಂದಿರುವ 'ಪೂರ್ವಾಗ್ರಹ' ಮತ್ತೊಂದು ಕಾರಣ. ಜೊತೆಗೆ ಅದಕ್ಕೆ ಬೇಕಾದ ಆರ್ಥಿಕ ನೆರವು, ಮುಂದಾಳುಗಳ ಸಹಕಾರದ ಕೊರತೆ ಮತ್ತು ಕೆಲವರ ಪಟ್ಟಭದ್ರ ಆಸಕ್ತಿಗಳು ಸಮಾಜದ ಕೊರತೆಗಳನ್ನು ನೀಗುವ ಹಲವು ನೂತನ ವಿಧಾನಗಳ ಅನ್ವಯಕ್ಕೆ ಅಡ್ಡಿಯಾಗಬಹುದು. ಉದಾಹರಣೆಗೆ ಅನೇಕ ಕಾರ್ಮಿಕ ಉದ್ಯಮಗಳಲ್ಲಿ ಕೆಲಸ ಗಳಿಗೆ ಅಭ್ಯರ್ಥಿಗಳನ್ನು ಆರಿಸುವ ವಿಧಾನದಲ್ಲಿ ಕೊರತೆಗಳಿವೆ. ಕೆಲಸಕ್ಕೆ ತಕ್ಕ ವ್ಯಕ್ತಿಯನ್ನು ಆರಿಸದೆ ಇತರ ಕಾರಣಗಳ ಮೂಲಕ ಅಭ್ಯರ್ಥಿಗಳನ್ನು ನೇಮಿಸಿ ಕೊಳ್ಳುವುದರಲ್ಲಿ ದಕ್ಷತೆಗೆ ಮತ್ತು ಪದಾರ್ಥಗಳ ಉತ್ಪತ್ತಿಗೆ ಕುಂದುಂಟಾಗುತ್ತದೆ. ವೈಜ್ಞಾನಿಕ ರೀತಿಯನ್ನು ಅನುಸರಿಸಿದ್ದಾದರೆ ವ್ಯಕ್ತಿಗೂ ಉದ್ಯಮಕ್ಕೂ ಒಳ್ಳೆಯ ದಾಗುತ್ತದೆ. ಮನೋವೈಜ್ಞಾನಿಕರು ಈ ವಿಷಯದಲ್ಲಿ ಸಾಕಷ್ಟು ಪರಿಶೋಧನೆ ಮಾಡಿದ್ದಾರೆ. ಅಮೆರಿಕ ಮೊದಲಾದ ಮುಂದುವರಿದ ದೇಶಗಳಲ್ಲಿ ಈ ವೈಜ್ಞಾನಿಕ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. ನಮ್ಮಲ್ಲಿ ಇದಕ್ಕೆ ಪ್ರಾದಾನ್ಯ ಕೊಟ್ಟಿಲ್ಲ. ಈಗೀಗ ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್‌ಗಳ ಮತ್ತು ಇತರ ಸಂಸ್ಥೆಗಳ ಪ್ರಚಾರದ ಮೂಲಕ ದೇಶದಲ್ಲಿ ಕೆಲವು ಕಾರ್ಖಾನೆಗಳು ಈ ವಿಧಾನಗಳ ಕಡೆ ದೃಷ್ಟಿ ಬೀರುತ್ತಿವೆ. ದೇಶದ ಹಲವಾರು ಬ್ಯಾಂಕುಗಳು ಕೂಡ ತಮ್ಮ ನೌಕರರನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ಮೊದಲು ಈ ವಿಧವಾದ ನೂತನ ಪದ್ಧತಿಗಳನ್ನು ಅನುಸರಿಸಬೇಕೆಂಬ ಅಭಿಪ್ರಾಯ ಹೊಂದಿ ಇದರ ಅನುಸರಣೆಗೆ ಬೇಕಾದ 'ಮೊದಲ ಪ್ರಯತ್ನ' ಮಾಡುತ್ತಿದ್ದಾರೆ. ಅಡಚಣೆಗಳು ಬಹುವಿಧ ರೂಪಗಳಲ್ಲಿವೆ ಎಂಬುದು ನಿಜ. ಅವನ್ನು ನಿಗ್ರಹಿಸಿ ದೇಶದ ಮತ್ತು ವ್ಯಕ್ತಿಯ ಹಿತದೃಷ್ಟಿಯಿಂದ ಸುಧಾರಿಸಿದ ಮಾರ್ಗಗಳನ್ನು ನಾವು ಅನುಸರಿಸಬೇಕಾಗುತ್ತದೆ. ಇದು ಒಂದು ಉದಾಹರಣೆ ಮಾತ್ರ. ಹೀಗೆ ಹಲವಾರು ಸಮಾಜ ವಿಜ್ಞಾನಗಳ ಪರಿಶೋಧನೆಗಳನ್ನು ಸಮಾಜ ಕಲ್ಯಾಣಕ್ಕೆ ಬಳಸಿಕೊಳ್ಳಲಾಗದೆ, ವರದಿಗಳಲ್ಲೋ ಪುಸ್ತಕದ ರೂಪದಲ್ಲೋ ಅವು ಹುದುಗಿವೆ.

ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಪ್ರಸ್ತಾಪಿಸಿದಲ್ಲಿ ತಪ್ಪಾಗ ಲಾರದು. ಸಮಾಜದ ಸ್ಥಿತಿಗತಿಗಳಿಗೂ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೂ ನಿಕಟ ಸಂಬಂಧವಿದೆ. ಈ ಸಂಬಂಧವನ್ನು ವಿಶದವಾಗಿ ಪರಿಶೀಲಿಸಲು ವೈದ್ಯಕೀಯ ಸಮಾಜಶಾಸ್ತ್ರ ಎಂಬ ವಿಜ್ಞಾನ ಇತ್ತೀಚೆಗೆ ಪ್ರಾಮುಖ್ಯಕ್ಕೆ ಬರುತ್ತಿದೆ. ಸಾಮಾಜಿಕ ಮತ್ತು ಸಾಂಕ್ರಾಮಿಕ ರೋಗಗಳು, ಆರ್ಥಿಕ ಮಟ್ಟದ ಮೇಲೆ ನಿಂತಿರುವ ರೋಗಗಳು, ವಿವಿಧ ಸಂಸ್ಕೃತಿಯಲ್ಲಿ ಕಂಡುಬರುವ ರೋಗಗಳು, ಬಡವರ

ಖಾಯಿಲೆಗಳು—ಹೀಗೆ ದೈಹಿಕ ಖಾಯಿಲೆಗಳ ಉತ್ಪತ್ತಿ, ಹರಡುವಿಕೆ ಇವನ್ನು ಸಾಮಾಜಿಕ ದೃಷ್ಟಿಯಿಂದ ಈ ವಿಜ್ಞಾನ ಪರಿಶೀಲಿಸುತ್ತಿದೆ. ಇದೇ ರೀತಿ ಮನೋವೈದ್ಯರು ಮತ್ತು ಮನೋವಿಜ್ಞಾನಿಗಳು ಮಾನಸಿಕ ರೋಗಗಳ ಮೇಲೆ ಸಮಾಜದ ಪ್ರಭಾವವನ್ನು ಮನಗಾಣುತ್ತಿದ್ದಾರೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಬಂದವರು ಹೊಸ ಪ್ರದೇಶದ ಸಮಾಜ ಕಟ್ಟಳೆಗಳಿಗೆ ಹೊಂದಿಕೊಳ್ಳಲು ಸಾಧ್ಯವಾಗದೆ ಎಂಥ ಮಾನಸಿಕ ಬೇನೆ ಮತ್ತು ರೋಗಗಳಿಗೆ ತುತ್ತಾಗುತ್ತಾರೆಂಬ ವಿಷಯದ ಮೇಲೆ ರಾಂಚಿ ಮತ್ತು ಬೆಂಗಳೂರು ಮನೋವಿಜ್ಞಾನಿಗಳು ನಡೆಸಿದ ಪರಿಶೋಧನೆಗಳು ಬೆಳಕು ಚೆಲ್ಲುತ್ತವೆ. ಇಂಥ ಪರಿಶೋಧನೆಗಳು ಪಾಶ್ಚಾತ್ಯ ದೇಶಗಳಲ್ಲಿ ಬಹಳ ನಡೆದಿವೆ. ಅವುಗಳ ಫಲಿತಾಂಶಗಳು ಒಂದೇ ದಿಕ್ಕಿನಲ್ಲಿವೆ. ಹಲವರು ಮನೋವೈಜ್ಞಾನಿಕರು ಮನೋರೋಗಗಳನ್ನು 'ವರ್ತನೆಯ ವಿಕಾರಗಳು' (ಬಿಹೇವಿಯರ್ ಡಿಸ್‌ಆರ್ಡರ್ಸ್) ಎಂದೂ ಮತ್ತೆ ಕೆಲವರು 'ವ್ಯಕ್ತಿತ್ವದ ವಿಕಾರಗಳು' (ಪರ್ಸನಾಲಿಟಿ ಡಿಸ್‌ಆರ್ಡರ್ಸ್) ಎಂದೂ ಕರೆಯುತ್ತಾರೆ. ಒಬ್ಬನ ನಡತೆಗೂ ವ್ಯಕ್ತಿತ್ವದ ಬೆಳೆವಣಿಗೆಗೂ ಅವನ ಸಮಾಜಕ್ಕೂ ಹತ್ತಿರದ ಸಂಬಂಧವಿರುವುದು ಎಲ್ಲರಿಗೂ ತಿಳಿದ ವಿಷಯ. ಇಲ್ಲಿಯೂ ಆರ್ಥಿಕ ಮತ್ತು ಸಾಂಸ್ಕೃತಿಕ ಮಟ್ಟಕ್ಕೆ ಸೇರಿದಂತೆ ಹಲವು ಮಾನಸಿಕ ರೋಗಗಳು ಮತ್ತು ಬೇನೆಗಳು ಕಾಣಿಸಿಕೊಳ್ಳುತ್ತವೆ. ಈ ಬಗ್ಗೆ ಹಲವಾರು ಪರಿಶೋಧನೆಗಳು ನಡೆದಿವೆ. ಹಾಗೆಯೆ ಮಾನಸಿಕ-ದೇಹಜನ್ಯ (ಸೈಕೊ-ಸೊಮಾಟಿಕ್) ಪ್ರಾಧಾನ್ಯದಿಂದ ಹುಟ್ಟಿದ ಖಾಯಿಲೆಗಳಾದ ಜಠರಹುಣ್ಣು, ಉಬ್ಬಸ, ಕ್ಷಯ ಇವು ಸಮಾಜ ಅಸಮಂಜಸತೆಗೆ ನೇರವಾದ ಸಂಬಂಧವುಳ್ಳ ಖಾಯಿಲೆಗಳೆಂದು ಕೆಲವರ ಅಭಿಪ್ರಾಯ. ಆದ್ದರಿಂದ ಕೆಲವು ವೈದ್ಯಕೀಯ ಸಂಸ್ಥೆಗಳು ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಮಾಜವಿಜ್ಞಾನಗಳಲ್ಲಿ, ಹೆಚ್ಚಾಗಿ ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರಗಳಲ್ಲಿ, ಬೋಧನೆಯನ್ನು ಏರ್ಪಡಿಸಬೇಕೆಂಬ ವಿಚಾರವನ್ನು ಕುರಿತು ಆಲೋಚಿಸುತ್ತಿವೆ. ಈ ಸಂಬಂಧದಲ್ಲಿ ವೈದ್ಯಕೀಯ ವಿಜ್ಞಾನದ ಅಖಿಲಭಾರತ ಸಂಸ್ಥೆ ದೆಹಲಿಯಲ್ಲಿಯೂ ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜ್ ಮತ್ತು ಮನಸ್ವಾಸ್ಥ್ಯದ ಅಖಿಲಭಾರತ ಸಂಸ್ಥೆ (ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್) ಇವೆರಡೂ ಜೊತೆಯಾಗಿ ಬೆಂಗಳೂರಿನಲ್ಲಿಯೂ ಸೆಮಿನಾರುಗಳನ್ನು ನಡೆಸಿದುವು. ಬೆಂಗಳೂರಿನಲ್ಲಿ ನಡೆದ ಸೆಮಿನಾರಿನಲ್ಲಿ ವಿಷಯ ಪರಿಚಯ ಮಾಡಿಕೊಡುವ ಭಾಷಣದ ಅವಕಾಶ ನನಗೆ ದೊರಕಿತ್ತು. ಅಲ್ಲಿ ನಡೆದ ಕಾರ್ಯಕಲಾಪಗಳು ಒಂದು ಪುಸ್ತಕದ ರೂಪದಲ್ಲಿ ಪ್ರಕಟವಾಗಲಿವೆ.

ನಮ್ಮ ದೇಶದ ಸಮಾಜವಿಜ್ಞಾನಗಳ ಇತಿಹಾಸದಲ್ಲಿ ಒಂದು ಮುಖ್ಯ ಘಟನೆ ಸುಮಾರು ಒಂದೂವರೆ ವರ್ಷಗಳ ಹಿಂದೆ ಮೇ ೧೯೬೯ರಲ್ಲಿ ನಡೆಯಿತು. ಭಾರತದ ಸಮಾಜವಿಜ್ಞಾನಿಗಳ ಪರಿಶೋಧನ ಸಲಹಾ ಸಮಿತಿಯ

(ಇಂಡಿಯನ್ ಕೌನ್ಸಿಲ್ ಫಾರ್ ಸೋಷಿಯಲ್ ಸೈನ್ಸಸ್ ರೀಸರ್ಚ್) ಜನನವೇ ಆದು. ಅದಕ್ಕೆ ತಳಹದಿ ಹಾಕಿದವರಲ್ಲಿ ಪ್ರಮುಖರು ಡಾ. ವಿ. ಕೆ. ಆರ್. ವಿ. ರಾವ್. ಆ ಸಂಸ್ಥೆಯ ಮೊದಲನೆಯ ಅಧ್ಯಕ್ಷರಾಗಿ ಅವರು ಕೆಲಸ ಮಾಡಿದರು. ಈಗ ಯೋಜನಾ ಆಯೋಗದ ಉಪಾಧ್ಯಕ್ಷರಾಗಿರುವ ಪ್ರೊ. ಗಾಡ್ಗಿಲ್ ಅವರು ಈ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ಸಂಸ್ಥೆಯ ವ್ಯಾಪ್ತಿಯಲ್ಲಿ ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ಮನೋವಿಜ್ಞಾನ, ರಾಜ್ಯಶಾಸ್ತ್ರ, ಭೂಗೋಳಶಾಸ್ತ್ರ ಮೊದಲಾದವು ಸೇರಿವೆ. ಒಂದೊಂದು ವಿಜ್ಞಾನಕ್ಕೂ ಸಲಹಾ ಸಮಿತಿ ರಚಿಸಿ, ಆ ಭಾಗದಲ್ಲಿ ನಡೆದಿರುವ ಮತ್ತು ನಡೆಯಬೇಕಾದ ಪರಿಶೋಧನೆಗಳ ಒಂದು ವರದಿಯನ್ನು ತಯಾರಿಸಲು ಏರ್ಪಾಡಾಗಿದೆ. ಎರಡು ವಿಭಾಗಗಳ ವರದಿಗಳು ಸಿದ್ಧವಾಗಿವೆ. ಒಂದು ಭೂಗೋಳ ಶಾಸ್ತ್ರ, ಮತ್ತೊಂದು ಮನೋವಿಜ್ಞಾನ. ಮನೋವಿಜ್ಞಾನ ಸಲಹಾ ಸಮಿತಿಯ ಸದಸ್ಯನಾಗಿ ಕೆಲಸಮಾಡುವ ಮತ್ತು ಚಿಕಿತ್ಸಾ ಮನೋವಿಜ್ಞಾನದ ಬಗ್ಗೆ ಇಲ್ಲಿಯ ವರೆಗೂ ದೇಶದಲ್ಲಿ ನಡೆದ ಪರಿಶೋಧನೆಯ ವರದಿಯನ್ನು ತಯಾರುಮಾಡುವ ಒಂದು ಅವಕಾಶ ನನಗೆ ಸಿಕ್ಕಿತ್ತು. ಈ ವರದಿಗಳನ್ನು ಪರಿಶೀಲಿಸಿ ಮುದ್ರಣಕ್ಕೆ ತಯಾರು ಮಾಡುವ ಸಂಪಾದಕ ಮಂಡಲಿಯಲ್ಲೂ ಕೆಲಸಮಾಡುವ ಅವಕಾಶ ಸಿಕ್ಕಿದೆ. ಇನ್ನು ಕೆಲವು ತಿಂಗಳುಗಳಲ್ಲಿ ಮನೋವಿಜ್ಞಾನದ ಹತ್ತು ವಿಭಾಗಗಳ ಒಂದು ವರದಿ ದೇಶದ ಇಂದಿನ ಆವಶ್ಯಕತೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದ ವಿಷಯಗಳ ಪರಿಶೋಧನೆಯ ಸಲಹೆಗಳೊಂದಿಗೆ ಪ್ರಚುರವಾಗಲಿದೆ. ಪರಿಶೋಧನೆಗೆ ತಕ್ಕ ಅನುಕೂಲಗಳಿರುವ ವಿಶ್ವವಿದ್ಯಾನಿಲಯಗಳು ಮತ್ತು ಇತರ ಸಂಸ್ಥೆಗಳಲ್ಲಿ ಪರಿಶೋಧನೆಗಳಿಗೆ ಧನಸಹಾಯ ಮಾಡುವುದಲ್ಲದೆ ಸಮಾಜವಿಜ್ಞಾನಗಳಿಗೆ ಸಂಬಂಧಪಟ್ಟಂತೆ, ಸಮಾಚಾರ ಬ್ಯಾಂಕ್ (ಇನ್‌ಫರ್ಮೇಷನ್ ಬ್ಯಾಂಕ್) ಒಂದನ್ನು ತೆರೆಯಲೂ ಈ ಸಂಸ್ಥೆಯಲ್ಲಿ ಪ್ರಯತ್ನಿಸಲಾಗುತ್ತಿದೆ. ಸದ್ಯಕ್ಕೆ ಕೆಲಸ ಗಳೇನೊ ಉತ್ಸಾಹದಿಂದ ನಡೆಯುತ್ತಿವೆ.

ಈ ಒಂದು ಸಂಸ್ಥೆಯೇ ಸಮಾಜವಿಜ್ಞಾನ ಪರಿಶೋಧನೆಗಳ ಮುನ್ನಡೆಗೆ ಸಾಲದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಯುನೆಸ್ಕೊ ಸಂಸ್ಥೆ ಈ ಕಾರ್ಯ ನಿರ್ವಹಿಸಿದೆ. ಅದು ಎಲ್ಲ ರಾಷ್ಟ್ರಗಳಿಗೂ ಸೇರಿರುವುದರಿಂದ ಭಾರತಕ್ಕೆ ಹೆಚ್ಚು ಗಮನ ಕೊಡಲಾಗುವುದಿಲ್ಲ. ದೇಶದಲ್ಲಿ ಪ್ರತಿಯೊಂದು ವಿಶ್ವವಿದ್ಯಾನಿಲಯವೂ ಇತರ ಸಂಸ್ಥೆಗಳೂ ಭೌತ ವಿಜ್ಞಾನಗಳಿಗೆ ಕೊಡುತ್ತಿರುವ ಉತ್ತೇಜನವನ್ನು ಸಮಾಜವಿಜ್ಞಾನಗಳಿಗೂ ಮಾನವಿಕಗಳಿಗೂ ಕೊಡಬೇಕು. ವಿಜ್ಞಾನ ಪ್ರಚೋದಿತ ಸಾಮಾಜಿಕ ಬದಲಾವಣೆಗಳಿಗೆ ಹೊಂದಿಕೊಂಡು ಹೋಗಲು ವ್ಯಕ್ತಿಗಳು ಸಿದ್ಧರಾಗ ಬೇಕು. ಈ ಸಿದ್ಧತೆಗೆ ಸಾಕಷ್ಟು ತಿಳಿವಳಿಕೆಯನ್ನು ಪರಿಶೋಧನೆಗಳ ಮೂಲಕ ಸಮಾಜವಿಜ್ಞಾನಗಳು ನೀಡಬೇಕು. ಬುದ್ಧಿಶಕ್ತಿಯ ಮಟ್ಟದಿಂದ ಜನಾಂಗ ಹಲವಾರು ಅನುಕೂಲಗಳನ್ನು ಪಡೆಯಬಹುದು. ಆದರೆ ಅವುಗಳನ್ನು ಅನು

ಭವಿಸುವ ಹೃದಯವೈಶಾಲ್ಯ ಮತ್ತು ಸಹಬಾಳ್ವೆ ಕುಂಠಿತವಾಗಿಯೇ ಇರಬಹುದು. ಈ ಅಸಮಾನತೆಯಿಂದ ಮಾನವ ಜನಾಂಗಕ್ಕೆ ಕೇಡಾಗಬಹುದು. ಮಹನೀಯರೊಬ್ಬರು ಹೇಳಿದಂತೆ, ಮನುಷ್ಯ ಹಕ್ಕಿಯಂತೆ ಹಾರಾಡಲೂ ಮೀನಿನಂತೆ ಈಜಲೂ ಕಲಿತಿದ್ದಾನೆ. ಆದರೆ ಭೂಮಿಯ ಮೇಲೆ ತನ್ನ ಎರಡು ಕಾಲುಗಳ ಸಹಾಯದಿಂದ ಸರಿಯಾಗಿ ನಡೆಯಲು ಕಲಿತಿಲ್ಲ. ಎಷ್ಟು ಅರ್ಥಗರ್ಭಿತವಾಗಿದೆ ಈ ವಾಕ್ಯ! ಮಾನವನ ಆತ್ಮವಿಕಾಸದ, ವ್ಯಕ್ತಿತ್ವವಿಕಾಸದ ದೃಷ್ಟಿಯಿಂದ ನಾವು ಸಾಹಿತ್ಯ, ಕಲೆ, ಮಾನವಿಕಗಳು ಮತ್ತು ಸಮಾಜವಿಜ್ಞಾನಗಳಿಗೆ ಇತರ ವಿಜ್ಞಾನಗಳಿಗೆ ಕೊಡುವಷ್ಟೆ ಉತ್ತೇಜನವನ್ನು ಕೊಡಬೇಕೆಂದು ನನಗೆ ಅನಿಸುತ್ತದೆ.

ಡಾ. ಬಾ. ರಾ. ಗೋಪಾಲ

ನಗಿರೆಯ ಇಮ್ಮಡಿ ದೇವರಾಜ ಒಡೆಯರ ತಾಮ್ರಶಾಸನ

ಈ ಶಾಸನ ಹುಟ್ಟಿದ್ದು ವಿಜಯನಗರದ ಅರಸನಾಗಿದ್ದ ಶ್ರೀ ಕೃಷ್ಣರಾಯನ (ಕೃಷ್ಣದೇವರಾಯ) ಕಾಲದಲ್ಲಿ.[1] ಇದರಲ್ಲಿ ಎರಡು ತೇದಿಗಳಿವೆ. ಮೊದಲನೆಯ ತೇದಿ ಶಕವರುಷ ೧೪೪೦ನೆಯ ಈಶ್ವರ ಸಂವತ್ಸರದ ಭಾದ್ರಪದ ಬಹುಳ ೧ ಸೋಮವಾರ. ಈ ವಿವರಗಳು ಕ್ರಿ. ಶ. ೧೫೧೭ನೆಯ ಆಗಸ್ಟ್ ಮಾಹೆಯ ೩೧ನೆಯ ದಿನಕ್ಕೆ ಸರಿಹೋಗುತ್ತವೆ. ಅದು ಶಕಸಂವತ್ಸರ ೧೪೩೯ ಆಗಿತ್ತು. ಎರಡನೆಯ ತಾರೀಕಿನ ವಿವರಗಳನ್ನು ಎರಡನೆಯ ಪುಟದಲ್ಲಿ ಕೊಡಲಾಗಿದೆ. ಇದು ಶಕ ೧೪೪೪ನೆಯ ವಿಷು ಸಂವತ್ಸರದ ಶ್ರಾವಣ ಶುದ್ಧ ೫ ಗುರುವಾರ. ಈ ವಿವರಗಳು ಸಮರ್ಪಕವಾಗಿಲ್ಲ. ಶ್ರಾವಣ ಶುದ್ಧ ಪಂಚಮಿ ಕ್ರಿ. ಶ. ೧೫೨೧ನೆಯ ಜುಲೈ

---

[1] ೧೯೭೦ನೆಯ ಜೂನ್ ತಿಂಗಳಲ್ಲಿ ಕಾರವಾರ ಜಿಲ್ಲೆಯ ಶಿರಸಿ ತಾಲೂಕಿನಲ್ಲಿ ಶಾಸನ ಸಂಗ್ರಹಣೆ-ಸಂಶೋಧನೆಯ ಸಮಯದಲ್ಲಿ ಸೋಂದಾ ಅಥವಾ ಸ್ವಾದಿ ಗ್ರಾಮದಲ್ಲಿರುವ ಜೈನ ಭಟ್ಟಾಕಳಂಕ ಮಠಕ್ಕೆ ಹೋಗಿದ್ದೆ. ಆ ಮಠದಲ್ಲಿ ಹಿಂದೆ ಅನೇಕ ತಾಮ್ರಪಟಗಳೂ, ತಾಡವಾಲೆ ಗ್ರಂಥಗಳೂ ಇದ್ದುವು. ಅವುಗಳಲ್ಲಿ ಅನೇಕವನ್ನು ಸುಮಾರು ನಲವತ್ತು ವರುಷಗಳಿಗೂ ಹಿಂದೆ ದಿವಂಗತ ಪ್ರೊ. ಕೆ. ಜಿ. ಕುಂದಣಗಾರರು ತೆಗೆದುಕೊಂಡು ಹೋಗಿದ್ದರು. ಅವುಗಳಲ್ಲಿ ಕೆಲವು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯಲ್ಲಿಯೂ ಇವೆ. ಆದ ಕಾರಣ ಈಗ ಆ ಜೈನಮಠದಲ್ಲಿ ಅಂತಹವುಗಳಾವುವೂ ಇಲ್ಲವೆಂದು ಆ ಮಠದ ಯತಿಗಳು ತಿಳಿಸಿದರು. ಆದರೂ ಅವರಲ್ಲಿ ಉಳಿದಿದ್ದ ಒಂದೇ ಒಂದು ತಾಮ್ರಪಟವನ್ನು ನನಗೆ ತೋರಿಸಿದರು. ಅದನ್ನು ಶ್ರೀ ನರಸಿಂಹಜೋಶಿಯವರು ಕೊಟ್ಟ ಭರವಸೆಯ ಮೇಲೆ ನಾಲ್ಕಾರು ದಿನಗಳ ಕಾಲ ನನ್ನಲ್ಲಿಟ್ಟುಕೊಳ್ಳಲು ಅನುಮತಿಸಿದರು. ಶಿರಸಿಯ ಎಂ. ಇ. ಎಸ್. ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ. ಎಲ್. ಟಿ. ಶರ್ಮ ಅವರ ಸಹಾಯದಿಂದ ಈ ತಾಮ್ರಪಟದ ಪ್ರತಿಗಳನ್ನು ಶಿರಸಿಯಲ್ಲಿ ತೆಗೆಸಿದೆ. ಅನಂತರ ತಾಮ್ರಪಟವನ್ನು ಜೈನಮಠಕ್ಕೆ ಹಿಂದಿರುಗಿಸಲಾಯಿತು. ಇವರೆಲ್ಲರಿಗೂ ಲೇಖಕನ ಕೃತಜ್ಞತೆಗಳು ಸಲ್ಲುತ್ತವೆ.

ಈ ತಾಮ್ರಪಟವನ್ನು ೧೯೩೯-೪೦ರಲ್ಲಿ ಡಾ. ಪಿ. ಬಿ. ದೇಸಾಯಿಯವರು ಪರಿಶೀಲಿಸಿದ್ದಾರೆ (ARSIE, 1939-40 to 1942-43, ಪು 22; Appendix A, No 15). ಇದನ್ನೇ

ಮಾಹೆಯ ೮ನೆಯ ತಾರೀಕಾಗಿದ್ದು ಅಂದು ಸೋಮವಾರವಾಗಿತ್ತು. ಶಕವರ್ಷ ೧೪೪೩.

ಈ ತಾಮ್ರಪಟಗಳೊಂದೊಂದೂ ೨೩ ಸೆಂಟಿಮೀಟರ್ ಉದ್ದ ಮತ್ತು ೧೭.೫ ಸೆಂಟಿಮೀಟರ್ ಅಗಲ ಇವೆ. ಪಟದ ಮೇಲ್ಭಾಗದಲ್ಲಿ ರಾಜಮುದ್ರೆಯುಳ್ಳ ಉಂಗುರಕ್ಕಾಗಿ ೧.೩ ಸೆಂಟಿಮೀಟರ್ ಸುತ್ತಳತೆಯ ಒಂದು ರಂಧ್ರವಿದೆ. ಆ ಮುದ್ರೆಯಾಗಲಿ ಉಂಗುರವಾಗಲಿ ಸಿಕ್ಕಿಲ್ಲ. ಸಂಸ್ಕೃತ ಮತ್ತು ಕನ್ನಡಭಾಷೆಗಳಲ್ಲಿರುವ ಈ ಶಾಸನದ ಲಿಪಿ ೧೫–೧೬ನೆಯ ಶತಮಾನದ ಕನ್ನಡ ಲಿಪಿ.

ವಿದ್ಯಾನಗರದಲ್ಲಿ ಶ್ರೀ ಕೃಷ್ಣರಾಯ ಆಳುತ್ತಿದ್ದಾಗ ತೌಳವದೇಶದ ಕ್ಷೇಮಪುರದಲ್ಲಿ (ಅಂದರೆ ಈಗಿನ ಗೇರುಸೊಪ್ಪೆಯಲ್ಲಿ) ಸಾಳುವ ಇಮ್ಮಡಿ ದೇವರಾಜ ಒಡೆಯ ಆಳುತ್ತಿದ್ದ. ಈತ ನಗಿರೆ ರಾಜ್ಯ, ಹೈವೆ, ತುಳು, ಕೊಂಕಣ ಮುಂತಾದವನ್ನು ವಿಜಯನಗರದ ಅರಸನ ಅಧೀನದಲ್ಲಿ ಮಹಾಮಂಡಳೇಶ್ವರನಾಗಿ ಆಳುತ್ತಿದ್ದ. ಈ ಮಾಂಡಳಿಕನಿಗೆ ಭೈರವಾಂಬಾ ಎಂಬ ಒಬ್ಬ ಮಗಳೂ ಸಾಳುವ ಮಲ್ಲನೆಂಬ ಮಗನೂ ಇದ್ದರೆಂದು ಶಾಸನ ಪಾಠದ ಒಂಬತ್ತನೆಯ ಸಾಲಿನಲ್ಲಿರುವ ಸಂಸ್ಕೃತ ಪದ್ಯದಿಂದ ತಿಳಿದುಬರುತ್ತದೆ. ಈಕೆ ಪಾಂಡ್ಯ ನೃಪಾಲನನ್ನು ಮದುವೆಯಾದಳೆಂದೂ ಈ ದಂಪತಿಗಳಿಗೆ ದೇವರಾಯನೆಂಬ ಮಗ ಜನಿಸಿದನೆಂದೂ ಮುಂದಿನ ಸಾಲುಗಳಲ್ಲಿ ಹೇಳಿದೆ. ಮುಂದೆ ಇವರನ್ನು ಕುರಿತು ಏನೂ ಹೇಳಿಲ್ಲ. ಪ್ರಾಸಂಗಿಕವಾಗಿ ಇಮ್ಮಡಿ ದೇವರಾಯನ ಮಕ್ಕಳನ್ನು ಕುರಿತು ಹೇಳಿದಂತೆ ಇದರಿಂದ ಭಾಸವಾಗುತ್ತದೆ.

ಹಿಂದೀ ಭಾಷೆಯಲ್ಲಿನ 'ಜೈನಶಿಲಾಲೇಖ ಸಂಗ್ರಹ'ದ ನಾಲ್ಕನೆಯ ಸಂಪುಟದಲ್ಲಿ (ಪು. ೩೧೬) ಕಾಣಿಸಲಾಗಿದೆ.

ಇದೊಂದು ಬಿಡಿ ತಾಮ್ರಪಟವಾಗಿದ್ದು ಎರಡು ಕಡೆಯೂ ಬರಹವಿದೆ. ಹಿಂಭಾಗದಲ್ಲಿ ಕೇವಲ ಆರು ಸಾಲುಗಳಿವೆ. ಈ ತಾಮ್ರಪಟವನ್ನು ಪರೀಕ್ಷಿಸಿದಾಗ ಇದರ ಮೊದಲ ಭಾಗ ಬೇರೊಂದು ತಾಮ್ರಪಟದಲ್ಲಿದ್ದಿರಬಹುದೆಂಬ ಅಂಶ ಸ್ಪಷ್ಟವಾಯಿತು.

ಧಾರವಾಡಕ್ಕೆ ಹಿಂತಿರುಗಿದಮೇಲೆ ಕನ್ನಡ ಸಂಶೋಧನ ಸಂಸ್ಥೆಯಲ್ಲಿನ ತಾಮ್ರಪಟಗಳನ್ನು ಪರೀಕ್ಷಿಸಿದೆ. ಈ ಸಂಗ್ರಹದಲ್ಲಿನ ಒಂದು ತಾಮ್ರಪಟ ನನಗೆ ಸೋಂದಾದಲ್ಲಿ ದೊರೆತ ತಾಮ್ರಪಟದ ಮೊದಲ ಭಾಗವೆಂಬುದು ಸ್ಪಷ್ಟವಾಯಿತು. ಇದನ್ನು ಬಹಳ ಹಿಂದೆಯೇ ಶ್ರೀ ಕುಂದಣಗಾರರು "ಜಯಕರ್ನಾಟಕ"ದಲ್ಲಿ ಪ್ರಕಟಿಸಿದ್ದಾರೆ (ಸಂ. ೪, ಪು. ೧೩; ಶಾಸನ ೫, ಪು. ೩೬೨). ಆದರೆ ಅವರು ತಮಗೆ ದೊರಕಿದ ಶಾಸನದ ಪೂರ್ಣಪಾಠವನ್ನು ಕೊಟ್ಟಿಲ್ಲ. ಅವರು ಕೊಟ್ಟಿರುವ ಶಾಸನದ ಪಾಠದಲ್ಲೂ ಕೊರತೆಗಳಿವೆ. ಇದು ಅಪೂರ್ಣ ಶಾಸನವೆಂದಿದ್ದಾರೆ. ಆದರೆ ಇದೀಗ ನನಗೆ ದೊರೆತ ತಾಮ್ರಪಟದಿಂದ ಇದರ ಪೂರ್ಣಪಾಠ ಲಭ್ಯವಾಗಿದೆ. ಅಲ್ಲದೆ ಈ ಶಾಸನದಿಂದ ನಗಿರೆಯಲ್ಲಿ ೧೫–೧೬ನೆಯ ಶತಮಾನಗಳಲ್ಲಿ ಆಳಿದ ಅರಸರ ವಂಶಾವಳಿಗೆ ಸಂಬಂಧಿಸಿದ ಒಂದೆರಡು ಹೊಸ ಅಂಶಗಳು ಬೆಳಕಿಗೆ ಬರುತ್ತವೆ. ಈ ಕಾರಣಗಳಿಂದ ಈ ಶಾಸನವನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ.

ನಗಿರೆಯಲ್ಲಿ ಆಳಿದ ಮಾಂಡಳಿಕರ ವಂಶಾವಳಿಯಲ್ಲಿ ಇದು ನಮಗೆ ಇದು ವರೆಗೂ ತಿಳಿದಿರದಿದ್ದ ಹೊಸ ಅಂಶ. ಸೋಂದಾದಲ್ಲಿ ದೊರೆತ ತಾಮ್ರಪಟಗಳಲ್ಲಿ ಒಂದನೆಯ ಶಾಸನದಲ್ಲಿ ಪ್ರಸ್ತುತ ಶಾಸನದ ಆರಂಭದಲ್ಲಿರುವ ನಗಿರೆಯ ವಂಶಾವಳಿಗೆ ಸಂಬಂಧಿಸಿದ ಹೇಳಿಕೆಗಳಿವೆ. "ತತ್ರಾಸನ್ನಹವೋ ನೃಪಾಬುಧನುತಾಸ್ಸೀತಾಂಶು ವಂಶೋದ್ಭವಾಸ್ತೇಷು ಶ್ರೀಂಮುಡಿದೇವ ಭೂಪತಿರಭೂತ್ ...."ಎಂಬ ಶಾಸನಪಾಠ ಸೋಂದಾದ ಒಂದನೆಯ ತಾಮ್ರಪಟದಲ್ಲಿಯೂ ಇದೆ.[2] ಆದರೆ ಇಲ್ಲಿ 'ಶ್ರೀಂಮುಡಿ ದೇವ' ಎಂಬುದನ್ನು ಕುಂದಣಗಾರರು 'ಶ್ರೀಮುದಿದೇವ' ಎಂದು ತಪ್ಪಾಗಿ ಓದಿ ಕೊಂಡಿದ್ದಾರೆ. ಈ ಶಾಸನದಲ್ಲಿಯೂ ಇಂಮುಡಿ ದೇವರಾಯನ ಅನಂತರ ವಂಶಾವಳಿಯಲ್ಲಿ ಭೈರವಾಂಬಾ ಮತ್ತು ಸಾಳುವಮಲ್ಲರು ಸೂಚಿತರಾಗಿದ್ದು ಭೈರವಾಂಬಳಿಗೆ ದೇವರಾಯನೆಂಬ ಮಗನಿದ್ದನೆಂದೂ ಹೇಳಿದೆ. ಈ ಶಾಸನದ ಕಾಲ ೧೪೪೫ನೆಯ ಚಿತ್ರಭಾನು ಸಂವತ್ಸರದ ಆಷಾಢ ಶುದ್ಧ ೧೫ ಭಾನುವಾರ— ಅಂದರೆ ಕ್ರಿ. ಶ. ೧೫೨೨ನೆಯ ಜುಲೈ ೮, ಮಂಗಳವಾರ. ಈ ಶಾಸನದಲ್ಲಿಯೂ ಇಂಮುಡಿ ದೇವರಾಜೊಡೆಯರು ನಗರಿ ರಾಜ್ಯ, ಹೈವೆ, ತುಳು, ಕೊಂಕಣ ಮುಂತಾದ ರಾಜ್ಯವನ್ನು ಆಳುತ್ತಿದ್ದರೆಂದು ಹೇಳಿದೆ.

ಕುಂದಣಗಾರರು ಈ ಶಾಸನಗಳನ್ನು ಕುರಿತು ಬರೆಯುತ್ತ, "ಕ್ಷೇಮಪುರದ ಅರಸುಮನೆತನದಲ್ಲಿ ಸಾಳ್ವಮಲ್ಲನೂ ಅವನ ತಂಗಿಯೂ ಹುಟ್ಟಿದರು. ಅವಳು ಪಾಂಡ್ಯವಂಶದ ಅರಸುಮಗನನ್ನು ಮದುವೆಯಾಗಿ ಸಾಳ್ವದೇವರಾಯನನ್ನು ಹೆತ್ತಳು. ಈತನೇ ಕೃಷ್ಣದೇವರಾಯನ ಮಹಾಮಂಡಳೇಶ್ವರನು" ಎಂದಿದ್ದಾರೆ. ಇದು ಶಾಸನ ಪಾಠಕ್ಕೆ ಅವರು ಕೊಟ್ಟಿರುವ ಅರ್ಥ. ಆದರೆ ಇದು ಸಮರ್ಪಕವೆಂದು ತೋರುವುದಿಲ್ಲ.

ಶ್ರೀ ಪಂಚಮುಖಿಯವರು ನಗಿರೆಯಲ್ಲಿ ಆಳಿದ ಈ ಮಾಂಡಲಿಕರನ್ನು ಕುರಿತು ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಅದರಲ್ಲಿ ಇಮ್ಮಡಿ ದೇವರಸನಿಗೆ ಸಂಬಂಧಿಸಿದ ಶಕ ೧೪೪೨ ಮತ್ತು ೧೪೪೩ನೆಯ ಶಾಸನಗಳನ್ನು ಸೂಚಿಸಿದ್ದಾರೆ. ಅವರ ವಂಶಾ ವಳಿಯನ್ನು ಕೊಟ್ಟಿದ್ದಾರೆ. ಆದರೆ ಅದರಲ್ಲೂ ಭೈರವಾಂಬಾ ಮತ್ತು ಸಾಳುವ ಮಲ್ಲರ ಪ್ರಸ್ತಾಪವಿಲ್ಲ.[3]

ಭೈರವಾಂಬಾ ಪಾಂಡ್ಯನೃಪಾಲನನ್ನು ಮದುವೆಯಾದಳು ಎಂದು ನಮ್ಮ ತಾಮ್ರಪಟ ಹೇಳುತ್ತದೆ. ಈ ಪಾಂಡ್ಯನೃಪಾಲ ಯಾರು? ಇದೇ ಸಮಯದಲ್ಲಿ ಕಳಸ-ಕಾರ್ಕಳಗಳಲ್ಲಿ' ಇಮ್ಮಡಿ ಭೈರರಸ ಆಳುತ್ತಿದ್ದ. ಈತ ಕ್ರಿ. ಶ. ೧೫೧೬ರಿಂದ ೧೫೩೦ರ ವರೆಗೆ ಆಳಿದ. ಇವನ ಅನಂತರ ೧೫೪೨ರಿಂದ ೧೫೫೨ರ

---

[2] ಜಯಕರ್ನಾಟಕ, ಸಂ. ೪, ಪು. ೯೨

[3] *Karnatak Inscriptions*, Vol. I, Introduction: P. XVII

ವರೆಗೆ ವೀರಪಾಂಡ್ಯಒಡೆಯ ಆಳಿದ. ಭೈರವಾಂಬಾ ಬಹುಶಃ ಈ ವೀರಪಾಂಡ್ಯನನ್ನು ಮದುವೆಯಾಗಿರಬಹುದು. ಈತ ಸುಮಾರು ೧೦ ವರ್ಷ ಮಾತ್ರ ಆಳಿದ. ನಮ್ಮ ಶಾಸನದ ಕಾಲದ ವೇಳೆಗೆ ಇಮ್ಮಡಿ ಭೈರರಸನೇ ಇನ್ನೂ ಆಳುತ್ತಿದ್ದ ಕಾರಣ ಬಹುಶಃ ವೀರಪಾಂಡ್ಯ ಕ್ರಿ. ಶ. ೧೫೧೫ರ ಸುಮಾರಿಗೇ ಭೈರವಾಂಬಳನ್ನು ಮದುವೆಯಾಗಿರಬಹುದು. ಇದು ಒಂದು ಊಹೆ ಮಾತ್ರ. ಈ ವಿಷಯದಲ್ಲಿ ಇನ್ನೂ ಹೆಚ್ಚಿನ ವಿವರಗಳು ಲಭ್ಯವಾಗಬೇಕಾಗಿವೆ.

ಇಮ್ಮಡಿ ದೇವರಸವೊಡೆಯರ ಎರಡು ಶಿಲಾಶಾಸನಗಳು ಕಾರವಾರ ಜಿಲ್ಲೆಯ ಕೈಕಿಣಿಗ್ರಾಮದಲ್ಲಿ ದೊರೆತಿವೆ.[4] ಇವುಗಳ ಕಾಲ ಕ್ರಿ. ಶ. ೧೫೨೨. ಶ್ರೀ ಪಂಚಮುಖಿಯವರು ಕೊಟ್ಟಿರುವ ವಂಶಾವಳಿಯಲ್ಲಿ ಶಕ ೧೪೧೭ನೆಯ ವರ್ಷದ ಶಾಸನದಲ್ಲಿ ಹೆಸರಿಸಲಾದ ದೇವರಸನ ಅನಂತರ ಇಮ್ಮಡಿ ದೇವರಸ ಸೂಚಿತನಾಗಿದ್ದಾನೆ. ಆದರೆ ಮಂಗಳೂರು ಜಿಲ್ಲೆಯ ಸೀಮಂತೂರು[5] ಮತ್ತು ಪುತ್ತಿಗೆ[6] ಗ್ರಾಮಗಳಲ್ಲಿ ದೊರೆತ ಕ್ರಿ. ಶ. ೧೫೧೩ನೆಯ ವರ್ಷದ ಎರಡು ಶಾಸನಗಳಲ್ಲಿ ನಗಿರೆಯ ಭೈರರಸನನ್ನು ನಮೂದಿಸಲಾಗಿದೆ. ಇದು "ದೇವರಾಡಿಯರಾದ ಕುಂದಹೆಗಡೆಯರು ಹಾಗೂ ತಿರುಮಲರಸರಾದ ಕಿಂನಿಕ ಹೆಗಡೆಯರು ವೊಪ್ಪಿ ತಿರುಮಲರಾಯ ಚಉಟರಿಗೆ" ಬರೆದುಕೊಟ್ಟ ಶಿಲಾಶಾಸನ. ಇದರಂತೆ ಅವರು ತಮ್ಮತಮ್ಮಲ್ಲಿನ ವೈಮನಸ್ಯಗಳನ್ನು ದೂರಮಾಡಿಕೊಂಡು ಇತರ ಅರಸರಿಂದ ತಮಗೆ ತೊಂದರೆ ಉಂಟಾದಾಗ ತಾವು ಒಂದಾಗಿ ಶತ್ರುಗಳೊಡನೆ ಕಾದಬೇಕೆಂದು ಒಡಂಬಡಿಕೆ ಮಾಡಿಕೊಂಡರು. ಹಾಗೆ ಅವರು ಸೂಚಿಸಿರುವ ಶತ್ರುಗಳಲ್ಲಿ ನಗಿರೆಯ ಭೈರರಸನೂ ಒಬ್ಬ.

ಈ ಎರಡು ಶಾಸನಗಳ ಆಧಾರದ ಮೇಲೆ ನಗಿರೆಯಲ್ಲಿ ದೇವರಸ ಕ್ರಿ. ಶ. ೧೪೯೪ರ ವರೆಗೂ ಆಳಿದನೆಂದೂ ಅನಂತರ ಅವನ ಅಳಿಯನಾಗಿರಬಹುದಾದ ಭೈರರಸ ಕ್ರಿ. ಶ. ೧೫೧೨ರ ವರೆಗೂ ಆಳಿರಬಹುದೆಂದೂ ಡಾ. ರಮೇಶರು ಊಹಿಸಿದ್ದಾರೆ.[7] ಕ್ರಿ. ಶ. ೧೫೧೨ರ ಅನಂತರ ಇಮ್ಮಡಿ ದೇವರಸ ಆಳತೊಡಗಿದನೆಂದು ಅವರ ಊಹೆ. ಇದನ್ನು ಒಪ್ಪಿಕೊಂಡಲ್ಲಿ ದೇವರಸನಿಗೆ ಭೈರವಾಂಬಾ ಎಂಬ ಮಗಳಿದ್ದಳೆಂದೂ ಅವಳ ಗಂಡ ಭೈರರಸನೆಂದೂ ಊಹಿಸಿ, ಭೈರವಾಂಬಳ ಮಗನೇ ಇಮ್ಮಡಿ ದೇವರಾಯನೆಂದು ಹೇಳಬಹುದು. ಆದರೆ ನಮ್ಮ ಶಾಸನದಲ್ಲಿ

---

[4] *Ibid.*, Nos. 68 and 69

[5] *ARSIE*, 1930–31, No. 340

[6] *SII*, Vol. VII, No. 228

[7] *A History of South Kanara* (Unpublished Thesis in Karnatak University)

ಇಂಮಡಿ ದೇವರಾಯನಿಗೇ ಭೈರವಾಂಬಳೆಂಬ ಮಗಳಿದ್ದಳೆಂದು ಹೇಳಿದೆ ಎಂಬುದನ್ನು ಗಮನದಲ್ಲಿಡಬೇಕು. ಈ ವಿಷಯಗಳನ್ನು ಖಚಿತಪಡಿಸಿಕೊಳ್ಳಲು ಈ ಪ್ರಾಂತದಲ್ಲಿ ಇನ್ನೂ ಬೆಳಕಿಗೆ ಬಾರದ ಶಾಸನಗಳನ್ನು ಪರಿಶೀಲಿಸಬೇಕಾಗುತ್ತದೆ.

ಇಷ್ಟು ನಗಿರೆಯ ಅರಸರಿಗೆ ಸಂಬಂಧಿಸಿದ ವಿಷಯಗಳು. ಸ್ವಾದಿಯ ತಾಮ್ರಪಟದಲ್ಲಿ ಇನ್ನೂ ಕೆಲವು ಸ್ವಾರಸ್ಯವಾದ ಅಂಶಗಳಿವೆ. ತಾನು ದಾನಮಾಡಬೇಕೆಂಬ ಉದ್ದಿಶ್ಯದಿಂದ ಚಿಟ್ಟರಿಕೆಯ ನಾಗಿಸೆಟ್ಟಿಯ ಮಗ ಮಲ್ಲಸೆಟ್ಟಿ ಮಾಸೂರು ಮತ್ತು ಮೊಸಳೆಕುಱು ಗ್ರಾಮಗಳನ್ನು ಇಮ್ಮಡಿ ದೇವರಾಜೊಡೆಯರಿಂದ ಹಣಕೊಟ್ಟು ಪಡೆಯುತ್ತಾನೆ. ಇದನ್ನು "ಧರ್ಮ್ಮಕ್ಕೆ ಕೊಂಡು ಧರ್ಮಕ್ಕೆ ಬಿಟ್ಟ ಕಾರಣ" ಇವುಗಳ ಮೇಲಿನ ಎಲ್ಲ ತೆರಿಗೆಗಳೂ ಮಾನ್ಯಮಾಡಲ್ಪಟ್ಟುವು. ಮಲ್ಲಿಸೆಟ್ಟಿ ಇದನ್ನು ದಾನಮಾಡಿದ್ದು ಹುಲಿಗೆಱೆಯ—ಅಂದರೆ ಧಾರವಾಡಜಿಲ್ಲೆಯ ಲಕ್ಷ್ಮೇಶ್ವರ ಶಂಖಜಿನಬಸ್ತಿಯಲ್ಲಿ ನಡೆವ ಧರ್ಮ್ಮಕ್ಕೆ. ಇದು ದೇಶಿಗಣಾಗ್ರಗಣ್ಯ ವಿಜಯಕೀರ್ತ್ತಿ ದೇವರ ಶಿಷ್ಯರಾದ ಚಂದ್ರಪ್ರಭದೇವರ ಉಪದೇಶದಂತೆ ಮಾಡಿದ ದಾನ.

ಹಾಡುವಳ್ಳಿ ಅಥವಾ ಸಂಗೀತಪುರದಲ್ಲಿ ಮೂಲಸಂಘ, ದೇಸಿಗಣ, ಪುಸ್ತಕ ಗಚ್ಛಕ್ಕೆ ಸೇರಿದ ಜೈನಯತಿಗಳ ಅನ್ವಯವೊಂದು ಕ್ರಿ. ಶ. ೧೫ನೆಯ ಶತಮಾನದಲ್ಲಿ ಇತ್ತು. ಬೀಳಗಿಯ ರತ್ನತ್ರಯ ಬಸದಿಯ ಶಾಸನದಲ್ಲಿ ಈ ಯತಿಗಳ ವಂಶಾವಳಿ ಕೊಟ್ಟದೆ. ಇದರಲ್ಲಿ ಮೊದಲನೆಯವರಾದ ಶ್ರುತಕೀರ್ತ್ತಿಗಳು ಕ್ರಿ. ಶ. ೧೪೩೦ರಲ್ಲಿದ್ದರೆಂದು ಡಾ|| ಪಾಂಡುರಂಗದೇಸಾಯರು ತೋರಿಸಿದ್ದಾರೆ.[8] ಅವರ ವಂಶಾವಳಿ ಹೀಗಿದೆ:

ಶ್ರುತಕೀರ್ತ್ತಿ
|
ವಿಜಯಕೀರ್ತ್ತಿ (I)
|
ಶ್ರುತಕೀರ್ತ್ತಿ (II)
|
ವಿಜಯಕೀರ್ತ್ತಿ (II)
|
ಚಂದ್ರಪ್ರಭ — ಅಕಳಂಕ
|
ವಿಜಯಕೀರ್ತ್ತಿ (III)
|
ಅಕಳಂಕ (II)
|
ಭಟ್ಟಾಕಳಂಕ (II)

[8] P. B. Desai : *Jainism in South India and some Jaina Epigraphs*, pp. 124–25

ಒಂದೊಂದು ತಲೆಮಾರಿಗೆ ೨೫ ವರ್ಷಗಳಂತೆ ಲೆಕ್ಕಹಾಕಿದಲ್ಲಿ ವಿಜಯಕೀರ್ತಿ (II)ಗಳ ಶಿಷ್ಯರಾದ ಚಂದ್ರಪ್ರಭದೇವರು ಕ್ರಿ. ಶ. ೧೫೦೫ರಿಂದ ೧೫೩೦ರ ವರೆಗೂ ಇದ್ದರೆಂದು ಹೇಳಬಹುದು. ನಮ್ಮ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟ ವಿಜಯಕೀರ್ತಿ ಹಾಗೂ ಚಂದ್ರಪ್ರಭರು ಈ ರತ್ನತ್ರಯ ಬಸದಿಯ ಯತಿಗಳೇ.

ಶಾಸನದಲ್ಲಿ ಚಿಟ್ಟೆರಿಕೆ, ಮಾಸೂರು, ಮೊಸಳೆಯಕುಜು ಮತ್ತು ಮಿಡಿಜೆ ಎಂಬ ಗ್ರಾಮಗಳ ಹೆಸರುಗಳು ಬರುತ್ತವೆ. ಚಿಟ್ಟೆರಿಕೆ ಈಗಿನ ಕುಮಟಾ ತಾಲ್ಲೂಕಿನ ಚಿತ್ತರಗಿ ಗ್ರಾಮ. ಅದೇ ತಾಲ್ಲೂಕಿನಲ್ಲಿರುವ ಮಾಸೂರ ಕುರ್ವೆ ಗ್ರಾಮವೇ ಶಾಸನದಲ್ಲಿ ಉಕ್ತವಾಗಿರುವ ಮಾಸೂರು.[9] ಮೊಸಳೆಯಕುಜು ಎಂಬ ಹೆಸರಿನ ಗ್ರಾಮ ಈಗ ಅಸ್ತಿತ್ವದಲ್ಲಿದ್ದಂತಿಲ್ಲ. ಆದರೆ ಮಾಸೂರಿಗೆ ಸೇರಿದಂತಿರುವ ಗ್ರಾಮದ ಒಂದು ಭಾಗಕ್ಕೆ ಮೊಸಳೆಕುಜುವೆಂದು ಹೆಸರಿದೆ ಎಂದು ಪ್ರೊ. ಶರ್ಮ ಅವರು ತಿಳಿಸುತ್ತಾರೆ. ಮಿಡಿಜೆಯ ಸುಂಕವನ್ನು ಮಾನ್ಯ ಮಾಡಿದುದಾಗಿ ಶಾಸನದಲ್ಲಿ (೪೨ನೆಯ ಸಾಲು) ಹೇಳಿದೆ. ಮಿಡಿಜೆ ಎಂಬುದು ಈಗಿನ ಮಿರ್ಜಾನ್. ಆಗ ಇದು ಬಹುಶಃ ಸುಂಕವನ್ನು ವಸೂಲು ಮಾಡುವ ಗಡಿಭಾಗವಾಗಿತ್ತೆಂದು ತೋರುತ್ತದೆ.

ಶಾಸನ ಪಾಠ

ಮೊದಲನೆಯ ಪಟ

೧ ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛನಂ ಜಿಯಾತ್ರೈ
೨ ಲೋಕ್ಯನಾಥಸ್ಯ ಶಾಸನಂ ಜಿನಶಾಸನಂ || ಶ್ರೀ ವಿದ್ಯಾನಗರೇ
೩ ಚಿರಂ ವಿಜಯತೇ ಶ್ರೀ ಕೃಷ್ಣರಾಯೋ ನಮುದ್ಭೂಪ ಸ್ತ್ರೀ ಕುಟಿಲಾ
೪ ಲಕಾಲಿಪಟಲೀಸಂಲೀನ ಪದಾಂಬುಜಃ। ಯಸ್ಯಪ್ರೋಲ್ಲಸಿತ ಪ್ರತಾ-
೫ ಪವಿಸರಃ ಕಾಮುಂಹರಿದ್ಯೋಷಿತಾಂ ಪ್ರೋತ್ತುಂಗಸ್ತನಕುಂಭಯೋಃ ಕಲಯ-
೬ ತೇ ಕಾಶ್ಮೀರ ಸಾರಶ್ರೀಯಂ || ದೇಶೇ ತೌವಳನಾಮ್ನಿವಿಶ್ವಮಹಿತೇ ಸೌಖ್ಯಾ
ಮೃತಾಂಭೋನಿ-
೭ ಧಾವಾಸೀತ್ಕ್ಷೇಮಪುರಂ ಪರಂವರರಮಾಲೀಲಂ ಸರೋಜಾಯತಂ।
ತತ್ರಾಸನ್ಬಹವೋ
೮ ನೃಪಾಬುಧನುತಾಸ್ಸೀತಾಂಶು ವಂಶೋದ್ಭವಾಸ್ತೇಷು ಶ್ರೀಂಮಡಿದೇವ
ಭೂಪತಿರಭೂ-

[9] ARSIE, 1939–40, P. 283. ಈ ಗ್ರಾಮವನ್ನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಮಾಸೂರು ಎಂದು ಗುರುತಿಸಲಾಗಿದೆ.

೯ ತ್ಕಾಮಂ ಪ್ರಜಾನಂದಕಃ॥ ಜಾತಾಸೋಽಮುಕುಲಾಂಬುಧೌ ಪ್ರವಿಮಲೇ ಶ್ರೀಭೈರ

೧೦ ವಾಂಬಾರವಮಾ ಭ್ರಾತ್ರಾ ಸಾಳುವಮಲ್ಲ ಭೂಪ ಶಶಿನಾರಾರಾಜಿತಾಭೂಯ-

೧೧ ಸಾ। ಯಾತ್ವಾ ಪಾಂಡ್ಯನೃಪಾಲ ಪದ್ಮನಯನಂ ಶ್ರೀ ದೇವರಾಯ ಕ್ಷಮಾ ಭೃತ್ಕಾಮಂ ಸುತ-

೧೨ ರಾಮಸೂತಸುಮ[10]ನೋಧರ್ಮ್ಮಾರ್ತಿಸಂಶೋಭಿನಂ॥ :ಆಸೀದಸ್ಯ ನೃಪಸ್ಯ ಸಾಂದ್ರ ಕರುಣಾ

೧೩ ರಾಕಾಸಮುಲ್ಲಾಸಿತಃ ಪ್ರೋತ್ಸರ್ಪ್ಪದ್ವಸುಸಂಭಯ್ಯೈರತಿತರಾಂ ಧರ್ಮ್ಮಾಬ್ಧಿ ಮುಲ್ಲಾಸ—

೧೪ ಯನ್। ನಾಗಿ ಶ್ರೇಷ್ಠಿಸುಪೂರ್ವ್ವಶೈಲವಿಲಸ ಜ್ಞಾನಾಂಬಿಕಾಪೂರ್ವ್ವದಿ ಕ್ಷೋತ್ಥೋಽಸೌವರ

೧೫ ಮಲ್ಲಿಸೆಟ್ಟಿ ಹಿಮಗುಸ್ತಸ್ಮಿನ್ಪುರೇರಾಜತೇ॥ ಶ್ರೀ ಮಲ್ಲಿಸೆಟ್ಟಿವರಬಾಹು- ವಿನಿರ್ಜತೋಽಸೌ

೧೬ ಕಲ್ಪಾಂಘ್ರಿಪೋಽರ್ತ್ಥಿನಿಕರೇಷು ನಿಜಾಶ್ರಿತೇಷು। ದಾತಾನಬಾಹಮಿತಿ ತಾನ ತಿಲಜ್ಜಮಾ-

೧೭ ನೋ ದೂರೀಕರೋತಿ ಚಲಪಲ್ಲವಹಸ್ತಸಂಜ್ಞಃ॥ ಷಡ್ದಶರುಶನ[11] ಪ್ರತಿ ಪಾಲಕೇತ-

೧೮ ಸ್ಮಿನ್ ಕೃಷ್ಣರಾಯೇ ಸಮಸ್ತ ಪೃಥ್ವೀಂ ಪ್ರತಿಪಾಲಯತಿ ಸತಿ ಸ್ವಸ್ತಿ ಶ್ರೀಮನ್ಮಹಾ

೧೯ ಮಂಡಲೇಶ್ವರಂ ಸಾಳುವ ಯಿಂಮಡಿ ದೇವರಾಜೊಡೆಯರು ನಗರಿರಾ-

೨೦ ಜ್ಯ ಹಯಿವತುಳು ಕೊಂಕಣ ಮುಂತಾದ ರಾಜ್ಯವನು ಪ್ರತಿಪಾಲಿಸು-

೨೧ ತ್ತ ಯಿದ್ದಂದಿನ ಶಕವರುಷ ೧೪೪೦ನೆಯ ಯಿಶ್ವರ ಸಂವತ್ಸರದ ಭಾ-

೨೨ ದ್ರಪದ ಬ ೧ ಸೋಮವಾರದಲೂ ಸ್ವಸ್ತಿ ಶ್ರೀಮತು ಬಿಟ್ಟರಿಕೆಯ ನಾಗಿಸೆಟ್ಟಿ

೨೩ ಯರಮಗ ಮಲ್ಲಿಸೆಟ್ಟಿಯರು ತಮಗೆ ಪುಣ್ಯಾರ್ತ್ಥನಿಮಿತ್ತವಾಗಿ ತಾಉ

೨೪ ಮಾಡುವ ಧರ್ಮ್ಮಕ್ಕೆ ಮಾಸೂರು ಮೊಸಳೆಯ ಕುಱುವನು ಮೂಲವಾಗಿ ಪಾಲಿ-

೨೫ ಸಬೇಕೆಂದು ಯಿಂಮಡಿ ದೇವರಾಜೊಡೆಯರಿಗೆ ಬಿನ್ನಹಂ ಮಾಡಲಾಗಿ ಆ

೨೬ ಯಿಂಮಡಿ ದೇವರಾಜೊಡೆಯರು ಆ ಮಲ್ಲಿಸೆಟ್ಟಿಯರಿಗೆ ಮೂಲವಾಗಿ ಕೊ-

೨೭ ಟ್ಟಪಟ್ಟಿಯ ಭಾಷಾಕ್ರಮವೆಂತೆಂದಡೆ ಮಾಸೂರು ಮೊಸಳೆಯ ಕುಱುವಿಗಗ್ರಾ

10 'ಮ' ಎಂಬ ಅಕ್ಷರವನ್ನು ಸಾಲಿನಮೇಲೆ ಸೇರಿಸಲಾಗಿದೆ.

11 'ಷಡ್ದರುಶನ' ಎಂದು ಇದನ್ನು ಓದಿಕೊಳ್ಳಬೇಕು.

ಎರಡನೆಯ ಪಟದ ಮುಂಭಾಗ

೨೮ ಮವನು ಮಲ್ಲಿಸೆಟ್ಟಿಯರ ಕಯಿಯಲ್ಲಿ ಯಿಂಮಡಿ ದೇವರಾಜೊಡೆಯರು
ಮೂ–
೨೯ ಲಹಡೆವ ಅರ್ತ್ಥವನು ತೆಗೆದುಕೊಂಡು ಮೂಲಪರಿಚ್ಛೇದ್ಯಹಿರಣ್ಯೋದಕ–
೩೦ ಧಾರಾಪೂರ್ವ್ವಕವಾಗಿ ಆ ಚಂದ್ರಾರ್ಕ್ಕಸ್ಥಾಯಿಯಾಗಿ ಕೊಟ್ಟರು[1*]
ಮಲ್ಲಸೆಟ್ಟಿ
೩೧ ಯರು ಮಾಸೂರು ಮೊಸಳೆಯ ಕುಱುವಿಗೆ ಮೂಲ ಹಡೆವ ಅರ್ತ್ಥವನು
೩೨ ಯಿಂಮಡಿ ದೇವರಾಜೊಡೆಯರಿಗೆ ಅರ್ತ್ಥಪರಿಚ್ಛೇದ್ಯವಾಗಿ ಸಲಿಸಿಕೊಟ್ಟು
೩೩ ಮೂಲಪರಿಚ್ಛೇದ್ಯ ಹಿರಣ್ಯೋದಕ ಧಾರಾಪೂರ್ವಕವಾಗಿ ಆಚಂದ್ರಾರ್ಕ್ಕ–
೩೪ ಸ್ಥಾಯಿಯಾಗಿ ಮೂಲವಾಗಿ ಕೊಂಡರು ಯಿ ವೃತ್ತಿಯನು ಮಲ್ಲಿಸೆಟ್ಟಿಯ–
೩೫ ರು ಧರ್ಮ್ಮಕ್ಕೆ ಕೊಂಡು ಧರ್ಮ್ಮಕ್ಕೆ ಬಿಟ್ಟಕಾರಣ ಯಿ ವೃತ್ತಿಗೆ ಕಟ್ಟುವ
ಸರ್ವ್ವತೆಱುಮಾ–
೩೬ ನ್ಯವಾಗಿ ಕಾಣಿಕೆ ಕಡ್ಡಾಯ ಬಿಟ್ಟಿ ಬಿಡಾರವೊಸಗೆ ಅಸಂತಾಯ ಅಸೆ ಅಪ್ಪಣೆ
೩೭ ಪರಾಡಸರಾಡ ಆಯದಾಯ ಮುಂತಾದ ಸರ್ವ್ವ ಉಪೋತ್ತರವಿಲ್ಲವೆಂದು
೩೮ ಸರ್ವ್ವಬಾಧಾಪರಿಹಾರವಾಗಿ ಸರ್ವ್ವಮಾನ್ಯವಾಗಿ ಯಿಂಮಡಿದೇವರಾ–
೩೯ ಜೊಡೆಯರು ಮಲ್ಲಿಸೆಟ್ಟಿಯರಿಗೆ ಕೊಟ್ಟ ಮಾಸೂರು ಮೊಸಳೆಯ ಕು–
೪೦ ಱುವಿನೊಳಗೆ ನಾಣೆಯ ಹೆಬ್ಬಾರುವತೆಱುವ[12] ತೆಱಿಗೆಯೊಳಗೆ ರೊ–
೪೧ ಕ್ಕ ವರಹಗ ೭೮ ಅನಾಣೆಯ ಹೆಬ್ಬಾಱುವ ತೆಱುವ ಅಕ್ಕಿಸಾವಿರ ಆಱಕ್ಕೆ ಮ–
೪೨ ಡಿಜೆಯ ಸುಂಕಮಾನ್ಯವಾಗಿ ವರಹಗ ೪೨ ಉಭಯಂ ಗ ೧೨೦। ವರಹ
೪೩ ನು ದೇಶಿಗಣಾಗ್ರಗಣ್ಯ ವಿಜಯಕೀರ್ತ್ತಿದೇವರ ಶಿಷ್ಯರಾದ ಚಂದ್ರಪ್ರಭ
೪೪ ದೇವರ ಉಪದೇಶದಿಂದ ಮಲ್ಲಿಸೆಟ್ಟಿಯರು ಶಕವರುಷ ೧೪೪೪ನೆಯ ವಿ–
೪೫ ಷು ಸಂವತ್ಸರದ ಶ್ರಾವಣ ಶು ೫ ಗುರುವಾರದಲು ತಮಗೆ ಪುಣ್ಯನಿ–
೪೬ ಮಿತ್ತವಾಗಿ ಹುಲಿಗೆಱೆಯ ಶಂಖಜಿನರ ಬಸ್ತಿಯಲ್ಲಿ ನಡೆವ ಧರ್ಮ್ಮಕ್ಕೆ ಬಿ–
೪೭ ಟ್ಟುಕೊಟ್ಟರು ಆ ನಡೆವ ಧರ್ಮದ ವಿವರ ಶ್ರೀಬಲಿಯ ಪರಿಚಾರಕ ಜನ೬ಕ್ಕೆ ಗ
೪೮ ೩೦ ಪಾತ್ರ ೩ ಮದ್ದಳೆ ತಾಳದರಿ ಹಾಡುವ ೩ ಅಂತು ಜನ೬ಕ್ಕೆ ಗ ೪೦ ವಾದ್ಯ–
೪೯ ದ ಜನ ೬ಕ್ಕೆ ಗ ೪೦ ಯಿ ಧರ್ಮ್ಮವ ವಿಚಾರಿಸಿಕೊಂಡಿಹ ಚಂದ್ರಪ್ರಭದೇವ
೫೦ ರ ಸಮುದಾಯವೊಂದು ತಂಡಕ್ಕೆ ಗ[13] ೧೦ ಅಂತು ಗ ೧೨೦ ವರಹನು ಮಲ್ಲಿ–
೫೧ ಸೆಟ್ಟಿಯರು ತ್ರಿಕರಣ ಶುದ್ಧಿಯಿಂದ ಹಿರಣ್ಯೋದಕ ಧಾರಾಪೂರ್ವಕ–
೫೨ ವಾಗಿ ಆ ಚಂದ್ರಾರ್ಕ್ಕಸ್ಥಾಯಿಯಾಗಿ ಯಿ ನಡೆವ ಧರ್ಮ್ಮಂಗಳಿಗೆ ಕೊಟ್ಟ–

---

12 ‘ ವ ’ ಎಂಬ ಅಕ್ಷರವನ್ನು ಸಾಲಿನ ಮೇಲುಗಡೆ ಸೇರಿಸಲಾಗಿದೆ.

13 ‘ ಗ ’ ಎಂಬ ಅಕ್ಷರವನ್ನು ಸಾಲಿನ ಮೇಲೆ ಬರೆಯಲಾಗಿದೆ.

೫೩ ರು ಯಿ ಧರ್ಮ್ಮದ ಪ್ರತಿ ಗೆರಸೊಪ್ಪೆಯ ವಿಶಾಲ ಕೀರ್ತ್ತಿದೇವರ ಬಸ್ತಿಯ ಶಿಲಾ-
೫೪ ಶಾಸನದಲ್ಲಿ ಉಂಟು ॥ ದಾನಪಾಲನಯೋರ್ಮ್ಮಧ್ಯೇ ದಾನತ್ಪಾಲನ
ಮುತ್ತಮಂ। ದಾ

ಹಿಂಭಾಗ

೫೫ ನಾತ್ಸ್ವರ್ಗ್ಗಮವಾಪ್ನೋತಿ ಪಾಲನಾದಚ್ಯುತಂ ಪದಂ ॥ ಸ್ವದತ್ತಾಂ ಪರದ-
೫೬ ತ್ತಾಂ ವಯೋಹರೇಚ್ಛ ವಸುಂಧರಾಂ। ಷಷ್ಟಿಂ ವರ್ಷ ಸಹಸ್ರಾಣಿ ವಿ-
೫೭ ಷ್ಠಾಯಾಂ ಜಾಯತೇ ಕ್ರಿಮಿಃ॥ ಯಿ ಧರ್ಮ್ಮಕ್ಕೆ ತಪ್ಪಿದವನು ಉಜಂತಗಿರಿಯ
೫೮ ಲ್ಲಿ ರುಷಿವಧೆಯ ಮಾಡಿದ ಪಾತಕನಹನು ಗಂಗೆ ಗೋದಾವರಿಯಲ್ಲಿ ಗೋ-
೫೯ ಬ್ರಾಹ್ಮಣನ ವಧಿಸಿದ ಪಾತಕನಹನು ಶ್ರೀ ಪರ್ವ್ವತ ತಿರುಮಲೆಯಲ್ಲಿನ-
೬೦ ಡೆವ ಧರ್ಮ್ಮಕ್ಕೆ ತಪ್ಪಿವವನಹನು ಭ(ಂ)ದ್ರಂ ಭೂಯಾಜ್ಜಿನ ಶಾಸನಸ್ಯ [॥]

ಚಲಿಸುತ್ತಿರುವ ಕಾರಿನಲ್ಲಿ ಕುಳಿತು ಓದಿ ಓದಿ ನನ್ನ ಕಣ್ಣು ಕೆಂತಿವೆ. ನಗರಸಭೆ ತಂದು ತುಂಬಿರುವ ಕಸದ ಭೀಕರ ಗುಡ್ಡೆಯ ಮುಂದೆ ಯಾವುದೋ ಕಾರಣದಿಂದಾಗಿ ನನ್ನ ಕಾರು ನಿಂತುಬಿಟ್ಟಿದೆ. ಗಗನಚುಂಬಿ ಸೌಧಗಳು ಇಲ್ಲಿ ನಿರ್ಮಿತವಾಗಲಿವೆ.

ಒಂದು ನಾಗರಿಕತೆಯ ಚಕ್ರದ ಸರಾಸರಿ ಉದ್ದ ೧೫೦೦ ವರ್ಷಗಳೆಂದು ಪೆಟ್ರೀ ಹೇಳುತ್ತಾನೆ. ಒಂದೆರಡು ಸಾವಿರ ವರ್ಷಗಳ ಅನಂತರ ಈ ಸ್ಥಳ ನಿರ್ಜನವಾಗಬಹುದು. ನಾಲ್ಕೈದು ಸಾವಿರ ವರ್ಷಗಳ ಕಾಲ ಬರಡಾಗಿ ಬಿದ್ದಿರಬಹುದು. ಈ ನಗರದ ಹೆಸರೇ ನೆನಪಿನಿಂದ ಅಳಿಸಿಹೋಗಬಹುದು; ಟ್ರಾಯ್ ಊರ್‌ಗಳಂತೆ ಐತಿಹ್ಯವಾಗಿ ಉಳಿಯಬಹುದು.

ಆದರೆ ಯಾವಾಗಲೋ ಪುರಾತತ್ವಜ್ಞ ಬರುತ್ತಾನೆ. ಈತ ಒಂದು ಬಗೆಯ ವಿಪರ್ಯಯ ಪಾರುಪತ್ಯಗಾರ. ಹುಗಿಯುವ ಬದಲು ಅಗೆದು ತೆಗೆಯುವುದೂ ಸೋಸುವುದೂ ಈತನ ಹವ್ಯಾಸ.

ಆದರೆ ಇವನು ಆಳಕ್ಕೆ ಅಗೆದರೆ ಸಿಗುವುದು ಕಾಗದವಲ್ಲ, ಕಬ್ಬಿಣವೂ ಅಲ್ಲ. ಇವೆಲ್ಲ ನಶ್ವರ. ಕೆಲವು ನಾಣ್ಯ, ಚಿನ್ನ ಬೆಳ್ಳಿ ಒಡವೆ, ತಟ್ಟೆ ಬಟ್ಟಲು ಗಾಜು ಚೂರು. ಭವಿಷ್ಯದ ಜನತೆ ನಮ್ಮ ನಾಗರಿಕತೆಯನ್ನರಿಯಲು ಇಲ್ಲಿರುವ ಚೂರುಗಳೇ ಸಾಕ್ಷಿ: 'ಪ್ಯಾಶ್ಚರೈಸ್ಡ್ ಹಾಲು'. ಇದು ಒಂದು ಸೀಸೆಯ ಮೇಲಿನ ಉಬ್ಬಕ್ಷರ. ಮರಣಾನಂತರದ ಚಿರಂಜೀವಿತ್ವವನ್ನು ಪ್ಯಾಶ್ಚರ್ ಪಡೆದೇ ಪಡೆಯುತ್ತಾನೆಂಬುದು ನಿಶ್ಚಿತ. ಅವನ ಹೆಸರು ಇಲ್ಲಿ ಧಾತುವಾಗಿದೆ. 'ಸೌಂದರ್ಯವರ್ಧಕ' ಇನ್ನೊಂದು ಹೆಸರು. ಪುರಾತನ ಈಜಿಪ್ಟ್, ಅಸ್ಸಿರಿಯಗಳನ್ನು ನಾವು ಅರಿತದ್ದು ಆ ಕಾಲದ ಅಂಗರಾಗಗಳ ಭರಣಿಗಳಿಂದಲೇ. 'ಬ್ಲೂಂಫೀಲ್ಡ್ ಇಟ್ಟಿಗೆ' ಮತ್ತೊಂದು. ಇವೇ ನಮ್ಮ ಕಾಲದ ಜೀವಂತ ಸಾಕ್ಷಿಗಳಾಗಿ ಉಳಿಯುವ ವಸ್ತುಗಳು. ನಮ್ಮ ಕಾಲವನ್ನೂ ಸಂಸ್ಕೃತಿಯನ್ನೂ 'ಬ್ಲೂಂಫೀಲ್ಡ್ ಯುಗ' ಮತ್ತು 'ಬ್ಲೂಂಫೀಲ್ಡ್ ಸಂಸ್ಕೃತಿ' ಎಂದೇ ಕರೆಯುತ್ತಾರೇನೋ. ಬ್ಲೂಂಫೀಲ್ಡ್ ದೊರೆಯಾಗಿದ್ದನೋ ಪುರೋಹಿತನಾಗಿದ್ದನೋ—ಎಂಬ ಬಗ್ಗೆ ಪಂಡಿತರು ದೊಡ್ಡ ವಿವಾದವನ್ನೇ ಎಬ್ಬಿಸಬಹುದೇನೋ, ಯಾರು ಬಲ್ಲರು?

ನಮ್ಮ ಕಾಲದವರ ಸಾಧನೆಗಳನ್ನರಿತುಕೊಳ್ಳಲು ಎಪ್ಪತ್ತನೆಯ ಶತಮಾನದವರಿಗೆ ಉಳಿದಿರಬಹುದಾದ ಸಾಮಗ್ರಿ ಬಲು ಕಡಿಮೆ. ಅವರು ನಮ್ಮ ಬಗ್ಗೆ ಔದಾರ್ಯದಿಂದ ವರ್ತಿಸಿಯಾರೆಂದು ನಮ್ಮ ಆಸೆ. ನಮ್ಮ ಪುರಾತನರ ಬಗ್ಗೆ ನಾವೂ ಇದೇ ಬಗೆಯ ಔದಾರ್ಯ ತೋರಿಸಬೇಕು. ಕಸದ ಗುಡ್ಡೆಯ ನಿಟ್ಟಿನಿಂದ ಹಿಂದಿನ ಶತಮಾನವನ್ನು ವೀಕ್ಷಿಸುತ್ತಿದ್ದೇವೆಂಬುದನ್ನು ಮರೆಯದಿರೋಣ.

—ಇ. ಇ. ಸ್ಲಾಸನ್

ಸಿ. ಎಂ. ಮುನಿರಾಮಪ್ಪ

ಭಾರತದ ಕೈಗಾರಿಕೆಯಲ್ಲಿ ವೆಚ್ಚನಿರ್ಣಯ ಲೆಕ್ಕ ಶೋಧನೆ

ಔದ್ಯೋಗಿಕ ಕ್ರಾಂತಿಯ ಪರಿಣಾಮವಾಗಿ ಮತ್ತು ಪಂಚವಾರ್ಷಿಕ ಯೋಜನೆಗಳ ಫಲವಾಗಿ ೧೯೫೦ರಿಂದೀಚೆಗೆ ಭಾರತದ ಕೈಗಾರಿಕಾ ಕ್ಷೇತ್ರದ ಉತ್ಪಾದನೆಯಲ್ಲಿ ಮಹತ್ತರ ಬದಲಾವಣೆಗಳು ಕಂಡುಬಂದಿವೆ. ಇದರಿಂದಾಗಿ ಪ್ರತಿಯೊಬ್ಬ ಉದ್ಯಮಿಯೂ ತನ್ನ ಉದ್ಯಮದ ಉತ್ಪತ್ತಿ ಹೆಚ್ಚಿಸಿ ಹೆಚ್ಚು ಲಾಭ ಗಳಿಸಲು ಸಾಧ್ಯವಾಗಿದೆ. ಈ ರೀತಿ ಉತ್ಪತ್ತಿಯನ್ನು ಹೆಚ್ಚಿಸಲು ಬಹುತೇಕವಾಗಿ ಬೃಹತ್‌ಪ್ರಮಾಣದ ಯಂತ್ರಗಳ ನೆರವನ್ನು ಪಡೆಯಲಾಯಿತು. ಅದಕ್ಕೋಸ್ಕರ ಹೆಚ್ಚು ಬಂಡವಾಳ ಹೂಡಬೇಕಾಯಿತು. ಆದ್ದರಿಂದಲೇ ನಮ್ಮ ದೇಶದ ಖಾಸಗಿ ಕ್ಷೇತ್ರದ ಬಹು ಸಂಖ್ಯೆಯ ಕೈಗಾರಿಕಾ ಸಂಸ್ಥೆಗಳು ಸಾರ್ವಜನಿಕ ಪರಿಮಿತ ಕಂಪನಿಗಳಾಗಿವೆ (ಪಬ್ಲಿಕ್ ಲಿಮಿಟೆಡ್ ಕಂಪನಿ). ಈ ಬಗೆಯ ಬೆಳೆವಣಿಗೆ ಮತ್ತು ವಿಸ್ತರಣೆಯನ್ನು ನಿಯಂತ್ರಿಸಲು ಮತ್ತು ಆ ಮೂಲಕ ಕೈಗಾರಿಕಾರಂಗದಲ್ಲಿ ಸಾಮರಸ್ಯ ಮತ್ತು ಸಂಘಟನೆ ತರಲು ೧೯೫೬ರಲ್ಲಿ ಕಂಪನಿ ಕಾಯಿದೆಯನ್ನು ಜಾರಿಗೆ ತರಲಾಯಿತು.

ಷೇರುದಾರರ ಮತ್ತು ಸಾರ್ವಜನಿಕರ ಮೇಲ್ಮೆಯ ದೃಷ್ಟಿಯಿಂದ ಖಾಸಗಿ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳ ಚಟುವಟಿಕೆಗಳನ್ನು ನಿಯಂತ್ರಿಸಲು ಎಷ್ಟೇ ಪ್ರಯತ್ನಿಸಿದರೂ ಕಂಪನಿ ಕಾಯಿದೆಯಲ್ಲಿ ಕಂಡುಬಂದ ಕೆಲವು ಲೋಪದೋಷಗಳಿಂದಾಗಿ ಈ ನಿಯಂತ್ರಣ ಹೆಚ್ಚಿನ ಫಲಿತಾಂಶ ನೀಡಲಿಲ್ಲ. ೧೯೫೬ರಿಂದೀಚೆಗೆ ಸರ್ಕಾರದ ನೆರವಿನಿಂದ ಕೈಗಾರಿಕಾಕ್ಷೇತ್ರ ಯಥೇಚ್ಛವಾಗಿ ಬೆಳೆದದ್ದೇ ಅಲ್ಲದೆ ಕೆಲವು ದೊಡ್ಡ ಕೈಗಾರಿಕಾ ಸಂಸ್ಥೆಗಳ ಆಡಳಿತ ಅದಕ್ಷತೆಯಿಂದ ಕೂಡಿದ್ದುದು ಕಂಡುಬಂತು. ಈ ಅದಕ್ಷತೆಯ ಕಾರಣಗಳನ್ನು ನಿವಾರಿಸುವ ಸಲುವಾಗಿ ಕೇಂದ್ರಸರ್ಕಾರ ಕೆಲವು ವಿಚಾರಣಾ ಸಮಿತಿಗಳನ್ನು ನಿಯಮಿಸಿತು. ಅಂಥ ಸಮಿತಿಗಳಲ್ಲಿ ಬಹು ಮುಖ್ಯವಾದವೆಂದರೆ ವಿವಿಯನ್ ಬೋಸ್ ಸಮಿತಿ ಮತ್ತು ಧಫ್ತರಿ–ಶಾಸ್ತ್ರಿ ಸಮಿತಿ. ಈ ಸಮಿತಿಗಳು ಖಾಸಗಿ ಕ್ಷೇತ್ರದ ಕೆಲವು ದೊಡ್ಡ ಕೈಗಾರಿಕಾ ಸಂಸ್ಥೆಗಳ

ಆಡಳಿತವರ್ಗದ ದಕ್ಷತೆಯ ಮಟ್ಟವನ್ನು ಪರಿಶೀಲಿಸಿ ತಮ್ಮ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ೧೯೬೪ರಲ್ಲಿ ಒಪ್ಪಿಸಿದುವು. ಈ ವರದಿಗಳಲ್ಲಿ ನೀಡಲಾದ ಸಲಹೆಗಳನ್ನು ಅಮಲಿಗೆ ತರಲು ಮತ್ತು ೧೯೫೬ನೆಯ ಕಂಪನಿ ಕಾಯಿದೆಗೆ ಮಾರ್ಪಾಟು ತರಲು ಕೇಂದ್ರಸರ್ಕಾರ ೧೯೬೪ನೆಯ ಸೆಪ್ಟೆಂಬರಿನಲ್ಲಿ ಕಂಪನಿ ಕಾಯಿದೆಗೆ ತಿದ್ದುಪಡಿಯನ್ನು ಲೋಕಸಭೆಯಲ್ಲಿ ಮಂಡಿಸಿತು. ಬಹು ದೀರ್ಘಚರ್ಚೆಯ ಅನಂತರ ಮತ್ತು ಜಂಟಿ ಸೆಲೆಕ್ಟ್ ಸಮಿತಿಯ ಶಿಫಾರಸಿನಂತೆ ಈ ತಿದ್ದುಪಡಿ ೧೯೬೫ರಲ್ಲಿ ಸಂಸತ್ತಿನ ಒಪ್ಪಿಗೆ ಪಡೆದು ೧೯೬೫ರ ಸೆಪ್ಟೆಂಬರಿನಲ್ಲಿ ಅಧ್ಯಕ್ಷರ ಸಹಿ ಪಡೆದು ನಿಯಮಬದ್ಧವಾಗಿ ಕಾಯಿದೆಯಾಗಿ ಜಾರಿಗೆ ಬಂತು. ೧೯೫೬ರಿಂದೀಚೆಗೆ ಕಂಪನಿ ಕಾಯಿದೆಗೆ ಆದ ಅನೇಕ ತಿದ್ದುಪಡಿಗಳಲ್ಲಿ ೧೯೬೫ರ ಬದಲಾವಣೆಯೇ ಬಹು ಮುಖ್ಯವಾದ್ದು. ಈ ಬದಲಾವಣೆಯ ಪ್ರಕಾರ ಖಾಸಗಿಕ್ಷೇತ್ರದ ವ್ಯಾಪ್ತಿಯೊಳಗಿರುವ ಕೈಗಾರಿಕಾ ಸಂಸ್ಥೆಗಳಲ್ಲಿ ವೆಚ್ಚನಿರ್ಣಯ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವ ಮತ್ತು ಅಂಥ ವ್ಯವಸ್ಥೆಯ ಶೋಧನೆಯನ್ನು (ಆಡಿಟ್) ಜಾರಿಗೆ ತರುವ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ಕೊಡಲಾಗಿದೆ. ವೆಚ್ಚನಿರ್ಣಯವನ್ನು ಕಡ್ಡಾಯಗೊಳಿಸುವ ಹಾಗೂ ಈ ವ್ಯವಸ್ಥೆಯ ಲೋಪದೋಷಗಳ ಪರಿಶೀಲನೆ ನಡಸಲು ಅಗತ್ಯವಾದ ಗೊತ್ತುವಳಿಗಳನ್ನು ಕಂಪನಿಗಳ ಮೇಲೆ ವಿಧಿಸುವುದೇ ಮುಂತಾದ ಎಲ್ಲ ಅಧಿಕಾರಗಳನ್ನೂ ಕೇಂದ್ರಸರ್ಕಾರ ಹೊಂದಿದೆ.

ವೆಚ್ಚ ನಿರ್ಣಯ ವ್ಯವಸ್ಥೆಯ ಆವಶ್ಯಕತೆ

ವೈಜ್ಞಾನಿಕ ವೆಚ್ಚನಿರ್ಣಯ ವ್ಯವಸ್ಥೆಯಿಂದ ಕೈಗಾರಿಕಾ ಸಂಸ್ಥೆಗಳಿಗೆ ವಿಶೇಷವಾದ ಅನುಕೂಲವಿದೆ. ಉತ್ಪತ್ತಿ ಹೆಚ್ಚಿಸಲೂ ಮಾರುಕಟ್ಟೆಯ ಆಗುಹೋಗುಗಳನ್ನು ವಿಶದವಾಗಿ ಅವಲೋಕಿಸಿ ಪದಾರ್ಥ ಎದುರಿಸಬೇಕಾಗಿರುವ ಸ್ಪರ್ಧೆಯನ್ನು ಗಣನೆಗೆ ತೆಗೆದುಕೊಂಡು ಉತ್ಪತ್ತಿಯ ಮಾರಾಟದ ಬೆಲೆಯನ್ನು ನಿಗದಿಮಾಡಲೂ ಈ ಪದ್ಧತಿ ಸಹಾಯ ಮಾಡುತ್ತದೆ. ಇವರಿಂದಾಗಿ ಉದ್ಯಮ ತನ್ನ ನಿವ್ವಳ ಲಾಭವನ್ನು ಹೆಚ್ಚಿಸಿಕೊಳ್ಳುವುದೇ ಅಲ್ಲದೆ, ಉದ್ಯಮದ ಪ್ರಗತಿಯ ದೃಷ್ಟಿಯಿಂದ ಇನ್ನೂ ಕೆಲವು ಮುಖ್ಯ ವಿಷಯಗಳ ಮೇಲೆ ಸಾಕಷ್ಟು ಮಾಹಿತಿ ದೊರಕಿಸಲು ಅನುಕೂಲವಾಗುತ್ತದೆ. ಅವು ಯಾವುವೆಂದರೆ:

(೧) ಉತ್ಪತ್ತಿಯ ವೆಚ್ಚದ ಹಂತಹಂತದ ನಿರ್ಣಯ.

(೨) ಪ್ರಮಾಣಿತ ರೂಢಿಯ ಮಟ್ಟದ ಅನುಸರಣೆ.

(೩) ತಯಾರಿಕೆಯ ವಿಧಾನದಲ್ಲಿ ಬದಲಾವಣೆಮಾಡಿ ವೆಚ್ಚ ಇಳಿಸುವ ಯತ್ನ.

(೪) ಉನ್ನತಮಟ್ಟದ ಸಂಶೋಧನೆಯ ಫಲವಾಗಿ ಭವಿಷ್ಯದ ಪ್ರಗತಿಯ

ಬಗ್ಗೆ ಸ್ಥಾಪಿಸಿಕೊಳ್ಳಬೇಕಾದ ಯೋಜನೆಯ ರೂಪುರೇಷೆಗಳನ್ನು ಗೊತ್ತುಪಡಿಸಿಕೊಳ್ಳುವ ಸಾಧ್ಯಾಸಾಧ್ಯತೆ.

(೫) ಭವಿಷ್ಯದಲ್ಲಾಗಬೇಕಾದ ತಯಾರಿಕೆ ಪ್ರಗತಿ, ಉತ್ಪತ್ತಿಯ ಹೆಚ್ಚಳ ಮತ್ತು ಲಾಭ ವಿಶ್ಲೇಷಣೆಯ ಆಧಾರದ ಮೇಲೆ ಹೂಡಬೇಕಾಗಿರುವ ಬಂಡವಾಳದ ಯೋಜನೆಯ ಬಗ್ಗೆ ತೀರ್ಮಾನ.

(೬) ಅತಿ ಹೆಚ್ಚಿನ ಲಾಭ ಗಳಿಸಲು ಅನುಸರಿಸಬೇಕಾದ ಮಾರ್ಗ ಯಾವುದು ಎಂಬುದರ ಬಗ್ಗೆ ನಿರ್ಣಯ.

೧೯೫೬ರ ಕಂಪನಿ ಕಾಯಿದೆಯ ವಿಧಿಗಳ ಪ್ರಕಾರ ಯಾವುದೇ ಸಾರ್ವಜನಿಕ ಬಂಡವಾಳಸಂಸ್ಥೆಯ ಲೆಕ್ಕಪತ್ರಗಳನ್ನು ಶೋಧಿಸಲು ಕೇಂದ್ರಸರ್ಕಾರಕ್ಕೆ ಅಧಿಕಾರವಿತ್ತು. ಆದರೆ ಈ ಬಗೆಯ ಶೋಧನೆ ಯಾವ ಮಾರ್ಗವನ್ನು ಅನುಸರಿಸಬೇಕು? ಅಂದರೆ ಇಂಥ ಶೋಧನೆ ಬರೀ ಹಣಕಾಸು ಲೆಕ್ಕಪತ್ರಗಳ ಶೋಧನೆಗೆ ಸೀಮಿತವಾಗಿರಬೇಕೆ ಅಥವಾ ಅದು ವೆಚ್ಚನಿರ್ಣಯ ಲೆಕ್ಕಪತ್ರಗಳನ್ನೂ ಒಳಗೊಂಡಿರಬೇಕೆ ಎಂಬುದರ ಬಗ್ಗೆ ವಿವರವಾದ ವಿಧಿ ಮತ್ತು ನಿಯಮಗಳು ೧೯೫೬ರ ಕಂಪನಿಯ ಕಾಯಿದೆಯಲ್ಲಿ ಇರಲಿಲ್ಲ. ಈ ಕಾಯಿದೆಯ ನಿಯಮಗಳನ್ನು ಜಾರಿಗೆ ತರುವುದರಲ್ಲಿ ಗಳಿಸಿದ ಸುಮಾರು ೧೦ ವರ್ಷಗಳ ಅನುಭವದ ಪ್ರಕಾರ ಶೋಧನೆಗೆ ಸಂಬಂಧಿಸಿದ ವಿಧಿಗಳು ಇನ್ನೂ ಸ್ವಲ್ಪ ವಿವರವಾಗಿದ್ದರೆ ಬಹಳ ಅನುಕೂಲವೆಂಬ ವಿಷಯ ಕೇಂದ್ರಸರ್ಕಾರದ ಕಂಪನಿ ಕಾಯಿದೆಯ ಆಡಳಿತ ವಿಭಾಗದ ಅಧಿಕಾರಿ ವರ್ಗಕ್ಕೆ ಮನದಟ್ಟಾಯಿತು. ಅದೂ ಅಲ್ಲದೆ ಆಗ ಅನುಸರಿಸುತ್ತಿದ್ದ ಶೋಧನೆಯ ಪದ್ಧತಿಯಲ್ಲಿ ಅನೇಕ ಬಗೆಯ ಲೋಪದೋಷಗಳು ಕಂಡುಬಂದಿದ್ದರಿಂದಾಗಿ, ಖಾಸಗಿಕ್ಷೇತ್ರದ ಅನೇಕ ಕೈಗಾರಿಕಾ ಸಂಸ್ಥೆಗಳ ಲೆಕ್ಕಗಳ ಶೋಧನೆ ಸಮರ್ಪಕವಾಗಿ ನಡೆಯಲಿಲ್ಲ. ಈ ಪರಿಸ್ಥಿತಿಯಲ್ಲಿ ಈ ಸಂಸ್ಥೆಗಳ ಆಡಳಿತ ವರ್ಗ ತಮ್ಮ ಹಣಕಾಸು ನಿರ್ವಹಣೆಯಲ್ಲಿ ಮಾಡಿದ್ದ ಕೆಲವು ಲೋಪದೋಷಗಳನ್ನು ಸರಿಪಡಿಸಲು ಸಾಧ್ಯವಾಗದೆ ಹೋದದ್ದೇ ಅಲ್ಲದೆ ಅಂಥ ಆಡಳಿತ ವರ್ಗಗಳ ಮೇಲೆ ಕಾಯಿದೆಯಂತೆ ಕ್ರಮ ಕೈಗೊಳ್ಳಲೂ ಸಾಧ್ಯವಾಗಲಿಲ್ಲ. ಆದ್ದರಿಂದ ಈ ಬಗೆಯ ಲೋಪದೋಷಗಳ ನಿವಾರಣಾರ್ಥವಾಗಿ ಮತ್ತು ಲೆಕ್ಕ ಶೋಧನೆಗೆ ಸಂಬಂಧಿಸಿದ ವಿಧಿಗಳ ಅಂಗಗಳನ್ನು ಹೆಚ್ಚಿಗೆ ವಿವರಿಸಿ ವೆಚ್ಚ ನಿರ್ಣಯ ವ್ಯವಸ್ಥೆಯನ್ನು ಲೆಕ್ಕಶೋಧನೆಯ ಚೌಕಟ್ಟಿನಲ್ಲಿ ತರಲು ೧೯೬೫ರ ಕಂಪೆನಿ ಕಾಯಿದೆಯ ತಿದ್ದುಪಡಿ ಸಹಾಯ ಮಾಡಿತು.

ಇದರಿಂದ ಖಾಸಗಿಕ್ಷೇತ್ರದ ಕೈಗಾರಿಕಾ ಸಂಸ್ಥೆಗಳ ಹಣಕಾಸಿನ ಆಡಳಿತ ಮತ್ತು ನಿರ್ವಹಣೆಯ ಮೇಲೆ ಬಹುಮಟ್ಟಿನ ನಿಯಂತ್ರಣಾಧಿಕಾರ ಕೇಂದ್ರ ಸರ್ಕಾರಕ್ಕೆ ದೊರಕಿತು. ಮುಖ್ಯವಾಗಿ ಮುಂದೆ ಕಂಡ ನಿಯಮಗಳನ್ನು ಸರ್ಕಾರ ಅವುಗಳ ಮೇಲೆ ಹೇರಬಹುದು :

(೧) ಕೈಗಾರಿಕೆಯ ಉತ್ಪಾದನೆ, ಪದಾರ್ಥ ಪರಿವರ್ತನೆ ಮತ್ತು ಗಣಿ ಕೆಲಸಮಾಡುವ ಸಂಸ್ಥೆಗಳಲ್ಲಿ ವೆಚ್ಚ ನಿರ್ಣಯ ವ್ಯವಸ್ಥೆಯನ್ನು ಕಡ್ಡಾಯವಾಗಿ ಅನುಸರಣೆಗೆ ತರಲು ಆಗತ್ಯವಾದ ನಿಯಮಗಳ ಜಾರಿ.

(೨) ಯಾವುದೇ ಸಂಸ್ಥೆಯಲ್ಲಿನ ವೆಚ್ಚನಿರ್ಣಯ ವ್ಯವಸ್ಥೆಯ ಶೋಧನೆ ಯಾಗಬೇಕಾಗಿದ್ದಲ್ಲಿ ಕೇಂದ್ರಸರ್ಕಾರದ ಆದೇಶದಂತೆ ಅಂಥ ಶೋಧನೆಗೆ ಬೇಕಾದ ನಿಯಮಗಳನ್ನು ಅಂಗೀಕರಿಸಿ ಅವುಗಳನ್ನು ಜಾರಿಗೆ ತರುವಂತೆ ಮಾಡುವ ಅಧಿಕಾರ.

ಈ ಶಾಸನದ ವಿಧಿಗಳ ಪ್ರಕಾರ ವೆಚ್ಚನಿರ್ಣಯ ಕ್ರಮವನ್ನು ಅಳವಡಿಸಿ ಅದರ ಶೋಧನೆ ಮಾಡಬೇಕಾದಲ್ಲಿ ಸಂಬಂಧಪಟ್ಟ ಕೈಗಾರಿಕಾ ಸಂಸ್ಥೆಗಳ ದಾಖಲೆಗಳನ್ನು ಅವುಗಳ ಆಡಳಿತವರ್ಗ ಶಾಸ್ತ್ರೀಯವಾಗಿ ತಯಾರಿಸಿ ಅವುಗಳನ್ನು ನಿಯಮದ ಪ್ರಕಾರ ಶೋಧಕನಿಗೆ ಒಪ್ಪಿಸಬೇಕು. ಯಾವ ಕೈಗಾರಿಕೆ ಅಥವಾ ಉತ್ಪಾದನ ಸಂಸ್ಥೆಗಳಲ್ಲಿ ವೆಚ್ಚ ನಿರ್ಣಯ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ಬಗ್ಗೆ ಕೇಂದ್ರಸರ್ಕಾರ ಆದೇಶ ನೀಡಲೂ [ಕಲಂ ೨೦೯ (೧) (d)] ಅಗತ್ಯವಾದರೆ ಈ ವ್ಯವಸ್ಥೆಯ ಲೆಕ್ಕಶೋಧನೆಗೆ ಅನುವುಮಾಡಿಕೊಡಲೂ [ಕಲಂ ೨೩೩ (b) (೧)] ಕೇಂದ್ರಸರ್ಕಾರಕ್ಕೆ ಅಧಿಕಾರವಿದೆ. ೨೦೯ (೧) (d) ಕಲಂ ಪ್ರಕಾರ ವೆಚ್ಚನಿರ್ಣಯ ವ್ಯವಸ್ಥೆಯನ್ನು ಜಾರಿಗೆ ತಂದಿರುವ ಸಂಸ್ಥೆಗಳು ೨೩೩ (b) (೧)ನೆಯ ಕಲಂ ಪ್ರಕಾರ ಲೆಕ್ಕಶೋಧನೆಗೂ ಅನುವು ಮಾಡಿಕೊಡಬೇಕೇ ಬೇಡವೇ ಎಂಬುದನ್ನು ನಿರ್ಧರಿಸುವ ಅಧಿಕಾರವೂ ಸರ್ಕಾರಕ್ಕಿದೆ.

ಕಂಪನಿ ಕಾಯಿದೆಯ ಈ ತಿದ್ದುಪಡಿಯನ್ನು ಜಾರಿಗೆ ತರಲು ಕಂಪನಿ ಕಾಯಿದೆಯ ಕಲಂ ೬೪೨ (೧) ಮತ್ತು ೨೦೯ (೧) (d) ಪ್ರಕಾರ ಕೆಲವಾರು ನಿಯಮಾವಳಿಗಳನ್ನು ರಚಿಸಿ ಯಾವ ಬಗೆಯ ಕೈಗಾರಿಕಾ ಮತ್ತು ಉತ್ಪಾದನ ಸಂಸ್ಥೆಗಳಲ್ಲಿ ಈ ನಿಯಮಗಳು ಜಾರಿಗೆ ಬರಬೇಕೆಂಬುದನ್ನು ಆಗಿಂದಾಗ್ಗೆ ವಿಶೇಷಾ ದೇಶಗಳ ಮೂಲಕ ಈ ಸಂಸ್ಥೆಗಳ ಗಮನಕ್ಕೆ ತಂದು ಇವುಗಳ ಕಲಾಪಗಳನ್ನೂ ಈ ಕಾಯಿದೆಯ ಕಾರ್ಯವ್ಯಾಪ್ತಿಯೊಳಗೆ ಕೇಂದ್ರಸರ್ಕಾರ ತಂದಿತು. ಈ ಕ್ರಮಕ್ಕೆ ಒಳಪಡಿಸಲಾದ ಕೈಗಾರಿಕೆಗಳ ವಿವರಗಳನ್ನು ಮುಂದೆ ಕೊಟ್ಟಿದೆ:

ಕ್ರಮ ಸಂಖ್ಯೆ	ಕೈಗಾರಿಕೆ	ವಿಶೇಷಾದೇಶದ ತಾರೀಖು	ನಿಯಮಾವಳಿ ಜಾರಿಗೆ ಬಂದ ತಾರೀಖು
೧	ಸಿಮೆಂಟು ಮತ್ತು ತತ್ಸಂಬಧ ಕೈಗಾರಿಕೆ	೧೨– ೯–೬೬	೧– ೧–೬೭
೨	ಬೈಸಿಕಲ್ಲು ಮತ್ತು ಉಪಕರಣಗಳು	೧–೩–೬೭	೧– ೪–೬೭
೩	ಎಲ್ಲ ಬಗೆಯ ವಾಹನಗಳ ರಬ್ಬರ್ ಟೈರು ಮತ್ತು ಟ್ಯೂಬು	೧೦– ೮–೬೭	೧–೧೦–೬೭
೪	ಕಾಸ್ಟಿಕ್ ಸೋಡ	೧೧– ೮–೬೭	೧–೧೦–೬೭
೫	"ಏರ್ ಕಂಡಿಷನ್" ಯಂತ್ರಗಳು	೧೬– ೯–೬೭	೧–೧೦–೬೭
೬	ಶೀತಕಗಳು (ರೆಫ್ರಿಜಿರೇಟರ್ಸ್)	೧೮– ೯–೬೭	೧–೧೦–೬೭
೭	ವಾಹನಗಳಿಗೆ ಉಪಯೋಗಿಸುವ ಬ್ಯಾಟರಿಗಳು	೨೦– ೯–೬೭	೧– ೧–೬೮
೫	ವಿದ್ಯುತ್ ಬಲ್ಬುಗಳು ಮತ್ತು ಕೊಳವೆಗಳು	೨೭– ೯–೬೭	೧– ೧–೬೮
೯	ಮೋಟಾರು ವಾಹನಗಳು	೨೭– ೯–೬೯	೧– ೧–೭೦
೧೦	ವಿದ್ಯುತ್ ಮೋಟಾರುಗಳು	೨೪–೧೦–೬೯	೧– ೧–೭೦

ಕಲಂ ೨೦೯ (೧) (d) ನಿಬಂಧನೆಗೆ ಅನುಸಾರವಾಗಿ ಕೆಲವಾರು ಸಂಸ್ಥೆಗಳಲ್ಲಿ ಕಡ್ಡಾಯವಾಗಿ ವೆಚ್ಚ ನಿರ್ಣಯ ಕ್ರಮವನ್ನು ಜಾರಿಗೆ ತರಲು ಆಗಿಂದಾಗ್ಗೆ ಆದೇಶವಿತ್ತುದೇ ಅಲ್ಲದೆ, ಕಲಂ ೨೩೩ (b) (೧)ಕ್ಕನುಗುಣವಾಗಿ ಯಾವ ಕೈಗಾರಿಕೆಗಳಲ್ಲಿ ಕಡ್ಡಾಯವಾಗಿ ವೆಚ್ಚನಿರ್ಣಯ ಲೆಕ್ಕ ಶೋಧನೆ ನಡೆಸಬೇಕು ಎಂಬುದರ ಬಗ್ಗೆಯೂ ಕೇಂದ್ರಸರ್ಕಾರ ಆಗಾಗ್ಗೆ ಆದೇಶವನ್ನಿತ್ತಿದೆ. ಈ ಆದೇಶಗಳ ಪ್ರಕಾರ ಕೆಲವು ಕೈಗಾರಿಕೆಗಳಲ್ಲಿನ ಸಂಸ್ಥೆಗಳು ಲೆಕ್ಕ ಶೋಧನ ನಿಯಮಗಳಿಗೊಳಪಟ್ಟಿವೆ. ಇಂಥವುಗಳ ಸಂಖ್ಯೆ ಬಹಳ ಕಡಿಮೆ. ೧೯೬೯ನೆಯ ಸೆಪ್ಟೆಂಬರ್ ೧೭ರ ವೇಳೆಗೆ ಕೆಳಗೆ ಸೂಚಿಸಿರುವ ಕೈಗಾರಿಕೆಗಳಲ್ಲಿನ ೧೦೪ ಸಂಸ್ಥೆಗಳು ಮಾತ್ರ ಈ ನಿಧಿಗೆ ಒಳಪಟ್ಟಿದ್ದುವು :

ಕ್ರಮ ಸಂಖ್ಯೆ	ಕೈಗಾರಿಕೆ	ಸಂಸ್ಥೆಗಳ ಸಂಖ್ಯೆ
೧	ವಿವಿಧರೂಪ ಕಾಸ್ಟಿಕ್ ಸೋಡ ಕೈಗಾರಿಕೆ	೨೫
೨	ಎಲ್ಲ ಬಗೆಯ ವಾಹನಗಳ ರಬ್ಬರ್ ಟೈರು ಮತ್ತು ಟ್ಯೂಬುಗಳು	೧೮
೩	ಏರ್‌ಕಂಡಿಷನ್ ಯಂತ್ರಗಳು	೯
೪	ಶೀತಕಗಳು	೧೭
೫	ವಾಹನಗಳಲ್ಲಿ ಉಪಯೋಗಿಸುವ ಬ್ಯಾಟರಿಗಳು	೧೧
೬	ವಿದ್ಯುತ್ ಬಲ್ಬುಗಳು ಮತ್ತು ಕೊಳವೆಗಳು	೨೪
	ಒಟ್ಟು	೧೦೪

ಇವೆರಡು ವಿಧಿಗಳ ಜೊತೆಗೆ ಕೇಂದ್ರಸರ್ಕಾರದ ಆದೇಶದಂತೆ ಕೆಲವು ಬಗೆಯ ಸರ್ಕಾರೀ ಉದ್ಯೋಗಿಗಳೂ ೨೦೯ (೪)ನೆಯ ಕಲಮಿನ ನಿಯಮಗಳಿಗನುಗುಣ ವಾಗಿ ಯಾವುದೇ ಸಂಸ್ಥೆ ಲೆಕ್ಕಪತ್ರಗಳನ್ನೂ ಇತರ ದಾಖಲೆಗಳನ್ನೂ ಇಟ್ಟಿದೆಯೋ ಇಲ್ಲವೇ ಎಂಬುದನ್ನು ಪರೀಕ್ಷಿಸಲು ಯಾವ ಸಮಯದಲ್ಲಿ ಬೇಕಾದರೂ ಸಂಸ್ಥೆಯ ದಾಖಲೆಗಳನ್ನು ತಪಾಸಿಸಬಹುದು. ಈ ಕಾನೂನಿನ ಈ ಮೂರುಬಗೆಯ ವಿಧಿಗಳು ಮತ್ತು ನಿಯಮಗಳು ಖಾಸಗಿಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಿಗಷ್ಟೇ ಸೀಮಿತ ವಾಗಿರದೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಿಗೂ ಅನ್ವಯಿಸುತ್ತವೆ.

ವೆಚ್ಚ ನಿರ್ಣಯ ಪದ್ಧತಿಯ ಶೋಧನೆಯ ಉದ್ದೇಶಗಳು

ಉತ್ಪಾದನ ಸಾಮರ್ಥ್ಯವನ್ನೂ ವಿಕ್ರಯದ ಮೊತ್ತವನ್ನೂ ಅಂದಾಜು ಅಂಕಿ ಅಂಶಗಳೊಡನೆ ತೌಲನಿಕವಾಗಿ ಪರಿಶೀಲಿಸಿ, ಇವುಗಳ ನಡುವೆ ಇರಬಹುದಾದ ವ್ಯತ್ಯಾಸಕ್ಕೆ ಕಾರಣಗಳನ್ನು ಕಂಡುಹಿಡಿದು, ನ್ಯೂನತೆಗಳನ್ನು ನಿವಾರಿಸಲು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚನೆ ನೀಡುವುದು ಈ ಶೋಧನೆ ಕ್ರಮದ ಬಹು ಮುಖ್ಯ ಉದ್ದಿಶ್ಯ. ಈ ಬಗೆಯ ಸೂಚನೆಗಳನ್ನು ನೀಡುವ ಬಹು ದೊಡ್ಡ ಜವಾಬ್ದಾರಿ ಶೋಧಕನಿಗೆ ಇರುತ್ತದೆ. ಆದ್ದರಿಂದಲೇ ಈ ಬಗೆಯ ಶೋಧನ ಔದ್ಯೋಗಿಕ ಕ್ರಾಂತಿಯ ಪರಿಣಾಮದಿಂದಾದ ಆಧುನಿಕ ಕೈಗಾರಿಕಾಪದ್ಧತಿಯ ಒಂದು ಹೊಸ ಪರಿಕಲ್ಪನೆಯೆಂದು ಹೇಳಬಹುದು. ಒಟ್ಟಿನಲ್ಲಿ ಈ ಪದ್ಧತಿಯ ಮೂಲಕ ಸಾಧಿಸಬೇಕಾದ್ದೆಂದರೆ, ಕಾರ್ಖಾನೆಯ ಆಡಳಿತವರ್ಗದ ಕಾರ್ಯ ನಿರ್ವಹಣೆಯಲ್ಲಿ ಇರಬಹುದಾದಂಥ ಅನೇಕ ಲೋಪದೋಷಗಳನ್ನು ನಿವಾರಿಸಲು ಪ್ರಯತ್ನಿಸಿ ಉದ್ಯಮವನ್ನು ಮತ್ತು ಉದ್ಯಮಿಯನ್ನು ಮುಂದೆ ಒದಗಬಹುದಾದಂಥ

ತೊಂದರೆಗಳಿಂದ ಮತ್ತು ಹಣಕಾಸಿನ ಬಿಕ್ಕಟ್ಟಿನಿಂದ ಪಾರುಮಾಡುವುದೇ ಅಲ್ಲದೆ, ಅನುಸರಣೆಯಲ್ಲಿರುವ ವೆಚ್ಚ ನಿರ್ಣಯ ಪದ್ಧತಿ ವೈಜ್ಞಾನಿಕವೆ ಅಲ್ಲವೆ ಎಂಬುದನ್ನು ಕಂಡುಹಿಡಿದು, ಅನುಸರಣೆಯಲ್ಲಿರುವ ಪದ್ಧತಿ ಸಾಧ್ಯವಾದಷ್ಟುಮಟ್ಟಿಗೆ ಅಡ್ಡದಾರಿ ಹಿಡಿಯದೆ ಇರುವಂತೆ ನೋಡಿಕೊಳ್ಳಬೇಕಾದ ಗುರುತರ ಜವಾಬ್ದಾರಿಯೂ ಆಗಿದೆ.

ಈ ಬಗೆಯ ಪರಿಶೋಧನೆಯ ಮುಖ್ಯವಾದ ಅಂಗಗಳು ಎರಡು ಬಗೆ:

(೧) ಔಚಿತ್ಯ ಶೋಧನೆ (ಪ್ರೊಪ್ರೈಟಿ ಆಡಿಟ್)

(೨) ದಕ್ಷತೆಯ ಶೋಧನೆ (ಎಫಿಷಿಯೆನ್ಸಿ ಆಡಿಟ್)

ಮಾಡಿದ ಯಾವ ಖರ್ಚೇ ಆಗಲಿ ಕಾರ್ಖಾನೆಯ ಕಾರ್ಯಗತಿಯ ದೃಷ್ಟಿಯಿಂದ ಸಮಂಜಸವೇ ಮತ್ತು ಅಧಿಕೃತವೇ ಎಂಬುದನ್ನೂ ಸಮಂಜಸವಲ್ಲದಿದ್ದರೆ ಕಾರಣಗಳೇನು ಎಂಬುದನ್ನೂ ಕಂಡುಹಿಡಿದು ಆ ಬಗೆಯ ವೆಚ್ಚವನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳನ್ನು ಸೂಚಿಸುವುದು ಒಂದನೆಯ ಬಗೆಯ ಶೋಧನೆಯ ಮುಖ್ಯ ಉದ್ದೇಶ.

ಎರಡನೆಯ ಬಗೆಯ ಶೋಧನೆಯ ಉದ್ದೇಶವೆಂದರೆ ಕಾರ್ಖಾನೆಯ ಎಲ್ಲ ವಿಭಾಗಗಳ ಆಡಳಿತವರ್ಗವೂ ದಕ್ಷತೆಯಿಂದ ಕೆಲಸ ಮಾಡುತ್ತಿದೆಯೆ ಎಂಬುದನ್ನೂ ದಕ್ಷತೆಯ ಅಭಾವವಿದ್ದಲ್ಲಿ ಅದಕ್ಕೆ ಕಾರಣಗಳೇನು ಎಂಬುದನ್ನೂ ಕಂಡುಹಿಡಿದು ಅದನ್ನು ಹೆಚ್ಚಿಸಲು ಸೂಕ್ತ ಸೂಚನೆಗಳನ್ನು ನೀಡುವುದೇ ಆಗಿದೆ.

ಲೆಕ್ಕಶೋಧಕನಿಗೆ ಇರಬೇಕಾದ ಅರ್ಹತೆ

ಶೋಧಕನಿಗೆ ಇರಬೇಕಾದ ಅರ್ಹತೆಗಳಾವುವು ಎಂಬುದನ್ನು ಕಾಯಿದೆಯಲ್ಲಿ ಖಚಿತವಾಗಿ ಹೇಳಲಾಗಿದೆ. ಅದರಂತೆ ಷೇರುದಾರರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕಂಪನಿ ಶಾಸನದ ೨೨೪ನೆಯ ಕಲಮಿನಲ್ಲಿ ಕಂಡುಬರುವ ನಿಯಮಗಳಿಗನುಸಾರವಾಗಿ ೨೩೩ (b) ಕಲಮಿನ ಕೆಳಗೆ ಕೈಗಾರಿಕಾ ಸಂಸ್ಥೆಯ ಶೋಧಕರನ್ನು ನಿಯಮಿಸಿಕೊಳ್ಳಬಹುದು. ಈ ರೀತಿ ನೇಮಕಗೊಂಡ ವ್ಯಕ್ತಿಗೆ ಇರಬೇಕಾದ ವಿದ್ಯಾರ್ಹತೆಗಳು ಇವು:

(೧) "ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟೆಂಟ್ಸ್" ಸಂಸ್ಥೆಯ ೧೯೫೯ರ ಕಾಯಿದೆಯ ನಿಬಂಧನೆಗಳಿಗನುಸಾರವಾಗಿ ಆತ ವೆಚ್ಚನಿರ್ಣಯತಜ್ಞನೆಂದು ಪರಿಗಣಿತವಾಗಿರಬೇಕು ಮತ್ತು ವೆಚ್ಚನಿರ್ಣಯ ಕಾರ್ಯವನ್ನೆ ತನ್ನ ಮುಖ್ಯ ಉದ್ಯೋಗವನ್ನಾಗಿ ಹೊಂದಿರಬೇಕು.

(೨) "ಚಾರ್ಟರ್ಡ್ ಅಕೌಂಟೆಂಟ್ಸ್" ಸಂಸ್ಥೆಯ ೧೯೪೯ರ ಕಾಯಿದೆಯ ಪ್ರಕಾರ ಹಣಕಾಸಿನ ಲೆಕ್ಕಶೋಧನತಜ್ಞನೆಂದು ಪರಿಗಣಿತನಾಗಿ ಈ ಬಗೆಯ

ಉದ್ಯೋಗದಲ್ಲಿ ಹತ್ತು ವರ್ಷಕ್ಕಿಂತ ಮೇಲ್ಪಟ್ಟ ಪರಿಶ್ರಮ ಮತ್ತು ಅನುಭವವುಳ್ಳವನಾಗಿರಬೇಕು.

ನೇಮಕ ಹೊಂದಿದ ವ್ಯಕ್ತಿ ಶೋಧನೆ ನಡೆಸಿದ ಮೇಲೆ ಒಪ್ಪಿಸಬೇಕಾದ ವರದಿ ಯಾವ ರೂಪದಲ್ಲಿರಬೇಕು, ಅದರಲ್ಲಿ ನಮೂದಿಸಬೇಕಾದ ಮುಖ್ಯವಾದ ಅಂಶಗಳಾವುವು ಎಂಬುದರ ಬಗ್ಗೆಯೂ ಕೇಂದ್ರಸರ್ಕಾರ ಆಗಿಂದಾಗ್ಗೆ ಆಜ್ಞೆಗಳನ್ನು ಹೊರಡಿಸಬೇಕಾಗುತ್ತದೆ. ಅದರ ಮೇರೆಗೆ ತಾ|| ೨೫-೯-೬೮ರಲ್ಲಿ ಕಂಪನಿ ನ್ಯಾಯ ಆಡಳಿತ ವಿಭಾಗ (ಕಂಪನಿ ಲಾ ಅಡ್ಮಿನಿಸ್ಟ್ರೇಷನ್) ಕಾಯಿದೆಯ ೨೩೩ (b) (೪)ರ ಕೆಳಗೆ ಒಂದು ಆಜ್ಞೆಯನ್ನು ಹೊರಡಿಸಿ ಶೋಧಕನ ವರದಿ ಯಾವ ರೂಪದಲ್ಲಿರಬೇಕು ಎಂಬುದರ ಬಗ್ಗೆ ಕೆಲವು ನಿಯಮಗಳನ್ನು ಜಾರಿಗೆ ತಂದಿತು. ಆ ನಿಯಮಗಳಿಗೆ "೧೯೬೮ರ ವೆಚ್ಚ ನಿರ್ಣಯಪದ್ಧತಿ ಶೋಧನೆ ನಿಯಮಗಳು" ಎಂದು ಹೆಸರು. ಆ ನಿಯಮಗಳಪ್ರಕಾರ ಶೋಧಕ ತನ್ನ ವರದಿಯನ್ನು ಕಂಪನಿ ನ್ಯಾಯ ಆಡಳಿತ ವಿಭಾಗಕ್ಕೆ ಒಪ್ಪಿಸಿ ಅದರ ಪ್ರತಿಯನ್ನು ಸಂಸ್ಥೆಯ ಸರ್ವಸದಸ್ಯರ ಸಾಮಾನ್ಯ ವಾರ್ಷಿಕಸಭೆ ಸೇರುವುದಕ್ಕೆ ೬೦ ದಿವಸ ಮುಂಚಿತವಾಗಿ ಸಂಸ್ಥೆಯ ಆಡಳಿತ ವರ್ಗಕ್ಕೆ ಕೊಡಬೇಕು. ಶೋಧಕ ತನ್ನ ವರದಿಯನ್ನು ನಿಯಮಗಳಿಗನು ಸಾರವಾಗಿ ತಯಾರು ಮಾಡುವುದೇ ಅಲ್ಲದೆ ಕೆಳಕಂಡ ಮುಖ್ಯ ಅಂಶಗಳನ್ನು ಪ್ರಸ್ತಾಪಿಸಿ ಅವುಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಖಚಿತವಾಗಿ ತಿಳಿಸಬೇಕು:

(೧) ಸಂಸ್ಥೆಯ ಹೆಸರು, ಅದನ್ನು ಸ್ಥಾಪಿಸಿರುವ ಸ್ಥಳ ಮತ್ತು ಅದರ ಸ್ಥಾಪನೆಯ ಉದ್ದೇಶ
(೨) ಅನುಸರಣೆಯಲ್ಲಿರುವ ವೆಚ್ಚನಿರ್ಣಯ ಪದ್ಧತಿಯ ಮಾದರಿ
(೩) ಹಣಕಾಸಿನ ಪರಿಸ್ಥಿತಿ
(೪) ಉತ್ಪಾದನೆಯಾಗುತ್ತಿರುವ ಪದಾರ್ಥ
(೫) ಉತ್ಪಾದನೆಯ ವಿಧಾನ
(೬) ಬಳಸುತ್ತಿರುವ ಕಚ್ಚಾ ಸಾಮಗ್ರಿಯ ವಿವರ
(೭) ಉಪಯೋಗಿಸುತ್ತಿರುವ ಇಂಧನಗಳ ವಿವರ
(೮) ಪದಾರ್ಥ ದಾಸ್ತಾನು ಮತ್ತು ಪರಿಕರಗಳ ವಿವರ
(೯) ಕಾರ್ಮಿಕರಿಗೆ ನೀಡುತ್ತಿರುವ ಕೂಲಿ ಇತ್ಯಾದಿ
(೧೦) ಸವಕಳಿಯ ವಾರ್ಷಿಕ ಪ್ರಮಾಣದ ವಿವರ
(೧೧) ಪರೋಕ್ಷ ವೆಚ್ಚಗಳ ಬಗ್ಗೆ ವಿವರಗಳು
(೧೨) ಮಾರಾಟವಾಗುತ್ತಿರುವ ಪದಾರ್ಥದ ಸರಾಸರಿ ಗರಿಷ್ಠ ಪರಿಮಿತಿ

(೧೩) ಅನುಚಿತವಾದ ಮತ್ತು ಅನಧಿಕೃತ ವಾರ್ಷಿಕ ಖರ್ಚುಗಳ ಬಗ್ಗೆ ಮಾಹಿತಿ

(೧೪) ಕೈಗಾರಿಕಾಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಆವಶ್ಯಕವಾದ ಇತರ ವಿಷಯಗಳು

(೧೫) ಶೋಧಕನ ವಿವರಣೆ ಮತ್ತು ಅಭಿಪ್ರಾಯ

ಈ ವರದಿಯ ಜೊತೆಗೆ ಇದಕ್ಕೆ ಸಂಬಂಧಿಸಿದ ಇನ್ನೂ ಕೆಲವು ಮುಖ್ಯ ವಿಷಯಗಳ ಮೇಲೆಯೂ ಶೋಧಕನ ವಿವರಣೆಯೂ ಅಭಿಪ್ರಾಯವೂ ಅಗತ್ಯ. ಅವು ಯಾವುವೆಂದರೆ :

(೧) ಅನುಚಿತವಾದ ಮತ್ತು ಅನಧಿಕೃತ ವಿಷಯಗಳಿಂದಾಗಿ ಕೈಗಾರಿಕಾ ಸಂಸ್ಥೆಯ ಅಸ್ತಿತ್ವಕ್ಕೆ ಧಕ್ಕೆ ಬರುವಂತಿದ್ದರೆ ಅವುಗಳ ಬಗ್ಗೆ ವಿವರಗಳು

(೨) ಸಂಸ್ಥೆಯ ನಗದನ್ನು ಸಮಂಜಸವಾದ ಕಾರಣವಿಲ್ಲದೆ ಪೋಲು ಮಾಡಿದ್ದರೆ ಅದರ ಬಗ್ಗೆ ಪೂರ್ಣ ವಿವರಗಳು

(೩) ಹಣಕಾಸಿನ ಖರ್ಚಿನ ಮೇಲಿನ ನಿಯಂತ್ರಣದ ಅಭಾವದಿಂದಾಗಿ ಉತ್ಪಾದಿತ ಫಲದ ವೆಚ್ಚ ಹೆಚ್ಚಾಗಿದ್ದಲ್ಲಿ ಅದರ ಬಗ್ಗೆ ವಿಶೇಷ ಮಾಹಿತಿ

(೪) ಕೈಗಾರಿಕಾಸಂಸ್ಥೆ ಮತ್ತು ಇತರ ಸಂಸ್ಥೆ ಅಥವಾ ವ್ಯಕ್ತಿಗಳ ನಡುವೆ ಕ್ರಯವಿಕ್ರಯಗಳ (ಪರ್ಚೇಸ್ ಅಂಡ್ ಸೇಲ್) ಬಗ್ಗೆ ಆಗಿರತಕ್ಕ ಒಪ್ಪಂದ ಮತ್ತು ಕರಾರುಗಳ ಬಗ್ಗೆ ಪೂರ್ತಿ ವಿವರಗಳು

(೫) ಸ್ವಯಂ ಪರಿಪೂರ್ಣತೆ ಹೊಂದಿದ ವಾರ್ಷಿಕ ಆದಾಯವೆಚ್ಚದ ಅಂದಾಜು ಪಟ್ಟಿತಯಾರಿಕೆ ಅನುಸರಣೆಯಲ್ಲಿದೆಯೆ, ಅಥವಾ ಇಲ್ಲವೆ? ಇಲ್ಲದಿದ್ದರೆ ಕಾರಣಗಳೇನು?

(೬) ಸಂಸ್ಥೆಯಲ್ಲಿ ಆಂತರಿಕ ಲೆಕ್ಕಶೋಧನೆಯ (ಇಂಟರ್ನಲ್ ಆಡಿಟ್) ಪದ್ಧತಿಯನ್ನು ಜಾರಿಗೆ ತರುವ ಸಾಧ್ಯಾಸಾಧ್ಯತೆ

(೭) (ಅ) ತಯಾರಿಕಾ ಪಥದಲ್ಲಿ ಕಂಡುಬರಬಹುದಾದ ನ್ಯೂನತೆಗಳನ್ನು ನಿವಾರಿಸುವುದರಿಂದಾಗಿ

(ಆ) ಕಾರ್ಖಾನೆ ತನ್ನ ಪೂರ್ತಿ ಶಕ್ತಿ ಉಪಯೋಗಿಸಿ ತಯಾರಿಕೆ ಮಾಡುವುದರಿಂದಾಗಿ

(ಇ) ಉತ್ಪಾದನ ಹೆಚ್ಚಳದಿಂದಾಗಿ ವೆಚ್ಚ ಕಡಿಮೆ ಮಾಡುವಿಕೆ ಮತ್ತು ಪದಾರ್ಥ ದಾಸ್ತಾನು ವಿಭಾಗದಲ್ಲಿ ಮಾಡಬಹುದಾದಂಥಹ ಉಳಿತಾಯಗಳಿಂದಾಗಿ

ಕಾರ್ಖಾನೆ ದಕ್ಷತೆಯಿಂದ ನಡೆಯುವಂತೆ ಮಾಡಲು ಆವಶ್ಯಕವಾದ ಸೂಚನೆಗಳಿದ್ದಲ್ಲಿ ಅವುಗಳನ್ನು ಸೂಚಿಸುವುದು

(೮) ವೆಚ್ಚನಿರ್ಣಯ ಪದ್ಧತಿ ವೈಜ್ಞಾನಿಕವಾಗಿ ಅನುಸರಣೆಯಲ್ಲಿದೆಯೆ? ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳೂ ಅಸ್ತಿತ್ವದಲ್ಲಿವೆಯೆ? ಉತ್ಪಾದನ ವಿಧಾನ ಮತ್ತು ತಯಾರಿಕಾಪ್ರಗತಿ ಔದ್ಯೋಗಿಕ ನಿಯಮಗಳಿಗನುಸಾರವಾಗಿ ನಡೆಯುತ್ತಿದೆಯೆ? ಎಂಬುದನ್ನು ಅಂತಿಮವಾಗಿ ಲೆಕ್ಕಶೋಧಕ ನೀಡಬೇಕಾದ ಹೇಳಿಕೆಯಲ್ಲಿ ನಮೂದಿಸಿ, ಇದರ ಬಗ್ಗೆ ಆತನ ಅಭಿಪ್ರಾಯವನ್ನು ಖಚಿತವಾಗಿ ವರದಿಯಲ್ಲಿ ತಿಳಿಸಬೇಕು.

ಮೇಲಿನ ಅಂಶಗಳ ಅವಗಾಹನೆ ಮಾಡಿದರೆ ೧೯೫೬ರ ಕಂಪನಿ ಕಾಯಿದೆಯ ತಿದ್ದುಪಡಿಯಲ್ಲಿ ವೆಚ್ಚ ನಿರ್ಣಯಪದ್ಧತಿಯ ಅನುಸರಣೆಗೆ, ಶೋಧನೆಗೆ ಮತ್ತು ಶೋಧಕನಿಗೆ ಕೊಟ್ಟಿರುವ ಮಹತ್ವದ ಸ್ಥಾನದ ಅರಿವು ನಮಗೆ ಆಗುತ್ತದೆ.

ಕಾಯಿದೆಯ ವಿಧಿಗಳ ಅನ್ವಯದಲ್ಲಿ ನ್ಯೂನತೆಗಳು

೧೯೬೯ರ ಸೆಪ್ಟೆಂಬರಿಗೆ ಸರಿಯಾಗಿ ಭಾರತದ ಕೈಗಾರಿಕಾ ಕ್ಷೇತ್ರದಲ್ಲಿ ೧೮೦ ಬಗೆಯ ಕೈಗಾರಿಕಾ ಗುಂಪುಗಳಿಂದ ಕೂಡಿದ ಸುಮಾರು ೨೯,೦೦೦ ಕೈಗಾರಿಕಾ ಸಂಸ್ಥೆಗಳಿದ್ದುವು. ಇವುಗಳಲ್ಲಿ ಸುಮಾರು ೨೩೪ ಸಂಸ್ಥೆಗಳು ಸರ್ಕಾರಿ ಕ್ಷೇತ್ರದಲ್ಲಿದ್ದುವು. ಇದುವರೆಗಿನ ಕೇಂದ್ರಸರ್ಕಾರದ ಹುಕುಮಿನಂತೆ ಕೇವಲ ೧೦ ಬಗೆಯ ಕೈಗಾರಿಕಾ ಗುಂಪುಗಳ ೧೦೪ ಸಂಸ್ಥೆಗಳಲ್ಲಿ ಮಾತ್ರ ಕಡ್ಡಾಯ ವೆಚ್ಚನಿರ್ಣಯ ಪದ್ಧತಿಯ ಶೋಧನೆಯನ್ನು ಜಾರಿಗೆ ತರಲಾಗಿದೆಯೆಂಬುದು ಹಿಂದೆ ಕೊಟ್ಟಿರುವ ಯಾದಿಗಳಿಂದ ವಿದಿತವಾಗಿದೆ. ಕಾಯಿದೆಯ ಮಾರ್ಪಾಡು ಆದಮೇಲೆ ಐದು ವರ್ಷಗಳಲ್ಲಿ ಆಗಿರುವ ಸಾಧನೆಯ ಹಿನ್ನೆಲೆಯಲ್ಲಿ ಇನ್ನು ಮುಂದೆ ಸಾಧಿಸಬೇಕಾದ್ದೆಷ್ಟು ಎಂಬುದನ್ನು ಊಹಿಸಿದರೆ ಈ ಸಮಸ್ಯೆ ಅಗಾಧವಾದದ್ದು ಎಂಬುದು ಅರಿವಾಗುತ್ತದೆ. ಅಲ್ಲದೆ ಇನ್ನೂ ೧೭೦ ಕೈಗಾರಿಕಾ ಗುಂಪುಗಳಿಗೆ ಸೇರಿದ ಸಾವಿರಾರು ಸಂಸ್ಥೆಗಳನ್ನು ಈ ಕಾಯಿದೆಯ ವ್ಯಾಪ್ತಿಗೆ ತರಲು ಎಷ್ಟು ಅವಧಿ ಬೇಕಾಗಬಹುದು ಎಂಬುದರ ಕಲ್ಪನೆ ನಮಗೆ ಆಗುತ್ತದೆ. ರಿಸರ್ವ್ ಬ್ಯಾಂಕು ನಡೆಸಿದ ಒಂದು ಗಣತಿಯ ಪ್ರಕಾರ ನಮ್ಮ ದೇಶದಲ್ಲಿರುವ ಕೈಗಾರಿಕಾ ಸಂಸ್ಥೆಗಳ ಮೊತ್ತದ ಸೇಕಡಾ ೨೦ರಷ್ಟು ಸಂಸ್ಥೆಗಳಲ್ಲಿ ಮಾತ್ರ ಯಾವುದಾದರೂ ಒಂದು ಬಗೆಯ ವೆಚ್ಚ ನಿರ್ಣಯ ಪದ್ಧತಿ ಅನುಸರಣೆಯಲ್ಲಿದೆ. ಈ ಸಂಸ್ಥೆಗಳ ಷೇರು ಬಂಡವಾಳ ನಮ್ಮ ದೇಶದ ಕೈಗಾರಿಕಾ ಕ್ಷೇತ್ರದ ಒಟ್ಟು ಬಂಡವಾಳದ ಸೇಕಡಾ ೭೦ರಷ್ಟು ಇದೆ. ಆದ್ದರಿಂದ ಕನಿಷ್ಟಪಕ್ಷ ಸೇಕಡಾ ೨೦ರಷ್ಟು ಸಂಸ್ಥೆಗಳನ್ನಾದರೂ ಕಾನೂನಿನ ನಿಯಂತ್ರಣಕ್ಕೆ ಒಳಪಡಿಸಿ ಅವುಗಳ ಆಡಳಿತದಲ್ಲಿ ದಕ್ಷತೆ ತರಬೇಕಾದ ಗುರುತರ ಜವಾಬ್ದಾರಿ ಸರ್ಕಾರದ ಮತ್ತು ಕಂಪನಿ ಕಾಯಿದೆಯ ಆಡಳಿತ ವಿಭಾಗದ ಮೇಲೆ ಇದೆ ಎಂಬುದು ನಿರ್ವಿವಾದವಾದ ಅಂಶ. ಸೇಕಡಾ ೨೦ ರಷ್ಟು ಅಂದರೂ ಸುಮಾರು ೫,೮೦೦ ಕೈಗಾರಿಕಾ ಸಂಸ್ಥೆಗಳು ಆಗುತ್ತವೆ. ೫ ವರ್ಷಗಳ ಅವಧಿಯಲ್ಲಿ ಕೇವಲ

೧೦೪ ಸಂಸ್ಥೆಗಳನ್ನು ನಿಯಂತ್ರಿಸಲು ಸಾಧ್ಯವಾಗದಿದ್ದರೆ ಈ ೫,೮೦೦ ಸಂಸ್ಥೆಗಳನ್ನು ನಿಯಂತ್ರಿಸಲು ಎಷ್ಟು ತೊಂದರೆ ಇದೆ ಮತ್ತು ಈ ಸಮಸ್ಯೆ ಎಷ್ಟು ಮಹತ್ತರವಾದುದು ಎಂಬುದು ಗೊತ್ತಾಗುತ್ತದೆ. ಯಾವುದೇ ಒಂದು ಬಗೆಯ ನಿಯಂತ್ರಣವನ್ನು ಕಡ್ಡಾಯವಾಗಿ ಹೇರುವ ವರೆವಿಗೂ ಖಾಸಗಿ ಕ್ಷೇತ್ರದ ಅನೇಕ ಕೈಗಾರಿಕಾ ಸಂಸ್ಥೆಗಳು ದಕ್ಷತೆಯಿಂದ ಕೆಲಸಮಾಡಿ ಉತ್ಪನ್ನವನ್ನು ಹೆಚ್ಚಿಸಿ ಕಾರ್ಮಿಕರಿಗೂ ಗ್ರಾಹಕರಿಗೂ ಸಮಾಜಕ್ಕೂ ಆ ಮೂಲಕ ರಾಷ್ಟ್ರೋನ್ನತಿಗೂ ದುಡಿಯುವ ಪರಿಸ್ಥಿತಿಯಿಲ್ಲ. ಒಂದು ದೃಷ್ಟಿಯಿಂದ ನೋಡಿದರೆ ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳಿಗಿಂತ ಖಾಸಗಿ ಕ್ಷೇತ್ರದ ಕೈಗಾರಿಕೆಗಳೇ ಸ್ವಲ್ಪ ಮಟ್ಟಿನ ದಕ್ಷತೆಯಿಂದ ಕೆಲಸ ಮಾಡುತ್ತಿವೆ ಎನಿಸಬಹುದು. ಏಕೆಂದರೆ ಖಾಸಗಿ ಕ್ಷೇತ್ರದ ಸಂಸ್ಥೆಗಳ ನಿವ್ವಳ ಆದಾಯ, ಹೂಡಿರುವ ಬಂಡವಾಳದ ಸೇ. ೯ರಿಂದ ೧೨ರಷ್ಟು ಇದೆ. ಆದರೆ ಸರ್ಕಾರಿ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳ ನಿವ್ವಳ ಲಾಭ ಅಷ್ಟಿಲ್ಲ. ಉದಾಹರಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೈಗಾರಿಕಾ ಸಂಸ್ಥೆಗಳಲ್ಲಿ ಹೂಡಿರುವ ಬಂಡವಾಳದ ಮೇಲೆ ಸರ್ಕಾರಕ್ಕೆ ಬರುತ್ತಿರುವ ನಿವ್ವಳ ಲಾಭ ಸೇಕಡಾ ೧ರಷ್ಟೂ ಆಗುವುದಿಲ್ಲ. ಈ ಪರಿಸ್ಥಿತಿಗೆ ಅನೇಕ ಕಾರಣಗಳಿರಬಹುದು. ಲೋಕಸಭೆಯ ಕೆಲವು ಸಮಿತಿಗಳ ವರದಿಗಳಂತೆ ಮತ್ತು ಕೆಲವು ಪರಿಣತರ ಅಭಿಪ್ರಾಯದಂತೆ ಬಹು ಮುಖ್ಯವಾದ ಕಾರಣವೆಂದರೆ ವೈಜ್ಞಾನಿಕ ವೆಚ್ಚನಿರ್ಣಯ ಪದ್ಧತಿ ಅನುಸರಣೆಯ ಅಭಾವ. ಆದ್ದರಿಂದ ಸರ್ಕಾರಿ ಕೈಗಾರಿಕಾ ಸಂಸ್ಥೆಗಳನ್ನೂ ಕಾಯಿದೆಯ ನಿಯಮಗಳ ಚೌಕಟ್ಟಿನೊಳಗೆ ತಂದು ವೆಚ್ಚನಿರ್ಣಯ ಪದ್ಧತಿಯನ್ನು ಅನುಸರಿಸುವುದನ್ನೂ ಮತ್ತು ಅದರ ಲೆಕ್ಕಶೋಧನೆಯನ್ನೂ ಕಡ್ಡಾಯವಾಗಿ ಜಾರಿಗೆ ತಂದರೆ ಸಮಾಜದ ಮತ್ತು ದೇಶದ ಉನ್ನತಿಗೆ ಒಳ್ಳೆಯದು. ಈ ದೃಷ್ಟಿಯಲ್ಲಿ ಈಗಾಗಲೇ ಕಾರ್ಯಾರಂಭವಾಗಿರುವುದು ಒಂದು ಶುಭ ಸೂಚನೆಯೆಂದೇ ಹೇಳಬೇಕು.

ಶಾಸನದ ವಿಧಿಗಳನ್ನು ಜಾರಿಗೆ ತರುವಲ್ಲಿ ಕಂಡುಬರುವ ಕೆಲವು ಮುಖ್ಯವಾದ ನ್ಯೂನತೆಗಳಿವು:

(೧) ಕಾಯಿದೆಯ ಚೌಕಟ್ಟಿನೊಳಗೆ ಹೆಚ್ಚು ಹೆಚ್ಚು ಸಂಸ್ಥೆಗಳನ್ನು ತರುವುದರಲ್ಲಿ ಕಂಡುಬರುತ್ತಿರುವ ಕೇಂದ್ರಸರ್ಕಾರದ ಒಂದು ವಿಧದ ಅಲಕ್ಷ್ಯಭಾವ.

(೨) ಚಾರ್ಟರ್ಡ್ ಅಕೌಂಟೆಂಟರನ್ನು ಲೆಕ್ಕಶೋಧಕರಾಗಿ ನೇಮಿಸುವುದರಿಂದ ಉಂಟಾಗುತ್ತಿರುವ ಅನನುಕೂಲಗಳು. ಕಾಯಿದೆಯ ಪ್ರಕಾರ ಅಂಥವರನ್ನು ನಿಯಮಿಸಬಹುದಾದರೂ ಅವರಲ್ಲಿ ಬಹಳಷ್ಟುಮಂದಿ ವೆಚ್ಚನಿರ್ಣಯ ಪದ್ಧತಿಯಲ್ಲಿ ಪರಿಣತರಾಗಿರುವುದಿಲ್ಲ.

(೩) ಕೆಲವು ಕೈಗಾರಿಕಾ ಸಂಸ್ಥೆಗಳ ಆಡಳಿತ ವರ್ಗದ ನಿರಾಸಕ್ತಿಯೂ ಸ್ವಲ್ಪಮಟ್ಟಿಗೆ ಕಾರಣ. ಕೆಲವು ಸಂಸ್ಥೆಗಳ ಆಡಳಿತ ವರ್ಗಕ್ಕೆ ಬೇರೆ ಕಾರಣಗಳಿಂದ

ಈ ಪದ್ಧತಿಯ ಅನುಸರಣೆ ಜಾರಿಗೆ ತರದಿದ್ದರೇ ಒಳ್ಳೆಯದು ಎಂಬ ಭಾವನೆ ಬೆಳೆದು ಬಂದಿದೆ. ಆದ್ದರಿಂದ ಪದ್ಧತಿ ಜಾರಿಗೆ ತರುವುದರಲ್ಲಿ ಅವರೇ ಕೆಲವು ತೊಡಕುಗಳನ್ನು ತರುವುದುಂಟು.

(೪) ಸಂಸ್ಥೆಗಳು ಸರಿಯಾದ ಲೆಕ್ಕಪತ್ರಗಳನ್ನಿಟ್ಟಿವೆಯೆ ಎಂಬುದನ್ನು ಪರೀಕ್ಷಿಸಲು ಕೇಂದ್ರಸರ್ಕಾರ ನೇಮಿಸಬೇಕಾದ ಅಧಿಕಾರಿ ಮತ್ತು ಸಿಬ್ಬಂದಿವರ್ಗದ ಅಭಾವದಿಂದಾಗಿ ಖಚಿತವಾದ ಲೆಕ್ಕಶೋಧನೆ ಸಾಧ್ಯವಿಲ್ಲವಾಗಿದೆ.

ಈ ನ್ಯೂನತೆಗಳನ್ನು ಪರಿಹರಿಸಿ ಆದಷ್ಟು ಬೇಗ ಎಲ್ಲ ಕೈಗಾರಿಕಾ ಸಂಸ್ಥೆಗಳನ್ನೂ ಈ ಕಾಯಿದೆಯ ಚೌಕಟ್ಟಿನೊಳಗೆ ತರಲು ಕೇಂದ್ರಸರ್ಕಾರ ಕೂಡಲೇ ತೀರ್ಮಾನಿಸಿ ತಕ್ಕ ಆದೇಶ ನೀಡಬೇಕು. ವೈಜ್ಞಾನಿಕ ರೀತಿಯ ವೆಚ್ಚನಿರ್ಣಯ ಪದ್ಧತಿಯನ್ನು ಅನುಸರಿಸುವುದರಿಂದ ಮತ್ತು ಆಗಿಂದಾಗ್ಗೆ ಅದರ ಶೋಧನೆಯಿಂದ ಸಂಸ್ಥೆಯ ಆಡಳಿತ ದಕ್ಷತೆ ಮತ್ತು ಮೇಲ್ಮಟ್ಟದ ಕಾರ್ಯನಿರ್ವಹಣೆಗೆ ಎಷ್ಟು ಅನುಕೂಲವಾಗುತ್ತದೆ ಮತ್ತು ಅದರ ಫಲಿತಾಂಶ ಯಾವ ಯಾವ ರೀತಿಯಲ್ಲಿ ಕಾರ್ಮಿಕರಿಗೆ, ಗ್ರಾಹಕರಿಗೆ, ಸಮಾಜಕ್ಕೆ ಮತ್ತು ಅಂತಿಮವಾಗಿ ರಾಷ್ಟ್ರಕ್ಕೆ ದೊರಕುತ್ತದೆ ಎಂಬುದನ್ನು ಮತ್ತೊಮ್ಮೆ ಒತ್ತಿಹೇಳಬೇಕಾಗಿಲ್ಲ. ಅತಿ ಶೀಘ್ರವಾಗಿ ಮಾಡಬೇಕಾದ ಈ ಕಾರ್ಯವನ್ನು ಪೂರ್ತಿಮಾಡಿದರೆ ಆ ಮೂಲಕ ದೇಶೋನ್ನತಿಗೆ ಎಷ್ಟೋ ರೀತಿಯಲ್ಲಿ ಸಹಾಯವಾಗುವುದರಲ್ಲಿ ಸಂದೇಹವಿಲ್ಲ.

ಟಿ. ವಿ. ಸುಬ್ರಹ್ಮಣ್ಯಂ

ಗ್ರಂಥಾಲಯಶಾಸ್ತ್ರದ ವ್ಯಾಪ್ತಿ

ಲಭ್ಯವಾಗಿರುವ ಜ್ಞಾನವನ್ನು ವಿತರಣೆಮಾಡಲು ವ್ಯವಸ್ಥಿತ ರೀತಿಯಲ್ಲಿ ಪ್ರಯತ್ನಿಸುವುದೇ ಗ್ರಂಥಾಲಯದ ಗುರಿ. ಸಮಾಜದಿಂದ ಮಾನ್ಯವಾದ ಆವಶ್ಯಕತೆಗಳನ್ನು ಪೂರೈಸಲು ಗ್ರಂಥಾಲಯಗಳು ನೆರವಾಗುತ್ತವೆ. ಈ ಆವಶ್ಯಕತೆಗಳು ಗ್ರಂಥಾಲಯದ ವೈವಿಧ್ಯ, ಉದ್ದೇಶ, ಕಾರ್ಯಕ್ಷೇತ್ರ, ಕಾರ್ಯಕ್ರಮ ಹಾಗೂ ಸೇವಾವಿಧಾನಗಳನ್ನು ನಿರ್ಧರಿಸುತ್ತವೆ. ಗ್ರಂಥಾಲಯಗಳ ಅಭಿವೃದ್ಧಿಗೆ ಹಿತಕರವಾದ ಆರ್ಥಿಕ, ತಾಂತ್ರಿಕ, ವೈಜ್ಞಾನಿಕ, ಭೌಗೋಳಿಕ, ಬೌದ್ಧಿಕ ಹಾಗೂ ಸಾಮಾಜಿಕ ವಾತಾವರಣ ಅಗತ್ಯ. ಇಲ್ಲದಿದ್ದರೆ ಗ್ರಂಥಾಲಯ ಕಣ್ಮರೆಯಾಗುತ್ತದೆ. ಸಂಸ್ಕೃತಿಯ ನಾನಾ ಅಂಗಗಳಾದ ಶಿಕ್ಷಣ, ಸಂಶೋಧನೆ, ಕಲೆ, ಸಾಮಾಜಿಕ ಜೀವನ, ಪೌರನೀತಿ, ಮನೋರಂಜನೆ ಇವುಗಳಿಗಾಗಿ ಎಲ್ಲ ರೀತಿಯ ಜ್ಞಾನದ ತುಣುಕುಗಳನ್ನು ಸಂಗ್ರಹಿಸಿ, ವ್ಯವಸ್ಥೆಮಾಡಿ, ಇಂದಿನ ಪೀಳಿಗೆಯವರ ಉಪಯೋಗಕ್ಕೆ ಅನುವುಮಾಡಿಕೊಟ್ಟು, ಮುಂದಿನ ಪೀಳಿಗೆಯವರಿಗಾಗಿ ರಕ್ಷಿಸಿಕೊಂಡುಬರುವ ವಿಧಾನಗಳನ್ನು ರೂಪಿಸುವುದೇ ಗ್ರಂಥಾಲಯಶಾಸ್ತ್ರದ ಗುರಿ.

ಇತಿಹಾಸ

ಮಾನವ ನಾಗರಿಕತೆಯ ವಿಕಾಸದುದ್ದಕ್ಕೂ ಗ್ರಂಥಾಲಯದ ಬೆಳೆವಣಿಗೆ ಸೇರಿದೆ. ಬಹಳ ಹಿಂದೆ ಗ್ರಂಥಾಲಯದಲ್ಲಿ ಅಧಿಕಾರಿಗಳಾಗಿ ಕೆಲಸಮಾಡುತ್ತಿದ್ದವರು—ವಿಮರ್ಶಕರು, ಲೇಖಕರು, ಧರ್ಮಾವಲಂಬಿಗಳು, ಆಸ್ಥಾನಿಕರು—ರಾಜಕೃಪೆಗೆ ಪಾತ್ರರಾಗಲು—ಕೆಲವು ವೇಳೆ ಜೀವನೋಪಾಯಕ್ಕಾಗಿಯೂ—ಆ ವೃತ್ತಿಯನ್ನು ಅವಲಂಬಿಸಿದರು.

ಪ್ರಾಚೀನಕಾಲದಿಂದ ಬರಹರೂಪಗಳು, ಬರಹ ಸಾಧನಗಳು, ಇವುಗಳ ರಕ್ಷಣೆ, ಇವುಗಳನ್ನು ಓದುಗರು ಹೆಚ್ಚು ಉಪಯೋಗಿಸುವಂತೆ ಮಾಡುವುದು—ಮುಂತಾದ ವಿಚಾರಗಳು ಗ್ರಂಥಪಾಲಕರ ಕಾರ್ಯದೊಡನೆ ಅವಿಭಾಜ್ಯವಾಗಿ ಬೆಳೆದಿವೆ.

ಅಸ್ಸಿರಿಯದ ದೊರೆ ಆಸುರ್‌ಬಾನಿಪಾಲ (ಕ್ರಿ.ಪೂ. ೬೬೮ ?-೬೨೬ ?) ೨೦ ಸಾವಿರಕ್ಕೂ ಹೆಚ್ಚು ಜೇಡಿಮಣ್ಣಿನ ಫಲಕಗಳನ್ನು ಸಂಗ್ರಹಿಸಿದ್ದ. ಇವುಗಳನ್ನು

ಇದಕ್ಕಾಗಿಯೇ ನಿರ್ಮಿಸಿದ ರಕ್ಷಾಗೃಹಗಳಲ್ಲಿಟ್ಟಿದ್ದರು. ಇವುಗಳು ಆಗಿನ ಕಾಲದ ತತ್ತ್ವ, ಕಾನೂನು, ಮುಂತಾದ ವಿಚಾರಗಳನ್ನೊಳಗೊಂಡಿದ್ದುವು. ಈ ಫಲಕಗಳನ್ನು ಅವುಗಳ ಆಕಾರಕ್ಕನುಗುಣವಾಗಿ ಅಥವಾ ವಿಷಯದ ಪ್ರಕಾರವಾಗಿ ಜೋಡಿಸಿದಾಗ ಗ್ರಂಥಾಲಯ ವರ್ಗೀಕರಣ ಪದ್ಧತಿ ಆರಂಭವಾಯಿತು. ಫಲಕಗಳನ್ನು ಇಟ್ಟ ಗೂಡಿನ ಮೇಲೆ ಅದರೊಳಗಿರುವ ಫಲಕಗಳು ಯಾವುವು ಎಂಬುದನ್ನು ಬರೆದ ಕಾಲದಿಂದ ಸೂಚೀಕರಣ (ಕ್ಯಾಟಲಾಗಿಂಗ್) ಆರಂಭವಾಯಿತೆನ್ನಬಹುದು.

ಆಗಿನ ಕಾಲದಲ್ಲಿ ಮಠಾಧಿಕಾರಿಗಳು ಮತ್ತು ಉನ್ನತ ಆಡಳಿತಗಾರರಿಗೆ ಮಾತ್ರ ವ್ಯಾಸಂಗ ಲಭ್ಯವಾಗಿತ್ತು. ಅರಮನೆ, ಮಠ, ದೇವಾಲಯಗಳು ವಿದ್ಯಾಕೇಂದ್ರಗಳಾಗಿದ್ದುವು. ಇವುಗಳಿಗೆ ಸೇರಿದಂತೆ ಗ್ರಂಥಗಳ ಸಂಗ್ರಹವಿತ್ತು. ಈ ಗ್ರಂಥಗಳ ವರ್ಗೀಕರಣ ಅವರಿಗೆ ಕಷ್ಟವೆನಿಸದೆ, ದರ್ಶನದಲ್ಲಿ ಅವರು ಕಲಿಯುವ ಜ್ಞಾನದ ವರ್ಗೀಕರಣದ ವಿಭಾಗಗಳನ್ನೇ ಗ್ರಂಥಗಳ ವರ್ಗೀಕರಣಕ್ಕೂ ಅನ್ವಯಿಸಿದ್ದರು.

ಕ್ರಿ.ಪೂ. ೩ನೆಯ ಶತಮಾನದಲ್ಲಿ ಈಜಿಪ್ಟಿನ ಅಲೆಕ್ಸಾಂಡ್ರಿಯದಲ್ಲಿ ಭಾರಿ ಗ್ರಂಥಾಲಯವಿತ್ತು. ಅಲ್ಲಿ ಸುಮಾರು ೭ ಲಕ್ಷ ಗ್ರಂಥಗಳಿದ್ದುವು. ಇದರಲ್ಲಿ ಗ್ರಂಥಪಾಲಕರಾಗಿ ಅಥೆನ್ಸಿನ ಕಡೆಯ ನಿರಂಕುಶಾಧಿಕಾರಿ ಡೆಮೀಟ್ರಿಯಸ್, ಭೂಗೋಳಶಾಸ್ತ್ರಜ್ಞ ಎರಟಾಸ್ಥೆನೀಸ್, ಕವಿ ಹಾಗೂ ವೈಯಾಕರಣಿ ಕಾಲಿಮಾಕಸ್ ಮುಂತಾದವರು ಕೆಲಸಮಾಡಿದರು. ಈ ಪಂಡಿತರು ಗ್ರಂಥಪಾಲಕರಾಗಿ ಕೆಲಸಮಾಡಿದುದು ಏನೋ ಆಕಸ್ಮಿಕದಿಂದ. ಇವರು ಗ್ರಂಥಗಳನ್ನು ಕಲೆಹಾಕಿ, ಸಂಪಾದಿಸಿ, ಭಾಷಾಂತರ ಮಾಡಿದರು. ತಾವೂ ಕೃತಿಗಳನ್ನು ರಚಿಸಿದರು. ಗ್ರಂಥಗಳ ಪ್ರತಿಗಳನ್ನು ತಯಾರಿಸುವುದರಲ್ಲಿ ಮೇಲುಸ್ತುವಾರಿ ನಡೆಸಿದರು. ಸಂಸ್ಕೃತಿಯ ಪರಂಪರೆಯನ್ನು ಕಾಯ್ದುಕೊಂಡು ಬರಲು ಕೃತಿಗಳ ನಾನಾ ಪಾಠಗಳನ್ನು ಸಂಗ್ರಹಿಸಲು ಆರಂಭಿಸಿದರು. ಜ್ಞಾನದ ಅನ್ವೇಷಣೆಯ ಜಾಡನ್ನು ತಿಳಿದು ಅದು ಇತರರಿಗೂ ಲಭ್ಯವಾಗಲೆಂದು ಗ್ರಂಥಾಲಯದ ವ್ಯವಸ್ಥೆಯಲ್ಲಿ ಆಡಳಿತದಲ್ಲಿ ಸುಧಾರಣೆಗಾಗಿ ಶ್ರಮಿಸಿದರು.[1]

ಗ್ರೀಸಿನಲ್ಲಿ ಖಾಸಗಿ ಗ್ರಂಥಾಲಯಗಳು ಹೆಚ್ಚಾಗಿದ್ದುವು. ರೋಮ್ನ ಗ್ರಂಥಪಾಲಕರು ಅಲೆಕ್ಸಾಂಡ್ರಿಯದ ಗ್ರಂಥಾಲಯಗಳಂತೆ ದಕ್ಷರಾಗಿರಲಿಲ್ಲ. ದಕ್ಷಿಣ ಇಟಲಿಯ ವೈವೇರಿಯಂನಲ್ಲಿ ಗ್ರಂಥಪಾಲಕರಾಗಿದ್ದ ಕಾಸಿಯೋಡೋರಸ್ ಪಂಡಿತರ

[1] Winger, Howard W., *Aspects of Librarianship: A Trace Work of History* [In Ennis P. H. & Winger H. W. (Ed.), Seven questions about the profession of Librarianship]; Chicago, University of Chicago Press, 1962, pp. 24–25

ಶ್ರೇಣಿಗೆ ಸೇರಿದವನು. ಆತ ಅನೇಕ ಪ್ರಾಚೀನ ಗ್ರೀಕ್, ಲ್ಯಾಟಿನ್ ಕೃತಿಗಳನ್ನೂ ಕ್ರೈಸ್ತಧರ್ಮದ ಕೃತಿಗಳನ್ನೂ ಜಾಣ್ಮೆಯಿಂದ ರಕ್ಷಿಸಿದ. ಗ್ರಂಥಗಳ ಪ್ರತಿ ತೆಗೆಯುವ ಶಾಖೆಯ ಆಡಳಿತ ಹಾಗೂ ಗ್ರಂಥಾಲಯಗಳನ್ನು ಕುರಿತ ಕೈಪಿಡಿಯನ್ನು ಬರೆದ.

ಭಾರತದಲ್ಲಿ ನಲಂದ ವಿಶ್ವವಿದ್ಯಾನಿಲಯದಲ್ಲಿ ಗ್ರಂಥಾಲಯ ಮೂರು ಕಟ್ಟಡಗಳಲ್ಲಿತ್ತು. ಅವನ್ನು ರತ್ನಸಾಗರ, ರತ್ನೋದಧಿ ಮತ್ತು ರತ್ನರಂಜಕ ಎಂದು ಕರೆಯುತ್ತಿದ್ದರು. ರತ್ನಸಾಗರ ಒಂಬತ್ತು ಮಹಡಿಗಳ ಮಹಲು. ಬೌದ್ಧಧರ್ಮದ ಕೃತಿಗಳಲ್ಲದೆ ವ್ಯಾಕರಣ, ತರ್ಕ, ಸಾಹಿತ್ಯ, ವೇದ, ವೇದಾಂತ, ಸಾಂಖ್ಯದರ್ಶನ, ಧರ್ಮಶಾಸ್ತ್ರ, ಪುರಾಣ, ಖಗೋಳಶಾಸ್ತ್ರ, ಜ್ಯೋತಿಷ್ಯ ಮುಂತಾದ ವಿಷಯಗಳ ಅಧ್ಯಯನ ನಡೆಯುತ್ತಿತ್ತು. ಈ ವಿಶ್ವವಿದ್ಯಾನಿಲಯ ಮುಸ್ಲಿಂ ದಾಳಿಕಾರರಿಂದ ಪೂರ್ಣ ನಾಶವಾದುದರಿಂದ ಗ್ರಂಥಾಲಯದ ವಿವರಗಳು ಒಂದೂ ತಿಳಿದುಬಂದಿಲ್ಲ.[2] ಲಕ್ಷೋಪಲಕ್ಷ ಗ್ರಂಥಗಳು ಸಾವಿರಾರು ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಬೇಕಾಗಿದ್ದುರಿಂದ ಗ್ರಂಥಾಲಯ ಸೇವೆಗೆ ಬೃಹತ್‌ರೀತಿಯ ಆಡಳಿತವಿದ್ದಿರಲೇಬೇಕು.

ಮಧ್ಯಯುಗದ ಗ್ರಂಥಾಲಯಗಳಲ್ಲಿ ಕಾಣುವುದು ಗ್ರಂಥಗಳ ಅಭಾವ. ಗ್ರಂಥಗಳು ಅಪೂರ್ವವಾಗಿದ್ದುದರಿಂದ ಅವುಗಳನ್ನು ಇಟ್ಟ ಸ್ಥಳದಲ್ಲಿಯೇ ಓದಬೇಕಾಗಿತ್ತು. ಅವು ಕಳುವಾಗದಿರಲೆಂದು ಅವನ್ನು ಓದುಮೇಜಿಗೆ (ಲೆಕ್ಟರ್ನ್) ಸರಪಳಿಯಿಂದ ಬಂಧಿಸಿಡುತ್ತಿದ್ದರು.

ಮಧ್ಯಯುಗದ ಕಡೆಯ ಭಾಗದಲ್ಲಿ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಿ ಶಿಕ್ಷಣದ ಮೇಲಿನ ಹತೋಟಿ ಮತ್ತು ಗ್ರಂಥಗಳ ಪ್ರಕಟನೆಗಳು ಧಾರ್ಮಿಕ ಮಠಗಳ ಹಿಡಿತದಿಂದ ಬೇರೆಯಾದವು. ಆದರೂ ಗ್ರಂಥಗಳ ಪ್ರತಿಗಳು ಅಪೂರ್ವವಾಗಿದ್ದು ಅವುಗಳ ಬೆಲೆ ದುಬಾರಿಯಾಗಿತ್ತು.

ಭಾರತದಲ್ಲಿ ಗ್ರಂಥಪಾಲಕನ ಸ್ಥಾನಮಾನಗಳನ್ನು ಪರಿಗಣಿಸಿದುದನ್ನು ನಾಗಾಯಿಯ ಶಾಸನದಿಂದ ತಿಳಿಯಬಹುದು. ೧೦೫೮ರಲ್ಲಿ ಪಶ್ಚಿಮ ಚಾಳುಕ್ಯ ದೊರೆ ತ್ರೈಲೋಕ್ಯಮಲ್ಲ ನಾಗಾಯಿ ವಿದ್ಯಾಕೇಂದ್ರಕ್ಕೆ ದತ್ತಿಯಾಗಿ ಕೊಟ್ಟ ಜಮೀನಿನಲ್ಲಿ ಪ್ರಾಧ್ಯಾಪಕರಿಗೂ ಗ್ರಂಥಪಾಲಕನಿಗೂ ಸಮಾನ ವಿಸ್ತೀರ್ಣದ ಜಮೀನನ್ನು ಹಂಚಬೇಕೆಂದು ನಿರ್ಣಯಿಸಿದ್ದ.[3]

ಮೊಗಲ್ ದೊರೆಗಳು, ಚಕ್ರವರ್ತಿಗಳು ಖಾಸಗಿಯಾಗಿ ಗ್ರಂಥಾಲಯ ಹೊಂದಿದ್ದರು. ಸಂಸ್ಕೃತ ಕಾವ್ಯಗಳು, ಅವುಗಳ ಪರ್ಷಿಯನ್ ಭಾಷಾಂತರಗಳು

[2] Mukherjee A. K., *Librarianship—Its Philosophy and History*, Bombay, Asia, 1966, pp. 83-84

[3] Ranganathan, *Five laws of library science*, 2nd Ed., Bombay, Asia, 1963, pp. 66-67.

ಇವುಗಳನ್ನು ಅಂದವಾದ ಅಕ್ಷರಗಳಲ್ಲಿ ಬರೆದ, ಚಿತ್ರಯುಕ್ತವಾದ ಗ್ರಂಥಗಳಿಗೆ ಬಹಳ ಬೆಲೆಯಿತ್ತು.

ಯುರೋಪಿನಲ್ಲಿ ೧೫ನೆಯ ಶತಮಾನದಿಂದ ಆರಂಭವಾದ ನವೋದಯ ಕಾಲದಲ್ಲಿ ಗ್ರೀಕ್ ಮತ್ತು ಲ್ಯಾಟಿನ್ ಕಾವ್ಯಗಳ ಅಧ್ಯಯನದಲ್ಲಿ ಉತ್ಸಾಹ ಹುಟ್ಟಿ ಗ್ರಂಥಗಳ ಸಂಗ್ರಹ ಆರಂಭವಾಯಿತು. ಸಾಮಾನ್ಯರೂ ಖಾಸಗಿ ಗ್ರಂಥಾಲಯಗಳ ಉಪಯೋಗ ಪಡೆಯಬಹುದೆಂಬ ಮಾನವತಾವಾದ ಆರಂಭವಾಗಿ, ಗ್ರಂಥಾಲಯ ಅಧ್ಯಯನದ ಸ್ವತಂತ್ರಕೇಂದ್ರವಾಯಿತು. ಸಾರ್ವಜನಿಕರ ಆವಶ್ಯಕತೆಗೆ ತಕ್ಕಂತೆ ಸ್ಥಳಾವಕಾಶದ ಯೋಜನೆ, ಓದುವ ಕೊಠಡಿಯಲ್ಲಿ ನಿಂತು ಓದುವ ಮೇಜು, ಗ್ರಂಥಗಳನ್ನು ಇಡಲು ಬೀರುಗಳು ಮುಂತಾದವುಗಳ ವ್ಯವಸ್ಥೆ ಮಾಡಬೇಕಾಯಿತು. ಪಂಡಿತರೂ, ಸಾಹಿತಿಗಳೂ ಗ್ರಂಥಪಾಲಕರಾಗಿ ನೇಮಕವಾದರು.

ಶಿಕ್ಷಣ, ಆಡಳಿತ, ವ್ಯವಹಾರದಲ್ಲಿ ತಾಯ್ನುಡಿಯ ಬಳಕೆ, ಬರಹಸಾಧನವಾಗಿ ಕಾಗದದ ಉಪಯೋಗ, ಮಧ್ಯಮವರ್ಗದ ಜನರ ಸಾಮಾಜಿಕ, ಆರ್ಥಿಕ, ಬೌದ್ಧಿಕಪ್ರಜ್ಞೆ—ಇವು ಗ್ರಂಥಾಲಯಗಳ ಬೆಳವಣಿಗೆಗೆ ಪುಟಗೊಟ್ಟವು.

ಮುದ್ರಣ ಬಳಕೆಗೆ ಬಂದಂತೆ ಪುಸ್ತಕಗಳೂ ಹೆಚ್ಚಿ, ಓದುಗರು ಅಧಿಕವಾಗಿ, ಪುಸ್ತಕಗಳ ವಿಷಯ ವೈವಿಧ್ಯ ಮತ್ತು ಸಂಖ್ಯೆ ಹೆಚ್ಚಿದುವು. ೧೫೬೦ರಲ್ಲಿ ಪುಸ್ತಕ ಸೂಚಿಯ ರಚನೆ ಮತ್ತು ವ್ಯವಸ್ಥೆಗಳನ್ನು ಕುರಿತು ಫ್ಲೋರಿಯನ್ ಟ್ರೆಫ್ಲರ್ ಲೇಖನ ಬರೆದ.

ಹದಿನೇಳನೆಯ ಶತಮಾನವನ್ನು ಆಧುನಿಕಯುಗದ ಆರಂಭಕಾಲವೆನ್ನುತ್ತಾರೆ. ಸಾಹಿತ್ಯ, ಸರಕಾರಿವ್ಯವಸ್ಥೆ, ವ್ಯಾಪಾರ, ಆರ್ಥಿಕವಿಚಾರಗಳು, ಪ್ರಾಯೋಗಿಕ ವಿಜ್ಞಾನ ಇವುಗಳ ಅನ್ವೇಷಣೆ ವಿಸ್ತಾರವಾಯಿತು.

೧೬೨೭ರಲ್ಲಿ ಗೇಬ್ರಿಯಲ್ ನಾಡೆ ಗ್ರಂಥಾಲಯ ಸ್ಥಾಪನೆ ಮತ್ತು ಆಡಳಿತ ಕುರಿತು ನಿಬಂಧ ಬರೆದ. ಆತನ ಹೇಳಿಕೆಯ ಪ್ರಕಾರ (೧) ಗ್ರಂಥಪಾಲಕ ಹಿಂದಿನ ಮತ್ತು ಇಂದಿನ ಎಲ್ಲ ಕೃತಿಗಳನ್ನೂ ಸಂಗ್ರಹಿಸಬೇಕು : (೨) ಕೃತಿಗಳು ಎಲ್ಲರಿಗೂ ಸಿಗುವಂತೆ ವ್ಯವಸ್ಥೆ ಮಾಡಬೇಕು. ಇಲ್ಲಿ 'ಎಲ್ಲರಿಗೂ' ಎಂಬ ಪದಕ್ಕೆ ಮಿತವಾದ ವ್ಯಾಖ್ಯಾನವಿದೆ. ಸಾಹಿತ್ಯಾಭ್ಯಾಸಿಗಳಿಗೆ ಮತ್ತು ಇತರ ವಿದ್ವಾಂಸರಿಗೆ—ಎಂದು ಇದರ ಅರ್ಥ. ನಾಡೆಯ ಅಭಿಪ್ರಾಯದಲ್ಲಿ ಹೆಚ್ಚು ಬೆಲೆಯ ಪ್ರತಿಗಳನ್ನು ಕೊಳ್ಳುವುದಕ್ಕಿಂತ ಕಡಿಮೆ ಬೆಲೆಯ ಹೆಚ್ಚು ಪ್ರತಿಗಳನ್ನು ಕೊಳ್ಳುವುದು ಉಚಿತ. ಪುಸ್ತಕಸೂಚಿಯ ತಯಾರಿಕೆ, ಬೀರುವಿನಲ್ಲಿ ಪುಸ್ತಕಗಳ ತರ್ಕಬದ್ಧವಾದ ಜೋಡಣೆ—ಇವನ್ನೂ ಆತ ಸೂಚಿಸಿದ.[4]

ಗ್ರಂಥಪಾಲಕನಿಗೆ ಎಲ್ಲ ವಿಷಯಗಳಲ್ಲೂ ಪಾಂಡಿತ್ಯವಿರಲು ಸಾಧ್ಯವಿಲ್ಲ.

---

4 Winger, Op. cit., p. 26

ಆದರೆ ಅವುಗಳ ಪರಿಚಯ ಇರುವುದು ಅಗತ್ಯ. ಆತ ಪುಸ್ತಗಳ ಆಯ್ಕೆಯನ್ನು ಬುದ್ಧಿವಂತಿಕೆಯಿಂದ, ನಿರ್ವಿಕಾರ ಮನೋಭಾವದಿಂದ ಮಾಡಬೇಕು. ಆತ ಹಿರಿಯರಿಂದ ಸಲಹೆ ಪಡೆದು, ಗ್ರಂಥಾಲಯದ ಆಡಳಿತ ಮತ್ತು ಇತರ ಗ್ರಂಥಾಲಯಗಳ ಪುಸ್ತಕಸೂಚಿಗಳ ಅಧ್ಯಯನ ಮಾಡಿ ಸಮಾಚಾರಮೂಲಗಳನ್ನು ಅರಿತು ಓದುಗರ ಸೇವೆಯಲ್ಲಿ ಪರಿಣತನಾಗಬೇಕು. ಈ ನಿಬಂಧದಲ್ಲಿ ಆದರ್ಶ ಗ್ರಂಥಪಾಲಕನ ಚಿತ್ರಣವಿದೆ.

ಇಂಗ್ಲೆಂಡಿನ ರಾಯಲ್ ಗ್ರಂಥಾಲಯದ ಅಧಿಕಾರಿಯಾಗಿದ್ದ ಜಾನ್ ಡ್ಯೂರಿ ಸಾಮ್ಯುಯಲ್ ಹಾರ್ಟ್‌ಲಿಬ್‌ಗೆ ಬರೆದ ಪತ್ರದಲ್ಲಿ ಗ್ರಂಥಾಲಯದ ಉದ್ದೇಶ, ಕಾರ್ಯ ಇವುಗಳನ್ನು ಕುರಿತು ಬರೆದಿದ್ದಾನೆ. “ಸಮಾಚಾರದ ಮೂಲಗಳನ್ನು ತಿಳಿದು, ವ್ಯವಸ್ಥೆಮಾಡಿ, ಪಂಡಿತರು ಅವುಗಳ ಉಪಯೋಗ ಪಡೆಯುವಂತೆ ಮಾಡುವುದು” ಗ್ರಂಥಾಲಯದ ಉದ್ದೇಶ. ಇದಕ್ಕಾಗಿ ಪುಸ್ತಕಸೂಚಿಯಲ್ಲಿ ಇತ್ತೀಚಿನ ಮಾಹಿತಿಯನ್ನು ಕೊಡಬೇಕು. ವ್ಯವಸ್ಥಿತ ರೀತಿಯಲ್ಲಿ ಪುಸ್ತಕಗಳನ್ನು ಸಂಗ್ರಹಿಸಬೇಕು. ಹಾಗೂ ಈ ಕಾರ್ಯಗಳಲ್ಲಿ ತಜ್ಞರ ಸಲಹೆ ಪಡೆಯಬೇಕು.

೧೭ನೆಯ ಶತಮಾನದ ಗಣಿತಜ್ಞ ಗಾಟ್‌ಫ್ರೈಡ್ ವಿಲೆಲ್ಮ್ ಲೀಬ್ನಿಜ್ ಹ್ಯಾನೋವರ್ ಮತ್ತು ವುಲ್ಫೆನ್‌ಬುಟೆಲ್ ಗ್ರಂಥಾಲಯಗಳಲ್ಲಿ ಸೇವೆಸಲ್ಲಿಸಿದ. ಪ್ರಚಲಿತ ಕೃತಿಗಳನ್ನು ಸಂಗ್ರಹಿಸುವುದರಲ್ಲಿ ಆಸಕ್ತಿ ವಹಿಸಿ ಗ್ರಂಥಾಲಯದ ಆಡಳಿತದಲ್ಲಿ ಸುಧಾರಣೆ ಸೂಚಿಸಿದ. ಅರ್ಧವರ್ಷಕ್ಕೊಮ್ಮೆ ಕೆಲವು ಆಯ್ದ ಪುಸ್ತಕಗಳ ಪಟ್ಟಿಯನ್ನು ಪ್ರದರ್ಶಿಸಿ, ಕಡೆಗೆ ಸಂಚಿತಗೊಳಿಸಿ ದೀರ್ಘ ಪಟ್ಟಿಯನ್ನು ಪ್ರಕಟಿಸುವ ಆಸೆ ಹೊಂದಿದ್ದ.[5]

ಫ್ರಾನ್ಸಿನ ೧೭೮೯ರ ಕ್ರಾಂತಿಯ ಅನಂತರ ಸರ್ಕಾರ ಚರ್ಚ್ ಗ್ರಂಥಾಲಯಗಳನ್ನೂ ರಾಜಮನೆತನದವರ, ವಿದ್ರೋಹಿಗಳ, ಫ್ರಾನ್ಸಿನ ಶತ್ರುಗಳ ಗ್ರಂಥಾಲಯಗಳನ್ನೂ ಮುಟ್ಟುಗೋಲು ಹಾಕಿಕೊಂಡು, ಅಲ್ಲಿಯ ಪುಸ್ತಕಗಳ ಪ್ರತಿಗಳನ್ನು ರಾಷ್ಟ್ರೀಯ ಗ್ರಂಥಾಲಯಕ್ಕೆ ಸಾಗಿಸಿ, ಒಂದಕ್ಕಿಂತ ಹೆಚ್ಚು ಪ್ರತಿಗಳಿದ್ದ ಪುಸ್ತಕಗಳನ್ನು ಫ್ರಾನ್ಸಿನ ಸಂಶೋಧನ ಗ್ರಂಥಾಲಯಗಳಿಗೆ ಹಂಚಿತು. ಇದರಿಂದ ರಾಷ್ಟ್ರೀಯ ಗ್ರಂಥಾಲಯದ ಯೋಜನೆಯ ತತ್ತ್ವ ಅಂಗೀಕೃತವಾಯಿತು. ರಾಷ್ಟ್ರದಲ್ಲಿ ಪ್ರಕಟವಾದ ಎಲ್ಲ ಪುಸ್ತಕಗಳ ಒಂದೊಂದು ಪ್ರತಿ ಒಂದೆಡೆ ಇರಬೇಕೆಂಬುದೂ ಎಲ್ಲಾ ಜನರಿಗೂ ಗ್ರಂಥಾಲಯದ ಸೇವೆ ದೊರಕಬೇಕೆಂಬುದೂ ಇದರಿಂದ ಸಿದ್ಧವಾದಂತಾಯಿತು.[6]

ಡ್ರೆಸ್ಡೆನ್ ನಗರದಲ್ಲಿ ಗ್ರಂಥಪಾಲಕನಾಗಿದ್ದ ಎಬರ್ಟ್ ಗ್ರಂಥಪಾಲಕರ ತರಬೇತಿಯನ್ನು ಕುರಿತ ಕೈಪಿಡಿಯಲ್ಲಿ ಅವರಿಗೆ ನಾನಾ ಭಾಷೆಗಳು, ಸಾಹಿತ್ಯ

---

[5] Winger, Op. cit., p. 28 Mukherjee, Op. cit., p. 112

ಚರಿತ್ರೆ, ಗ್ರಂಥಸೂಚಿಗಳು ಮತ್ತು ರಾಜತಾಂತ್ರಿಕತತ್ತ್ವ ತಿಳಿದಿರಬೇಕೆಂದು ವಾದಿಸಿದ. ಅವರ ಬರವಣಿಗೆ ಅಂದವಾಗಿರಬೇಕು; ಹರಿದ ಪುಸ್ತಕಗಳನ್ನೂ ಮುರಿದ ಬೀರುಗಳನ್ನೂ ಸರಿಮಾಡುವುದು ಹೇಗೆಂಬುದೂ ತಿಳಿದಿರಬೇಕು ಎಂದೂ ಬರೆದ.

ಬ್ರಿಟಿಷ್ ಮ್ಯೂಸಿಯಂ ಗ್ರಂಥಾಲಯದ ಅಧಿಕಾರಿಯಾಗಿದ್ದ ಆಂಥೊನಿ ಪಾನಿಜಿ ಪುಸ್ತಕ ಸಂಗ್ರಹಣೆ, ಓದಲು ಕೇಂದ್ರಕೊಠಡಿ, ಪುಸ್ತಕದ ಉಗ್ರಾಣ ಇವುಗಳನ್ನು ವ್ಯವಸ್ಥೆಮಾಡಿದುದಲ್ಲದೆ ಪುಸ್ತಕಸೂಚಿಯ ತಯಾರಿಕೆಗೆ ೯೧ ನಿಯಮಗಳನ್ನು ರೂಪಿಸಿದ. ಆತ ಇಟಾಲಿಯನ್ ಆಗಿದ್ದುದರಿಂದ ವೃಥಾ ಆರೋಪಣೆ ಬಂದು ಪಾರ್ಲಿಮೆಂಟ್ ವಿಚಾರಣಾ ಸಮಿತಿಯ ಮುಂದೆ ತನ್ನ ಕೆಲಸವನ್ನು ಸಮರ್ಥಿಸಿಕೊಳ್ಳಬೇಕಾಯಿತು. ಕಡೆಯಲ್ಲಿ ಸಮಿತಿ ಆತನನ್ನು ಆಪಾದನೆಗಳಿಂದ ಮುಕ್ತಮಾಡಿತು.

ಪಾನಿಜಿಯ ಸಹಾಯಕ ಅಧಿಕಾರಿಯಾಗಿದ್ದ ಎಡ್ವರ್ಡ್ ಎಡ್ವರ್ಡ್ಸ್ ಆಗಿನ ಸಾರ್ವಜನಿಕ ಗ್ರಂಥಾಲಯಗಳ ಆಡಳಿತ ಉತ್ತಮವಾಗಬೇಕೆಂದು ಹೋರಾಡಿದ. ಅದರಂತೆ ಸಂಶೋಧನ ಗ್ರಂಥಾಲಯಗಳು ವೃದ್ಧಿಯಾದುವು. ಗ್ರಂಥಾಲಯ ಶಾಸ್ತ್ರವೂ ಸ್ವಯಂ ಪ್ರಜ್ಞೆಯ ಸ್ವಸಂಪೂರ್ಣವೃತ್ತಿ; ಈ ಕೆಲಸವನ್ನು ಎಚ್ಚರಿಕೆಯಿಂದ ನಿರ್ದಿಷ್ಟವಾಗಿ ನಡೆಸಬೇಕು--ಎಂಬ ಅರಿವು ಇದರಿಂದ ಮೂಡಿತು. ಈ ಬೌದ್ಧಿಕ ಕಾರ್ಯದಲ್ಲಿ ವಿಶೇಷ ಪರಿಣತಿ ಅಗತ್ಯ ಎಂಬ ತತ್ತ್ವ ಖಚಿತವಾಯಿತು.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಅಮೆರಿಕದಲ್ಲಿ ಗ್ರಂಥಾಲಯ ಶಾಸ್ತ್ರದ ತೀವ್ರ ಬೆಳೆವಣಿಗೆಗೆ ಸಹಕಾರಿಯಾಗಿ ಶ್ರಮಿಸಿದ ಮಹನೀಯರು ಹಲವರು. ಚಾರ್ಲ್ಸ್ ಕಾಫಿ಼ ಜೊಯೆಟ್ ರಾಷ್ಟ್ರೀಯ ಗ್ರಂಥಾಲಯದ ಯೋಜನೆ ಮತ್ತು ರಾಷ್ಟ್ರೀಯ ಸಂಯುಕ್ತ ಸೂಚಿಯ ತಯಾರಿಕೆಗಳಿಗೆ ತಳಹದಿ ಹಾಕಿದ; ವಿಲಿಯಂ ಫ್ರೆಡರಿಕ್ ಪೂಲ್ ನಿಯತಕಾಲಿಕೆ ಲೇಖನಗಳ ಸೂಚಿಯನ್ನು ಆರಂಭಿಸಿದ; ಮಲ್ವಿಲ್ ಡ್ಯೂಯಿ ದಶಾಂಶ ವರ್ಗೀಕರಣ ಪದ್ಧತಿಯನ್ನು ರೂಪಿಸಿದ; ಚಾರ್ಲ್ಸ್ ಅಮಿಕಟರ್ ವ್ಯಾಪಕ ವರ್ಗೀಕರಣ ಪದ್ಧತಿ ಹಾಗೂ ಅಕಾರಾದಿ ಪುಸ್ತಕಸೂಚಿಯ ನಿಯಮಗಳನ್ನು ರಚಿಸಿದ; ಜಾನ್ ಸ್ಟ್ಯೂಯರ್ಟ್ ಬಿಲಿಂಗ್ಸ್ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ನಾನಾ ವಿಷಯಗಳಲ್ಲಿ ಲೇಖನ ಸೂಚಿಯನ್ನು ಆರಂಭಿಸಿದ. ಇವುಗಳಿಂದ ರಾಷ್ಟ್ರೀಯ ಗ್ರಂಥಾಲಯಗಳು, ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಮತ್ತು ಸಾರ್ವಜನಿಕ ಗ್ರಂಥಾಲಯಗಳು ತೀವ್ರಗತಿಯಲ್ಲಿ ಮುನ್ನಡೆದುವು. ಈಗ ೨೦ ಸೂಚೀಕರಣ ಕಲ್ಪಗಳೂ ೮ ಪುಸ್ತಕ ವರ್ಗೀಕರಣ ವ್ಯವಸ್ಥೆಯೂ ಇವೆ.

ರಾಷ್ಟ್ರೀಯ ಗ್ರಂಥಾಲಯಗಳು ಪುಸ್ತಕ ಸಂಗ್ರಹಣೆಯ ಜೊತೆಗೆ ಅವುಗಳ ವರ್ಗೀಕರಣ, ಅವುಗಳಿಗೆ ಪತ್ರಕಸೂಚಿಗಳನ್ನು ತಯಾರಿಸುವುದು, ಸಂಯುಕ್ತ ಸೂಚಿಗಳ ರಚನೆ ಮತ್ತು ಆಡಳಿತ ಇವನ್ನು ಕುರಿತ ವಿಷಯಗಳಲ್ಲಿ ಸಣ್ಣ ಗ್ರಂಥಾಲಯಗಳಿಗೆ ಬಹಳ ನೆರವು ನೀಡುತ್ತಿವೆ. ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್

ಪುಸ್ತಕಗಳನ್ನು ವರ್ಗೀಕರಿಸಿ ಅವುಗಳಿಗೆ ಸೂಚಿಗಳನ್ನು ಪತ್ರಕರೂಪದಲ್ಲಿ ಮುದ್ರಿಸುತ್ತದೆ. ಇವುಗಳನ್ನು ಸಣ್ಣ ಗ್ರಂಥಾಲಯಗಳು ಕೊಳ್ಳುವುದರಿಂದ ಪುಸ್ತಕಗಳ ವರ್ಗೀಕರಣ ಮತ್ತು ಸೂಚೀಕರಣಗಳಲ್ಲಿ ವ್ಯಯವಾಗುವ ಕಾಲ, ಹಣ ಮತ್ತು ಶ್ರಮ ಉಳಿತಾಯವಾಗುತ್ತವೆ. ಲೈಬ್ರರಿ ಆಫ್ ಕಾಂಗ್ರೆಸ್ ತನ್ನದೇ ಆದ ಪುಸ್ತಕ ವರ್ಗೀಕರಣ ವ್ಯವಸ್ಥೆಯನ್ನು ರೂಪಿಸಿದೆ. ಪುಸ್ತಕಸೂಚಿಯ ಕಲ್ಪವನ್ನು ಪ್ರಕಟಿಸಿದೆ.

ಎಲ್ಲ ವಯಸ್ಸಿನವರ, ಎಲ್ಲ ವರ್ಗಗಳ, ಎಲ್ಲ ಅಭಿರುಚಿಗಳ ಜನರಿಗೆ ಪುಸ್ತಕಗಳನ್ನು ಒದಗಿಸಬೇಕೆಂಬ ಉದ್ದೇಶದಿಂದ ತೆರಿಗೆ ಆಧಾರಿತವಾದ ಸಾರ್ವಜನಿಕ ಗ್ರಂಥಾಲಯಗಳು ಶ್ರಮಿಸುತ್ತಿವೆ. ಅವು ಸಮಾಜದ ಸಾಂಸ್ಕೃತಿಕ ಕೇಂದ್ರಗಳಾದ್ದರಿಂದ ಅವುಗಳ ಚಟುವಟಿಕೆಯಲ್ಲಿ ವೈವಿಧ್ಯ ಹೆಚ್ಚುತ್ತಿದೆ; ಕಾರ್ಯಕ್ಷೇತ್ರ ವಿಸ್ತಾರವಾಗುತ್ತಿದೆ.

ವಿಜ್ಞಾನ ಹಾಗೂ ಅನ್ವಯ ವಿಜ್ಞಾನ, ಕೈಗಾರಿಕೆ, ವ್ಯಾಪಾರ ಸಂಸ್ಥೆಗಳು, ಸರ್ಕಾರಿ ಆಡಳಿತ—ಎಲ್ಲೆಡೆಯಲ್ಲೂ ವ್ಯವಸ್ಥಿತ ಕಾರ್ಯಕ್ಕೆ ಮತ್ತು ಪ್ರಗತಿಗೆ ಗ್ರಂಥಾಲಯವೊಂದು ಅತ್ಯವಶ್ಯ ಅಂಗವೆಂದು ಜನರು ಮನಗಂಡಿರುವುದರಿಂದ ವಿಶಿಷ್ಟ ಗ್ರಂಥಾಲಯಗಳು ವ್ಯಾಪಕವಾಗಿ ಬೆಳೆಯುತ್ತಿವೆ.

ವಿಶ್ವವಿದ್ಯಾನಿಲಯ ಗ್ರಂಥಾಲಯಗಳು, ಇತರ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳು ತಮ್ಮ ವಿದ್ಯಾರ್ಥಿಗಳಿಗೆ ಅವರ ಅಧ್ಯಯನದಲ್ಲಿ ಸಹಾಯ ಮಾಡುವುದರ ಜೊತೆಗೆ ಬೋಧನ, ಸಂಶೋಧನಗಳಲ್ಲೂ ಸಹಭಾಗಿಗಳಾಗಿವೆ.

ಸರ್ಕಾರಿ ಸಚಿವ ಶಾಖೆಗಳು, ವಿಧಾನಸಭೆ ಮತ್ತಿತರ ಅಂಗಗಳು ಗ್ರಂಥಾಲಯಗಳ ನೆರವಿನಿಂದ ತಮ್ಮ ಕಾರ್ಯಗಳನ್ನು ಹೆಚ್ಚು ದಕ್ಷತೆಯಿಂದ ಮಾಡಲು ಶಕ್ತವಾಗಿವೆ.

ವಿಶಿಷ್ಟರೀತಿಯ ಜನರಿಗಾಗಿ ಗ್ರಂಥಾಲಯ ಸೇವೆ ರೂಪುಗೊಳ್ಳುತ್ತಿದೆ. ಮಕ್ಕಳಿಗಾಗಿ, ಅಕ್ಷರಸ್ಥ ವಯಸ್ಕರಿಗೆ, ಆಸ್ಪತ್ರೆಯಲ್ಲಿ ರೋಗದಿಂದ ಗುಣಮುಖರಾಗಿ ಚೇತರಿಸಿಕೊಳ್ಳುತ್ತಿರುವವರಿಗಾಗಿ, ಜೈಲಿನಲ್ಲಿರುವ ಖೈದಿಗಳಿಗಾಗಿ, ಅಂಧರಿಗಾಗಿ, ಮನೋರೋಗಿಗಳಿಗಾಗಿ ವಿಶಿಷ್ಟರೀತಿಯ ಸೇವೆಗಳನ್ನು ಒಳಗೊಂಡಿರುವ ಗ್ರಂಥಾಲಯಗಳು ಸ್ಥಾಪಿತವಾಗುತ್ತಿವೆ.

ಈ ರೀತಿಯ ಒಂದೊಂದು ಗ್ರಂಥಾಲಯಕ್ಕೂ ತನ್ನದೇ ಆದ ವಿಶಿಷ್ಟರೀತಿಯ ಪುಸ್ತಕ ಸಂಗ್ರಹಣೆ, ವರ್ಗೀಕರಣ ವ್ಯವಸ್ಥೆ, ಸೂಚೀಕರಣ, ಪರಾಮರ್ಶನ ಸೇವೆ, ಓದುಗರಿಗೆ ಮಾರ್ಗದರ್ಶನ ಇವುಗಳನ್ನು ಕುರಿತ ಸಮಸ್ಯೆಗಳಿವೆ.

ಸಾರಸಂಗ್ರಹ ಸೂಚಿ

ವಿಜ್ಞಾನ ಹಾಗೂ ಅನ್ವಯ ವಿಜ್ಞಾನದ ಶೀಘ್ರ ಮುನ್ನಡೆ ಗ್ರಂಥಾಲಯ ಸೇವೆಯ ಮೇಲೆ ಪೂರ್ಣ ಪ್ರಭಾವ ಬೀರಿದೆ. ಪುಸ್ತಕಗಳೇ ಜ್ಞಾನ ಮೂಲಗಳಾಗಿದ್ದಾಗ

ಅವುಗಳ ವರ್ಗೀಕರಣ ಸಮಸ್ಯೆ ಬಹು ಕಷ್ಟವೆನಿಸಿರಲಿಲ್ಲ. ನಿಯತಕಾಲಿಕೆ ಲೇಖನಗಳಲ್ಲಿ ವಿಜ್ಞಾನದ ಮುನ್ನಡೆ ಮೊದಲು ತಿಳಿಯಲು ಅನುಕೂಲವೆನಿಸಿದಾಗ, ಅವುಗಳು ಪ್ರಾಮುಖ್ಯ ಹೊಂದಿ ನಿಯತಕಾಲಿಕೆ ಲೇಖನ ಸೂಚಿಗಳು ಬಂದುವು. ಯೂರೋಪಿನ ನಾನಾ ಭಾಷೆಗಳಲ್ಲಿ, ಚೀನೀ ಜಪಾನೀ ಭಾಷೆಗಳಲ್ಲಿ ವಿಜ್ಞಾನದ ಲೇಖನಗಳು ಪ್ರಕಟವಾದಾಗ, ಆ ದೇಶಗಳಲ್ಲಿನ ತಾಂತ್ರಿಕ ಸಂಶೋಧನೆ ಅಮೆರಿಕ ಮತ್ತು ಐರೋಪ್ಯ ರಾಷ್ಟ್ರಗಳ ಸಮಕ್ಕೆ ಬಂದಾಗ, ನಿಯತಕಾಲಿಕೆ ಲೇಖನಗಳ ವಿಷಯವನ್ನು ಅರಿಯುವುದು ಅವಶ್ಯವಾಯಿತು. ಕಳೆದ ಮಹಾಯುದ್ಧದ ಅನಂತರ ಸೋವಿಯತ್ ದೇಶ ಸಾಧಿಸಿದ ಅದ್ಭುತ ವೈಜ್ಞಾನಿಕ ಪ್ರಗತಿಯೂ ಅಂತರಿಕ್ಷಯಾನ, ವೈದ್ಯ, ಮತ್ತಿತರ ವಿಷಯಗಳ ಬೆಳವಣಿಗೆಯೂ ಅಸಾಧಾರಣ. ಆದರಿಂದ ರಷ್ಯನ್ ಭಾಷೆಯ ಅನೇಕ ಮುಖ್ಯ ನಿಯತಕಾಲಿಕೆಗಳ ಲೇಖನಗಳನ್ನು ಪೂರ್ತಿ ಇಂಗ್ಲಿಷಿಗೆ ಭಾಷಾಂತರಮಾಡಿ ವಿಜ್ಞಾನಿಗಳಿಗೆ ಅವನ್ನು ತಿಳಿಸುವ ಭಾಷಾಂತರ ಸಂಸ್ಥೆಗಳು ಹುಟ್ಟಿಕೊಂಡಿವೆ. ಚೀನೀ ಜಪಾನೀ ಭಾಷೆಗಳಿಗೂ ಹಾಗೆಯೇ.

ವಿಜ್ಞಾನದ ಪ್ರಗತಿಯಿಂದ ಒಂದು ವಿಷಯವನ್ನು ಇನ್ನೊಂದರ ಸಂಶೋಧನೆಯಲ್ಲಿ ಸಾಧನವಾಗಿ ಉಪಯೋಗಿಸುವ ನೂತನ ದೃಷ್ಟಿಕೋನ ಬೆಳೆಯುತ್ತಿದೆ. ಜೀವರಸಾಯನಶಾಸ್ತ್ರಕ್ಕೆ ತನ್ನದೇ ಕ್ಷೇತ್ರವಿದ್ದರೂ ಅದು ವೈದ್ಯಶಾಸ್ತ್ರದ ಅಂಗವೂ ಹೌದು. ಅರ್ಥಶಾಸ್ತ್ರದಲ್ಲಿ ಗಣಿತದ ಉಪಯೋಗ ಹೆಚ್ಚುತ್ತಿದೆ. ಯಂತ್ರದ ಮೂಲಕ ಭಾಷಾಂತರವೂ ಗಣಿತಶಾಸ್ತ್ರವನ್ನು ಅವಲಂಬಿಸುತ್ತದೆ. ಭಾಷಾಶಾಸ್ತ್ರವೂ ಅಂತೆಯೇ. ಅನೇಕ ಸಾಮಾಜಿಕ ಸಮಸ್ಯೆಗಳ ವಿಶ್ಲೇಷಣೆಯಲ್ಲಿ ಅಂಕಿ-ಅಂಶಶಾಸ್ತ್ರ ಪ್ರಮುಖ ಅಂಗ. ಹೀಗಾಗಿ ಸಂಶೋಧಕರಿಗೆ ನಾನಾ ವಿಷಯಗಳ ಪರಿಜ್ಞಾನ ಅಗತ್ಯ. ಅವರು ಓದಬೇಕಾದ ನಿಯತಕಾಲಿಕೆ ಲೇಖನಗಳ ಸಂಖ್ಯೆ ಹೆಚ್ಚುತ್ತಿದೆ.

ನಾನಾ ಭಾಷೆಗಳ, ನಾನಾ ನಿಯತಕಾಲಿಕೆಗಳ ಲೇಖನಗಳನ್ನು ಪೂರ್ತಿ ಓದುವುದು ಯಾವ ಸಂಶೋಧಕನಿಗೂ ಸಾಧ್ಯವಿಲ್ಲ. ಈ ಲೇಖನಗಳಲ್ಲದೆ ಅನೇಕ ವೇಳೆ ವ್ಯಾಪಾರೀ ಸಂಸ್ಥೆಗಳು, ಮತ್ತಿತರ ಮೂಲಗಳು ಕಿರುಹೊತ್ತಗೆಗಳನ್ನು ಪ್ರಕಟಿಸುತ್ತವೆ. ಈ ಲೇಖನಗಳ ಸಾರಸಂಗ್ರಹವನ್ನು ಕೊಟ್ಟು ಲೇಖನದ ಮೂಲವನ್ನು (ಅಂದರೆ ಲೇಖಕ, ಲೇಖನ ಪ್ರಕಟವಾಗಿರುವ ನಿಯತಕಾಲಿಕೆಯ ಹೆಸರು, ಸಂಪುಟ, ಸಂಚಿಕೆ, ವರ್ಷ, ತಿಂಗಳು, ಪುಟ ಇವುಗಳನ್ನು) ತಿಳಿಸುವ ಸಾರಸಂಗ್ರಹ ನಿಯತಕಾಲಿಕೆಗಳು (ಅಬ್‌ಸ್ಟ್ರ್ಯಾಕ್ಟ್ಸ್) ಹೆಚ್ಚು ಸಂಖ್ಯೆಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಅರ್ಥಶಾಸ್ತ್ರ, ಚರಿತ್ರೆ, ಭೂಗೋಳ, ಗ್ರಂಥಾಲಯಶಾಸ್ತ್ರ, ಇತ್ಯಾದಿ ವಿಷಯಗಳಲ್ಲಿ ಪ್ರಕಟವಾಗುತ್ತಿವೆ.

ಈಚಿನ ಬೆಳೆವಣಿಗೆಗಳು

ಸಾರಸಂಗ್ರಹ ಸೂಚಿಗಳು ಪ್ರಕಟವಾಗುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕು. ಆಗ ಸಂಶೋಧನ ಗ್ರಂಥಾಲಯಕ್ಕೆ ಬರುವ ನಿಯತಕಾಲಿಕೆ ಲೇಖನಗಳ ಸಾರವನ್ನು ಗ್ರಂಥಪಾಲಕನೇ ಸಂಗ್ರಹಿಸಿ, ವಿಜ್ಞಾನಿಗಳಿಗೆ ಮತ್ತು ತಂತ್ರಜ್ಞರಿಗೆ ತಿಳಿಯಪಡಿಸ ಬೇಕಾಗುತ್ತದೆ. ಅಥವಾ ಅವರಿಗೆ ಬೇಕೆನಿಸಿದಾಗ ನಿರ್ದಿಷ್ಟ ವಿಷಯದಲ್ಲಿ ನಾನಾ ಕಾಲದ ಲೇಖನಗಳ ಸೂಚಿಯನ್ನು ತಯಾರಿಸಬೇಕಾಗುತ್ತದೆ.

ಕೆಲವು ವೇಳೆ ಲೇಖನದ ಯಾವುದೋ ಒಂದು ಭಾಗ ಮಾತ್ರ ಒಂದು ನಿರ್ದಿಷ್ಟ ವಿಷಯಕ್ಕೆ ಪ್ರಮುಖವಾಗಿರುತ್ತದೆ. ಇವುಗಳಷ್ಟನ್ನೇ ಆರಿಸಿ, ವರ್ಗೀಕರಿಸಿ, ಸೂಚಿ ತಯಾರಿಸಿ ಇಡುವುದಕ್ಕೆ ಪ್ರಲೇಖನಕಾರ್ಯ (ಡಾಕ್ಯುಮೆಂಟೇಷನ್) ಎನ್ನುತ್ತಾರೆ. ಇದು ಬಹು ಕಷ್ಟವಾದ ಕೆಲಸ. ಇದರಲ್ಲಿ ಬಹು ಸಮಸ್ಯೆಗಳಿದ್ದು ಅವುಗಳ ಪರಿಹಾರಕ್ಕೆ ಗಣಕಯಂತ್ರದ ನೆರವನ್ನು ಪಡೆಯುವ ಪ್ರಯತ್ನ ನಡೆದಿದೆ.

ನಿಯತಕಾಲಿಕೆ ಲೇಖನಗಳ ಪೂರ್ಣಪಾಠ ಬೇಕಾದಾಗ ಅವುಗಳನ್ನು ಛಾಯಾಪ್ರತಿ, ಮೈಕ್ರೋಫಿಲಂ. ಮೈಕ್ರೋಕಾರ್ಡ್ ಇವುಗಳ ಮೂಲಕ ಪಡೆದು ಅವುಗಳಿಗೆ ವಿಶೇಷ ಓದುಯಂತ್ರಗಳನ್ನು (ಮೈಕ್ರೋ ರೀಡರ್ಸ್) ವ್ಯವಸ್ಥೆ ಮಾಡುವ ಜವಾಬ್ದಾರಿಯೂ ಗ್ರಂಥಪಾಲಕನದೇ. ಈಗಂತೂ ಟೆಲೆಕ್ಸ್, ಟೆಲಿವಿಷನ್ ಹಾಗೂ ಭೂಮಿಯ ಕೃತಕ ಉಪಗ್ರಹಗಳ ಮೂಲಕ ವಿಶ್ವದ ಬೇರೆಡೆ ಇರುವ ಗ್ರಂಥಾಲಯದ ಲ್ಲಿರುವ ನಿಯತಕಾಲಿಕೆಯ ಪೂರ್ಣಪುಟವನ್ನು ಇಲ್ಲಿ ಕುಳಿತು ಓದುವ ಪ್ರಯತ್ನ ಸನ್ನಿಹಿತವಾಗಿದೆ.

ಇವುಗಳಲ್ಲದೆ ಅಪೂರ್ವ ಪುಸ್ತಕಗಳು, ಅವುಗಳ ವಿವರಣೆ, ರಕ್ಷಣೆ, ಪತ್ರಾ ಗಾರಗಳು ಅವುಗಳ ವ್ಯವಸ್ಥೆ ಇವೂ ಗ್ರಂಥಾಲಯದ ವಿಶಿಷ್ಟ ಅಂಗ. ಇಲ್ಲಿಯ ಸಮಸ್ಯೆಗಳು ಬೇರೆ ರೀತಿಯವು.

ಗ್ರಂಥಾಲಯದಲ್ಲಿ ನಡೆಯುವ ಅನೇಕ ಕಾರ್ಯಗಳಾದ ಪುಸ್ತಕ ಸಂಗ್ರಹಣೆ, ವರ್ಗೀಕರಣ, ಸೂಚೀಕರಣ, ಪರಾಮರ್ಶನ ಸೇವೆ, ಪ್ರಲೇಖನ ಸೇವೆ—ಇವುಗಳಲ್ಲಿ ಒಂದೊಂದರಲ್ಲೂ ಪ್ರಾವೀಣ್ಯ ಪಡೆಯಬಹುದು. ವಿಶಿಷ್ಟ ವಿಷಯಗಳ ಗ್ರಂಥಾ ಲಯಗಳ ಆಡಳಿತದಲ್ಲಿ, ಇಲ್ಲವೇ ಗ್ರಂಥಾಲಯಗಳಲ್ಲಿ ಸರ್ಕಾರೀ ಪ್ರಕಟನೆಗಳ ನಿರ್ವಹಣೆ, ನಿಯತಕಾಲಿಕೆಗಳ ವ್ಯವಸ್ಥೆ ಮುಂತಾದ ಶಾಖೆಗಳಲ್ಲಿ ಪ್ರಾವೀಣ್ಯ ಪಡೆಯುವುದು ಈಗಿನ, ಗುರಿಯಾಗಿದೆ. ಕೆಲವು ವೇಳೆ ಈ ಪರಿಣತರು ತಮ್ಮ ಶಾಖೆಯ ಅಧ್ಯಯನವೇ ಇತರ ಶಾಖೆಗಳದಕ್ಕಿಂತ ಮೇಲೆಂದು ಅಂಥಾಭಿಪ್ರಾಯ ಹೊಂದಿರುವುದುಂಟು. ವಿಶಿಷ್ಟ ಶಾಖೆಯಲ್ಲಿ ಪ್ರಾವೀಣ್ಯ ಪಡೆಯುವಾಗ ಗ್ರಂಥಾ ಲಯಶಾಸ್ತ್ರದ ಸಾಮಾನ್ಯ ಗುರಿ ಕಣ್ಮರೆಯಾಗಬಾರದು. ಈ ವಿಶಿಷ್ಟ ವಿಭಾಗಗಳು ಪರಸ್ಪರಾವಲಂಬಿಗಳು.

ಗ್ರಂಥಾಲಯದಲ್ಲಿ ಓದುಗರಿಗೆ ಇಂದಿನ ಉಪಯೋಗಕ್ಕೆ ಹಾಗೂ ಮುಂದಿನ

ಪೀಳಿಗೆಯವರಿಗಾಗಿ ನಾಗರಿಕತೆಯ ದಾಖಲೆಗಳನ್ನು ಸಂಗ್ರಹಿಸಿ, ಸಂರಕ್ಷಿಸಿ, ವ್ಯವಸ್ಥೆಗೊಳಿಸಲು ಗ್ರಂಥಾಲಯದ ಚಾರಿತ್ರಿಕ ಹಿನ್ನೆಲೆ ಹಾಗೂ ಇಂದಿನ ಕರ್ತವ್ಯಗಳ ಅರಿವು ಗ್ರಂಥಪಾಲಕನಿಗೆ ಇರಬೇಕು.

ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಗ್ರಂಥಾಲಯಗಳು ವಹಿಸುವ ಉಪಯುಕ್ತ ಪಾತ್ರವನ್ನು ಅರಿತು, ನಾನಾರೀತಿಯ ಬರಹ ಸಾಧನಗಳ ಗುಣ, ಉದ್ದೇಶ ಮತ್ತು ಅಂತಃಸತ್ವಗಳನ್ನು ತಿಳಿದಿರಬೇಕು.

ಒಂದು ಸನ್ನಿವೇಶದಲ್ಲಿ, ಓದುವ ಸಾಮಗ್ರಿ ಅಗತ್ಯವಿರುವ ಕಾಲದಲ್ಲಿ, ಓದುಗನಿಗೆ ಬೇಕಾಗುವ ಸೇವೆ ಸಲ್ಲಿಸಲು ಯೋಜನೆಯಂತೆ ಕಾರ್ಯ ನಡೆಸಲು ಅದರ ತಂತ್ರವನ್ನು ಮನನಮಾಡಿರುವುದಲ್ಲದೆ, ಅದೇ ಉದ್ದೇಶವುಳ್ಳ ಇತರ ಗ್ರಂಥಾಲಯಗಳೊಡನೆ ನಿಕಟ ಪರಿಚಯ ಹೊಂದಿರಬೇಕು.

ಗ್ರಂಥಾಲಯದ ಕಾರ್ಯ ನಿರ್ವಹಿಸಲು ಅನೇಕ ಸಾಧನಗಳಿವೆ. ಇವುಗಳ ರಚನೆ ತರ್ಕಬದ್ಧವಾದ್ದು, ಕಷ್ಟಕರವಾದ್ದು. ಗ್ರಂಥಾಲಯ ಸಮಸ್ಯೆಗಳನ್ನು ಚರ್ಚಿಸಿ, ಪರಿಹಾರ ತಿಳಿಯಲು ವಾರ್ಷಿಕ ಸಮ್ಮೇಳನಗಳು ಜರುಗುತ್ತಿವೆ. ಗ್ರಂಥಾಲಯಗಳಲ್ಲಿ ಸೇವೆಯ ಸಮೀಕ್ಷೆ, ಓದುಗರ ಅಭಿರುಚಿಯ ಸಮೀಕ್ಷೆ ಮತ್ತು ಇತರ ತಾಂತ್ರಿಕ ವಿಷಯಗಳಲ್ಲಿ ನಿರಂತರ ಸಂಶೋಧನೆ ನಡೆಯುತ್ತಿವೆ. ಭಾರತದಲ್ಲಿ ಗ್ರಂಥಾಲಯಗಳ ಅಭಿವೃದ್ಧಿ, ಗ್ರಂಥಾಲಯಶಾಸ್ತ್ರದ ಅಭಿವೃದ್ಧಿ ಇವು ಕಾಲು ಶತಮಾನದಿಂದೀಚೆಗೆ ಕುದುರುತ್ತಿದೆ. ಈ ದಿಸೆಯಲ್ಲಿ ಡಾ. ಎಸ್. ಆರ್. ರಂಗನಾಥ್ ಗ್ರಂಥಾಲಯಶಾಸ್ತ್ರದ ಎಲ್ಲ ಶಾಖೆಗಳನ್ನು ಕುರಿತು ೪೨ ಪುಸ್ತಕಗಳನ್ನೂ ನೂರಾರು ಲೇಖನಗಳನ್ನೂ ಬರೆದು ಈಗ ರಾಷ್ಟ್ರೀಯ ಸಂಶೋಧನ ಪ್ರಾಧ್ಯಾಪಕರಾಗಿ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಭಾರತದ ರಾಷ್ಟ್ರೀಯ ಗ್ರಂಥಾಲಯ, ದೆಹಲಿಯಲ್ಲಿರುವ ಇನ್ಸ್‌ಡಾಕ್ ಕೇಂದ್ರ ಇವುಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಮೈಸೂರಿನ ಶ್ರೀ ಬಿ. ಎಸ್. ಕೇಶವನ್ ದೆಹಲಿಯಲ್ಲಿ ಫೋರ್ಡ್ ಫೌಂಡೇಷನ್ ನಿರ್ಮಿಸಲಿರುವ ನೂತನ ವಿಶ್ವವಿದ್ಯಾನಿಲಯದ ಯೋಜನೆಯಲ್ಲಿ ಸಲಹೆಗಾರರಾಗಿದ್ದಾರೆ. ಅವರು ಭಾರತ ಸರ್ಕಾರಕ್ಕೆ ಗ್ರಂಥಾಲಯ ಸೇವೆ ವ್ಯವಸ್ಥೆಯಲ್ಲಿ ಗೌರವ ಸಲಹೆಗಾರರು.

ವಿಚಾರ ಸ್ವಾತಂತ್ರ್ಯವನ್ನು ಎತ್ತಿಹಿಡಿಯುವುದರಲ್ಲಿ ಗ್ರಂಥಪಾಲಕರು ಮುಖ್ಯರು. ಗ್ರಂಥಾಲಯಗಳ ನಡುವಣ ಸಹಕಾರ ಅವರ ಮಂತ್ರ. ಪ್ರಸಿದ್ಧ ಗ್ರಂಥಪಾಲಕರು ಸಮಕಾಲೀನ ಪಾಂಡಿತ್ಯ ಸಂಸ್ಕೃತಿಗಳನ್ನು ರೂಪಿಸುವುದರಲ್ಲಿ ನೆರವಾಗಿದ್ದಾರೆ. ಗ್ರಂಥಾಲಯದಲ್ಲಿ ಕೆಲಸಮಾಡುವುದನ್ನು ವಿಶೇಷ ವೃತ್ತಿಯಾಗಿ ಪರಿಗಣಿಸಿ, ಅದಕ್ಕೆ ವ್ಯವಸ್ಥಿತ ಶಿಕ್ಷಣ, ತರಪೇತಿ ಆವಶ್ಯಕವೆಂಬ ವಿಚಾರ ಮನವರಿಕೆಯಾಗಿರುವುದು ಈಗ ಹಲವು ದಶಕಗಳಿಂದ. ಜನಸಂಖ್ಯೆಯ ಹೆಚ್ಚಳ, ತಾಂತ್ರಿಕ ಪ್ರಗತಿ, ಸಂಶೋಧನೆಗಳ ವೇಗ, ಉತ್ತಮ ಜೀವನಮಟ್ಟ—ಇವುಗಳಿಂದ ಹುಟ್ಟುವ

ಸಾಮಾಜಿಕ ಸಮಸ್ಯೆಗಳು ಗ್ರಂಥಾಲಯಕ್ಕೆ ನಿರಂತರ ಸವಾಲುಗಳನ್ನು ಹಾಕುತ್ತಿವೆ. ಇವುಗಳ ಪರಿಹಾರ ಹಾಗೂ ಉತ್ತಮ ಸೇವೆಯೇ ಗ್ರಂಥಾಲಯಗಳ ಉದ್ದೇಶ.

ವರ್ಗೀಕರಣ

ಭಾವನೆಗಳಾಗಲಿ, ವೈಜ್ಞಾನಿಕ ಮಾದರಿಗಳಾಗಲಿ, ಪುಸ್ತಕಗಳಾಗಲಿ—ಇವುಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಬೇಕಾದರೆ ಅವುಗಳ ವ್ಯವಸ್ಥಿತ ಜೋಡಣೆ ಮುಖ್ಯ. ಪುಸ್ತಕಗಳನ್ನು ಜೋಡಿಸುವ ಉತ್ತಮಕ್ರಮ ವಿಷಯಾನುಗುಣ. ಜ್ಞಾನ ವಿಶ್ವವನ್ನು ನಾನಾ ಭಾಗಗಳಾಗಿ ವಿಂಗಡಿಸಿ, ಒಂದೇ ಗುಣವುಳ್ಳ ಭಾಗಗಳು ಒಟ್ಟಿಗೆ ಒಂದೆಡೆ ಬರುವಂತೆ, ವಿಭಿನ್ನ ಗುಣವುಳ್ಳ ವಿಷಯಗಳು ಬೇರೆಯಾಗುವಂತೆ ಈ ಭಾಗಗಳನ್ನು ವ್ಯವಸ್ಥಿತ ಕ್ರಮದಲ್ಲಿ ಜೋಡಿಸುವ ಯತ್ನ ನಡೆದಿದೆ. ಹಿಂದಿನ, ಇಂದಿನ ಮತ್ತು ಸಾಧ್ಯವಾದಷ್ಟು ಮುಂಬರುವ ವಿಷಯಗಳಿಗೆ ಈ ವ್ಯವಸ್ಥೆಯಲ್ಲಿ ಸ್ಥಳವಿರಬೇಕು.

ಈಗಾಗಲೇ ರೂಪಿತವಾಗಿರುವ ಪುಸ್ತಕವರ್ಗೀಕರಣ ಪದ್ಧತಿಗಳ ಪೈಕಿ ಯಾವುದೂ ಪೂರ್ಣ ಯಶಸ್ವಿಯಾಗಿಲ್ಲ. ಪುಸ್ತಕಗಳು ಮಾನವನ ಭಾವನೆಗಳ ಲಿಖಿತ ಪ್ರಕಟನೆ. ಈ ಭಾವನೆಗಳು ತೊಡಕಾದವು. ಒಂದೇ ಪುಸ್ತಕದಲ್ಲಿ ಹಲವಾರು ವಿಷಯಗಳ ನಿರೂಪಣೆ ಇರಬಹುದು. ಒಂದೇ ವಿಷಯವನ್ನು ನಾನಾ ದೃಷ್ಟಿಗಳಿಂದ ನೋಡಬಹುದು. ಪುಸ್ತಕ ಕಿರಿಯರಿಗಾಗಿ, ವಯಸ್ಕರಿಗಾಗಿ, ಪ್ರೌಢರಿಗಾಗಿ ಬರೆದುದಾಗಿರಬಹುದು. ಒಬ್ಬರಿಗೆ ಸರಿತೋರುವ ಜೋಡಣೆ ಮತ್ತೊಬ್ಬರಿಗೆ ಸರಿಹೊಂದದೆ ಇರಬಹುದು.

ಈ ವರ್ಗೀಕರಣವನ್ನು ದರ್ಶನದ ವಿಭಾಗಗಳಂತೆ ಅಥವಾ ಸಾಮಾನ್ಯವಾಗಿ ನಾವು ಸಾಂಪ್ರದಾಯಿಕವಾಗಿ ತಿಳಿದಿರುವಂತೆ ವಿಭಜಿಸಬಹುದು. ಕಾಲಾನುಕ್ರಮವಾಗಿ ಇದುವರೆಗೆ ಬಂದಿರುವ ವರ್ಗೀಕರಣ ಪದ್ಧತಿಗಳು ಎಂಟು. ಇವುಗಳಲ್ಲಿ ಯಾವುದೂ ಪೂರ್ಣವಾಗಿ ತೃಪ್ತಿಕರವಲ್ಲ. ಡ್ಯೂಯಿಯ ದಶಾಂಶ ಪದ್ಧತಿ, ಕಟರನ ವ್ಯಾಪಕ ಪದ್ಧತಿ, ಬ್ರೌನನ ವಿಷಯ ವರ್ಗೀಕರಣ, ಬ್ಲಿಸ್‌ನ ಗ್ರಂಥವರ್ಗೀಕರಣ, ರಂಗನಾಥನ್‌ರವರ ಕೋಲನ್ ವರ್ಗೀಕರಣ, ವಿಶ್ವದಶಮಾನ ಪದ್ಧತಿ, ಅಂತರರಾಷ್ಟ್ರೀಯ ವರ್ಗೀಕರಣ ಇವು ಮುಖ್ಯವಾದವು. ಈಗ ಹಲವು ವಿಶಿಷ್ಟ ವಿಷಯಗಳಿಗೇ ಪ್ರತ್ಯೇಕ ವರ್ಗೀಕರಣ ಪಟ್ಟಿಯನ್ನು ರಚಿಸುವ ಯತ್ನ ನಡೆದಿದೆ. ಈ ಪದ್ಧತಿಗಳಲ್ಲಿ ಉಪಯೋಗಿಸುವ ಸಂಕೇತಗಳು, ವಿಷಯ ಮುಖಗಳ ಸಂಕಲನ ಚಿಹ್ನೆಗಳು ಇವುಗಳನ್ನು ಕುರಿತ ಜಿಜ್ಞಾಸೆ ಇನ್ನೂ ನಡೆದಿದೆ.

ಪುಸ್ತಕಗಳಲ್ಲದೆ ಭೂಪಟಗಳು, ಧ್ವನಿಮುದ್ರಿಕೆಗಳು, ಪಾಶ್ಚಾತ್ಯ ಸಂಗೀತ, ಫಿಲಂಗಳು ಇತ್ಯಾದಿ ವಸ್ತುಗಳನ್ನು ವರ್ಗೀಕರಿಸಲು ವಿಶಿಷ್ಟ ಪದ್ಧತಿಗಳನ್ನು ರೂಪಿಸಿದ್ದಾರೆ. ಭಾರತದ ಡಾ. ರಂಗನಾಥನರ ಕೋಲನ್ ವರ್ಗೀಕರಣ

ತತ್ತ್ವದಿಂದ ಸ್ಫೂರ್ತಿಗೊಂಡು ಕೆಲಸಮಾಡುತ್ತಿರುವ ಗ್ರಂಥಪಾಲಕರ ತಂಡ ಬ್ರಿಟನಿನಲ್ಲಿ "ವರ್ಗೀಕರಣ ಸಂಶೋಧಕರ ತಂಡ" ಎಂಬ ಹೆಸರಿನಿಂದ ಪ್ರಸಿದ್ಧಿಯಾಗಿದೆ.

ಡ್ಯೂಯಿಯ ದಶಾಂಶ ವರ್ಗೀಕರಣದ ಪರಿಷ್ಕಾರಕ್ಕೆ ಮತ್ತು ರಂಗನಾಥನರ ಕೋಲನ್ ವರ್ಗೀಕರಣ ಪರಿಷ್ಕಾರಕ್ಕೆ ಪ್ರತ್ಯೇಕ ಸಮಿತಿಗಳಿವೆ. ಎಲ್ಲ ವಿಷಯ ಗಳಲ್ಲೂ ವಿಶ್ವದಶಮಾನ ಪದ್ಧತಿಯ ವರ್ಗೀಕರಣಪಟ್ಟಿ ನಿಧಾನವಾಗಿ ತಯಾರಾಗು ತ್ತಿದೆ. ಅಮೆರಿಕದ ಲೈಬ್ರರಿ ಆಫ್ ಕಾಂಗ್ರೆಸ್ ಸಂಸ್ಥೆಯ ವರ್ಗೀಕರಣವೂ ಪೂರ್ಣ ವಾಗಿಲ್ಲ. ಇದರಲ್ಲಿ ಬರುವ ನಾನಾ ಸಮಸ್ಯೆಗಳನ್ನು ಚರ್ಚಿಸಲು ಅನೇಕ ನಿಯತ ಕಾಲಿಕೆಗಳಿವೆ, ಸಮ್ಮೇಳನಗಳು ನಡೆಯುತ್ತಿವೆ.

ಪ್ರಲೇಖನ ವರ್ಗೀಕರಣಕ್ಕೆ ಅಂತರರಾಷ್ಟ್ರೀಯ ಸಂಸ್ಥೆ (ಎಫ್ಐಡಿ) ಇದೆ. ಇದರಲ್ಲಿ ಗಣಕಯಂತ್ರದ ಉಪಯೋಗದ ಪ್ರಯತ್ನ ನಡೆದಿದೆ.

ಪುಸ್ತಕಸೂಚಿ

ಗ್ರಂಥಾಲಯದಲ್ಲಿರುವ ಪುಸ್ತಕಗಳು ಯಾವುವು ಎಂಬುದನ್ನು ಸೂಚಿಸಲು ಪುಸ್ತಕ ಸೂಚಿ ಅಗತ್ಯ. ಪುಸ್ತಕವನ್ನು ಗುರುತಿಸಲು ಬೇಕಾಗುವ ಎಲ್ಲಾ ವಿವರಗಳನ್ನೂ ಒಳಗೊಂಡ ಮಾಹಿತಿಯನ್ನು ೧೨.೫ ಸೆಂ.ಮೀ. × ೭.೫ ಸೆಂ.ಮೀ. ಪತ್ರಕಗಳ ಮೇಲೆ ನಮೂದಿಸಿ, ಅವುಗಳನ್ನು ಗೊತ್ತಾದ ರೀತಿಯಲ್ಲಿ ಜೋಡಿಸಿದರೆ ಪುಸ್ತಕ ಸೂಚಿ ಎನಿಸುತ್ತದೆ.

ಪುಸ್ತಕದ ಲೇಖಕನ ಹೆಸರು, ಶೀರ್ಷಿಕೆ, ವಿಷಯ, ಅದು ಯಾವ ಮಾಲೆಗೆ ಸೇರಿದೆಯೆಂಬ ವಿಚಾರ, ಯಾವ ಪ್ರಕಾರ ಎಂಬೀ ಮಾಹಿತಿಗಳಲ್ಲಿ ಯಾವುದಾದ ರೊಂದನ್ನು ತಿಳಿದು ಅದರ ಮೂಲಕ ಪುಸ್ತಕವನ್ನು ಗುರುತಿಸಲು ಪುಸ್ತಕಸೂಚಿ ಸಹಾಯ ಮಾಡುತ್ತದೆ. ಪತ್ರಕದಲ್ಲಿ ಮೊದಲನೆಯ ಸಾಲಿನಲ್ಲಿ ಲೇಖಕರ ಹೆಸರು, ಪುಸ್ತಕದ ವಿಷಯ, ಶೀರ್ಷಿಕೆ, ಯಾವ ಮಾಲೆಗೆ ಸೇರಿದೆಯೆಂಬ ಮಾಹಿತಿ ಮುಂತಾದ ಯಾವ ಅಂಶವನ್ನಾದರೂ ಬರೆದಿರಬಹುದು. ಈ ಎಲ್ಲ ರೀತಿಯ ಮಾಹಿತಿಯ ಪತ್ರಿಕೆಗಳನ್ನೂ ಅಕಾರಾದಿಯಾಗಿ ಒಂದೆಡೆ ಕೂಡಿಸಿಡಬಹುದು. ಆತನಿಗೆ ಹೆಚ್ಚು ಮಾಹಿತಿಯಿರುವ ಪುಸ್ತಕಗಳನ್ನು ನೋಡುವಂತೆ ನಿರ್ದೇಶನಗಳನ್ನೂ ಇದು ಒಳಗೊಂಡಿದ್ದು, ಓದುಗನಿಗೆ ಮಾರ್ಗದರ್ಶನ ನೀಡಬೇಕು.

ಪುಸ್ತಕಸೂಚಿಯನ್ನು ಮುದ್ರಿಸುವುದೂ ಉಂಟು. ಗ್ರಂಥಾಲಯದ ಸಂಗ್ರಹ ಅಪೂರ್ವವಾಗಿದ್ದಾಗ, ವಿಶೇಷ ವಿಷಯಕ್ಕೆ ಮೀಸಲಿಟ್ಟಾಗ ಇದರ ಪ್ರಾಮುಖ್ಯ ಹೆಚ್ಚು.

ಪುಸ್ತಕಸೂಚಿಗಳ ತಯಾರಿಕೆಗೆ—ಅವುಗಳಲ್ಲಿ ಲೇಖಕನ ಹೆಸರನ್ನು ಬರೆ ಯುವ ವಿಧಾನ, ವಿಷಯಶೀರ್ಷಿಕೆ, ಈ ಪತ್ರಕಗಳನ್ನು ಜೋಡಿಸಿಡುವ ವ್ಯವಸ್ಥೆ

ಇವುಗಳನ್ನು ಕುರಿತು — ಸೂಚೀಕಲ್ಪಗಳು ತಯಾರಾಗಿವೆ. ೧೮೫೨ರಲ್ಲಿದ್ದ ಜ್ಯೂಯೆಟ್‌ನಿಂದ ಇದುವರೆಗೆ ೨೨ ಕಲ್ಪಗಳು ರಚಿತವಾಗಿವೆ. ಇವುಗಳಲ್ಲಿ ಕಟರನ ಅಕಾರಾದಿ ಸೂಚೀಕಲ್ಪ, ಅಮೆರಿಕದ ಗ್ರಂಥಾಲಯ ಸಂಘದ ಕಲ್ಪ, ಡಾ. ರಂಗನಾಥನರ ವರ್ಗೀಕೃತ ಸೂಚೀಕಲ್ಪ ಮುಖ್ಯವಾದವು.

ಇವುಗಳಲ್ಲದೆ ಭೂಪಠಗಳಿಗೆ, ಅಪೂರ್ವ ಪುಸ್ತಕಗಳಿಗೆ, ಫಿಲಂಗಳಿಗೆ, ಸಂಗೀತ ಪುಸ್ತಕಗಳಿಗೆ, ಟೇಪ್ ರಿಕಾರ್ಡುಗಳಿಗೆ, ಚಿತ್ರಗಳಿಗೆ ಪ್ರತ್ಯೇಕ ರೀತಿಯ ಸೂಚೀಕಲ್ಪಗಳನ್ನು ಆಯಾ ವಸ್ತುಗಳ ವಿಶಿಷ್ಟ ಸಂಗ್ರಹಗಳಿರುವ ಗ್ರಂಥಾಲಯದವರು ರೂಪಿಸಿದ್ದಾರೆ.

೧೯೬೧ರಲ್ಲಿ ಪ್ಯಾರಿಸಿನಲ್ಲಿ ನಡೆದ ಪುಸ್ತಕಸೂಚೀ ತತ್ತ್ವಗಳ ಸಮ್ಮೇಳನದಲ್ಲಿ ಪುಸ್ತಕಸೂಚಿಯ ಮೂಲತತ್ತ್ವಗಳನ್ನು ನಿರ್ಧರಿಸಲಾಗಿದೆ.

ನಾನಾ ಗ್ರಂಥಾಲಯಗಳಿಗೆ ಸೇರಿದಂತೆ ಒಂದು ಕೇಂದ್ರದಲ್ಲಿ ಸೂಚೀಕರಣ ಕಾರ್ಯ ನಡೆಸಿ, ಪತ್ರಕಗಳನ್ನು ಮುದ್ರಿಸಿ, ಇತರ ಸಣ್ಣ ಗ್ರಂಥಾಲಯಗಳಿಗೆ ಹಂಚುವ ಯತ್ನ ನಡೆದಿದೆ.

ಸೂಚೀಕಲ್ಪಗಳ ತುಲನೆ, ಅವುಗಳಲ್ಲಿರುವ ನಿಯಮಗಳ ಚರ್ಚೆ ಸಾಗಿವೆ.

ಕಟ್ಟಡ ವಿನ್ಯಾಸ

ಗ್ರಂಥಾಲಯ ಕಟ್ಟಡದ ವಿನ್ಯಾಸವೂ ವಿಶೇಷ ಅಧ್ಯಯನದ ವಿಷಯವಾಗಿದೆ. ಪುಸ್ತಕಗಳೂ, ಓದುಗರೂ ಕಡಿಮೆ ಸಂಖ್ಯೆಯಲ್ಲಿದ್ದಾಗ ಗ್ರಂಥಾಲಯ ಕಟ್ಟಡದ ಸಮಸ್ಯೆಗಳು ಇರಲಿಲ್ಲ. ಮಧ್ಯಯುಗದ ಗ್ರಂಥಾಲಯಗಳಂತೆ ಗೋಡೆಯ ಬದಿಗೆ ಇಟ್ಟ ಬೀರುಗಳಲ್ಲಿ ಅಥವಾ ಬಡುಗಳಲ್ಲಿ ಇಡುವ ಕಾಲ ಇದಲ್ಲ. ಎತ್ತರದ ಮೇಲ್ಚಾವಣಿ ಇರುವ ಕೊಠಡಿಗಳನ್ನು ಕಟ್ಟಿ, ಅದರ ಎತ್ತರಕ್ಕೂ ಬೀರುಗಳನ್ನು ನಿರ್ಮಿಸಿ, ಏಣಿಯ ಮೇಲೆ ಹತ್ತಿ ಪುಸ್ತಕ ಹುಡುಕಲು ಎಲ್ಲರಿಗೂ ಸಾಧ್ಯವಿಲ್ಲ. ಪುಸ್ತಕವನ್ನಿಡುವ ಸ್ಥಳ ಓದುವ ಜಾಗದಿಂದ ಬೇರೆ ಇರಬೇಕು. ತಾಂತ್ರಿಕ ಸಿಬ್ಬಂದಿ ಕೆಲಸಮಾಡುವ ಸ್ಥಳ ಪುಸ್ತಕವನ್ನಿಡುವ ಸ್ಥಳಕ್ಕೆ ಹತ್ತಿರವಿರಬೇಕು. ಅಸಂಖ್ಯಾತವಾಗಿ ಬೆಳೆಯುತ್ತಿರುವ ಪುಸ್ತಕಗಳ ಸಂಗ್ರಹಣೆ, ಓದುಗರಿಗೆ ಕ್ಷಿಪ್ರಸೇವೆ, ಶಬ್ದನಿರೋಧ ಮತ್ತು ನಾನಾ ಶಾಖೆಗಳ ಉಸ್ತುವಾರಿ ಮುಖ್ಯ. ಇವುಗಳಲ್ಲದೆ ಅಪೂರ್ವ ಪುಸ್ತಕಗಳನ್ನಿಡಲು ಪ್ರತ್ಯೇಕ ಕೊಠಡಿ, ಸಂಗೀತವನ್ನು ಕೇಳಲೂ ಪರಭಾಷೆಯನ್ನು ಕಲಿಯಲೂ ಆಧುನಿಕ ಸೌಕರ್ಯಗಳು, ಫಿಲಂ ಪ್ರದರ್ಶನಕ್ಕೂ ವಿಚಾರಸಂಕಿರಣಕ್ಕೂ ಕೊಠಡಿಗಳು, ಪುಸ್ತಕ ಪ್ರದರ್ಶನ ಭವನಗಳು, ಬೋಧಕರಿಗೂ ಸಂಶೋಧಕರಿಗೂ ಅಧ್ಯಯನ ಕಿರುಕೊಠಡಿಗಳು, ಸಾರ್ವಜನಿಕ ಗ್ರಂಥಾಲಯಗಳಿಗೂ ಮಕ್ಕಳಿಗೂ ಹೆಂಗಸರಿಗೂ ಪ್ರತ್ಯೇಕ ಸ್ಥಳ, ವಿಶಿಷ್ಟ ವಸ್ತುಗಳನ್ನೂ ನಕ್ಷೆ ಭೂಪಠ ಫಿಲಂ ಧ್ವನಿ ಮುದ್ರಿಕೆಗಳನ್ನೂ ಇಡಲು ಬೇರೆ ಕೊಠಡಿಗಳು — ಇವಕ್ಕೆಲ್ಲ ಸ್ಥಳಾವಕಾಶವಿರಬೇಕು.

ಈ ಕೆಲವು ಸೌಕರ್ಯಗಳು ಅತಿ ಎಂದು ನಮಗೆ ಭಾರತದಲ್ಲಿ ಈಗ ತೋರಿದರೂ ನಾವು ಮುಂದೆ ೨೦–೨೫ ವರ್ಷಗಳಲ್ಲಿ ಗ್ರಂಥಾಲಯ ಬೆಳವಣಿಗೆಯನ್ನು ಕುರಿತು ಯೋಚಿಸಿ, ಸರಿಯಾದ ಯೋಜನೆ ತಯಾರಿಸಬೇಕು.

ಕಟ್ಟಡದ ಹೊರಗಿನ ನೋಟದ ವಿನ್ಯಾಸ ವಾಸ್ತುಶಿಲ್ಪಿಗಳ ಕೆಲಸ. ಕಟ್ಟಡ ನಕ್ಷೆಯ ಕರಡುಪ್ರತಿಯನ್ನೂ ಗ್ರಂಥಾಲಯದ ಆವಶ್ಯಕತೆ ಮತ್ತು ಅನುಕೂಲ ಗಳನ್ನೂ ಕುರಿತು ಯೋಚಿಸಬೇಕಾದವನು ಗ್ರಂಥಪಾಲಕನೇ, ಮುಂದಿನದು ಎಂಜಿನಿಯರನ ಕೆಲಸ.

ಕಟ್ಟಡದ ಯೋಜನೆಯ ಜೊತೆಯಲ್ಲೇ ಪುಸ್ತಕವನ್ನಿಡುವ ಕಪಾಟುಗಳು, ಓದುವ ಕೊಠಡಿಯಲ್ಲಿ ಪೀಠೋಪಕರಣಗಳು, ದೀಪ, ಕುಡಿಯುವ ನೀರಿನ ವ್ಯವಸ್ಥೆ, ಮಹಡಿಗಳನ್ನು ಹತ್ತಲು ಲಿಫ್ಟ್‌ಗಳು, ಟೆಲಿಫೋನ್ ಸೌಕರ್ಯ, ಗ್ರಂಥಾಲಯದಲ್ಲಿ ಪುಸ್ತಕಗಳ ಸಾಗಾಣಿಕೆ, ಓದುಗರ ಓಡಾಟ, ಸಿಬ್ಬಂದಿಯ ಚಟುವಟಿಕೆ ಮುಂತಾದ ವನ್ನೂ ಮುಂದಾಗಿಯೇ ಯೋಚಿಸಿ ನಿರ್ಧರಿಸಬೇಕಾಗುತ್ತದೆ. ಪುಸ್ತಕದ ಕಪಾಟು ಗಳ ಉದ್ದ, ಅಗಲ, ಎತ್ತರ, ಸಾಲುಗಳ ಮಧ್ಯೆ ಓಡಾಡಲು ಜಾಗ—ಇವುಗಳನ್ನು ಅಧ್ಯಯನಮಾಡಿ ನಿರ್ಧರಿಸಿದ್ದಾರೆ. ಗ್ರಂಥಾಲಯವನ್ನು ಸ್ಥಾಪಿಸಲು ನಿವೇಶನದ ಆಯ್ಕೆ, ಕಟ್ಟಡದ ವಿನ್ಯಾಸ, ಪೀಠೋಪಕರಣಗಳು ಇವು ಗ್ರಂಥಾಲಯಶಾಸ್ತ್ರದ ವಿಶೇಷ ಅಂಗಗಳಾಗಿವೆ.

ಪರಸ್ಪರ ಸಹಕಾರ

ಗ್ರಂಥಾಲಯಗಳ ನಡುವೆ ನಾನಾ ರೀತಿಯ ಸಹಕಾರ ಅಗತ್ಯ. ಪುಸ್ತಕಗಳ ಸಂಗ್ರಹಣೆ, ವರ್ಗೀಕರಣ, ಸೂಚೀಕರಣ, ಪರಾಮರ್ಶನ ಸೇವೆ, ಹೆಚ್ಚಾಗಿ ಉಪಯೋಗಿಸದ ಪುಸ್ತಕಗಳನ್ನು ಪ್ರತ್ಯೇಕ ಕಟ್ಟಡಗಳಲ್ಲಿಟ್ಟು ಓದುಗರಿಗೆ ಬೇಕೆನಿಸಿ ದಾಗ ಅವನ್ನು ತರಿಸಿಕೊಡುವುದು, ಪುಸ್ತಕಪ್ರದರ್ಶನ, ವಿಚಾರಸಂಕಿರಣ—ಈ ವಿಚಾರಗಳಲ್ಲಿ ಇವು ಪರಸ್ಪರವಾಗಿ ಅನೇಕ ರೀತಿಯಲ್ಲಿ ಸಹಕರಿಸಬೇಕು. ಇದೂ ಒಂದು ವಿಶೇಷ ಅಧ್ಯಯನ ಶಾಖೆ.

ಜಿ. ಆರ್. ರಂಗಸ್ವಾಮಯ್ಯ

ಅಯ್ಯಾವೊಳೆಯ ಐನೂರ್ವರು

ಪ್ರಾಚೀನ ಮತ್ತು ಮಧ್ಯಯುಗಗಳಲ್ಲಿ ಭಾರತದಲ್ಲಿ ವೃತ್ತಿಸಂಘಗಳು ಪ್ರಭಾವಯುತ ವಾಗಿ ಕಾರ್ಯನಿರ್ವಹಿಸುತ್ತಿದ್ದುವು. ಅವುಗಳ ಸ್ವರೂಪ, ಆಡಳಿತ, ನೀತಿ, ಕಾರ್ಯದಕ್ಷತೆ ಮೊದಲಾದ ವಿವರಗಳು ವಿವಿಧ ರಾಜವಂಶಗಳ ಕಾಲದ ಶಾಸನಗಳಿಂದ ವೇದ್ಯವಾಗುತ್ತವೆ. ಕನ್ನಡ ನಾಡಿನಲ್ಲೂ ವೃತ್ತಿಸಂಘಗಳು ಸ್ಥಾಪಿತ ವಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದುವು. ಶ್ರೀ ಮದಯ್ಯಾ ವೊಳೆಯೈ ನೂರ್ಬರಂ ಅಂತಹ ಸಂಸ್ಥೆಗಳಲ್ಲೊಂದಾಗಿತ್ತು. ಇದು ವ್ಯಾಪಕವಾದ ವಾಣಿಜ್ಯ ಸಂಸ್ಥೆ. ಈ ಸಂಘ ಸ್ಥಾಪಿತವಾದ ಕಾಲ, ಇದರ ರಚನೆ, ಆಡಳಿತ ಮತ್ತು ನಿಯಮ ಇವುಗಳಿಗೆ ಸಂಬಂಧಿಸಿದಂತೆ ಹೆಚ್ಚು ವಿವರಗಳು ದೊರೆತಿಲ್ಲ. ಅಯ್ಯಾ ವೊಳೆ (ಐಹೊಳೆ) ಬಾದಾಮಿ ಚಾಳುಕ್ಯರ ಕಾಲದಲ್ಲಿ ಪ್ರಸಿದ್ಧವಾದ ಧಾರ್ಮಿಕ ಹಾಗೂ ವಾಣಿಜ್ಯ ಕೇಂದ್ರವಾಗಿತ್ತು. ಚಾಳುಕ್ಯರ ಕಾಲದಲ್ಲಿ ಜೈನ್ಯ ವ್ಯಾಪಾರಿಗಳು ಈ ಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದವರು. ಕಾಲಕ್ರಮೇಣ ಜೈನಮತ ಕ್ಷೀಣಿಸಿದಾಗ ಅವರು ವೈಷ್ಣವ, ಶೈವ ಮತ್ತು ವೀರಶೈವ ಧರ್ಮಾನುಯಾಯಿಗಳಾದರೆಂದೂ ತಿಳಿದು ಬರುತ್ತದೆ.[1]

ಕ್ರಿ.ಶ. ೧೧ನೆಯ ಮತ್ತು ೧೨ನೆಯ ಶತಮಾನಗಳ ಅನೇಕ ಶಾಸನಗಳಲ್ಲಿ ಈ ಸಂಘದ ಸದಸ್ಯರನ್ನು ಕುರಿತ ವಿವರಣೆಗಳು ದೊರೆಯುತ್ತವೆ. ಈ ವ್ಯಾಪಾರಿ ಸಂಸ್ಥೆ ಕನ್ನಡನಾಡಿಗೆ ಸೀಮಿತವಾಗಿರಲಿಲ್ಲ. ಕೇರಳದ[2] ವ್ಯಾಪಾರಿಗಳೂ, ತಮಿಳು ನಾಡಿನ ವರ್ತಕರೂ[3] ಈ ಸಂಸ್ಥೆಯ ಸದಸ್ಯತ್ವ ಹೊಂದಿದ್ದರು. ಅವರಲ್ಲಿ ಕೆಲವರು ಹಾಸನ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ನೆಲಸಿದ್ದರು. ಅಯ್ಯಾ ವೊಳೆಯ ಐನೂರ್ವರು ಸಂಘಕ್ಕೆ ನಾನಾದೇಶಿಗಳು[3] ಎಂಬ ಹೆಸರೂ ರೂಢಿ

[1] *Half-yearly Journal of the University of Mysore*, Vol. II No : 2, p. 220, 1928

[2] Ec. V Ak. 108

[3] Ec. X Kl. 131

ಯಲ್ಲಿತ್ತು. ಈ ಸಂಘದ ಸದಸ್ಯರ ಸಂಖ್ಯೆ ಪ್ರಾರಂಭದಲ್ಲಿ ಐನೂರು ಇದ್ದಿರಬೇಕು. ಕ್ರಮೇಣ ಅದು ಅಭಿವೃದ್ಧಿಯಾದಂತೆಲ್ಲಾ ಅದರ ಸದಸ್ಯರ ಸಂಖ್ಯೆಯೂ ವೃದ್ಧಿಯಾಯಿತು.

ಕ್ರಿ.ಶ. ೧೨ನೆಯ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿರುವ ಬಳ್ಳಿಗಾವೆ ಈ ಸಂಘದ ಕೇಂದ್ರವಾಗಿತ್ತು. ಬಳ್ಳಿಗಾವೆ ಆ ಕಾಲದಲ್ಲಿ ಪಂಚಮಠಗಳಿಂದ ಕೂಡಿದ ಧಾರ್ಮಿಕ ಕೇಂದ್ರ[4]ವಾಗಿದ್ದುದಲ್ಲದೆ ವ್ಯಾಪಾರ ಕೇಂದ್ರವೂ ಆಗಿತ್ತು. ಅಲ್ಲಿ ದೊರೆತಿರುವ ಕ್ರಿ.ಶ. ೧೧೫೦ ರ ಶಾಸನವೊಂದರಲ್ಲಿ[5] ಅಯ್ಯಾವೊಳೆಯ ಐನೂರ್ವರಿಗೆ ಸಂಬಂಧಿಸಿದ ಹೆಚ್ಚು ಮಾಹಿತಿ ದೊರೆಯುತ್ತದೆ. ಆ ಸಮಯದಲ್ಲಿ ಮೇಚಿಸೆಟ್ಟಿ ಎಂಬವನು ಈ ಸಂಸ್ಥೆಯ ಅಧ್ಯಕ್ಷನೂ ಕೀರ್ತಿಸೆಟ್ಟಿ ಉಪಾಧ್ಯಕ್ಷನೂ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಆಗ ಸೇರಿದ್ದ ಸಭೆಯಲ್ಲಿ ಬಳ್ಳಿಗಾವೆಯ ಗವರೇಶ್ವರ ದೇವಾಲಯದ ಜೀರ್ಣೋದ್ಧಾರ ಕಾರ್ಯ ಕೈಗೊಂಡು ಆ ದೇವಾಲಯದ ಉತ್ತರೋತ್ತರಾಭಿವೃದ್ಧಿಗಾಗಿ ಸ್ಥಳೀಯ ಮತ್ತು ನಾನಾ ದೇಶೀಯ ವರ್ತಕರು ತಮ್ಮ ಲಾಭದ ಒಂದಂಶವನ್ನು ಕಾಣಿಕೆಯ ರೂಪದಲ್ಲಿ ಕೊಡಲು ತೀರ್ಮಾನಿಸಿದರು. ಮಿಗಿಲಾಗಿ ಅಪುತ್ರಕರಾಗಿ ಗತಿಸಿದ ಬಣಂಜರ ಆಸ್ತಿ ಗವರೇಶ್ವರ ಮತ್ತು ನಖರೇಶ್ವರ ದೇವಾಲಯಗಳಿಗೆ ಸೇರತಕ್ಕದ್ದೆಂದೂ ತೀರ್ಮಾನಿಸಿದರು.

ಮೇಲ್ಕಂಡ ಶಾಸನದಲ್ಲಿ ಅಯ್ಯಾವೊಳೆಯೈನೂರ್ವರ ಸಂಘದ ಪಂಗಡಗಳ ವಿವರಣೆಯಿದೆ. “ಎಂಟುನಾಡ ಪದಿನರ್ವರುಂ ಗವರೆಗಳು ಗಾತ್ರಿಗರು ಸೆಟ್ಟಿಯರುಂ ಸೆಟ್ಟಿಗುತ್ತರುಂ ಅಂಕಾಕಾರರುಂ ಬೀರರುಂ ಬೀರವಣಿಗರುಂ ಗಂದಿಗರುಂ ಗಾವುಂಡರುಂ ಗಾವುಂಡಸ್ವಾಮಿಗಳು ಇಂತೆಲ್ಲರುಂ” ಈ ಸಂಘದ ಸದಸ್ಯಮುಖ್ಯರು. ಇವರು ಸದ್ಧರ್ಮಿಗಳೂ ನೀತಿಚತುರರೂ ಧರ್ಮಾರ್ಥಕಾಮ ಸೂಕ್ಷ್ಮ ಮತಿಯುಳ್ಳವರೂ ಆಗಿದ್ದರು. “ಚತುಸ್ಸಮಯ ಷಡುದರ್ಶನ ವಿಶಿಷ್ಟ ವಿಧಗ್ಧ ಪಂಡಿತರುಮುಂ.... ನಿರ್ಮಳ ತೇಜರುಂ ತೇಜ ತೇಜೋತ್ತುಂಗರುಂ ಸತ್ಯದಲು ಗಾಂಗೇಯರುಂ ಛಲದೊಳು ದುರ್ಯೋಧನರುಂ ದೊರ್ವಲದೊಲು ಭೀಮಸೇನನರುಂ ಬೃಹಸ್ಪತಿಯಂತೆ ಬುದ್ಧಿವಂತರುಂ ನಾರಾಯಣನಂತುಪಾಯಕರ್ತರೂ” ಆಗಿದ್ದರೆಂಬುದು ಅವರ ಧರ್ಮಸಮನ್ವಯತೆ, ಪಾಂಡಿತ್ಯ, ಶೀಲ, ಶ್ರದ್ಧೆ, ಧೈರ್ಯಹಾಗೂ ಕಾರ್ಯ ಚತುರತೆಯನ್ನು ತೋರಿಸುತ್ತದೆ. ಅಲ್ಲದೆ ಅವರು “ವೀರಬಣಂಜ ಧರ್ಮ ಪ್ರತಿಪಾಳರು, ಭಗವತೀ ಲಬ್ಧವರ ಪ್ರಸಾದರು, ಬ್ರಹ್ಮ ವಿಷ್ಣು ಮಹೇಶ್ವರ ಪಾದಾರಾಧಕರು” ಎಂಬುದಾಗಿಯೂ ಕರೆದುಕೊಂಡಿದ್ದಾರೆ.

---

[4] Ec. XII Pg. 50

[5] Q.J.M.S. 1917 ಪು. 174

[6] Ec. VII Sk. 118

ಐಯ್ಯಾವೊಳೆಯೈನೂರ್ವರು ಸಂಘದ ವರ್ತಕರ ಕಾರ್ಯಕ್ಷೇತ್ರದ ವಿವರಣೆಯೂ ಮೇಲ್ಕಂಡ ಶಾಸನದಲ್ಲಿ ಲಭ್ಯವಾಗಿದೆ. ಈ ವರ್ತಕರು ಭಾರತದ ನಾನಾ ಭಾಗಗಳಲ್ಲಲ್ಲದೆ ಏಷ್ಯಾ ಖಂಡದ ಇತರ ದೇಶಗಳಿಗೂ ವ್ಯಾಪಾರಕ್ಕಾಗಿ ಹೋಗಿಬರುತ್ತಿದ್ದರು. ಆ ಕಾಲದಲ್ಲಿ ಕನ್ನಡನಾಡಿನ ವಣಿಕರು ಸಂಚರಿಸುತ್ತಿದ್ದ ದೇಶಗಳನ್ನು ನೆನೆದಾಗ ಅವರ ಧೈರ್ಯ ಸಾಹಸಗಳು ಮೆಚ್ಚತಕ್ಕವಾದವಲ್ಲದೆ ಆಧುನಿಕ ಕಾಲದಲ್ಲೂ ಸ್ಫೂರ್ತಿದಾಯಕವಾಗಿವೆ. ಅವರು "ಹಸುಂಬೆ"ಯೊಳ ಮೂಲ್ಯವಸ್ತುಗಳನ್ನು ತುಂಬಿಕೊಂಡು, "ಚೇರ ಚೋಳ ಮಲಯ ಮಗಧ ಕೌಶಲ (ಕೋಸಲ) ಸೌರಾಷ್ಟ್ರ ಧನುಷ್ಟ್ರಕುರು ಕಾಂಭೋಜ ಗೌಳಲಾಳ ಪಾರಸ (ಪರ್ಷಿಯ) ನೇಪಾಳ ಮೆಂಬ ನಾನಾ ದೇಶಗಳೊಳುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖ ಸಂವಾಹನವೆಂಬ ದಿಗುದಂತಿ ಪಟ್ಟಣಗಳಂ" ಸಂಚರಿಸಿ ಬರುತ್ತಿದ್ದರು. ಭೌಗೋಳಿಕ ಅಂತರ ಮತ್ತು ಆಕಾಲದಲ್ಲಿ ಸಂಚಾರಕ್ಕೆ ಹಾಗೂ ಸಾಗಾಣಿಕೆಗಿದ್ದ ಅಡೆ ತಡೆಗಳನ್ನು ಗಮನಿಸಿದಾಗ ಇದು ಅತ್ಯುಕ್ತಿಯೆಂದು ಭಾಸವಾಗುತ್ತದೆ. ಆದರೆ ಇದನ್ನು ಅತ್ಯುಕ್ತಿಯೆಂದು ಪರಿಗಣಿಸಲಾಗುವುದಿಲ್ಲ. ಶಾಸನಗಳ ರಚನೆ ಮತ್ತು ಸ್ಥಾಪನಾಕಾರ್ಯವು ಸರ್ಕಾರದ ಮೇಲ್ವಿಚಾರಣೆಗೊಳಪಟ್ಟಿತ್ತು. ಅಸಂಬದ್ಧ ಪ್ರಲಾಪಗಳಿಗೆಡೆಯಿರಲಿಲ್ಲ. ಈ ಶಾಸನ ಸ್ಥಾಪನೆಯ ಕಾಲದಲ್ಲಿ ಚಾಳುಕ್ಯ ಸಮ್ರಾಟರ ಮಾಂಡಲಿಕನಾದ ಕೀರ್ತಿದೇವ ಹಾಜರಿದ್ದ. ಈ ಸಂಘದ ಸದಸ್ಯರ ವ್ಯಾಪಾರ ಭೂಮಾರ್ಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಮಲಯ, ಪರ್ಷಿಯ ಮುಂತಾದ ಹೊರದೇಶಗಳಿಗೆ ಸಮುದ್ರಮಾರ್ಗವಾಗಿ ಹೋಗಿಬರುತ್ತಿದ್ದರು. "ಪಾದಮಾರ್ಗದಿಂ ಜಲಮಾರ್ಗದಿಂ ಪೊಕ್ಕು" ಎಂಬ ಉಕ್ತಿಯಿಂದ ಇವರು ಸಮುದ್ರ ಮಾರ್ಗವಾಗಿಯೂ ಸಂಚರಿಸುತ್ತಿದ್ದರೆಂದು ಗೊತ್ತಾಗುತ್ತದೆ. ಅಂತರ್ದೇಶೀಯ ಸಾಗಾಣಿಕೆಗಾಗಿ ಇವರು ಕುದುರೆ, ಎತ್ತು, ಕತ್ತೆ, ಕೋಣ, ಒಂಟೆ, ಆನೆಗಳನ್ನು ಉಪಯೋಗಿಸುತ್ತಿದ್ದರು. ದೂರ ದೂರ ದೇಶಗಳಿಗೆ ಬೆಲೆಬಾಳುವ ವಸ್ತುಗಳನ್ನು ಮಾರುವ ಮತ್ತು ಕೊಳ್ಳುವ ಸಲುವಾಗಿ ಹೋಗಿ ಬರುವಾಗ ರಕ್ಷಣೆಗಾಗಿ ಬಿಲ್ಲು, ಬಾಣ, ಕತ್ತಿ, ಭರ್ಜಿ ಮೊದಲಾದ ಆಯುಧಗಳನ್ನು ತಮ್ಮೊಡನೆ ತೆಗೆದುಕೊಂಡು ಹೋಗುತ್ತಿದ್ದರು. ತಮ್ಮ ತಮ್ಮಲ್ಲಿ ಅಸೂಯಾ ಪ್ರವೃತ್ತಿಯನ್ನು ಹೊಂದಿರಲಿಲ್ಲ. ಅವರಲ್ಲಿ ಯಾರಾದರೂ ತೊಂದರೆ ಅಥವಾ ಅಪಾಯಕ್ಕೊಳಗಾದರೆ ಇತರರು ಅವನ ಸಹಾಯಕ್ಕೆ ಧಾವಿಸುತ್ತಿದ್ದರು. ಜೂಜು ಮುಂತಾದ ಪಂದ್ಯಗಳಿಂದ ಅವರು ದೂರವಿದ್ದರು.

ಈ ವರ್ತಕರು ಕೊಂಡು ಮಾರುತ್ತಿದ್ದ ವಸ್ತುಗಳನ್ನೂ ಅನೇಕ ಶಾಸನಗಳಲ್ಲಿ ಕಾಣಬಹುದು. ದಿನನಿತ್ಯದ ಬಳಕೆಯ ವಸ್ತುಗಳಾದ ಪಾತ್ರೆಗಳು, ಬಟ್ಟೆ, ಬತ್ತ, ಸಕ್ಕರೆ, ಉದ್ದು, ಗೋಧಿ, ಅವರೆ, ಅಡಕೆ, ಸಾಸುವೆ, ಮೆಂತ್ಯ, ಜೀರಗೆ, ಕೊತ್ತಂಬರಿ,

ಅರಿಶಿನ[7] ಮೊದಲಾದ ವಸ್ತುಗಳಲ್ಲದೆ ಬೆಲೆಬಾಳುವ ಅಪೂರ್ವ ವಸ್ತುಗಳಾದ, "ಇಂದ್ರನೀಲ ಚಂದ್ರಕಾಂತ ಮುತ್ತು ಮಾಣಿಕ್ಯ ವಜ್ರ ವೈಡೂರ್ಯ ಗೋಮೇದಿಕ ಪುಷ್ಯರಾಗ ಪದ್ಮರಾಗ ಪವಳಮರಕತ ಕರ್ಕೇತನ[8] ಇವುಗಳನ್ನೂ ದೂರದೂರ ದೇಶಗಳಿಗೆ ಹೋಗಿ ಮಾರುತ್ತಿದ್ದರು. ಅಲ್ಲದೆ "ಚಂದನ ಕಸ್ತೂರಿ ಕುಂಕುಮ ಮಲಿಗಜಾದಿ ಸುಗಂಧ ದ್ರವ್ಯಂಗಳನ್ನು"[9] ಅವು ದೊರೆಯುವ ಪ್ರದೇಶಗಳಲ್ಲಿ ಕೊಂಡು ಅವಶ್ಯಕತೆಯಿದ್ದ ಪ್ರದೇಶಗಳಿಗೆ ಸಾಗಿಸಿ ಮಾರುತ್ತಿದ್ದರು. ಈ ವರ್ತಕರು ಬೇರೆ ಬೇರೆ ರಾಜ್ಯಗಳನ್ನು ಪ್ರವೇಶಿಸಿದಾಗ ಸುಂಕವನ್ನು ತಪ್ಪದೆ ಪಾವತಿಮಾಡುತ್ತಿದ್ದರು. ರಾಜರಿಗೆ ಬೇಕಾದ "ಮಲಿಗಜ ಮತ್ತು ಜಾತ್ಯಶ್ವ"ಗಳನ್ನು ಒದಗಿಸಿಕೊಡುತ್ತಿದ್ದರು. ರಾಜರ "ಸುವರ್ಣ ಭಂಡಾರಮುಂ, ಮಾಣಿಕ್ಯ ಭಂಡಾರಮುಂ, ಪಟ್ಟಿಸ ಭಂಡಾರಮುಂ" (ಆಯುಧಾಗಾರ) ತುಂಬಿಸುತ್ತಿದ್ದರು. ಅವರಲ್ಲನೇಕರು ಮಾಣಿಕ್ಯ ಪರೀಕ್ಷೆಯಲ್ಲಿ ತಜ್ಞರಾಗಿದ್ದರು.

ಅಯ್ಯಾವೊಳೆಯೈನೂರ್ಬರು ಸಂಘದ ವರ್ತಕರು ತಮ್ಮ ವೃತ್ತಿಯನ್ನು ನಿಷ್ಠೆಯಿಂದ ನಡೆಸಿಕೊಂಡು ಶ್ರೀಮಂತವರ್ಗಕ್ಕೆ ಸೇರಿದವರಾಗಿದ್ದರು. ಅವರಲ್ಲನೇಕರು ಕನ್ನಡನಾಡಿನ ಮುಖ್ಯಪಟ್ಟಣಗಳಾದ ಬೇಲೂರು, ದೋರಸಮುದ್ರ, ಅರಸೀಕೆರೆ, ಬಳ್ಳಿಗಾಮೆ, ಉಚ್ಚಂಗಿದುರ್ಗ, ಶ್ರವಣಬೆಳಗೊಳ, ತಲಕಾಡು ಮೊದಲಾದ ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಅನೇಕರು "ಮಹಾದೊಡ್ಡ ವ್ಯವಹಾರಿ"ಗಳಾಗಿದ್ದರು. ಸರ್ಕಾರ ಅವರಿಗೆ ಮನ್ನಣೆ ಕೊಟ್ಟಿತ್ತು. ಅವರಲ್ಲನೇಕರು ಮುಖ್ಯಪಟ್ಟಣಸ್ವಾಮಿ ಹುದ್ದೆಯನ್ನಲಂಕರಿಸಿದ್ದರು. ಶ್ರೀಮಂತ ವರ್ತಕರು ಜನಹಿತ ಕಾರ್ಯಗಳಿಗೆ ಉದಾರವಾಗಿ ದಾನಮಾಡುತ್ತಿದ್ದರು. ವ್ಯವಸಾಯಕ್ಕಾಗಿ ಕೆರೆಗಳನ್ನು ಕಟ್ಟಿಸುತ್ತಿದ್ದರು. ಅವರು ಭವ್ಯವಾದ ದೇವಾಲಯಗಳನ್ನೂ ನಿರ್ಮಿಸಿದ್ದಾರೆ. ಮಠಗಳು ಮತ್ತು ದೇವಾಲಯಗಳಿಗೆ ಅವರು ಭೂಮಿಕಾಣಿಕೆಗಳನ್ನು ಉದಾರವಾಗಿ ಕೊಡುತ್ತಿದ್ದರು. ಮುಖ್ಯಪಟ್ಟಣಗಳಲ್ಲಿ ಯತಿಗಳಿಗೂ ಯಾತ್ರಾರ್ಥಿಗಳಿಗೂ ಅಂಗವಿಹೀನರಿಗೂ ಉಟೋಪಚಾರ ವ್ಯವಸ್ಥೆ ಮಾಡಿದ್ದರು.

ಕನ್ನಡನಾಡಿನ ವಣಿಜ ವೃಂದಕ್ಕೆ ಸಂಬಂಧಿಸಿದ ವಿವರವಾದ ಪ್ರಬಂಧವನ್ನು ರಚಿಸಲು ಶಾಸನಗಳಲ್ಲಿ ಸಾಕಷ್ಟು ಮಾಹಿತಿ ದೊರೆಯುತ್ತದೆ. ಆ ಕಾಲದ ವಣಿಕರ ಪ್ರಾಮಾಣಿಕತೆ, ಕ್ರಿಯಾಶೀಲತೆ, ಉದಾರ ಮನೋಭಾವ, ಅವರು ಅನುಸರಿಸುತ್ತಿದ್ದ ನೀತಿನಿಯಮಗಳು ತಮ್ಮ ಉದ್ಯೋಗದಲ್ಲಿ ಅವರು ಹೊಂದಿದ್ದ ಪ್ರಜ್ಞೆ ಇವು ಆಧುನಿಕ ಕಾಲದಲ್ಲೂ ಸ್ಫೂರ್ತಿದಾಯಕವಾದ ಅಂಶಗಳಾಗಿವೆ.

---

7 Ec. XII Pg. 50

8 Ec. VII Sk 118

9 *Ibid*

ಕೆ. ಜಿ. ರಾಮಕೃಷ್ಣ

ಮೈಸೂರು ರಾಜ್ಯದ ಸರ್ಕಾರಿ ಕೈಗಾರಿಕೆಗಳು

ಹಳೆಯ ಮೈಸೂರು ರಾಜ್ಯದಲ್ಲಿ ಬಹಳ ಕಾಲದಿಂದ ಸರ್ಕಾರಿ ಕೈಗಾರಿಕೆಗಳು ಸರ್ಕಾರದ ಬೊಕ್ಕಸಕ್ಕೆ ತಮ್ಮ ವಂತಿಗೆ ನೀಡುತ್ತ ಬಂದಿವೆ. ರಾಜ್ಯದ ಕೈಗಾರಿಕಾ ಕ್ಷೇತ್ರದಲ್ಲಿ ಬಲು ಹಿಂದೆಯೇ ಈ ರೀತಿಯ ಸರ್ಕಾರಿ ಸ್ವಾಮ್ಯ ಆಸ್ತಿತ್ವಕ್ಕೆ ಬರಲು ಅಂದಿನ ದಿವಾನರುಗಳೇ ಕಾರಣರೆಂದರೆ ತಪ್ಪಾಗಲಾರದು. ೧೮೮೧ನೆಯ ಇಸವಿಯಲ್ಲಿ ದಿವಾನರಾಗಿದ್ದ ರಂಗಾಚಾರ್ಲು ಅವರು ಪ್ರಪ್ರಥಮವಾಗಿ ಮೈಸೂರು ರಾಜ್ಯದ ಕೈಗಾರಿಕಾ ನೀತಿ ನಿಯಮಾವಳಿಯನ್ನು ರೂಪಿಸಿದರು. ಅವರು ರೂಪಿಸಿದ ನೀತಿ ನಿಯಮಾವಳಿ ಹೀಗೆ ಹೇಳುತ್ತದೆ. "ಹಳೆಯ ಪದ್ಧತಿಗಳು, ಹೊಸಪದ್ಧತಿಗಳಿಗೂ ಮತ್ತು ನಿಯಮಗಳಿಗೂ ಎಡೆಮಾಡಿಕೊಡಬೇಕು. ಈ ರೀತಿಯಾಗದಿದ್ದ ಪಕ್ಷದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳು ಮುಂದುವರಿಯುವುದು ಬಹಳ ಕಷ್ಟವಾಗುತ್ತದೆ. ಈ ರೀತಿಯ ಅವಕಾಶ ಕಲ್ಪನೆ ಮೈಸೂರು ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ಎಲ್ಲ ದೇಶಗಳಲ್ಲಿಯೂ ಆಗಬೇಕಾದದ್ದೇ. ಆದ್ದರಿಂದ ಕೈಗಾರಿಕೆ ಮತ್ತು ವ್ಯವಸಾಯದ ಬೆಳೆವಣಿಗೆಯನ್ನು ಸರಿಯಾಗಿ ನೋಡಿಕೊಳ್ಳಬೇಕು. ಈ ಸಮಯದಲ್ಲಿ ಸರ್ಕಾರ ಅಂಥ ಬೆಳೆವಣಿಗೆಗೆ ಬೇಕಾದ ಎಲ್ಲ ಸಹಾಯಗಳನ್ನೂ ಕೊಡುತ್ತದೆ. ಮತ್ತು ಈ ದಿಸೆಯಲ್ಲಿ ಉತ್ತಮ ಸಲಹೆಗಳಿದ್ದಲ್ಲಿ ಅಂಗೀಕರಿಸುತ್ತದೆ."[1]

೧೯೧೧ರಲ್ಲಿ ಮೈಸೂರು ರಾಜ್ಯದ ಆರ್ಥಿಕ ಸಮ್ಮೇಳನದಲ್ಲಿ ಒಂದು ಕೈಗಾರಿಕಾ ಸಲಹಾ ಮಂಡಲಿ ರಚಿಸಲಾಯಿತು. ಆಗ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು, ಮೇಲೆ ಹೇಳಿದ ಕೈಗಾರಿಕಾ ನೀತಿ ನಿಯಮಾವಳಿಯನ್ನು ಸ್ವಲ್ಪ ಬದಲಾಯಿಸಿ ಈ ರೀತಿಯ ಹೇಳಿಕೆಯನ್ನಿತ್ತರು. "ಜನಸಾಮಾನ್ಯರ ಬುದ್ಧಿಶಕ್ತಿಯನ್ನು ವಿಸ್ತರಿಸಲು, ಅವರ ಉದ್ಯೋಗ ಸಾಮರ್ಥ್ಯ ಮತ್ತು ಅವಕಾಶಗಳನ್ನು

[1] D'Souza, Prof. V. L., *Economic Development of Mysore State* (1937), p. 16

ಹೆಚ್ಚಿಸಲು, ಹೆಚ್ಚು ಹೆಚ್ಚು ಉದ್ಯೋಗಗಳನ್ನು ಕಲ್ಪಿಸಬೇಕು. ಇದಕ್ಕಾಗಿ ಕೈಗಾರಿಕಾ ಕ್ರಾಂತಿಯಾಗಬೇಕು."[2]

೧೯೩೭ರಲ್ಲಿ ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲರಿಂದ ಮತ್ತೆ ನೀತಿ ನಿಯಮಾವಳಿ ಬದಲಾವಣೆಗೊಂಡಿತು. "ಪಾಶ್ಚಾತ್ಯ ದೇಶಗಳಾದ ಇಂಗ್ಲೆಂಡ್ ಮತ್ತು ಅಮೆರಿಕಗಳಲ್ಲಿರುವ ಕೈಗಾರಿಕಾ ಸ್ವಾತಂತ್ರವನ್ನು ಗಮನಿಸಿದಲ್ಲಿ ನಮ್ಮ ದೇಶದಲ್ಲಿ ಅಂಥ ಸ್ವಾತಂತ್ರವಿಲ್ಲವೆಂಬಂತೆ ಕಾಣಬರುತ್ತದೆ. ಆದ್ದರಿಂದ ಅಂಥ ಸ್ವಾತಂತ್ರ್ಯ ಬಂದಲ್ಲಿ ಮಾತ್ರ ಕೈಗಾರಿಕಾ ಬೆಳೆವಣಿಗೆ ಸಾಧ್ಯವಾಗುತ್ತದೆ. ಈ ಸದುದ್ದೇಶದಿಂದ ಕೈಗಾರಿಕಾ ಸ್ವಾತಂತ್ರವನ್ನು ಸರ್ಕಾರ ನಿರ್ಧರಿಸಿದೆ. ಈ ಉದ್ದೇಶ ನೆರವೇರದಿದ್ದಲ್ಲಿ ಸರ್ಕಾರವೇ ಕೈಗಾರಿಕೆಗಳನ್ನು ಪ್ರಾರಂಭಿಸಿ ಉದ್ಯೋಗಾವಕಾಶವನ್ನು ಹೆಚ್ಚಿಸಲು ಇಚ್ಛಿಸುತ್ತದೆ."[3]

ಈ ರೀತಿ ಅಂದಿನ ದಿವಾನರುಗಳು ಕಾಲಕ್ಕೆ ತಕ್ಕಂತೆ ನೀತಿ ರೂಪಿಸಿ ಕೈಗಾರಿಕಾಭಿವೃದ್ಧಿಗಾಗಿ ಶ್ರಮಿಸಿದರು. ಅಂದಿನ ಕೈಗಾರಿಕಾ ನೀತಿ ಕೈಗಾರಿಕಾಭಿವೃದ್ಧಿಗೆ ಬಹಳ ಪ್ರೋತ್ಸಾಹದಾಯಕವಾಗಿತ್ತು ಎಂಬುದು ನಿರ್ವಿವಾದ.

ಮೈಸೂರು ರಾಜ್ಯದಲ್ಲಿ ಸರ್ಕಾರಿ ಕೈಗಾರಿಕೆಯನ್ನು ಸ್ಥಾಪಿಸುವ ಪ್ರಥಮ ಯತ್ನ ಮಾಡಿದವರು ದಿವಾನ್ ಶೇಷಾದ್ರಿ ಅಯ್ಯರ್. ರಾಷ್ಟ್ರದಲ್ಲೇ ಪ್ರಪ್ರಥಮವಾಗಿ (೧೯೦೩ರಲ್ಲಿ) ವಿದ್ಯುಚ್ಛಕ್ತಿಯನ್ನು ಶಿವಸಮುದ್ರದಲ್ಲಿ ಉತ್ಪಾದನೆ ಮಾಡಿದ ಕೀರ್ತಿ ಅವರದಾಗುತ್ತದೆ. ಆದರೆ ಅನಂತರ ಸರ್ಕಾರಿ ಕೈಗಾರಿಕಾ ರಂಗದಲ್ಲಿ ಅಂಥ ಮುನ್ನಡೆಯೇನೂ ಆಗಲಿಲ್ಲ. ಮುಂದೆ ದಿವಾನರುಗಳಾದ ಎಂ. ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಎಂ. ಇಸ್ಮಾಯಿಲರ ಕಾಲದಲ್ಲಿ ಹೆಚ್ಚಿನ ಪ್ರಗತಿಯಾಯಿತು. ಆಗಿನ ಕಾಲದಲ್ಲಿ ಇಂಥ ಪ್ರಯತ್ನವನ್ನು "ಸರ್ಕಾರಿ ಕೈಗಾರಿಕಾ ರಂಗ" ಎಂದು ಕರೆಯದಿದ್ದರೂ ಈ ಕ್ಷೇತ್ರದಲ್ಲಿ ದಿಟ್ಟ ಹೆಜ್ಜೆ ಇಟ್ಟ ಮೈಸೂರು ಸರ್ಕಾರ ಅಭಿನಂದನಾರ್ಹ.

ಕೈಗಾರಿಕೆಗಳ ಮೌಲ್ಯಮಾಪನ

ಮೈಸೂರು ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕೆಗಳ ಮೌಲ್ಯಮಾಪನ ಮಾಡಬೇಕಾದಲ್ಲಿ ಅವುಗಳ ವಿನ್ಯಾಸ ಮತ್ತು ಕಾರ್ಯಾಚರಣೆಗಳ ಕೂಲಂಕಷ ಪರಿಶೀಲನೆ ಅಗತ್ಯ. ಅವುಗಳ ಆಡಳಿತ ಮತ್ತು ಒಡೆತನ ಬಿಟ್ಟು ಮಿಕ್ಕೆಲ್ಲ ವಿಷಯಗಳಾದ ಸರ್ಕಾರಿ ಸಹಭಾಗಿತ್ವದ ಉದ್ದೇಶ, ಕೈಗಾರಿಕೆಯ ಸ್ವರೂಪ, ಕಾರ್ಯಾಚರಣೆಯ ಪ್ರಮಾಣ, ರಾಜ್ಯದ ಆರ್ಥಿಕ ಬೆಳೆವಣಿಗೆಯಲ್ಲಿ ಅವುಗಳ ಪಾತ್ರ ಮುಂತಾದವುಗಳನ್ನು ಅವಲೋಕಿಸಿದಲ್ಲಿ ಪ್ರತಿಯೊಂದೂ ವಿಭಿನ್ನವಾಗಿ ಕಾಣು

---

[2] *Ibid.*, p. 17

[3] Shama Rao, M., *Modern Mysore*, Vol II (1939), p. 286

ತ್ತದೆ. ಇವುಗಳಲ್ಲಿ ಏನೇ ಭಿನ್ನತೆ ಇದ್ದರೂ ಅಂದಿನ ಸರ್ಕಾರದ ಮುಖ್ಯ ಗುರಿ ಕೈಗಾರಿಕಾಭಿವೃದ್ಧಿ. ಅದೂ ಅಲ್ಲದೆ ಮುಂದೆ ಅವುಗಳನ್ನು ಖಾಸಗಿವಲಯಕ್ಕೆ ವಹಿಸಿಕೊಡುವ ಹಿರಿಯಾಸೆಯನ್ನು ಸಹ ಸರ್ಕಾರ ಹೊಂದಿತ್ತು. ಇಂಥ ಒಂದು ಕೈಗಾರಿಕಾ ನೀತಿಯನ್ನು ಜಪಾನ್ ದೇಶದ ಕೈಗಾರಿಕಾ ಚರಿತ್ರೆಯಲ್ಲಿ ಕಾಣ ಬಹುದು. ತನ್ನ ನೀತಿಗೆ ಅನುಗುಣವಾಗಿ ಸರ್ಕಾರ ತನ್ನ ವಶದಲ್ಲಿದ್ದ ಸರ್ಕಾರಿ ಪಿಂಗಾಣಿ ಕಾರ್ಖಾನೆ, ಬಣ್ಣ ಮತ್ತು ಅರಗಿನ ಕಾರ್ಖಾನೆ ಮತ್ತು ಹೊಸ ವಿದ್ಯುತ್ ಉಪಕರಣಗಳ ಕಾರ್ಖಾನೆಗಳನ್ನು ಪೂರ್ಣ ಸರ್ಕಾರಿ ಸ್ವಾಮ್ಯದಿಂದ ಖಾಸಗಿವಲಯಕ್ಕೆ ವರ್ಗಾಯಿಸಿತು. ಈಗ ಆ ಕಾರ್ಖಾನೆಗಳಲ್ಲಿ ಸರ್ಕಾರ ಮತ್ತು ಖಾಸಗಿಯವರು ಒಟ್ಟುಗೂಡಿ ಬಂಡವಾಳ ಹೊಂದಿದ್ದಾರೆ. ಈ ಉದ್ದೇಶದಿಂದಲೇ ಬೆಂಗಳೂರಿನಲ್ಲಿರುವ ಸಾಬೂನಿನ ಕಾರ್ಖಾನೆಯನ್ನು ಸರ್ಕಾರ ಒಂದು 'ಮಾರ್ಗ ದರ್ಶಕ' (ಪೈಲಟ್ ಪ್ಲಾಂಟ್) ಸಂಸ್ಥೆಯಾಗಿ ಸ್ಥಾಪಿಸಿತು. ಮುಂದೆ ಅನೇಕ ಕಾರ್ಖಾನೆಗಳನ್ನೂ ಸಂಸ್ಥೆಗಳನ್ನೂ ಬೆಳೆಯುತ್ತಿದ್ದ ವಿದ್ಯುಚ್ಛಕ್ತಿ ಇಲಾಖೆಯ ಸಹಾಯಕ್ಕಾಗಿ ಸ್ಥಾಪಿಸಲಾಯಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಸರ್ಕಾರಿ ವಿದ್ಯುತ್ ಉಪಕರಣಗಳ ಕಾರ್ಖಾನೆ, ಸರ್ಕಾರಿ ಪಿಂಗಾಣಿ ವಸ್ತುಗಳ ಕಾರ್ಖಾನೆ ಮುಂತಾದವುಗಳು. ಆ ಕಾಲದಲ್ಲಿ ವಿದ್ಯುಚ್ಛಕ್ತಿ ಮತ್ತು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳನ್ನು ದೊಡ್ಡ ಪ್ರಮಾಣದ ಕೈಗಾರಿಕೆಗಳೆಂದು ಪರಿಗಣಿಸಲಾಗಿತ್ತು. ಇವುಗಳೇ ಅಲ್ಲದೆ ಬೆಂಗಳೂರಿನಲ್ಲಿರುವ ಕೈಗಾರಿಕಾ ಕಾರ್ಯಾಗಾರವನ್ನು (ಗೌರ್ನಮೆಂಟ್ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪ್) ಲೋಕೋಪಯೋಗಿ ಇಲಾಖೆಯ ಕೆಲಸಗಳಲ್ಲಿ ಸಹಾಯಮಾಡಲೋಸುಗ ಸ್ಥಾಪಿಸಲಾಯಿತು.

ಯೋಜನೆ ಮತ್ತು ದೊಡ್ಡ ಕೈಗಾರಿಕೆಗಳು

ಭಾರತ ಸ್ವಾತಂತ್ರ್ಯ ಪಡೆದ ಮೇಲೆ ಮೈಸೂರು ರಾಜ್ಯದಲ್ಲಿ ಅನೇಕ ದೊಡ್ಡ ಕೈಗಾರಿಕೆಗಳನ್ನು ಸರ್ಕಾರಿ ರಂಗದಲ್ಲಿ ಸ್ಥಾಪಿಸಲಾಗಿದೆ. ಅವು ಯಾವುವೆಂದರೆ, ಭಾರತಸರ್ಕಾರ ಪ್ರಪ್ರಥಮವಾಗಿ ೧೯೪೮ರಲ್ಲಿ ಸ್ಥಾಪಿಸಿದ ಸರ್ಕಾರಿ ಕಂಪೆನಿಯಾದ ಇಂಡಿಯನ್ ಟೆಲಿಫೋನ್ ಕಾರ್ಖಾನೆ, ೧೯೫೩ರಲ್ಲಿ ಸ್ಥಾಪಿತವಾದ ಹಿಂದೂಸ್ತಾನ್ ಯಂತ್ರೋಪಕರಣಗಳ ಕಾರ್ಖಾನೆ, ಸ್ವಾತಂತ್ರ್ಯಪೂರ್ವದಲ್ಲಿ ಖಾಸಗಿವಲಯದಲ್ಲಿ ಸ್ಥಾಪಿತವಾದ ವಿಮಾನಕಾರ್ಖಾನೆಯ ವಿಸ್ತರಣೆ (ಈಗ ಹಿಂದೂಸ್ತಾನ್ ಏರೋನಾಟಿಕ್ಸ್ ಎಂಬ ಹೆಸರನ್ನು ಪಡೆದಿದೆ), ೧೯೫೪ರಲ್ಲಿ ಸ್ಥಾಪಿತವಾದ ಭಾರತ್ ಎಲೆಕ್ಟ್ರಾನಿಕ್ಸ್, ೧೯೬೦ರಲ್ಲಿ ವಿಮಾನಕಾರ್ಖಾನೆಯಿಂದ ಬೇರ್ಪಟ್ಟು ಬೇರೆ ಸಂಸ್ಥೆಯಾದ ಭಾರತ್ ಅರ್ತ್‌ಮೂವರ್ಸ್ ಸಂಸ್ಥೆ ಇವು ಮುಖ್ಯವಾದವು. ಇದೇ ಸಮಯದಲ್ಲಿ ಮೈಸೂರು ಸರ್ಕಾರ ಕೆಲವೊಂದು ಕಾರ್ಖಾನೆಗಳನ್ನು ವಿಸ್ತರಿಸಿತು;

ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆಗಾಗಿ ಹೊಸ ಕಾರ್ಖಾನೆಯನ್ನು ಸಹ ಸ್ಥಾಪಿಸಲಾಯಿತು. ೧೯೫೬ರ ರಾಜ್ಯಪುನರ್ವಿಂಗಡಣೆಯ ಫಲವಾಗಿ ಅನೇಕ ಕೈಗಾರಿಕೆಗಳು ಮೈಸೂರು ರಾಜ್ಯಕ್ಕೆ ಸೇರಿದುವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಹಟ್ಟಿಯ ಚಿನ್ನದ ಗಣಿಗಳು, ಹೊಸಪೇಟೆಯ ತುಂಗಭದ್ರ ಉಕ್ಕಿನ ಕಾರ್ಖಾನೆ ಮತ್ತು ಮಡಕೇರಿಯ ಕೈಗಾರಿಕಾ ಕಾರ್ಯಾಗಾರ. ಕೈಗಾರಿಕಾ ಬೆಳವಣಿಗೆಗೆ ಮೈಸೂರು ಸರ್ಕಾರವಿತ್ತ ನೆರವನ್ನು ಪರಿಶೀಲಿಸಿದಲ್ಲಿ ಈ ರಾಜ್ಯವನ್ನು ನಮ್ಮ ದೇಶದ "ಸರ್ಕಾರಿ ಕೈಗಾರಿಕಾ ವಲಯದ ಆದ್ಯಪ್ರವರ್ತಕ" ಎಂದು ಕರೆಯಬಹುದು.

ಸ್ಥಾಪನೆಯ ಉದ್ದೇಶ

ಮೈಸೂರು ರಾಜ್ಯದಲ್ಲಿ "ಪ್ರಜೆಗಳಿಗೆ ಮತ್ತು ಕೈಗಾರಿಕಾ ಸಂಸ್ಥೆಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ತನ್ನು ಒದಗಿಸುವ ಸಲುವಾಗಿ"[4] ಮತ್ತು ಉತ್ಸಾಹಿ ಯುವಕರಿಗೆ ಆಧುನಿಕ ಕೈಗಾರಿಕಾರಂಗದಲ್ಲಿ ತರಪೇತಿ ಕೊಡುವುದಕ್ಕಾಗಿ ಮತ್ತು ಹೀಗೆ ಕೈಗಾರಿಕಾಭಿವೃದ್ಧಿಯನ್ನು ಮುಂದುವರಿಸುವ ಉದ್ದೇಶದಿಂದ ಭದ್ರಾವತಿಯಲ್ಲಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ೧೯೧೯ರಲ್ಲಿ ಸ್ಥಾಪಿಸಲಾಯಿತು;[5] ಮತ್ತು ವಿದ್ಯುತ್ತಿನ ಉತ್ಪಾದನೆಯನ್ನಾರಂಭಿಸಲಾಯಿತು. ಕೈಗಾರಿಕೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದಲೇ ಈ ಕೈಗಾರಿಕೆಗಳನ್ನೆಲ್ಲ ಸ್ಥಾಪಿಸಿದ್ದು. ಆದರೆ ೧೯೧೬ರಲ್ಲಿ ಗಂಧದ ಎಣ್ಣೆ ಕಾರ್ಖಾನೆಯನ್ನು ಸ್ಥಾಪಿಸಿದ್ದಕ್ಕೆ ಮಾತ್ರ ಈ ಪದಾರ್ಥದಲ್ಲಿ ಏಕಸ್ವಾಮ್ಯ ಹೊಂದಿರಬೇಕೆಂಬ ಉದ್ದೇಶವೇ ಆಗಿದೆ.

ಭಾರತ ಸ್ವಾತಂತ್ರ ಪಡೆದಂದಿನಿಂದೀಚೆಗೆ ರಾಜ್ಯ ತನ್ನದೇ ಆದ ಕೈಕಾರಿಕಾ ನೀತಿಯನ್ನು ರೂಪಿಸಿಕೊಂಡಿದೆ, ಕೈಕಾರಿಕಾಭಿವೃದ್ಧಿಗೆ ಭಾರತದ ಯೋಜನಾ ಆಯೋಗವನ್ನು ಅನುಸರಿಸಬೇಕಾಗಿದೆ. ಇದರಿಂದಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಒಟ್ಟಾಗಿ ಸಹಭಾಗಿತ್ವ ಹೊಂದಿದ ಅನೇಕ ಕಾರ್ಖಾನೆಗಳು ರಾಜ್ಯದಲ್ಲಿ ಸ್ಥಾಪಿತವಾಗಿವೆ. ರಾಜ್ಯದಲ್ಲಿನ ಹಿತಕರ ಕೈಗಾರಿಕಾ ವಾತಾವರಣ ಮತ್ತು ರಾಜ್ಯ ಸರ್ಕಾರದ ಸಹಕಾರ ಇವು ಈ ಬಗೆಯ ಕ್ರಮಕ್ಕೆ ಮುಖ್ಯ ಕಾರಣಗಳು. ಇವೇ ಅಲ್ಲದೆ, ಕೋಲಾರದ ಚಿನ್ನದ ಗಣಿಗಳ ಭಾಗಶಃ ಮುಚ್ಚುವಿಕೆಯ ಫಲವಾಗಿ ನಿರುದ್ಯೋಗಿಗಳಾದ ಕಾರ್ಮಿಕರಿಗೆ ಕೆಲಸ ಒದಗಿಸುವುದಕ್ಕಾಗಿ ೧೯೬೪ರಲ್ಲಿ ಭಾರತ್ ಅರ್ಥ್ ಮೂವರ್ಸ್ ಸಂಸ್ಥೆಯನ್ನು ಬೆಂಗಳೂರಿನಿಂದ ಕೆ. ಜಿ. ಫ್. ಪ್ರದೇಶಕ್ಕೆ ವರ್ಗಾಯಿಸಲಾಯಿತು. ಈ ಕಾರ್ಖಾನೆಗಳ ಬಂಡವಾಳದಲ್ಲಿ ಕೇಂದ್ರ ಸರ್ಕಾರದ್ದು

---

[4] Subbaramaiah S., Theory of Public Enterprises with special reference to Mysore State (1959) p. 329

[5] *Ibid.*, p. 331

ಸಿಂಹಪಾಲು. ರಾಜ್ಯ ಸರ್ಕಾರ ಸ್ವಲ್ಪ ಬಂಡವಾಳವನ್ನೂ, ದಾನವಾಗಿ ಭೂಮಿ ಯನ್ನೂ ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ, ನೀರು ಮುಂತಾದ ಸೌಲಭ್ಯಗಳನ್ನೂ ಒದಗಿಸಿದೆ.

ಕೈಗಾರಿಕೆಯ ಗಾತ್ರ ಮತ್ತು ನಿವೇಶನ

ರಾಜ್ಯದ ಕೈಗಾರಿಕಾಭಿವೃದ್ಧಿಯಲ್ಲಿ ಕೈಗಾರಿಕೆಯ ಪ್ರಮಾಣ ಮತ್ತು ಸ್ಥಾಪನೆಯ ನಿವೇಶನ ಬಹುಮುಖ್ಯವಾದದ್ದು. ಅಲ್ಲದೆ ಹೀಗೆ ಸ್ಥಾಪಿತವಾದ ಕೈಗಾರಿಕೆಗಳು ನಿರ್ದಿಷ್ಟ ಪ್ರಮಾಣಕ್ಕೆ ಸರಿಸಮನಾಗಿ ಸರ್ಕಾರಿ ವಲಯದಲ್ಲಿ ಕೆಲಸ ಮಾಡು ತ್ತಿವೆಯೋ ಇಲ್ಲವೋ ಎಂದು ಪರ್ಯಾಲೋಚಿಸಿ, ನ್ಯೂನತೆಗಳೇನಾದರೂ ಕಂಡು ಬಂದಲ್ಲಿ ಸರಿಪಡಿಸಲು ಪ್ರಯತ್ನಿಸಬೇಕು.

ಈ ಪ್ರಶ್ನೆಯನ್ನು ಪರಿಶೀಲಿಸಿದಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಬಹು ಪಾಲು ಕಾರ್ಖಾನೆಗಳನ್ನು ಬೃಹದ್ಗಾತ್ರದವೆಂದು ಪರಿಗಣಿಸಬಹುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ವಿಮಾನ ಕಾರ್ಖಾನೆ, ಭಾರತ್ ಅರ್ತ್ ಮೂವರ್ಸ್, ಭಾರತ್ ಎಲೆಕ್ಟ್ರಾನಿಕ್ಸ್, ಇಂಡಿಯನ್ ಟೆಲಿಫೋನ್ ಕಾರ್ಖಾನೆ, ಹಿಂದೂಸ್ಥಾನ್ ಯಂತ್ರೋಪಕರಣಗಳ ಕಾರ್ಖಾನೆ, ಸರ್ಕಾರದ ಹೊಸ ವಿದ್ಯುತ್ ಉಪಕರಣಗಳ ಕಾರ್ಖಾನೆ ಇವೇ ಅಲ್ಲದೆ, ಅನೇಕ ಮಧ್ಯಮ ಗಾತ್ರದ ಕಾರ್ಖಾನೆಗಳನ್ನೂ ಬೆಂಗಳೂರಿನಲ್ಲಿ ಕಾಣಬಹುದು. ಇವುಗಳಲ್ಲಿ ಪ್ರಮುಖವಾದವೆಂದರೆ, ಸರ್ಕಾರಿ ಸಾಬೂನಿನ ಕಾರ್ಖಾನೆ, ವಿದ್ಯುತ್ ಉಪಕರಣಗಳ ಹಳೆ ಕಾರ್ಖಾನೆ, ರೇಡಿಯೋ ಮುಂತಾದ ವಿದ್ಯುತ್ ಉಪಕರಣಗಳನ್ನು ತಯಾರಿಸುವ ರೆಂಕೋ. ಇವುಗಳಲ್ಲಿ ಅನೇಕ ಕಾರ್ಖಾನೆಗಳು ೩೦ ವರ್ಷಕ್ಕೂ ಹಿಂದೆ ಸ್ಥಾಪಿತವಾದವು. ಸ್ವಾತಂತ್ರ್ಯ ಪೂರ್ವದಲ್ಲಿ, ಆದಷ್ಟು ಬೇಗ ಮತ್ತು ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳನ್ನು ಸ್ಥಾಪಿಸ ಬೇಕೆಂಬ ಹಿರಿಯಾಸೆಯನ್ನು ಹೊಂದಿದ್ದ ರಾಜ್ಯ ಸರ್ಕಾರ ಕೈಗಾರಿಕಾ ಗಾತ್ರದ ಬಗ್ಗೆ ಒಂದು ನಿರ್ದಿಷ್ಟವಾದ ನೀತಿ ಹೊಂದಿರಲಿಲ್ಲ. ಅದೂ ಅಲ್ಲದೆ ಆ ಕಾರ್ಖಾನೆ ಗಳನ್ನು ವಿಸ್ತರಿಸಲೂ ವಿಶೇಷವಾಗಿ ಪ್ರಯತ್ನಿಸಲಿಲ್ಲವೆನ್ನಬಹುದು.

ಸ್ವಾತಂತ್ರ್ಯಪೂರ್ವದಲ್ಲಿ ಅನೇಕ ಕೈಗಾರಿಕೆಗಳ ನಿವೇಶನಗಳನ್ನು ತಾಂತ್ರಿಕ ವಾಗಿ ನಿರ್ಧರಿಸಲಾಗಿತ್ತು. ಗಂಧದ ಎಣ್ಣೆ ಕಾರ್ಖಾನೆಯನ್ನು ಗಂಧದ ಮರ ಬೆಳೆಯುವ ಕಾಡುಗಳಿಗೆ ಹತ್ತಿರವಾಗಿ ಅಂದರೆ ಮೈಸೂರು ಮತ್ತು ಶಿವಮೊಗ್ಗಗಳಲ್ಲಿ ರೇಷ್ಮೆ ಕೈಗಾರಿಕೆಗಳನ್ನು ಕಚ್ಚಾ ಸಾಮಗ್ರಿ ದೊರೆಯುವ ಸ್ಥಳಗಳಲ್ಲಿ ಅಥವಾ ಅದಕ್ಕೆ ಬಹಳ ಹತ್ತಿರದಲ್ಲಿ, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಕಬ್ಬಿಣದ ಅದುರಿನ ಗಣಿಗಳ ಬಳಿ ಕಾಡುಗಳ ಮಧ್ಯದಲ್ಲಿ, ಸಕ್ಕರೆ ಕಾರ್ಖಾನೆಯನ್ನು ಕಬ್ಬು ಬೆಳೆ ಯುವ ಪ್ರದೇಶದ ನಡುವೆ ಇರುವ ಮಂಡ್ಯದಲ್ಲಿ, ಕಾಗದದ ಕಾರ್ಖಾನೆಯನ್ನು ಬೊಂಬು ಬೆಳೆಯುವ ಕಾಡುಗಳಿಗೆ ಹತ್ತಿರವಾಗಿ ಅಂದರೆ ಭದ್ರಾವತಿಯಲ್ಲಿ ಸ್ಥಾಪಿಸ ಲಾಗಿದೆ.

ವಿದ್ಯುತ್ ಉಪಕರಣಗಳ ಹಳೆಯ ಕಾರ್ಖಾನೆ ಮತ್ತು ಪಿಂಗಾಣಿ ವಸ್ತುಗಳ ಕಾರ್ಖಾನೆ ಇವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದ್ದು ಅವುಗಳ ಕಚ್ಚಾ ಸಾಮಗ್ರಿ ಹತ್ತಿರದಲ್ಲೇ ದೊರಕುವುವೆಂಬ ಕಾರಣದಿಂದಲ್ಲ. ಆ ಸಾಮಗ್ರಿಗಳು ನಗರದಲ್ಲಿ ಸಿಗುತ್ತಿರಲಿಲ್ಲ. ಈ ಕೈಗಾರಿಕೆಗಳು ಮಾರುಕಟ್ಟೆಗೆ ಹತ್ತಿರವಾಗಿರಲೆಂಬ ಉದ್ದೇಶದಿಂದ ಇವನ್ನು ಅಲ್ಲಿ ಸ್ಥಾಪಿಸಲಾಯಿತು. ಒಳ್ಳೆಯ ಕುಶಲ ಕೆಲಸಗಾರರು ಸುಲಭವಾಗಿ ದೊರೆಯುತ್ತಿದ್ದುದರಿಂದಲೂ ಸಾರಿಗೆ ವ್ಯವಸ್ಥೆ ಬೆಂಗಳೂರಿಗೆ ಚೆನ್ನಾಗಿದ್ದುದರಿಂದಲೂ ಮತ್ತೊಂದು ವಿದ್ಯುತ್ ಉಪಕರಣಗಳ ಕಾರ್ಖಾನೆಯನ್ನೂ ಬೆಂಗಳೂರಿನಲ್ಲಿಯೇ ಸ್ಥಾಪಿಸಲಾಯಿತು. ಇದೇ ಕಾರಣಕ್ಕಾಗಿಯೇ ಬೆಂಗಳೂರಿನಲ್ಲೇ ಸರ್ಕಾರಿ ಸಾಬೂನಿನ ಕಾರ್ಖಾನೆಯನ್ನು ಸ್ಥಾಪಿಸಿದ್ದು.

ವ್ಯವಸಾಯ ಉಪಕರಣಗಳನ್ನು ಸ್ಥಾಪಿಸಲು ಭದ್ರಾವತಿ ಪ್ರಶಸ್ತ ಸ್ಥಳವಾಗಿದ್ದರೂ ಬೇರೆ ಕಾರಣಗಳಿಂದಾಗಿ ಅದನ್ನು ಹಾಸನದಲ್ಲಿ ಸ್ಥಾಪಿಸಲಾಯಿತು. ಹೀಗೆಯೇ ಸರ್ಕಾರ ಇತರ ಕೆಲವು ಕಾರ್ಖಾನೆಗಳ ಬಂಡವಾಳಕ್ಕೆ ಸಹ ಸಹಾಯ ಮಾಡಿ ಕೈಗಾರಿಕಾಭಿವೃದ್ಧಿಯಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿದೆ.

ಬಂಡವಾಳ

ಯಾವ ದೇಶದಲ್ಲೇ ಆಗಲಿ, ಕೈಗಾರಿಕಾ ರಂಗದಲ್ಲಿ ಸರ್ಕಾರ ವಹಿಸುವ ಪಾತ್ರದ ವಿಧಾನ ಆ ಸರ್ಕಾರದ ಆರ್ಥಿಕ ನೀತಿಯನ್ನೇ ಅವಲಂಬಿಸಿರುತ್ತದೆ. ಅಷ್ಟೇ ಅಲ್ಲ, ತಾನು ಹಾಕಿದ ಬಂಡವಾಳದಿಂದ ನಷ್ಟವಾಗಬಾರದೆಂಬ ನೀತಿಯನ್ನೂ ಅದು ಸಾಮಾನ್ಯವಾಗಿ ಪಾಲಿಸುತ್ತದೆ. ಈ ಸರ್ಕಾರಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಂದಿನ ರಾಜ್ಯ ಸರ್ಕಾರ ಪ್ರತಿ ವರ್ಷದ ರಾಜ್ಯಾದಾಯದಿಂದ ಬಂಡವಾಳ ಒದಗಿಸುತ್ತಿತ್ತು. ಈ ವಿಷಯದಲ್ಲಿ ಡಾ. ಎಂ. ವಿಶ್ವೇಶ್ವರಯ್ಯನವರ ನೀತಿ ಉಲ್ಲೇಖನೀಯ. ಅವರು "ಮೈಸೂರು ರಾಜ್ಯದಲ್ಲಿ ಸರ್ಕಾರಿ ಕೈಗಾರಿಕೆಗಳನ್ನು ರಾಜ್ಯಾದಾಯದಿಂದ ಮಾತ್ರ ಬೆಳಸಲಾಗಿದೆಯೇ ಹೊರತು, ಬೇರೆ ದೇಶಗಳಲ್ಲಿ ಮಾಡಿರುವಂತೆ ಸಾಲದ ಮೂಲಕವಲ್ಲ" ಎಂದು ಹೇಳಿದರು.[6]

೧೯೩೬ರ ಕೊನೆಗೆ ಸರ್ಕಾರಿ ಕೈಗಾರಿಕೆಗಳಲ್ಲಿ ಸರ್ಕಾರ ಹೂಡಿದ್ದ ಒಟ್ಟು ಬಂಡವಾಳ ೪೫೦.೭೬ ಲಕ್ಷ ರೂಪಾಯಿಗಳು. ಇದರಲ್ಲಿ ೯೬% ರಷ್ಟನ್ನು ವಿದ್ಯುಚ್ಛಕ್ತಿ ಕೈಗಾರಿಕೆ ಮತ್ತು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಹೂಡಲಾಗಿತ್ತು. ಮುಂದಿನ ೨೦ ವರ್ಷಗಳಲ್ಲಿ ಅಂದರೆ ೧೯೫೫–೫೬ರ ಹೊತ್ತಿಗೆ, ಈ ಬಂಡವಾಳ ಹೂಡಿಕೆ ದ್ವಿಗುಣಗೊಂಡಿತ್ತು. ಅಂದರೆ ೮೮೦.೯೦ ಲಕ್ಷ ರೂಗಳಿಗೆ ಏರಿತ್ತು. ಈ ಒಟ್ಟು ಬಂಡವಾಳದಲ್ಲಿ ವಿದ್ಯುತ್ ಇಲಾಖೆಯ ಪಾಲು ೫೧೨.೦೬

[6] *Proceedings of Mysore Legislative Council*—Dewan's Speech, July 27, 1915; p. 9

ಲಕ್ಷರೂ. ಮತ್ತು ಕಬ್ಬಿಣದ ಕಾರ್ಖಾನೆಯ ಪಾಲು ೨೪೫.೦೧ ಲಕ್ಷ ರೂ. ಮುಂಬೆ ೧೯೫೩-೫೪ರಲ್ಲಿ ಈ ಬಂಡವಾಳ ೩೦೯೮.೨೦ ಲಕ್ಷ ರೂಗಳನ್ನು ಮುಟ್ಟಿದ್ದಿತು. ಇದರಲ್ಲಿ ಸೇ. ೯೫ರಷ್ಟನ್ನು ವಿದ್ಯುಚ್ಛಕ್ತಿ ಮತ್ತು ಕಬ್ಬಿಣದ ಕಾರ್ಖಾನೆಯಲ್ಲಿ ತೊಡಗಿಸಲಾಗಿದ್ದಿತು.

ರಾಜ್ಯ ಸರ್ಕಾರ ತನ್ನ ಸ್ವಂತ ಉದ್ದಿಮೆಗಳೇ ಅಲ್ಲದೆ ಕೆಲವು ಖಾಸಗಿ ಕಂಪೆನಿಗಳಲ್ಲೂ ತನ್ನ ಬಂಡವಾಳ ಹೂಡಿದೆ. ಈ ರೀತಿ ಆ ಕಂಪೆನಿಗಳಲ್ಲಿ ಹೂಡಿರುವ ಹಣದ ಮೊತ್ತದ ವಿವರ ಹೀಗಿದೆ.

ವರ್ಷ	ಕಂಪನಿ ಸಂಖ್ಯೆ	ಹಣದ ಮೊತ್ತ ರೂಗಳಲ್ಲಿ
೧೯೫೬-೫೭	೩೦	೧,೫೨,೬೬,೩೩೦
೧೯೫೭-೫೮	೩೮	೨,೧೧,೬೮,೪೭೦
೧೯೫೮-೫೯	೪೪	೨,೬೫,೯೧,೬೦೫
೧೯೬೦-೬೧	೫೬	೪,೦೫,೩೬,೯೩೦
೧೯೬೧-೬೨	೭೮	೫,೮೮,೧೪,೪೨೦
೧೯೬೨-೬೩	೭೯	೬,೬೯,೮೩,೬೯೫
೧೯೬೪-೬೫	೯೧	೧೨,೯೩,೭೮,೬೯೦
೧೯೬೬-೬೭	೯೧	೧೪,೯೬,೮೬,೯೬೧

(ರಾಜ್ಯದ ಆಯಾ ವರ್ಷಗಳ ಆಯ-ವ್ಯಯ ಅಂದಾಜುಪಟ್ಟಿಗಳ ಆಧಾರದಿಂದ)

ರಾಜ್ಯ ಸರ್ಕಾರ ತನ್ನ ಸ್ವಂತದ್ದೇ ಆದ ೧೨ ಕಾರ್ಖಾನೆಗಳನ್ನು ಬಹಳ ಕಾಲದಿಂದ, ಅಂದರೆ ೧೯೧೬ರಿಂದ, ನಡೆಸುತ್ತ ಬಂದಿದೆ. ಅವುಗಳಲ್ಲಿ ಸರಕಾರ ಹೂಡಿರುವ ಬಂಡವಾಳದ ವಿವರ ಈ ರೀತಿ ಇದೆ.

ವರ್ಷ	ಸಂಖ್ಯೆ	ಮೊತ್ತ ರೂಗಳಲ್ಲಿ
೧೯೬೨-೬೩	೧೨	೪,೫೦,೪೬,೪೬೯
೧೯೬೩-೬೪	೧೨	೪,೬೨,೭೮,೧೯೫
೧೯೬೪-೬೫	೧೨	೫,೮೮,೮೮,೦೪೭
೧೯೬೫-೬೬	೧೨	೬,೦೮,೬೪,೩೪೨
೧೯೬೬-೬೭	೧೨	೬,೯೮,೫೦,೪೮೬
೧೯೬೭-೬೮	೧೨	೭,೦೨,೬೯,೦೦೦
೧೯೬೮-೬೯	೧೨	೭,೬೯,೦೦,೦೦೦

(ಆಧಾರ: ಸಂಸ್ಥೆಗಳ ವಾರ್ಷಿಕ ವರದಿ ಮತ್ತು ಆಸ್ತಿ ಜವಾಬ್ದಾರಿ ಪಟ್ಟಿಗಳಿಂದ)

ಇವುಗಳೇ ಅಲ್ಲದೆ ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಎರಡು ಸರ್ಕಾರಗಳೂ ಸೇರಿ ಹೂಡಿರುವ ಒಟ್ಟು ಬಂಡವಾಳ ೫೪೪೧ ಲಕ್ಷ ರೂಗಳು. ಅದರ ವಿವರ ಈ ರೀತಿ ಇದೆ.

ಸಂಸ್ಥೆ	ನಿಯೋಜಿತ ಬಂಡವಾಳ (ಲಕ್ಷ ರೂಗಳಲ್ಲಿ)	ಪಾವತಿಯಾದ ಬಂಡವಾಳ (ಲಕ್ಷ ರೂಗಳಲ್ಲಿ)
ಭಾರತ್ ಅರ್ತ್‌ಮೂರ್ವರ್ಸ್ ಲಿ.	೭೫೦	೬೫೬
ಭಾರತ್ ಎಲೆಕ್ಟ್ರಾನಿಕ್ಸ್ ಲಿ.	೧೦೦೦	೫೨೧
ಹಿಂದೂಸ್ತಾನ್ ಏರೋನಾಟಿಕ್ಸ್ ಲಿ.	೫೦೦೦	३೬೫३
ಹಿಂದೂಸ್ತಾನ್ ಯಂತ್ರೋಪಕರಣಗಳ ಕಾರ್ಖಾನೆ	೧೨೫೦	೧೧೫೦
ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಲಿ.	೫೦೦	೪೬೧
ತುಂಗಭದ್ರ ಉಕ್ಕಿನ ಕಾರ್ಖಾನೆ.	೧೦೦	೯೬

(ಆಧಾರ: ಲೋಕ್ ಉದ್ಯೋಗ್ ಮಾಸಪತ್ರಿಕೆ: ಸಂಪುಟ ೧: ಸಂಚಿಕೆ ೧; ಮಾರ್ಚಿ ೧೯೬೭ ; ಪುಟ ೮೧)

ಸರ್ಕಾರಿ ರಂಗದಲ್ಲಿ ಈ ರೀತಿಯ ಭಾರಿ ಬಂಡವಾಳ ಹೂಡಿಕೆಗೆ ಸರ್ಕಾರದ ಉದಾರ ನೀತಿಯೇ ಕಾರಣದಿಂದರೆ ತಪ್ಪಾಗಲಾರದು.

ಕೈಗಾರಿಕೆಗಳ ಆಡಳಿತ :

ಮೈಸೂರು ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕೆಗಳನ್ನು ಆಡಳಿತ ದೃಷ್ಟಿಯಿಂದ ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು.

(೧) ಪೂರ್ತಿಯಾಗಿ ರಾಜ್ಯಸರ್ಕಾರದ ವಶದಲ್ಲಿರುವ ಕಾರ್ಖಾನೆಗಳು,

(೨) ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರಗಳ ಸಹಭಾಗಿತ್ವದಲ್ಲಿರುವ ಸಂಸ್ಥೆಗಳು,

(೩) ರಾಜ್ಯಸರ್ಕಾರದ ಮತ್ತು ಖಾಸಗಿಯ ಬಂಡವಾಳ ಇರುವ ಸಂಸ್ಥೆಗಳು.

ಸಂಪೂರ್ಣವಾಗಿ ರಾಜ್ಯಸರ್ಕಾರದ ಆಡಳಿತದಲ್ಲಿರುವ ೧೨ ಕಾರ್ಖಾನೆಗಳ ಆಡಳಿತವನ್ನು ಒಂದು ಕೇಂದ್ರ ಆಡಳಿತ ಮಂಡಲಿ (ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಫಾರ್ ಗವರ್ನಮೆಂಟ್ ಇಂಡಸ್ಟ್ರಿಯಲ್ ಅಂಡರ್‌ಟೇಕಿಂಗ್ಸ್) ನಿರ್ವಹಿಸು

ತ್ತದೆ. ಈ ಆಡಳಿತ ಮಂಡಲಿ ಸಂಸ್ಥೆಯ ಮುಖ್ಯ ವ್ಯವಸ್ಥಾಪಕರ (ಜನರಲ್ ಮ್ಯಾನೇಜರ್ಸ್) ಮೂಲಕ ಆಡಳಿತ ನಿರ್ವಹಣೆ ನಡೆಸುತ್ತದೆ. ಆದರೆ ಸಂಸ್ಥೆಯ ಮುಖ್ಯ ವ್ಯವಸ್ಥಾಪಕರಿಗೆ ಹೆಚ್ಚು ಅಧಿಕಾರವಿಲ್ಲದೆ ಕೇವಲ ಮುಖ್ಯ ಗುಮಾಸ್ತೆಯಂತೆ ಆಡಳಿತ ಮಂಡಳಿಯ ಆದೇಶಗಳನ್ನು ಪಾಲಿಸಬೇಕಾಗುತ್ತದೆ. ಸಂಸ್ಥೆಯ ನೀತಿ ನಿಯಮಾವಳಿಯ ಬಗ್ಗೆ ಆತ ಯಾವ ನಿರ್ಧಾರ ಕೈಗೊಳ್ಳುವ ಹಕ್ಕನ್ನೂ ಪಡೆದಿಲ್ಲ. ಈ ರೀತಿಯ ಆಡಳಿತದಿಂದ ಕೈಗಾರಿಕಾಭಿವೃದ್ಧಿಯ ವೇಗ ಕುಂಠಿತವಾಗುತ್ತದೆ. ಕೇಂದ್ರ ಆಡಳಿತ ಮಂಡಲಿಯಲ್ಲಿ ಹಣಕಾಸಿನ ಇಲಾಖೆಯ ಪ್ರತಿನಿಧಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪ್ರತಿನಿಧಿ, ವಾಣಜ್ಯ ಮತ್ತು ಕೈಗಾರಿಕೆ ಇಲಾಖೆಯ ನಿರ್ವಾಹಕ ಮತ್ತು ಇತರ ಇಬ್ಬರು ಅಥವ ಮೂವರು ಅಧಿಕಾರಿಗಳಿರುತ್ತಾರೆ. ಈ ಮಂಡಳಿಗೆ ರಾಜ್ಯದ ಕೈಗಾರಿಕಾ ಮಂತ್ರಿಗಳು ಅಧ್ಯಕ್ಷರು. ಈ ಮಂಡಲಿಯಲ್ಲಿ ಕೈಗಾರಿಕೋಧ್ಯಮಿಗಳೇ ಆಗಲಿ ಕಾರ್ಮಿಕ ಪ್ರತಿನಿಧಿಗಳೇ ಆಗಲಿ ಇರುವುದಿಲ್ಲ. ರೇಷ್ಮೆ ಕೈಗಾರಿಕೆಗಾಗಿ ಒಂದು ಪ್ರತ್ಯೇಕ ಕೇಂದ್ರಮಂಡಲಿಯನ್ನು ಸ್ಥಾಪಿಸಲಾಗಿದೆ. ಇದಕ್ಕೆ ರೇಷ್ಮೆ ಇಲಾಖೆಯ ಸಚಿವರು ಅಧ್ಯಕ್ಷರು; ಮತ್ತು ಮೇಲೆ ಹೇಳಿದ ಇತರ ಅಧಿಕಾರಿಗಳು ಅದರ ಸದಸ್ಯರು.

ಕೇಂದ್ರಸರ್ಕಾರದ ಕಾರ್ಖಾನೆಗಳು ಪ್ರತಿಯೊಂದೂ ನಿಯಮಿತ ಕಂಪನಿಗಳಾದ್ದರಿಂದ ಅವಕ್ಕೆ ಪ್ರತ್ಯೇಕ ಆಡಳಿತ ಮಂಡಲಿಗಳಿವೆ. ಈ ಆಡಳಿತ ಮಂಡಲಿಗಳಲ್ಲೂ ಅಧಿಕಾರಿಗಳ ಸಂಖ್ಯೆಯೇ ಹೆಚ್ಚು. ಆದರೆ ಈ ಸಂಸ್ಥೆಗಳು ಪೂರ್ಣಕಾಲಾವಧಿಯ ಅಧ್ಯಕ್ಷರನ್ನೂ ಡೈರೆಕ್ಟರುಗಳನ್ನೂ ಹೊಂದಿರುವುದರಿಂದ, ಆಡಳಿತ ದೃಷ್ಟಿಯಿಂದ ಉತ್ತಮ ಆಡಳಿತವನ್ನು ಕಾಣಬಹುದು.

ಕೆಲವು ಖಾಸಗಿ ಕಂಪನಿಗಳಲ್ಲೂ ಸರ್ಕಾರ ತನ್ನ ಬಂಡವಾಳ ಹೂಡಿದೆ. ಮತ್ತು ಅಂಥ ಸಂಸ್ಥೆಗಳ ಆಡಳಿತ ಮಂಡಲಿಯಲ್ಲಿ ಅದರ ಪ್ರತಿನಿಧಿಗಳಿದ್ದಾರೆ. ಆದರೆ ಈ ರೀತಿಯ ಬಹುಪಾಲು ಸಂಸ್ಥೆಗಳಲ್ಲಿ ಸರ್ಕಾರದ ಪ್ರತಿನಿಧಿಗಳು ಅಧ್ಯಕ್ಷರಾಗಿ ಮತ್ತು ಮುಖ್ಯ ವ್ಯವಸ್ಥಾಪಕರಾಗಿ ಆಡಳಿತ ನಿರ್ವಹಿಸುತ್ತಿದ್ದಾರೆ.

ಮುಕ್ತಾಯ

ಮೈಸೂರು ರಾಜ್ಯ ಸರ್ಕಾರಿ ಕೈಗಾರಿಕಾರಂಗವನ್ನು ನಮ್ಮ ದೇಶದಲ್ಲಿ ಸ್ಥಾಪಿಸಿದ ಪ್ರಥಮ ರಾಜ್ಯ. ಇಂದು ಈ ಕೈಗಾರಿಕೆಗಳು ತಮ್ಮ ಶಕ್ತಿ ಮೀರಿ ದುಡಿಯುತ್ತಿದ್ದರೂ ಎಲ್ಲವೂ ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸಿದರೆ ತಪ್ಪಾಗಬಹುದು. ಏನಾದರೂ ನ್ಯೂನತೆಗಳು ಕಂಡುಬಂದಲ್ಲಿ ಅವುಗಳನ್ನು ಪರಿಶೀಲಿಸಿ, ಸರಿಪಡಿಸಲು ಆಧುನಿಕ ಆಡಳಿತ ತಂತ್ರಗಳನ್ನು ಅನುಸರಿಸಬೇಕು. ಅಲ್ಲದೆ ಸರ್ಕಾರಿ ಕೈಗಾರಿಕೆಗಳು ಹೆಚ್ಚು ಹೆಚ್ಚು ಲಾಭಗಳಿಸಲು ಅವುಗಳಲ್ಲಿ ಆಧುನಿಕ ವಾಣಿಜ್ಯ ವಿಧಾನಗಳನ್ನು ಸರಿಯಾಗಿ ಪಾಲಿಸಬೇಕು.

5

ಕನ್ನಡನಾಡಿನ ಉದ್ಯಮವಿಕಾಸದಲ್ಲಿ ಈ ಕೆಳಗಿನ ಮುಖ್ಯಾಂಶಗಳು ಕಂಡುಬರುವುವು :—

೧. ಕನ್ನಡನಾಡಿನಲ್ಲಿರುವ ಅಪಾರವಾದ ಸಂಪತ್ತನ್ನು ಉಪಯೋಗಿಸಿ ಕೊಳ್ಳುವಲ್ಲಿ ನಾವಿನ್ನೂ ಬಹಳ ಹಿಂದುಳಿದಿರುತ್ತೇವೆ.

೨. ಇಲ್ಲಿಯವರೆಗಾದ ಔದ್ಯಮಿಕವಿಕಾಸ ಹೇಳಿಕೊಳ್ಳುವಂತಹ ಪ್ರಗತಿಯನ್ನೇನೂ ಸಾಧಿಸಿಲ್ಲ. ನಾವು ಆರ್ಥಿಕರಂಗದಲ್ಲಿ ಪ್ರಭಾವಶಾಲಿಯಾದ ಪಾತ್ರವನ್ನು ವಹಿಸಿಕೊಳ್ಳುವಂತಾಗಬೇಕಾದರೆ ಅವುಗಳ ಪ್ರಗತಿ ಇನ್ನೂ ಹೆಚ್ಚು ರಭಸದಿಂದ ಮುಂದುವರೆಯಬೇಕು.

೩. ಖಾಸಗಿ ರಂಗದಲ್ಲಿ ಔದ್ಯಮಿಕ ಪ್ರಗತಿ ಕುಂಟುತ್ತ ಸಾಗಿದೆ.

೪. ಈಗಿರುವ ಉದ್ದಿಮೆಗಳಲ್ಲಿ ಗೃಹೋದ್ಯಮಗಳೇ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಟ್ಟಿವೆ.

೫. ಉದ್ಯಮಗಳಿಂದಾದ ಉತ್ಪತ್ತಿ ಹಾಗೂ ಆದಾಯದಲ್ಲಿ ಮಾತ್ರ ಬೃಹತ್ಪ್ರಮಾಣದ ಉದ್ದಿಮೆಗಳಲ್ಲಿಯೇ ಹೆಚ್ಚಿನ ಪ್ರಗತಿ ಕಂಡುಬರುತ್ತದೆ.

೬. ಬಟ್ಟೆಯ ಉದ್ದಿಮೆಯೇ ಕರ್ನಾಟಕದ ಪ್ರಮುಖ ಉದ್ದಿಮೆಯಾಗಿದ್ದು ಅರಣ್ಯ ಹಾಗೂ ಖನಿಜಮೂಲ ಉದ್ದಿಮೆಗಳಲ್ಲಿ ರಭಸದ ಪ್ರಗತಿ ಅವಶ್ಯವಿದೆ.

೭. ಉದ್ದಿಮೆಗಳನ್ನು ವಿಕೇಂದ್ರೀಕರಿಸಿ ಪ್ರಾದೇಶಿಕ ಸಮತೋಲ ಕಾಯ್ದುಕೊಳ್ಳುವುದರ ಕಡೆಗೆ ಗಮನ ಕೊಡುವುದು ಅವಶ್ಯವಿದೆ.

—ರಾಮಚಂದ್ರ ಕುಲಕರ್ಣಿ[1]

---

[1] 'ಕನ್ನಡನಾಡಿನ ಉದ್ದಿಮೆರಂಗದ' ವಿವೇಚನೆ', ಕನ್ನಡದ ಕಾಲುಶತಮಾನ, ಮಿಂಚಿನ ಬಳ್ಳಿಯ ಕಾರ್ಯಾಲಯ, ಧಾರವಾಡ, ೧೯೬೫; ಪುಟ ೪೦೭

ಎನ್. ಪ್ರಭುಸ್ವಾಮಿ

ಏಷ್ಯದ ಅಭಿವೃದ್ಧಿ ಬ್ಯಾಂಕು

ಏಷ್ಯದ ಅಭಿವೃದ್ದಿ ಬ್ಯಾಂಕನ್ನು ಸ್ಥಾಪಿಸಲು ಮೊದಲ ಸೂಚನೆ ಬಂದದ್ದು ೧೯೬೩ರಲ್ಲಿ. ಏಷ್ಯ ಮತ್ತು ದೂರಪ್ರಾಚ್ಯ ದೇಶಗಳ ಆರ್ಥಿಕಾಭಿವೃದ್ಧಿ ಆಯೋಗ ಏಷ್ಯದ ಪ್ರಾದೇಶಿಕ ಅಭಿವೃದ್ಧಿ ಸಾಧಿಸಲು ಆವಶ್ಯಕವಾದ ಸಲಹೆಗಳನ್ನು ರೂಪಿಸಲು ಒಂದು ಪರಿಣತರ ಸಮಿತಿಯನ್ನು ನೇಮಿಸಿತು. ಈ ಸಮಿತಿ ಥೈಲೆಂಡಿನ ರಾಜಧಾನಿ ಬ್ಯಾಂಗ್‌ಕಾಕಿನಲ್ಲಿ ಅಕ್ಟೋಬರ್ ೧೯೬೪ರಲ್ಲಿ ಸಮಾವೇಶಗೊಂಡು ಸರ್ವಾನುಮತ ಪಡೆದ ಒಂದು ವರದಿಯನ್ನು ತಯಾರಿಸಿತು. ಈ ಸಮಿತಿ ಏಷ್ಯದ ಪ್ರಾದೇಶಿಕ ಅಭಿವೃದ್ಧಿಯಾಗಬೇಕಾದರೆ ಏಷ್ಯದ ಅಭಿವೃದ್ಧಿ ಬ್ಯಾಂಕು ಅತ್ಯಾವಶ್ಯಕ ಎಂದು ಸೂಚಿಸಿತು. ೧೯೬೫ರ ಮಾರ್ಚಿಯಲ್ಲಿ ಏಷ್ಯ ಮತ್ತು ದೂರಪ್ರಾಚ್ಯಗಳ ಆರ್ಥಿಕಾಭಿವೃದ್ಧಿ ಆಯೋಗ ತನ್ನ ಅಧಿವೇಶನದಲ್ಲಿ ಮೇಲ್ಕಂಡ ಸಲಹೆಯನ್ನು ಒಪ್ಪಿಕೊಂಡಿತು. ಈ ಬ್ಯಾಂಕು ಸ್ಥಾಪನೆಯಾದರೆ ಎಲ್ಲ ರೀತಿಯ ಪ್ರೋತ್ಸಾಹ ಕೊಡುವುದಾಗಿ ಆಗ ಅಮೆರಿಕ ಸಂಯುಕ್ತಸಂಸ್ಥಾನದ ಅಧ್ಯಕ್ಷರಾಗಿದ್ದ ಜಾನ್ಸನ್ ಮತ್ತು ಪ್ರಪಂಚ ಬ್ಯಾಂಕಿನ ಅಧ್ಯಕ್ಷರಾಗಿದ್ದ ಯೂಜಿನ್ ಬ್ಲ್ಯಾಕ್ ಘೋಷಿಸಿದರು. ಇದರ ಪರಿಣಾಮವಾಗಿ ೧೯೬೬ರಲ್ಲಿ ಏಷ್ಯದ ಅಭಿವೃದ್ಧಿ ಬ್ಯಾಂಕು ಏಷ್ಯದ ವಿವಿಧ ರಾಷ್ಟ್ರಗಳ ಅನುಮತಿಯೊಡನೆ ಅಸ್ತಿತ್ವಕ್ಕೆ ಬಂತು.

ಬ್ಯಾಂಕಿನ ಉದ್ದೇಶಗಳು

ಬ್ಯಾಂಕಿನ ಮುಖ್ಯ ಉದ್ದೇಶ ಏಷ್ಯದ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು ಮತ್ತು ಅದು ಶೀಘ್ರಗತಿಯಲ್ಲಿ ನಡೆಯುವಂತೆ ಮಾಡುವುದು. ಎರಡನೆಯ ಮಹಾಯುದ್ಧವಾದ ಮೇಲೆ ಯೂರೋಪ್, ಅಮೆರಿಕ ಮತ್ತು ಆಫ್ರಿಕಗಳ ರಾಷ್ಟ್ರಗಳಲ್ಲಿ ಸಾಕಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ. ಲ್ಯಾಟಿನ್ ಅಮೆರಿಕನ್ ದೇಶಗಳು ಮತ್ತು ಆಫ್ರಿಕನ್ ದೇಶಗಳು ಅಭಿವೃದ್ಧಿ ಬ್ಯಾಂಕುಗಳನ್ನು ಸ್ಥಾಪಿಸಿಕೊಂಡು ಪ್ರಗತಿ ಸಾಧಿಸಿವೆ. ಐರೋಪ್ಯ ಆರ್ಥಿಕ ಸಮುದಾಯಕ್ಕೆ ಸೇರಿದ ರಾಷ್ಟ್ರಗಳೂ ಒಂದು ರೀತಿಯ ಅಭಿವೃದ್ಧಿ

ಬ್ಯಾಂಕು ಸ್ಥಾಪಿಸಿಕೊಂಡು ಪ್ರಗತಿ ಸಾಧಿಸಿವೆ. ಆದುದರಿಂದ ಏಷ್ಯದಲ್ಲಿ ಏಕೆ ಒಂದು ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸಿ ಆರ್ಥಿಕ ಅಭಿವೃದ್ಧಿ ತ್ವರಿತಗೊಳಿಸ ಬಾರದು ಎಂಬ ಆಲೋಚನೆ ಅನೇಕ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ತಲೆ ದೋರಿತು. ಅದರ ಪರಿಣಾಮವಾಗಿ ಏಷ್ಯ ಅಭಿವೃದ್ಧಿ ಬ್ಯಾಂಕಿನ ಸ್ಥಾಪನೆಗೆ ಅನೇಕ ಪ್ರಮುಖ ರಾಷ್ಟ್ರಗಳ ಬೆಂಬಲ ದೊರೆಯಿತು.

ಏಷ್ಯದ ಅಭಿವೃದ್ಧಿ ಬ್ಯಾಂಕಿನ ಕಾರ್ಯಗಳು ವಿಶಾಲ ತಳಹದಿಯ ಮೇಲೆ ರೂಪಿತವಾಗಿವೆ. ಈ ಬ್ಯಾಂಕು ಕೈಗಾರಿಕೆ, ಕೃಷಿ, ವಿದ್ಯುಚ್ಛಕ್ತಿ ಉತ್ಪಾದನೆ, ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಒದಗಿಸಬಹುದು. ಒಂದೇ ದೇಶಕ್ಕೆ ಸೇರಿದ ಅಥವಾ ಒಂದಕ್ಕಿಂತ ಹೆಚ್ಚಿನ ದೇಶಗಳಿಗೆ ಅನ್ವಯಿಸುವಂತೆ ಇರುವ ನಿರ್ದಿಷ್ಟ ಯೋಜನೆಗಳಿಗೆ ಹಣ ಒದಗಿಸುತ್ತದೆ. ಖಾಸಗಿ ಮತ್ತು ಸರ್ಕಾರಿ ವಲಯ ಗಳಲ್ಲಿರುವ ಸಂಸ್ಥೆಗಳೆರಡಕ್ಕೂ ಸಹಾಯಮಾಡಬಹುದು. ಖಾಸಗಿ ವಲಯ ದಲ್ಲಿರುವ ಸಂಸ್ಥೆಗಳಿಗೆ ಆಯಾ ಸರ್ಕಾರದ ಜಾಮಿನಿನ ಮೇಲೆ ಸಹಾಯ ಒದಗಿಸು ತ್ತದೆ. ಸಾಲ ಕೊಡುವುದರ ಮೂಲಕ ಅಥವಾ ಕೈಗಾರಿಕಾ ಸಂಸ್ಥೆಗಳ ಷೇರು ಗಳನ್ನು ಮಾರಲು ಪ್ರೋತ್ಸಾಹಕೊಟ್ಟು ಅದರ ಮೂಲಕ ಅವು ಬಂಡವಾಳ ಕೂಡಿಸಿ ಕೊಳ್ಳುವುದಕ್ಕೆ ಸಹಾಯ ಮಾಡುವುದರ ಮೂಲಕ ಮತ್ತು ಕೆಲವು ಸಂಸ್ಥೆಗಳಿಗೆ ಜಾಮೀನು ನೀಡುವುದರ ಮೂಲಕ ಈ ಬ್ಯಾಂಕು ಅಭಿವೃದ್ಧಿ ಕಾರ್ಯಗಳಿಗೆ ನೆರವಾಗುತ್ತದೆ. ಸಾಮಾನ್ಯವಾಗಿ ಧನಸಹಾಯ ಒದಗಿಸುವಾಗ ಆ ಸಂಸ್ಥೆಗಳಿಗೆ ವಿದೇಶೀವಿನಿಮಯದ ರೂಪದಲ್ಲಿ ತಗಲುವ ವೆಚ್ಚವನ್ನು ಮಾತ್ರ ಕೊಡುತ್ತದೆ. ಸಾಲಗಳನ್ನು ವಾಪಸು ಪಡೆಯುವಾಗಲೂ ತಾನು ಯಾವ ದೇಶದ ನಾಣ್ಯದ ರೂಪದಲ್ಲಿ ಸಾಲ ಕೊಟ್ಟಿತ್ತೋ ಅದೇ ನಾಣ್ಯದ ಮೂಲಕ ವಾಪಸು ಪಡೆಯುತ್ತದೆ. ಧನಸಹಾಯದ ಜೊತೆಗೆ ತಾಂತ್ರಿಕ ಸಹಾಯವನ್ನೂ ಒದಗಿಸಲು ಈ ಬ್ಯಾಂಕು ಏರ್ಪಾಡು ಮಾಡುತ್ತದೆ. ಅಭಿವೃದ್ಧಿ ಯೋಜನೆಗಳ ತಯಾರಿಕೆಯಲ್ಲಿ ಕೂಡ ನೆರವು ನೀಡುತ್ತದೆ. ಹೀಗೆ ಏಷ್ಯದಲ್ಲಿರುವ ಸಣ್ಣ ರಾಷ್ಟ್ರಗಳಿಗೆ ಸಹಾಯ ಮಾಡು ವುದು ಬ್ಯಾಂಕಿನ ಮುಖ್ಯ ಉದ್ದೇಶ.

ಬ್ಯಾಂಕಿನ ಸಂಪನ್ಮೂಲಗಳು

ಈ ಬ್ಯಾಂಕಿನ ಸದಸ್ಯತ್ವ ವಿಶಾಲ ತಳಹದಿಯ ಮೇಲೆ ರೂಪಿತವಾಗಿದೆ. ಲ್ಯಾಟಿನ್ ಅಮೆರಿಕನ್ ದೇಶಗಳಿಗೆ ಸಂಬಂಧಿಸಿದ ಅಭಿವೃದ್ಧಿ ಬ್ಯಾಂಕಿನ ಸದಸ್ಯತ್ವವನ್ನು ಲ್ಯಾಟಿನ್ ಅಮೆರಿಕನ್ ದೇಶಗಳು ಮತ್ತು ಅಮೆರಿಕ ಸಂಯುಕ್ತಸಂಸ್ಥಾನ ಹೊಂದಿವೆ. ಆಫ್ರಿಕನ್ ದೇಶಗಳು ಮಾತ್ರ ಆಫ್ರಿಕ ಅಭಿವೃದ್ಧಿ ಬ್ಯಾಂಕಿನ ಸದಸ್ಯತ್ವ ಹೊಂದಿವೆ. ಆದರೆ ಏಷ್ಯದ ಅಭಿವೃದ್ಧಿ ಬ್ಯಾಂಕಿನ ಸದಸ್ಯತ್ವವನ್ನು ಅನೇಕ ರಾಷ್ಟ್ರಗಳಿಗೆ ಕೊಡಲಾಗಿದೆ. ಪ್ರಪಂಚದ ಎಲ್ಲ ಅಭಿವೃದ್ಧಿಹೊಂದಿರುವ

ದೇಶಗಳ ಸಹಕಾರ ಪಡೆಯುವ ದೃಷ್ಟಿಯಿಂದ ಈ ರೀತಿ ಸದಸ್ಯತ್ವವನ್ನು ಏಷ್ಯದ ಹೊರ ರಾಷ್ಟ್ರಗಳಿಗೂ ಕೊಡಲಾಗಿದೆ. ಏಷ್ಯದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಮಾತ್ರ ನೆರವು ನೀಡುವುದು ಬ್ಯಾಂಕಿನ ಉದ್ದೇಶವಾದರೂ, ಏಷ್ಯದ ಹೊರಗಿನ ರಾಷ್ಟ್ರಗಳಿಗೂ ಬ್ಯಾಂಕಿನ ಸದಸ್ಯತ್ವ ಪಡೆಯುವ ಹಕ್ಕನ್ನು ಒದಗಿಸಿ ಕೊಡಲಾಗಿದೆ. ಆದರೆ ಏಷ್ಯದ ರಾಷ್ಟ್ರಗಳು ಬ್ಯಾಂಕಿನ ಕಾರ್ಯನಿರ್ವಹಣೆಯಲ್ಲಿ ತಮ್ಮ ಹತೋಟಿ ಇಟ್ಟುಕೊಳ್ಳಲು ಸೇಕಡಾ ೬೦ರಷ್ಟು ಅಧಿಕೃತ ಬಂಡವಾಳವನ್ನು ತಾವೇ ಒದಗಿಸುವ ಹಕ್ಕನ್ನು ಇರಿಸಿಕೊಂಡಿವೆ. (ಈ ಬ್ಯಾಂಕಿನ ದೃಷ್ಟಿಯಲ್ಲಿ ಆಸ್ಟ್ರೇಲಿಯ ಮತ್ತು ನ್ಯೂ ಜೀಲೆಂಡ್ ರಾಷ್ಟ್ರಗಳು ಏಷ್ಯ ಪ್ರಾದೇಶಿಕ ವಲಯಕ್ಕೆ ಸೇರಿವವಾಗಿವೆ). ಉಳಿದ ಸೇಕಡಾ ೪೦ರಷ್ಟು ಅಧಿಕೃತ ಬಂಡವಾಳವನ್ನು ಏಷ್ಯ ವಲಯಕ್ಕೆ ಸೇರದ ರಾಷ್ಟ್ರಗಳು ಒದಗಿಸಿವೆ. ಕೋಷ್ಟಕ ೧ರಲ್ಲಿ ಕಂಡುಬರುವಂತೆ ವಿವಿಧ ರಾಷ್ಟ್ರಗಳಿಂದ ಈವರೆಗೆ ಬ್ಯಾಂಕಿಗೆ ಅಧಿಕೃತ ಬಂಡವಾಳ ಒದಗಿಸಲಾಗಿದೆ.

ಕೋಷ್ಟಕ ೧

೧೯೬೯ನೆಯ ಡಿಸೆಂಬರ್ ತಿಂಗಳ ಕೊನೆಯವರೆಗೆ ವಿವಿಧ ರಾಷ್ಟ್ರಗಳು ಒದಗಿಸಿರುವ ಅಧಿಕೃತ ಬಂಡವಾಳ

ಸದಸ್ಯ ರಾಷ್ಟ್ರಗಳು	ಒದಗಿಸಿರುವ ಬಂಡವಾಳದ ಮೊತ್ತ (ದಶಲಕ್ಷ ಡಾಲರುಗಳಲ್ಲಿ)	ಒಟ್ಟು ಬಂಡವಾಳದ ಸೇಕಡಾವಾರು
ಅಫ್ಘಾನಿಸ್ತಾನ	೪.೭೮	೦.೪೯
ಆಸ್ಟ್ರೇಲಿಯ	೮೫.೦೦	೮.೬೯
ಕಾಂಬೋಡಿಯ	೩.೫೦	೦.೩೬
ಸಿಂಹಳ	೮.೫೨	೦.೮೭
ಫಾರ್ಮೋಸ	೧೬.೦೦	೧.೬೪
ಹಾಂಗ್ ಕಾಂಗ್	೮.೦೦	೦.೮೨
ಭಾರತ	೯೩.೦೦	೯.೫೧
ಇಂಡೊನೇಷ್ಯ	೨೫.೦೦	೨.೫೬
ಜಪಾನ್	೨೦೦.೦೦	೨೦.೪೫
ದಕ್ಷಿಣಕೊರಿಯ	೩೦.೦೦	೩.೦೭
ಲಾವೋಸ್	೦.೪೨	೦.೦೪
ಮಲೇಷಿಯ	೨೦.೦೦	೨.೦೪
ನೇಪಾಳ	೨.೧೬	೦.೨೨

ಸದಸ್ಯ ರಾಷ್ಟ್ರಗಳು	ಒದಗಿಸಿರುವ ಬಂಡವಾಳದ ಮೊತ್ತ (ದಶಲಕ್ಷ ಡಾಲರುಗಳಲ್ಲಿ)	ಒಟ್ಟು ಬಂಡವಾಳದ ಶೇಕಡಾವಾರು
ನ್ಯೂ ಜೀಲೆಂಡ್	೨೨.೫೬	೨.೩೧
ಪಾಕಿಸ್ತಾನ	೩೨.೦೦	೩.೨೭
ಫಿಲಿಪೀನ್ಸ್	೩೫.೦೦	೩.೫೮
ಸಿಂಗಪುರ	೫.೦೦	೦.೫೧
ಥೈಲೆಂಡ್	೨೦.೦೦	೨.೦೪
ದಕ್ಷಿಣ ವಿಯೆಟ್‌ನಾಂ	೧೨.೦೦	೧.೨೩
ಪಶ್ಚಿಮ ಸಾವೊಅ	೦.೦೬	೦.೦೧
ಏಷ್ಯವಲಯಕ್ಕೆ ಸೇರದೆ ಇರುವ ರಾಷ್ಟ್ರಗಳು*		
ಆಸ್ಟ್ರಿಯ	೫.೦೦	೦.೫೧
ಬೆಲ್ಜಿಯಂ	೫.೦೦	೦.೫೧
ಕೆನಡ	೨೫.೦೦	೨.೫೬
ಡೆನ್ಮಾರ್ಕ್	೫.೦೦	೦.೫೧
ಫಿನ್ಲೆಂಡ್	೫.೦೦	೦.೫೧
ಪಶ್ಚಿಮ ಜರ್ಮನಿ	೩೪.೦೦	೩.೪೮
ಇಟಲಿ	೨೦.೦೦	೨.೦೪
ಹಾಲೆಂಡ್	೧೧.೦೦	೧.೧೨
ನಾರ್ವೆ	೫.೦೦	೦.೫೧
ಸ್ವೀಡನ್	೫.೦೦	೦.೫೧
ಸ್ವಿಟ್ಜರ್‌ಲೆಂಡ್	೫.೦೦	೦.೫೧
ಬ್ರಿಟನ್	೩೦.೦೦	೩.೦೭
ಅಮೆರಿಕ ಸಂಯುಕ್ತಸಂಸ್ಥಾನ	೨೦೦.೦೦	೨೦.೪೫
	೩೩೫.೦೦	೩೬.೨೯
ಒಟ್ಟು	೯೭೮.೦೦	೧೦೦.೦೦

ಆಧಾರ: ೧೯೬೯ರ ಏಷ್ಯದ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ವರದಿ, ಪುಟ ೬೮–೬೯

*ಫ್ರಾನ್ಸ್ ದೇಶ ೧೯೭೦ರ ಅಗಸ್ಟಿನಲ್ಲಿ ಸದಸ್ಯರಾಷ್ಟ್ರವಾಗಿ ಬ್ಯಾಂಕನ್ನು ಸೇರಿದೆ. ೨೫ ದಶಲಕ್ಷ ಡಾಲರುಗಳನ್ನು (ಅಧಿಕೃತ ಬಂಡವಾಳವಾಗಿ) ಬ್ಯಾಂಕಿಗೆ ಕೊಟ್ಟಿದೆ. ಇದರಿಂದ ಬ್ಯಾಂಕಿನ ಅಧಿಕೃತ ಬಂಡವಾಳದ ಮೊತ್ತ ೧೦೦೩ ದಶಲಕ್ಷ ಡಾಲರುಗಳಿಗೇರಿದೆ.

ಮೇಲಿನ ಕೋಷ್ಟಕವನ್ನು ಪರಿಶೀಲಿಸಿದಾಗ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಜಪಾನ್ ಅತ್ಯಧಿಕ ಚಂದಾ ಕೊಟ್ಟಿರುವುದು ಕಂಡುಬರುತ್ತದೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಸೇಕಡಾ ೬೦ಕ್ಕಿಂತ ಹೆಚ್ಚು ಭಾಗದ ಅಧಿಕೃತ ಬಂಡವಾಳ ಒದಗಿಸಿವೆ.

ಅಧಿಕೃತ ಬಂಡವಾಳದಿಂದ ತನ್ನ ಎಲ್ಲ ಕರ್ತವ್ಯಗಳನ್ನೂ ನಿರ್ವಹಿಸಲು ಬ್ಯಾಂಕಿಗೆ ಸಾಧ್ಯವಿಲ್ಲ. ಆದ್ದರಿಂದ ಬ್ಯಾಂಕು ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಿ ಕೊಳ್ಳಲು ಕೆಲವು ನಿಧಿಗಳನ್ನು ಸ್ಥಾಪಿಸಿದೆ. ಸದ್ಯದಲ್ಲಿ ಮೂರು ನಿಧಿಗಳಿವೆ. ಅವು ಯಾವುವೆಂದರೆ: ೧ ತಾಂತ್ರಿಕ ಸಹಾಯ ಒದಗಿಸಲು ನಿರ್ಮಿಸಿರುವ ನಿಧಿ, ೨ ವ್ಯವಸಾಯದ ನಿಧಿ ಮತ್ತು ೩ ವಿವಿಧೋದ್ದೇಶ ಕಾರ್ಯಗಳಿಗಾಗಿ ನಿಗದಿ ಗೊಳಿಸಿರುವ ನಿಧಿ.

ಮೇಲ್ಕಂಡ ನಿಧಿಗಳಿಗೆ ಯಾವ ರಾಷ್ಟ್ರ ಬೇಕಾದರೂ ತನ್ನ ನಾಣ್ಯದ ರೂಪದಲ್ಲಿ ತನಗಿಷ್ಟ ಬಂದಷ್ಟು ಬಂಡವಾಳ ಒದಗಿಸಬಹುದು. ಈ ರೀತಿ ದೊರೆತ ಬಂಡವಾಳವನ್ನು ಬ್ಯಾಂಕ್ ಉಪಯೋಗಿಸಿಕೊಂಡು ಏಷ್ಯದ ರಾಷ್ಟ್ರಗಳಿಗೆ ನೆರವು ನೀಡುತ್ತದೆ. ಮೇಲ್ಕಂಡ ನಿಧಿಗಳನ್ನು ಸ್ಥಾಪಿಸಿರುವುದರಿಂದ ವಿದೇಶೀ ವಿನಿಮಯ ಸುಲಭವಾಗಿ ದೊರೆತು ಅವುಗಳ ಪ್ರಯೋಜನವನ್ನು ಏಷ್ಯದ ಸಣ್ಣ ರಾಷ್ಟ್ರಗಳು ಹೊಂದಲು ಸಾಧ್ಯವಾಗಿದೆ. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳು ಬಹಳ ಕಡಿಮೆ ಬಡ್ಡಿದರದಲ್ಲಿ ಬ್ಯಾಂಕಿಗೆ ಹಣ ಒದಗಿಸಿವೆ. ಅದರ ಪರಿಣಾಮವಾಗಿ ಬ್ಯಾಂಕು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ರಿಯಾಯಿತಿ ಬಡ್ಡಿದರದಲ್ಲಿ ಹಣ ಒದಗಿಸಬಲ್ಲುದಾಗಿದೆ. ಬ್ಯಾಂಕಿನ ನಿಧಿಗಳಿಗೆ ಹಣ ಒದಗಿರುವ ಬಗೆಯನ್ನು ಕೋಷ್ಟಕ ೨ರಲ್ಲಿ ತೋರಿಸಿದೆ.

ಕೋಷ್ಟಕ ೨

೧೯೬೯ರ ಡಿಸೆಂಬರ್ ಕೊನೆಯ ವರೆಗೆ ವಿವಿಧ ರಾಷ್ಟ್ರಗಳು ಬ್ಯಾಂಕಿನ ನಿಧಿಗಳಿಗೆ ಒದಗಿಸಿರುವ ಬಂಡವಾಳ (ಲಕ್ಷ ಡಾಲರುಗಳಲ್ಲಿ)

ರಾಷ್ಟ್ರಗಳು	ತಾಂತ್ರಿಕ ಸಹಾಯ ನಿಧಿ	ವ್ಯವಸಾಯದ ನಿಧಿ	ವಿವಿಧೋದ್ದೇಶ ನಿಧಿ	ಒಟ್ಟು ನಿಧಿ
ಕೆನಡ	೧.೦೦	—	೨೫೦.೦೦	೨೫೧.೦೦
ಡೆನ್ಮಾರ್ಕ್	೩.೦೦	೨೦.೦೦	—	೨೩.೦೦
ಫಿನ್‌ಲೆಂಡ್	೦.೦೮	—	—	೦.೦೮
ಪ. ಜರ್ಮನಿ	೦.೪೩	—	—	೦.೪೩
ಜಪಾನ್	೩.೧೪	೨೦೦.೦೦	೨೦೦.೦೦	೪೦೩.೧೪

ರಾಷ್ಟ್ರಗಳು	ತಾಂತ್ರಿಕ ಸಹಾಯ ನಿಧಿ	ವ್ಯವಸಾಯದ ನಿಧಿ	ವಿವಿಧೋದ್ದೇಶ ನಿಧಿ	ಒಟ್ಟು ನಿಧಿ
ಹಾಲೆಂಡ್	—	೧೧.೦೫	—	೧೧.೦೫
ನ್ಯೂಜೀಲೆಂಡ್	೧.೬೮	—	—	೧.೬೮
ಬ್ರಿಟನ್	೦.೫೭	—	—	೦.೫೭
ಅಮೆರಿಕ. ಸಂ. ಸಂ.	೧೨.೫೦	—	—	೧೨.೫೦
ತನ್ನ ಸಂಪನ್ಮೂಲಗಳಿಂದ ಬ್ಯಾಂಕು ತೆಗೆದಿಟ್ಟಿರುವುದು	—	—	೧೪೫.೭೫	೧೪೫.೭೫
ಮೊತ್ತ	೨೨.೪೦	೨೩೧.೦೫	೫೯೫.೭೫	೮೪೯.೨೦

ಆಧಾರ: ೧೯೬೯ರ ಏಷ್ಯ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ವರದಿ, ಪುಟ ೫೦-೫೧ ಮತ್ತು ೯೨-೯೩

ಬ್ಯಾಂಕಿನ ಕರ್ತವ್ಯಗಳು

ಏಷ್ಯ ರಾಷ್ಟ್ರಗಳು ವ್ಯವಸಾಯ, ಕೈಗಾರಿಕೆ ವಿದ್ಯುಚ್ಛಕ್ತಿ ಉತ್ಪಾದನೆ ಇತ್ಯಾದಿ ಕ್ಷೇತ್ರಗಳಲ್ಲಿ ಅಭಿವೃದ್ಧಿಕಾರ್ಯ ಕೈಗೊಂಡರೆ ಬ್ಯಾಂಕು ಅದಕ್ಕೆ ಹಣಕಾಸಿನ ನೆರವು ನೀಡುತ್ತದೆ. ಬ್ಯಾಂಕು ಈಗ ನಿರ್ವಹಿಸುತ್ತಿರುವ ಕಾರ್ಯಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು: ೧ ತಾಂತ್ರಿಕ ನೆರವು ನೀಡುವುದು; ೨ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಸಾಲ ಒದಗಿಸುವುದು; ಮತ್ತು ೩ ಏಷ್ಯ ಖಂಡದಲ್ಲಿ ಪ್ರಾದೇಶಿಕ ಅಭಿವೃದ್ಧಿಗೆ ಸಹಾಯಕವಾದ ಕಾರ್ಯಗಳನ್ನು ಪ್ರೋತ್ಸಾಹಿಸುವುದು. ಇದುವರೆಗೆ ಯಾವ ರೀತಿ ಬ್ಯಾಂಕು ತನ್ನ ಕಾರ್ಯ ನಿರ್ವಹಿಸಿದೆ ಎಂಬುದನ್ನು ಈಗ ಪರಿಶೀಲಿಸಬಹುದು.

ತಾಂತ್ರಿಕ ನೆರವು

ಏಷ್ಯದ ಕೆಲವು ಸಣ್ಣ ರಾಷ್ಟ್ರಗಳು ಆಧುನಿಕ ತಾಂತ್ರಿಕ ಜ್ಞಾನವನ್ನು ಸ್ವಶಕ್ತಿಯಿಂದ ಪಡೆಯಲು ಸಾಧ್ಯವಾಗಿಲ್ಲ. ತಮ್ಮ ದೇಶಗಳಲ್ಲಿ ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಾಗ ಎದುರಿಸಬೇಕಾಗುವ ಕೆಲವು ಸಮಸ್ಯೆಗಳನ್ನು ಪರಿಹರಿಸಬೇಕಾದರೆ ಆಧುನಿಕ ತಾಂತ್ರಿಕ ಜ್ಞಾನವಿರಬೇಕು. ಇಂಥ ಸಂದರ್ಭಗಳಲ್ಲಿ ಅವು ಬ್ಯಾಂಕಿನ ನೆರವನ್ನು ಪಡೆಯುತ್ತವೆ. ಆದ್ದರಿಂದ ತಾಂತ್ರಿಕ ನೆರವು ಒದಗಿಸುವುದು ಬ್ಯಾಂಕಿನ ಅತ್ಯಾವಶ್ಯಕ ಕರ್ತವ್ಯವಾಗಿದೆ. ಮುಂದಿನ ಕೋಷ್ಟಕಗಳಲ್ಲಿ ೧೯೬೭ರಿಂದ ಇದುವರೆಗೆ ಬ್ಯಾಂಕ್

ಒದಗಿಸಿರುವ ತಾಂತ್ರಿಕ ನೆರವಿನ ಮೊತ್ತವನ್ನು ಕೊಡಲಾಗಿದೆ. ವಿವಿಧ ಕ್ಷೇತ್ರಗಳಿಗೆ ಮತ್ತು ದೇಶಗಳಿಗೆ ಒದಗಿಸಿರುವ ತಾಂತ್ರಿಕ ನೆರವಿನ ಮೊತ್ತ ಕೊಡಲಾಗಿದೆ.

ಕೋಷ್ಟಕ ೩

ವಿವಿಧ ಆರ್ಥಿಕ ಕ್ಷೇತ್ರಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಒದಗಿಸಿರುವ ತಾಂತ್ರಿಕ ನೆರವಿನ ಮೊತ್ತ (೧೯೬೭–೧೯೬೯ರ ಪೂರ್ತಿ)
(ಡಾಲರುಗಳಲ್ಲಿ)

ಆರ್ಥಿಕಕ್ಷೇತ್ರ	೧೯೬೭	೧೯೬೮	೧೯೬೯	ಒಟ್ಟು
ವ್ಯವಸಾಯ ಮತ್ತು ಮೀನುಗಾರಿಕೆ	೮೦,೦೦೦	೮,೪೭,೯೫೦	೧೫,೬೬,೦೦೦	೨೪,೯೩,೯೫೦
ಸಾಗಾಣಿಕೆ	—	೧,೬೬,೦೦೦	೫,೯೨,೦೦೦	೭,೫೮,೦೦೦
ಅಭಿವೃದ್ಧಿ ಬ್ಯಾಂಕುಗಳ ಸ್ಥಾಪನೆ ಮತ್ತು ವಿಸ್ತರಣೆಗೆ	—	೧,೨೪,೦೦೦	೬೯,೦೦೦	೧,೯೩,೦೦೦
ಒಟ್ಟು	೮೦,೦೦೦	೧೧,೩೭,೯೫೦	೨೨,೨೭,೦೦೦	೩೪,೪೪,೯೫೦

ಕೋಷ್ಟಕ ೪

೧೯೬೯ರ ಕೊನೆಯ ವರೆಗೆ ವಿವಿಧ ದೇಶಗಳಿಗೆ ಬ್ಯಾಂಕು ಒದಗಿಸಿರುವ ಒಟ್ಟು ತಾಂತ್ರಿಕ ನೆರವು (ಡಾಲರುಗಳಲ್ಲಿ)

ರಾಷ್ಟ್ರಗಳು	ಯೋಜನೆ ತಯಾರಿಸುವುದಕ್ಕಾಗಿ	ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಒದಗಿಸಿದ್ದು	ಒಟ್ಟು
ಆಫ್ಘಾನಿಸ್ತಾನ	೧,೬೪,೦೦೦	—	೧,೬೪,೦೦೦
ಸಿಂಹಳ	—	೫,೬೫,೦೦೦	೫,೬೫,೦೦೦
ಫಾರ್ಮೋಸ	೧,೦೦,೦೦೦	—	೧,೦೦,೦೦೦
ಇಂಡೋನೇಷ್ಯ	೩,೨೮,೦೦೦	೩,೫೨,೪೫೦	೬,೮೦,೪೫೦
ದ. ಕೊರಿಯ	—	೬೬,೫೦೦	೬೬,೫೦೦
ಲಾವೋಸ್	—	೨,೨೧,೦೦೦	೨,೨೧,೦೦೦

ರಾಷ್ಟ್ರಗಳು	ಯೋಜನೆ ತಯಾರಿಸುವುದಕ್ಕಾಗಿ	ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಒದಗಿಸಿದ್ದು	ಒಟ್ಟು
ಮಲೇಷಿಯ	೧,೯೨,೦೦೦	೮೦,೦೦೦	೨,೭೨,೦೦೦
ನೇಪಾಳ	೬೬,೦೦೦	೪,೫೪,೦೦೦	೫,೨೦,೦೦೦
ಫಿಲಿಪೀನ್ಸ್	೨,೨೫,೦೦೦	೨,೦೭,೦೦೦	೪,೩೨,೦೦೦
ಥೈಲೆಂಡ್	—	೨,೮೫,೦೦೦	೨,೮೫,೦೦೦
ದ. ವಿಯಟ್ನಾಂ	—	೮೯,೦೦೦	೮೯,೦೦೦
ಪ. ಸಾಮೋಅ	೫೦,೦೦೦	—	೫೦,೦೦೦
ಒಟ್ಟು	೧೧,೨೫,೦೦೦	೨೩,೧೯,೯೫೦	೩೪,೪೪,೯೫೦

ಆಧಾರ : ವಿಶ್ವದ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ವರದಿ, ಪುಟ ೯–೧೩

ಅಫ್ಘಾನಿಸ್ತಾನ ತನ್ನ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ (೧೯೬೭–೧೯೭೧) ಸಣ್ಣ ನೀರಾವರಿ ಯೋಜನೆಗಳಿಗೆ ಅಗ್ರಪ್ರಾಶಸ್ತ್ಯವನ್ನಿತ್ತಿದೆ. ಎಲ್ಲೆಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಳ್ಳಬಹುದು ಎಂಬುದರ ವಿಷಯವಾಗಿ ಸಲಹೆನೀಡಲು ಅದು ಬ್ಯಾಂಕನ್ನು ಕೋರಿಕೊಂಡಿತು. ಈ ದಿಶೆಯಲ್ಲಿ ಅಫ್ಘಾನಿಸ್ತಾನಕ್ಕೆ ಸಹಾಯ ಮಾಡಲು ಬ್ಯಾಂಕ್ ಪ್ರತ್ಯೇಕವಾಗಿ ಒಂದು ಆಯೋಗ ನೇಮಿಸಿತು. ಈ ಆಯೋಗ ಅಫ್ಘಾನಿಸ್ತಾನದಲ್ಲಿ ಒಂದು ಸಮೀಕ್ಷೆ ನಡೆಸಿದ ಮೇಲೆ ೪ ಅಥವಾ ೫ ಸಣ್ಣ ನೀರಾವರಿ ಯೋಜನೆಗಳನ್ನು ಆರಿಸಿಕೊಂಡು ಅವನ್ನು ಕಾರ್ಯಗತಗೊಳಿಸಲು ಧನಸಹಾಯ ಒದಗಿಸುತ್ತದೆ.

ಸಿಂಹಳದೇಶ ವಾಲ್ವಿ ನದೀ ಬಯಲಿನ ಅಭಿವೃದ್ಧಿ ಯೋಜನೆಯನ್ನು ಕೈಗೊಂಡಿದೆ. ಈ ನೀರಾವರಿ ಯೋಜನೆಯಿಂದ ೮೦ ಸಾವಿರ ಎಕರೆ ಭೂಮಿಗೆ ನೀರನ್ನೊದಗಿಸುವ ಗುರಿಯನ್ನಿಟ್ಟುಕೊಂಡಿದೆ. ಈ ಯೋಜನೆಗೆ ತಾಂತ್ರಿಕ ನೆರವನ್ನು ನೀಡುವಂತೆ ಬ್ಯಾಂಕನ್ನು ಕೋರಿತು. ಬ್ಯಾಂಕು ಇದನ್ನೊಪ್ಪಿಕೊಂಡು ನೆರವು ನೀಡುತ್ತಿದೆ.

ಇಂಡೋನೇಷ್ಯ ತನ್ನ ಪಂಚವಾರ್ಷಿಕ ಯೋಜನೆಯಲ್ಲಿ (೧೯೬೯–೧೯೭೩) ವ್ಯವಸಾಯದ ಅಭಿವೃದ್ಧಿಗೆ ಮತ್ತು ಅಧಿಕ ಆಹಾರ ಉತ್ಪನ್ನಕ್ಕೆ ಪ್ರಾಶಸ್ತ್ಯವನ್ನಿತ್ತಿದೆ. ಸೆಂಪೂರ್ ಮತ್ತು ಸೆಬರಾಂಗ್‌ನಲ್ಲಿ ತಾಳೆತೋಟಗಳ ಅಭಿವೃದ್ಧಿಗಾಗಿ ಬ್ಯಾಂಕಿನ ಸಹಾಯ ಕೋರಿತು. ಬ್ಯಾಂಕು ತಾಂತ್ರಿಕ ನೆರವು ನೀಡುತ್ತಿದೆ.

ಮಲೇಷಿಯದಲ್ಲಿ ಕೂಡ ತಾಳೆತೋಟಗಳ ಅಭಿವೃದ್ಧಿಗೆ ವಿಶೇಷ ಗಮನ ಕೊಡಲಾಗಿದೆ. ೧೯೬೧–೬೯ರ ಮಧ್ಯೆ ತಾಳೆ ಎಣ್ಣೆ ಉತ್ಪಾದನೆ ಸೇಕಡಾ ೧೭ರಷ್ಟು

ಹೆಚ್ಚಾಯಿತು. ಆದ್ದರಿಂದ ತಾಳೆ ಎಣ್ಣೆ ರಫ್ತು ಮಾಡಲು ಹೊಸ ಮಾರುಕಟ್ಟೆಗಳನ್ನು ಹುಡುಕಬೇಕಾಯಿತು. ಈ ಸಂದರ್ಭದಲ್ಲಿ ಹೊಸ ಮಾರುಕಟ್ಟೆಗಳ ವಿಷಯದಲ್ಲಿ ಒಂದು ಸಮೀಕ್ಷೆ ನಡೆಸಿ ಯಾವ ರೀತಿ ರಫ್ತು ವ್ಯಾಪಾರವನ್ನು ಅಭಿವೃದ್ಧಿಪಡಿಸ ಬಹುದು ಎಂಬುದರ ವಿಷಯದಲ್ಲಿ ತನಗೆ ಸಲಹೆನೀಡಬೇಕೆಂದು ಮಲೇಷಿಯ ಬ್ಯಾಂಕನ್ನು ಕೋರಿತು. ಬ್ಯಾಂಕು ಇದನ್ನೊಪ್ಪಿಕೊಂಡು ತಾಳೆ ಎಣ್ಣೆ ಮತ್ತು ಇತರ ಉತ್ಪನ್ನಗಳ ಮಾರಾಟದ ವಿಷಯದಲ್ಲಿ ಅಧ್ಯಯನ ನಡೆಸುತ್ತಿದೆ.

ಇದರ ಜೊತೆಗೆ ಮಲೇಷಿಯದಲ್ಲಿ ಕೌಲಾಲಂಪುರ್ ಮತ್ತು ಕರಕ ಪ್ರದೇಶಗಳ ಮಧ್ಯೆ ಹೆದ್ದಾರಿ ರಚಿಸುವ ವಿಷಯದಲ್ಲಿ ಬ್ಯಾಂಕು ತಾಂತ್ರಿಕ ನೆರವು ಕೊಡುತ್ತಿದೆ.

ದಕ್ಷಿಣ ಕೊರಿಯ, ಲಾವೋಸ್ ಮತ್ತು ಫಿಲಿಪೀನ್ಸ್ ದೇಶಗಳಿಗೆ ವ್ಯವಸಾಯ ಮತ್ತು ಮೀನುಗಾರಿಕೆ ಅಭಿವೃದ್ಧಿಯ ವಿಷಯದಲ್ಲಿ ತಾಂತ್ರಿಕ ನೆರವು ನೀಡುತ್ತಿದೆ.

ವ್ಯವಸಾಯದ ಕ್ಷೇತ್ರದಲ್ಲಿ ಮತ್ತು ವಿಮಾನ ಸಂಚಾರ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವ ವಿಷಯದಲ್ಲಿ ನೇಪಾಳಕ್ಕೆ ಬ್ಯಾಂಕು ತಾಂತ್ರಿಕ ಸಹಾಯ ಒದಗಿಸುತ್ತಿದೆ.

ಭಾರತದಲ್ಲಿ ಸಾಮೂಹಿಕ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದಿರು ವಂತೆ, ಥೈಲೆಂಡ್ ದೇಶ ತನ್ನ ಗ್ರಾಮಾಂತರಪ್ರದೇಶದಲ್ಲಿ ತೀವ್ರ ರೀತಿಯ ಅಭಿವೃದ್ಧಿಯೋಜನೆಯನ್ನು ಜಾರಿಗೆ ತರಲು ಯೋಚಿಸಿ ಬ್ಯಾಂಕಿನ ಸಹಾಯ ಕೋರಿತು. ಬ್ಯಾಂಕು ಥೈಲೆಂಡಿಗೆ ಐದು ಮಂದಿ ಕೃಷಿತಜ್ಞರ ಸೇವೆ ಒದಗಿಸಿ, ಥೈಲೆಂಡಿನ ೨೪ ಪ್ರಾಂತ್ಯಗಳಲ್ಲಿ ಅಭಿವೃದ್ಧಿಯೋಜನೆಯನ್ನು ಆರಂಭಿಸಲು ಸಹಾಯ ಮಾಡಿದೆ. ಜೊತೆಗೆ ಈಶಾನ್ಯ ಥೈಲೆಂಡಿನಲ್ಲಿರುವ ನಂಗವಾಯ್ ನೀರಾವರಿ ಯೋಜನೆಗೆ ತಾಂತ್ರಿಕ ಸಹಾಯ ಒದಗಿಸುತ್ತಿದೆ.

ಬ್ಯಾಂಕು ಒದಗಿಸಿರುವ ಸಾಲಗಳು

ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡಲು ಬ್ಯಾಂಕು ತನ್ನ ನಿತ್ಯ ಸಂಪನ್ಮೂಲದಿಂದಲೂ ವಿಶೇಷ ನಿಧಿಗಳಿಂದಲೂ ಏಷ್ಯದ ರಾಷ್ಟ್ರಗಳಿಗೆ ಸಾಲ ಒದಗಿಸಿಕೊಟ್ಟಿದೆ. ಸೇಕಡಾ ೧¾ ಯಿಂದ ೩ರ ಒಳಗೆ ಬಡ್ಡಿ ದರ ನಿಗದಿಮಾಡಿ ವಿಶೇಷ ನಿಧಿಗಳಿಂದ ಸಾಲ ಒದಗಿಸುತ್ತಿದೆ. ಮುಂದಿನ ಕೋಷ್ಟಕದಲ್ಲಿ ಸಾಲ ಒದಗಿಸಿರುವ ಮೊತ್ತ ಮತ್ತು ಯಾವ ನಿಧಿಯಿಂದ ಒದಗಿಸಲಾಗಿದೆ ಎಂಬುದರ ವಿವರಗಳನ್ನು ಕೊಡಲಾಗಿದೆ.

ಕೋಷ್ಟಕ ೫

೧೯೬೯ರ ಡಿಸೆಂಬರ್ ವರೆಗೆ ಬ್ಯಾಂಕು ಒದಗಿಸಿರುವ ಸಾಲದ ಮೊತ್ತ
(ದಶಲಕ್ಷ ಡಾಲರುಗಳಲ್ಲಿ)

ರಾಷ್ಟ್ರಗಳು	ನಿತ್ಯ ಸಂಪನ್ಮೂಲಗಳಿಂದ ಒದಗಿಸಿರುವುದು	ವಿಶೇಷ ನಿಧಿಗಳಿಂದ ಒದಗಿಸಿರುವುದು	ಒಟ್ಟು ಸಾಲ
ಸಿಂಹಳ	೨.೮೮೫	೭.೭೦೫	೧೦.೫೯೦
ಫಾರ್ಮೋಸ	೨೫.೪೧೦	—	೨೫.೪೧೦
ಇಂಡೋನೇಷ್ಯ	—	೩.೩೯೦	೩.೩೯೦
ದ. ಕೊರಿಯ	೩೧.೩೦೦	—	೩೧.೩೦೦
ಮಲೇಷಿಯ	೧೮.೧೦೦	—	೧೮.೧೦೦
ನೇಪಾಳ	—	೬.೦೧೦	೬.೦೧೦
ಪಾಕಿಸ್ತಾನ	೧೦.೦೦೦	—	೧೦.೦೦೦
ಫಿಲಿಪೀನ್ಸ್	೫.೦೦೦	೨.೫೦೦	೭.೫೦೦
ಥೈಲೆಂಡ್	೧೫.೦೦೦	—	೧೫.೦೦೦
ಸಿಂಗಪುರ	೧೦.೦೦೦	—	೧೦.೦೦೦
ದ. ಸಾಮೋಅ	—	೨.೪೦೦	೨.೪೦೦
ಒಟ್ಟು	೧೧೭.೬೯೫	೨೨.೦೦೫	೧೩೯.೭೦೦

ಆಧಾರ : ಏಷ್ಯ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ವರದಿ, ಪು. ೮

ಸಿಂಹಳದ ವಾಳ್ವೆ ನದೀಬಯಲಿನ ಅಭಿವೃದ್ಧಿ ಯೋಜನೆಗೆ ಒಟ್ಟು ೨೬ ದಶಲಕ್ಷ ಡಾಲರು ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಇದರ ಪೈಕಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ವಿದೇಶೀ ವಿನಿಮಯದ ರೂಪದಲ್ಲಿ ವೆಚ್ಚ ಮಾಡಬೇಕಾಗಿದೆ. ಇದನ್ನು ಬ್ಯಾಂಕು ಸಾಲದ ರೂಪದಲ್ಲಿ ಒದಗಿಸಿದೆ. ಯೋಜನೆಗೆ ಬೇಕಾದ ಯಂತ್ರಗಳು, ಯಂತ್ರೋಪಕರಣಗಳು ಮತ್ತು ಇತರ ವಸ್ತುಗಳನ್ನು ವಿದೇಶಗಳಿಂದ ಕೊಳ್ಳಲು ಈ ಸಾಲವನ್ನು ಉಪಯೋಗಿಸಿಕೊಳ್ಳಲಾಗುವುದು. ಪ್ರಾಶಸ್ತ್ಯ

ಫಾರ್ಮೋಸ ಸಮುದ್ರ ಪ್ರದೇಶದಲ್ಲಿ ಮೀನುಗಾರಿಕೆ ಅಭಿವೃದ್ಧಿ ವೃದ್ಧಿಗಾಗಿ ಕೈಗೊಂಡಿದೆ. ಇದಕ್ಕೆ ೧೫.೭೦ ದಶಲಕ್ಷ ಡಾಲರು ವೆಚ್ಚ ತಗಲು. ಅಂದಾಜು ಮಾಡಲಾಗಿದೆ. ಇದನ್ನು ಪೂರೈಸಿದರೆ ಮೀನಿನ ರಫ್ತು . ಗಮನ ಹೆಚ್ಚಿ ಫಾರ್ಮೋಸಕ್ಕೆ ಪ್ರತಿವರ್ಷ ೫.೫೦ ದಶಲಕ್ಷ ಡಾಲರುಗಳಷ್ಟೇರಷ್ಟು

ವರಮಾನ ಬರುವುದೆಂದು ಅಂದಾಜು ಮಾಡಲಾಗಿದೆ. ಆದುದರಿಂದ ಈ ಯೋಜನೆ ಕಾರ್ಯಗತಗೊಳಿಸಲು ಬೇಕಾದ ವಿದೇಶೀ ವಿನಿಮಯದ ಬಾಬ್ತು ಸಾಲವನ್ನು ಬ್ಯಾಂಕು ಒದಗಿಸಿದೆ.

ಇದಲ್ಲದೆ ಟೈವಾನ್ ಅಲ್ಯೂಮಿನಿಯಂ ಕಾರ್ಪೊರೇಷನ್, ಟೈವಾನ್‌ಗಣಿ ಅಭಿವೃದ್ಧಿ ಕಾರ್ಪೊರೇಷನ್ ಮತ್ತು ಹೂಲಿಯನ್ ಬಂದರು ಅಭಿವೃದ್ಧಿ ಕಾರ್ಯಗಳಿಗೆ ಬ್ಯಾಂಕು ಸಾಲ ಒದಗಿಸಿದೆ.

ಇಂಡೊನೇಷ್ಯ ಟಾಜುನ್ ನೀರಾವರಿ ಯೋಜನೆಯನ್ನು ಪ್ರಾರಂಭಿಸಿತು. ಆದರೆ ೧೯೬೯ರ ಮಧ್ಯಭಾಗದಲ್ಲಿ ವಿದೇಶೀ ವಿನಿಮಯವಿಲ್ಲದೆ ಕಾರ್ಯವನ್ನು ನಿಲ್ಲಿಸಿತು. ಆಗ ಬ್ಯಾಂಕಿನ ಸಹಾಯ ಕೋರಿತು. ಬ್ಯಾಂಕು ಈ ಯೋಜನೆಯನ್ನು ಪೂರ್ತಿಗೊಳಿಸುವುದಕ್ಕಾಗಿ ಸಾಲ ನೀಡಿದೆ. ಈ ಯೋಜನೆ ಪೂರ್ತಿಗೊಂಡಮೇಲೆ ೩೬೦೦ ಹೆಕ್ಟೇರ್ ಭೂಮಿಗೆ ನೀರೊದಗಿಸಿ ಬತ್ತದ ಬೆಳೆಯನ್ನು ಹೆಚ್ಚಿಸಬಹುದಾಗಿದೆ.

ಸರ್ಕಾರಿ ವಲಯದಲ್ಲಿರುವ ಕೊರಿಯ ಶೈತ್ಯಾಗಾರ ಕಂಪನಿ ತನ್ನ ಅಭಿವೃದ್ಧಿ ಕಾರ್ಯಗಳಿಗಾಗಿ ಬ್ಯಾಂಕಿನಿಂದ ಸಾಲ ಪಡೆದಿದೆ. ಕೊರಿಯ ಎಕ್ಸ್‌ಪ್ರೆಸ್ ಕಂಪನಿ ದಕ್ಷಿಣ ಕೊರಿಯದಲ್ಲಿ ಅತಿ ದೊಡ್ಡ ಸಾರಿಗೆ ವ್ಯವಸ್ಥೆ ನಡೆಸುತ್ತದೆ. ರಸ್ತೆ ಸಾರಿಗೆ ವ್ಯವಸ್ಥೆಯನ್ನು ನೋಡಿಕೊಳ್ಳುವುದರ ಜೊತೆಗೆ ತೀರ ಪ್ರದೇಶದ ಜಲಮಾರ್ಗ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತದೆ. ತನ್ನ ಸಾರಿಗೆ ವ್ಯವಸ್ಥೆಯನ್ನು ಆಧುನಿಕಗೊಳಿಸಲು ವಿದೇಶಗಳಿಂದ ಯಂತ್ರಗಳನ್ನು ಕೊಳ್ಳಬೇಕಾಗಿತ್ತು. ಅದಕ್ಕಾಗಿ ಬ್ಯಾಂಕಿನಿಂದ ಸಾಲ ಪಡೆದಿದೆ.

ಕೊರಿಯ ಸರ್ಕಾರ ತನ್ನ ದೇಶದಲ್ಲಿರುವ ಮಧ್ಯಮ ವರ್ಗದ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಂಸ್ಥೆಗಳಿಗೆ ಧನ ಸಹಾಯ ಒದಗಿಸಲು ಕೈಗಾರಿಕಾ ಬ್ಯಾಂಕನ್ನು ಸ್ಥಾಪಿಸಿದೆ. ಕೊರಿಯದಲ್ಲಿರುವ ಒಟ್ಟು ಕೈಗಾರಿಕಾ ಸಂಸ್ಥೆಗಳ ಪೈಕಿ ಸೇಕಡಾ೯೮ರಷ್ಟು ಸಂಸ್ಥೆಗಳು ಮಧ್ಯಮ ವರ್ಗದ ಅಥವಾ ಸಣ್ಣ ಪ್ರಮಾಣದ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಕೊರಿಯದ ಕೂಲಿಗಾರರ ಪೈಕಿ ಸೇಕಡಾ ೬೧ ರಷ್ಟು ಜನರಿಗೆ ಕೆಲಸ ಒದಗಿಸಿವೆ ; ಒಟ್ಟು ಉತ್ಪನ್ನದ ಸೇಕಡಾ ೪೭ರಷ್ಟನ್ನು ಉತ್ಪತ್ತಿ ಮಾಡುತ್ತವೆ; ಒಟ್ಟು ರಫ್ತಾಗುವ ಕೈಗಾರಿಕಾ ವಸ್ತುಗಳ ಪೈಕಿ ಸೇಕಡಾ ೪೧ರಷ್ಟನ್ನು ಈ ಸಂಸ್ಥೆಗಳು ಒದಗಿಸುತ್ತವೆ. ಹೀಗೆ ಕೊರಿಯದ ಆರ್ಥಿಕ ವ್ಯವಸ್ಥೆಯಲ್ಲಿ ಈ ಸಂಸ್ಥೆಗಳು ಗಮನಾರ್ಹವಾದ ಪಾತ್ರ ವಹಿಸುವುದರಿಂದ, ...ಗಳಿಗೆ ಧನಸಹಾಯ ಒದಗಿಸಲು ಏಷ್ಯದ ಅಭಿವೃದ್ಧಿ ಬ್ಯಾಂಕು ಕೊರಿಯ ...ರಿಕಾ ಬ್ಯಾಂಕಿಗೆ ೧೦ ದಶಲಕ್ಷ ಡಾಲರುಗಳ ಸಾಲ ಒದಗಿಸಿದೆ.

...ಶ್ಚಿಮ ಮಲೇಷಿಯದಲ್ಲಿ ಕೇಂದ್ರ ಭೂ ಅಭಿವೃದ್ಧಿ ಸಂಸ್ಥೆ ತಾಳೆ ಎಣ್ಣೆ ...ಪನ್ನು ಹೆಚ್ಚಿಸುವುದಕ್ಕಾಗಿ ಎರಡು ಎಣ್ಣೆ ಕಾರ್ಖಾನೆಗಳನ್ನು ಪ್ರಾರಂಭಿಸಿದೆ.

ಇದಕ್ಕಾಗಿ ೩.೪೦ ದಶಲಕ್ಷ ಡಾಲರುಗಳ ವೆಚ್ಚವಾಗಿದೆ. ಈ ಪೈಕಿ ಸೇಕಡಾ ೭೦ ರಷ್ಟನ್ನು (ವಿದೇಶೀ ವಿನಿಮಯದ ರೂಪದಲ್ಲಿ) ಸಾಲವಾಗಿ ಮಲೇಷಿಯಕ್ಕೆ ಬ್ಯಾಂಕು ಒದಗಿಸಿದೆ.

ಇದಲ್ಲದೆ ಸಾರವಾಕ್ ಪ್ರದೇಶದಲ್ಲಿರುವ (ಮಲೇಷಿಯದ ಒಂದು ಭಾಗ) ಕುಚಿಂಗ್ ಬಂದರು ವಿಸ್ತರಣ ಯೋಜನೆಗೆ ೫೦ ಲಕ್ಷ ಡಾಲರು ಸಾಲವನ್ನು (ವಿದೇಶೀವಿನಿಮಯದ ರೂಪದಲ್ಲಿ) ಮತ್ತು ಸಾರವಾಕ್ ವಿದ್ಯುಚ್ಛಕ್ತಿ ಸರಬರಾಜು ಯೋಜನೆಗೆ ಸಾಲವನ್ನು ಬ್ಯಾಂಕು ಒದಗಿಸಿದೆ.

ನೇಪಾಳ ಪರ್ವತಮಯವಾದ ದೇಶ. ಅದರ ಜನಸಂಖ್ಯೆ ೧ಕೋಟಿ ೧೦ಲಕ್ಷ. ಇದರ ಪೈಕಿ ಸೇಕಡಾ ೭೦ರಷ್ಟು ಜನ ಪರ್ವತಪ್ರದೇಶಗಳಲ್ಲಿ ವಾಸಿಸುತ್ತಾರೆ. ಆದರೆ ಅಲ್ಲಿ ಸಂಚಾರ ವ್ಯವಸ್ಥೆ ಇದುವರೆಗೆ ಅಭಿವೃದ್ಧಿಗೊಂಡಿರಲಿಲ್ಲ. ಪರ್ವತ ಪ್ರದೇಶದಲ್ಲಿ ರಸ್ತೆ ಸಾರಿಗೆ ವ್ಯವಸ್ಥೆ ಅಭಿವೃದ್ಧಿಪಡಿಸುವುದಕ್ಕಿಂತ ವಿಮಾನ ಸಾರಿಗೆ ವ್ಯವಸ್ಥೆ ಏರ್ಪಡಿಸುವುದು ಸುಲಭವೆಂದು ನೇಪಾಳ ಸರ್ಕಾರ ಭಾವಿಸಿ ವಿಮಾನ ಸಾರಿಗೆ ವ್ಯವಸ್ಥೆಗೆ ಪ್ರಾಶಸ್ತ್ಯಕೊಟ್ಟಿದೆ. ವಿಮಾನ ಸಾರಿಗೆ ವ್ಯವಸ್ಥೆಯನ್ನು ಏರ್ಪಡಿಸಲು ಬ್ಯಾಂಕು ಸಾಲ ಒದಗಿಸಿದೆ. ಈ ಸಾಲದಿಂದ ನೇಪಾಳಕ್ಕೆ ವಿದೇಶೀ ವಿನಿಮಯ ದೊರೆಯಿತು. ಇದರಿಂದ ರಾಯಲ್ ನೇಪಾಳ ವಿಮಾನ ಸಾರಿಗೆ ಸಂಸ್ಥೆ ತನಗೆ ಬೇಕಾದ ವಿಮಾನದ ಉಪಕರಣಗಳನ್ನು ಮತ್ತು ಇತರ ಸಾಮಗ್ರಿ ಗಳನ್ನು ವಿದೇಶಗಳಿಂದ ಕೊಳ್ಳಲು ಅನುಕೂಲಕಾಗಿದೆ. ಖಟ್ಮಂಡು ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿ ಪರಿವರ್ತಿಸಲು ಅನುಕೂಲವಾಯಿತು.

ಸಿಂಗಪುರ, ಥೈಲ್ಯಾಂಡ್ ಮತ್ತು ಫಿಲಿಪೀನ್ಸ್ ದೇಶಗಳು ತಮ್ಮ ದೇಶಗಳಲ್ಲಿರುವ ಕೈಗಾರಿಕಾ ಸಂಸ್ಥೆಗಳಿಗೆ ಧನ ಸಹಾಯ ಒದಗಿಸಲು ಕೈಗಾರಿಕಾ ಬ್ಯಾಂಕುಗಳನ್ನು ಅಥವಾ ಕೈಗಾರಿಕಾ ಹಣಕಾಸು ಕಾರ್ಪೊರೇಷನ್‌ಗಳನ್ನು ಸ್ಥಾಪಿಸಿವೆ. ಏಷ್ಯ ಅಭಿವೃದ್ಧಿ ಬ್ಯಾಂಕು ಮೇಲ್ಕಂಡ ದೇಶಗಳಲ್ಲಿರುವ ಕೈಗಾರಿಕಾ ಹಣಕಾಸಿನ ಸಂಸ್ಥೆ ಗಳಿಗೆ ಸಾಲ ಒದಗಿಸಿ ಅವು ತಮ್ಮ ಕರ್ತವ್ಯವನ್ನು ಮತ್ತಷ್ಟು ವಿಸ್ತರಿಸಲು ಸಹಾಯ ಮಾಡಿದೆ.

ಕಟಬಾಟೋ ನೀರಾವರಿ ಯೋಜನೆಯನ್ನು ಫಿಲಿಪೀನ್ಸ್ ದೇಶ ೪.೬೦ ದಶಲಕ್ಷ ಡಾಲರುಗಳ ವೆಚ್ಚದಲ್ಲಿ ಪ್ರಾರಂಭಿಸಿದೆ. ಇದಕ್ಕೆ ಬ್ಯಾಂಕು ೨.೫೦ ದಶಲಕ್ಷ ಡಾಲರುಗಳ ಸಾಲವನ್ನು (ವಿದೇಶೀ ವಿನಿಮಯದ ರೂಪದಲ್ಲಿ) ಕೊಟ್ಟಿದೆ. ಈ ಯೋಜನೆ ೧೯೭೧ರ ಕೊನೆಯ ವೇಳೆಗೆ ಪೂರೈಸುವ ನಿರೀಕ್ಷೆ ಇದೆ.

ಮೇಲೆ ವಿವರಿಸಿರುವಂತೆ ಬ್ಯಾಂಕು ವಿವಿಧ ರಾಷ್ಟ್ರಗಳಿಗೆ ಅನೇಕ ರೀತಿಯ ಅಭಿವೃದ್ಧಿ ಕಾರ್ಯಗಳಿಗಾಗಿ ಸಾಲ ಒದಗಿಸಿದೆ. ಒದಗಿಸಿರುವ ಒಟ್ಟು ಸಾಲದ ಪೈಕಿ ಸೇಕಡಾ ೧೫.೯ರಷ್ಟನ್ನು ರಿಯಾಯತಿ ದರದಲ್ಲಿ ಒದಗಿಸಿದೆ. ಅಂದರೆ ಈ ಸಾಲಗಳ

ಮೇಲಿನ ಬಡ್ಡಿ ದರ ಸೇಕಡಾ ೩ಕ್ಕಿಂತ ಹೆಚ್ಚಾಗಿಲ್ಲ. ಇದರಿಂದ ಏಷ್ಯದ ಸಣ್ಣ ರಾಷ್ಟ್ರಗಳಿಗೆ ಪ್ರೋತ್ಸಾಹ ದೊರೆತಂತಾಗಿದೆ. ಪ್ರಾರಂಭದಿಂದಲೂ ಬ್ಯಾಂಕು ಏಷ್ಯದ ರಾಷ್ಟ್ರಗಳೊಡನೆ ಸಂಬಂಧ ಕಲ್ಪಿಸಿಕೊಂಡಿರುವುದರಿಂದ, ಬ್ಯಾಂಕಿನ ಅಧಿಕಾರಿಗಳಿಗೆ ಈ ರಾಷ್ಟ್ರಗಳ ಸಮಸ್ಯೆಗಳನ್ನು ಅರಿತುಕೊಳ್ಳಲು ಅನುಕೂಲವಾಗಿದೆ. ಇದರ ಪರಿಣಾಮವಾಗಿ ಈ ದೇಶಗಳಿಂದ ಸಾಲಕ್ಕಾಗಿಬರುವ ಅರ್ಜಿಗಳನ್ನು ಜಾಗ್ರತೆ ವಿಲೇವಾರಿ ಮಾಡಲು ಅನುಕೂಲವಾಗಿದೆ. ಕೆಲವು ಸಂದರ್ಭಗಳಲ್ಲಿ ಅರ್ಜಿ ಬಂದ ಮೂರು ಅಥವ ನಾಲ್ಕು ತಿಂಗಳೊಳಗಾಗಿ ಸಾಲಗಳನ್ನು ಕೊಡಲು ಬ್ಯಾಂಕು ಏರ್ಪಾಡು ಮಾಡಿದೆ.

ಪ್ರಾದೇಶಿಕ ಆರ್ಥಿಕ ಸಹಕಾರ

ಪ್ರಾದೇಶಿಕ ಮಟ್ಟದಲ್ಲಿ ಏಷ್ಯ ರಾಷ್ಟ್ರಗಳ ಮಧ್ಯೆ ಆರ್ಥಿಕ ಸಹಕಾರವನ್ನುಂಟು ಮಾಡುವುದು ಬ್ಯಾಂಕಿನ ಉದ್ದೇಶಗಳಲ್ಲಿ ಒಂದಾಗಿದೆ. ಈ ಗುರಿಯನ್ನು ಸಾಧಿಸಲು ಬ್ಯಾಂಕು ೧೯೬೮–೭೦ರ ಅವಧಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ವ್ಯವಸಾಯಕ್ಷೇತ್ರದ ಸಮಸ್ಯೆಗಳನ್ನು ಕುರಿತು ಸಂಪೂರ್ಣ ಏಷ್ಯಕ್ಕೆ ಅನ್ವಯಿಸುವಂತೆ ಒಂದು ಸಮೀಕ್ಷೆಯನ್ನು ೧೯೬೮ರಲ್ಲಿ ಪೂರೈಸಿತು. ಆ ಸಮೀಕ್ಷೆಯಿಂದ ಕಂಡುಬಂದ ಸಮಸ್ಯೆಗಳನ್ನು ಬಗೆಹರಿಸಲು ಬ್ಯಾಂಕ್ ಕಾರ್ಯ ಆರಂಭಿಸಿದೆ. ತನ್ನ ತಾಂತ್ರಿಕ ನೆರವು ನೀಡುವ ನೀತಿಯನ್ನು ಮತ್ತು ಸಾಲದ ನೀತಿಯನ್ನು ಸಮಸ್ಯೆಗಳ ಪರಿಹಾರಕ್ಕೆ ತಕ್ಕಹಾಗೆ ರೂಪಿಸಿಕೊಂಡಿದೆ. ಸಮೀಕ್ಷೆಯಿಂದ ಕಂಡುಬಂದ ಅಂಶಗಳನ್ನು ವರದಿಯ ರೂಪದಲ್ಲಿ ಪ್ರಕಟಿಸಿದೆ. ಸಮೀಕ್ಷೆಯಿಂದ ಕಂಡುಬಂದ ಅಂಶಗಳನ್ನು ತನ್ನ ಸದಸ್ಯರಾಷ್ಟ್ರಗಳ ಗಮನಕ್ಕೆ ತರಲು ೧೯೬೯ರಲ್ಲಿ ಸಿಡ್ನಿಯಲ್ಲಿ ಒಂದು ವಿಚಾರಗೋಷ್ಠಿಯನ್ನು ಏರ್ಪಡಿಸಿತು.

ವಿಚಾರಗೋಷ್ಠಿ ಧೀರ್ಘವಾಗಿ ಚರ್ಚಿಸಿ ಈ ಕೆಳಗೆ ಕಂಡ ವಿಷಯಗಳ ಮೇಲೆ ತನ್ನ ಅಭಿಪ್ರಾಯ ಸೂಚಿಸಿತು: ೧ ಅಧಿಕ ಉತ್ಪನ್ನ ಕೊಡುವ ಬಿತ್ತನೆ ಬೀಜಗಳನ್ನು ಏಷ್ಯದ ಎಲ್ಲಾ ಕಡೆಯೂ ಉಪಯೋಗಿಸುತ್ತಿರುವುದರಿಂದ ವ್ಯವಸಾಯದ ಉತ್ಪನ್ನದ ಮೇಲೆ ಆಗಿರುವ ಪರಿಣಾಮ, ೨ ವ್ಯವಸಾಯದ ಪ್ರಗತಿ ಸಾಧಿಸಲು ಒದಗಿಸಬೇಕಾಗಿರುವ ಸಲಕರಣೆಗಳು, ೩ ಧಾನ್ಯಗಳನ್ನು ಶೇಖರಿಸಿಕೊಳ್ಳಲು ಕೈಗೊಂಡಿರುವ ಏರ್ಪಾಡುಗಳು, ೪ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿ, ೫ ಮಾರುಕಟ್ಟೆಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಹೊಸ ಮಾರುಕಟ್ಟೆ ವಿಧಾನಗಳನ್ನು ಬಳಸುವುದು, ೬ ಸಂಶೋಧನೆ ನಡೆಸುವುದು ಮತ್ತು ೭ ವ್ಯವಸಾಯ ಕ್ಷೇತ್ರಕ್ಕೆ ಅವಶ್ಯಕವಾದ ಹಣವನ್ನು ಒದಗಿಸುವುದು.

ವಿಚಾರಗೋಷ್ಠಿಯಿಂದ ಹೊರಬಿದ್ದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ರಾಷ್ಟ್ರಗಳ ಅಭಿಪ್ರಾಯವನ್ನು ಕಾರ್ಯರೂಪಕ್ಕೆ ತರಲು ಬ್ಯಾಂಕ್ ಯತ್ನಿಸುತ್ತಿದೆ.

ಮಲೇಷಿಯದ ಕೋರಿಕೆಯಂತೆ ಸಾರಿಗೆ ಸೌಕರ್ಯಗಳ ವಿಷಯದಲ್ಲಿ, ಇಂಡೋನೇಷ್ಯ, ಲಾವೋಸ್, ಮಲೇಷಿಯ, ಫಿಲಿಪೀನ್ಸ್, ಸಿಂಗಪುರ, ಥೈಲೆಂಡ್ ಮತ್ತು ವಿಯಟ್ನಾಂಗಳಿಗೆ ಅನ್ವಯಿಸುವಂತೆ, ಬ್ಯಾಂಕು ಸಮೀಕ್ಷೆ ನಡೆಸುತ್ತಿದೆ. ೧೯೬೯ರಲ್ಲಿ ಇದು ಆರಂಭವಾಗಿದೆ. ಮುಂದೆ ಅನೇಕ ವರ್ಷಗಳ ವರೆಗೆ ಈ ದೇಶಗಳು ಸಾರಿಗೆವ್ಯವಸ್ಥೆಯಲ್ಲಿ ಎದುರಿಸಬೇಕಾಗಿ ಬರುವ ಸಮಸ್ಯೆಗಳ ವಿಷಯದಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಗಣಿ, ಕೈಗಾರಿಕೆ, ವ್ಯವಸಾಯ, ಮೀನುಗಾರಿಕೆ, ಅರಣ್ಯಸಂಪತ್ತು ಮತ್ತು ಪ್ರವಾಸೋದ್ಯಮಗಳನ್ನು ಅಭಿವೃದ್ಧಿಗೊಳಿಸುವ ದಿಶೆಯಲ್ಲಿ ಮೇಲ್ಕಂಡ ಎಲ್ಲ ದೇಶಗಳು ಇನ್ನು ಕೆಲವು ವರ್ಷಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸುವುದರಿಂದ ಈ ಶತಮಾನದ ಕೊನೆಯ ವೇಳೆಗೆ ಎಂತಹ ಸಾರಿಗೆ ವ್ಯವಸ್ಥೆಯನ್ನು ನಿರ್ಮಿಸಿದರೆ ಅಭಿವೃದ್ಧಿಯ ಫಲವನ್ನು ಕಾಪಾಡಿಕೊಳ್ಳಬಹುದು ಎಂಬುದನ್ನು ಕುರಿತು ಅಧ್ಯಯನ ನಡೆಸಲಾಗುತ್ತಿದೆ. ಈ ಸಮೀಕ್ಷೆಯಿಂದ ಹೊರಬರುವ ಅಂಶಗಳ ಆಧಾರದ ಮೇಲೆ ಎಲ್ಲ ದೇಶಗಳಲ್ಲೂ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸಲು ಬ್ಯಾಂಕ್ ನೆರವು ನೀಡುತ್ತದೆ. ಉತ್ತಮ ಸಾರಿಗೆವ್ಯವಸ್ಥೆ ನಿರ್ಮಿತವಾದರೆ ಈ ದೇಶಗಳಲ್ಲಿ ಪ್ರವಾಸೋದ್ಯಮ ಬಹಳ ಮಟ್ಟಿಗೆ ಲಾಭದಾಯಕವಾಗಿ ಬೆಳೆಯಲು ಅವಕಾಶವಾಗುತ್ತದೆ.

ಆಗ್ನೇಯ ಏಷ್ಯದ ೯ ರಾಷ್ಟ್ರಗಳ ಮನವಿಯ ಮೇರೆಗೆ, ೧೯೭೦ರ ದಶಕದಲ್ಲಿ ಈ ರಾಷ್ಟ್ರಗಳಲ್ಲಿ ಉಂಟಾಗಬಹುದಾದ ಆರ್ಥಿಕ ಪರಿಸ್ಥಿತಿಗಳನ್ನು ಕುರಿತು ಬ್ಯಾಂಕು ಅಧ್ಯಯನ ನಡೆಸುತ್ತಿದೆ. ಎಲ್ಲ ರಾಷ್ಟ್ರಗಳಲ್ಲೂ ಉದ್ಭವಿಸಬಹುದಾದ ಸಮಸ್ಯೆಗಳನ್ನು ಅವುಗಳ ಗಮನಕ್ಕೆ ತಂದು ಅವಕ್ಕೆ ತಕ್ಕಹಾಗೆ ತಮ್ಮ ನೀತಿಗಳನ್ನು ರೂಪಿಸಿಕೊಳ್ಳುವಂತೆ ಮಾಡುವುದೇ ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಈ ಅಧ್ಯಯನದ ವಿಷಯದಲ್ಲಿ ಸಲಹೆನೀಡಲು ತಜ್ಞರ ಸಮಿತಿಯೊಂದನ್ನು ಬ್ಯಾಂಕು ನೇಮಿಸಿತು. ಆ ಸಮಿತಿಯಲ್ಲಿ ಕೆಳಗೆ ಕಂಡ ತಜ್ಞರಿದ್ದಾರೆ: ೧ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಡಾ. ಪಾಲ್ ಸ್ಟ್ರೀಟನ್ (ಸಮಿತಿಯ ಅಧ್ಯಕ್ಷ), ೨ ಆಸ್ಟ್ರೇಲಿಯ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಡಾ. ಎಚ್. ಡಬ್ಲ್ಯೂ. ಆರಂಟ್, ೩ ವಿಶ್ವ ಬ್ಯಾಂಕಿನ ಗಿಲ್ ಮಾರ್ಟಿನ್, ೪ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಡಾ. ಆಲ್ಬರ್ಟ್ ಹರ್ಷ್‌ಮನ್, ೫ ಜಪಾನಿನ ಡಾ. ಸಬ್ರೋ ಒಕಿಟಾ, ೬ ಫಿಲಿಫೀನ್ಸ್‌ನ ರೋಕ್ಸಾಸ್, ೭ ಇಂಡೊನೇಷ್ಯದ ಪ್ರೊಫೆಸರ್ ಸುಬ್ರತೋ ೮ ಅಂತರರಾಷ್ಟ್ರೀಯ ಹಣಕಾಸಿನ ನಿಧಿಯ ವುಡ್‌ಲೇ, ೯ ಥೈಲೆಂಡಿನ ಶ್ರೀಮತಿ ಯಸುಂಧರ ಮತ್ತು ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಮೂವರು ಅಧಿಕಾರಿಗಳು.

ಈ ಸಮಿತಿಯ ಸಲಹೆಯ ಪ್ರಕಾರ ಈ ವಿಷಯಗಳನ್ನು ಕುರಿತು ಅಧ್ಯಯನ ನಡೆಸಲಾಗುತ್ತಿದೆ: ೧ ಹಸಿರು ಕ್ರಾಂತಿಯ ಪರಿಣಾಮ, ೨ ಕೈಗಾರಿಕಾಕರಣದ ಸಮಸ್ಯೆಗಳು, ೩ ಹೊರರಾಷ್ಟ್ರಗಳೊಡನೆ ಇರುವ ಆರ್ಥಿಕ ಸಂಬಂಧ (ವಿಯೆಟ್ನಾಂ

ಯುದ್ಧ ಕೊನೆಗೊಂಡ ಮೇಲೆ ಮತ್ತು ಬ್ರಿಟನ್ ತನ್ನ ಸೈನ್ಯಪಡೆಗಳನ್ನು ಈ ಪ್ರದೇಶದಿಂದ ವಾಪಸು ಕರೆಸಿಕೊಂಡ ಮೇಲೆ ಈ ಪ್ರದೇಶದಲ್ಲಿ ಉಂಟಾಗಬಹುದಾದ ರಾಜಕೀಯ ಮತ್ತು ಆರ್ಥಿಕ ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡ ಲಾಗುತ್ತದೆ), ೪ ವಿದೇಶೀ ಖಾಸಗಿ ಬಂಡವಾಳದ ಮಹತ್ವ ಮತ್ತು ೫ ಜನನ ನಿಯಂತ್ರಣ. ಈ ಪ್ರಮುಖ ಸಮಸ್ಯೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಸಂಗ್ರಹಿಸುವುದರಿಂದ ಈ ದೇಶಗಳ ವಿಷಯದಲ್ಲಿ ಆಳವಾದ ಜ್ಞಾನವನ್ನು ಪಡೆಯ ಬಹುದು ಮತ್ತು ಅವುಗಳ ಮೇಲೆ ಉಂಟಾಗುವ ಪರಿಣಾಮಗಳನ್ನು ಊಹಿಸ ಬಹುದು.

ಏಷ್ಯದ ರಾಷ್ಟ್ರಗಳಲ್ಲಿ ತರಕಾರಿಗಳ ಬೆಳೆಗೆ ಪ್ರೋತ್ಸಾಹ ನೀಡಲು ಮತ್ತು ಅದರಿಂದ ಬರುವ ವರಮಾನ ಹೆಚ್ಚಿಸಿಕೊಳ್ಳಲು ಏಷ್ಯದ ತರಕಾರಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಬೇಕೆಂಬ ಸಲಹೆಗೆ ಬ್ಯಾಂಕ್ ಪ್ರೋತ್ಸಾಹ ನೀಡಿದೆ. ಇಂಥ ಕೇಂದ್ರವನ್ನು ಸ್ಥಾಪಿಸಬೇಕೆಂಬ ಸಲಹೆ ಫಾರ್ಮೋಸ, ಜಪಾನ್, ದಕ್ಷಿಣ ಕೊರಿಯ, ಫಿಲಿಪೀನ್ಸ್, ಥೈಲೆಂಡ್ ಮತ್ತು ದಕ್ಷಿಣ ವಿಯಟ್ನಾಂಗಳಿಂದ ಬಂತು. ಬ್ಯಾಂಕು ಇದನ್ನು ಒಪ್ಪಿಕೊಂಡು ಇದಕ್ಕೆ ತಕ್ಕ ಧನಸಹಾಯ ಒದಗಿಸಲು ಮುಂದೆ ಬಂದಿದೆ.

ತೆರಿಗೆಗಳ ವಿಷಯದಲ್ಲಿ ಉದಾರ ನೀತಿಯನ್ನು ಪಾಲಿಸಿ ಆರ್ಥಿಕಾಭಿವೃದ್ಧಿಗೆ ಸಹಾಯಮಾಡುವಂತೆ ಎಲ್ಲ ಏಷ್ಯನ್ ರಾಷ್ಟ್ರಗಳು ತೆರಿಗೆ ನೀತಿಯನ್ನು ರೂಪಿಸಿ ಕೊಳ್ಳಬೇಕೆಂದು ಫಿಲಿಪೀನ್ಸ್ ಸಲಹೆ ಮಾಡಿತು. ಇದನ್ನು ಕಾರ್ಯರೂಪಕ್ಕೆ ತರಲು ಏಷ್ಯನ್ ರಾಷ್ಟ್ರಗಳ ಪ್ರಮುಖ ತೆರಿಗೆ ಅಧಿಕಾರಿಗಳ ಸಮ್ಮೇಳನವನ್ನು ಏರ್ಪಡಿಸಲು ಬ್ಯಾಂಕ್ ಆಲೋಚಿಸುತ್ತಿದೆ.

ಇದಲ್ಲದೆ ಏಷ್ಯನ್ ದೇಶಗಳಿಗೆ ಅನ್ವಯಿಸುವಂತೆ ಕೈಗಾರಿಕಾ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲು ಒಂದು ಸಮೀಕ್ಷೆ ನಡೆಸಬೇಕೆಂದು ಬ್ಯಾಂಕು ಏಷ್ಯ ಮತ್ತು ದೂರ ಪ್ರಾಚ್ಯ ರಾಷ್ಟ್ರಗಳ ಆರ್ಥಿಕ ಮಂಡಲಿಯೊಂದಿಗೆ ಮಾತುಕತೆ ನಡೆಸುತ್ತಿದೆ.

ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಪ್ರಾದೇಶಿಕ ಆರ್ಥಿಕ ಸಹಕಾರಾಭಿ ವೃದ್ಧಿಗೆ ಬ್ಯಾಂಕು ನೀಡಿರುವ ಪ್ರಾಮುಖ್ಯ ಕಂಡುಬರುತ್ತದೆ. ಇದಲ್ಲದೆ ವಿಶ್ವಸಂಸ್ಥೆ ಮತ್ತು ಅದರ ಅಧೀನ ಸಂಸ್ಥೆಗಳೊಂದಿಗೆ ಬ್ಯಾಂಕು ನಿಕಟಸಂಬಂಧ ಇಟ್ಟುಕೊಂಡಿದೆ. ಇದರಿಂದ ಏಷ್ಯ ರಾಷ್ಟ್ರಗಳಿಗೆ ಸಾಧ್ಯವಾದಷ್ಟು ನೆರವನ್ನು ಅವುಗಳಿಂದ ಪಡೆಯಲು ಅನುಕೂಲವಾಗಿದೆ.

ಬ್ಯಾಂಕಿನೊಡನೆ ಭಾರತದ ಬಾಂಧವ್ಯ

ಏಷ್ಯದ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸಬೇಕೆಂಬ ಸಲಹೆ ಹೊರಬಿದ್ದಾಗಿನಿಂದಲೂ

ಭಾರತ ಅದಕ್ಕೆ ಉತ್ತೇಜನವಿತ್ತಿದೆ. ಭಾರತ ೯೩೦ ಲಕ್ಷ ಡಾಲರುಗಳನ್ನು ಬ್ಯಾಂಕಿನ ಅಧಿಕೃತ ಬಂಡವಾಳಕ್ಕೆ ಒದಗಿಸಿದೆ. ಬಂಡವಾಳ ಒದಗಿಸಿರುವ ದೇಶಗಳ ಪೈಕಿ ಜಪಾನ್ ಮತ್ತು ಅಮೆರಿಕಗಳ ಅನಂತರದ ಸ್ಥಾನ ಭಾರತದ್ದು.

೧೯೭೦ರ ಆಗಸ್ಟ್ ತಿಂಗಳಲ್ಲಿ ಬ್ಯಾಂಕಿನ ತಾಂತ್ರಿಕ ನೆರವಿನ ನಿಧಿಗೆ ಭಾರತ ೨ ಲಕ್ಷ ರೂಪಾಯಿ ವಂತಿಗೆ ನೀಡಿದೆ. ಭಾರತದ ತಜ್ಞರ ಸೇವೆಯನ್ನು ಬೇರೆ ದೇಶಗಳಿಗೆ ಒದಗಿಸಿಕೊಡಲು ಇದರಿಂದ ಸಹಾಯವಾಗಿದೆ. ಬೇರೆ ದೇಶಗಳು ಯಾವುದಾದರೂ ವಿಷಯದಲ್ಲಿ ತಾಂತ್ರಿಕ ಜ್ಞಾನ ಪಡೆಯಬೇಕೆಂದು ಇಷ್ಟಪಟ್ಟರೆ ಅಲ್ಲಿಗೆ ಭಾರತದ ತಜ್ಞರನ್ನು ಬ್ಯಾಂಕು ಕಳುಹಿಸಿಕೊಡುತ್ತದೆ. ಬೇರೆ ದೇಶಗಳ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳು ಭಾರತಕ್ಕೆ ಬಂದು ತಾಂತ್ರಿಕ ತರಬೇತಿ ಪಡೆಯುವ ಏರ್ಪಾಡು ಮಾಡಲಾಗಿದೆ. ಭಾರತದ ಈ ಕಾರ್ಯ ಎಲ್ಲರ ಮೆಚ್ಚುಗೆ ಪಡೆದಿದೆ. ಏಕೆಂದರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪೈಕಿ ಭಾರತವೂ ಒಂದು. ತನಗೆ ಎಷ್ಟೇ ಸಮಸ್ಯೆಗಳಿದ್ದರೂ ತನ್ನಂಥ ದೊಡ್ಡ ರಾಷ್ಟ್ರ ಉಳಿದ ಸಣ್ಣ ರಾಷ್ಟ್ರಗಳ ನೆರವಿಗೆ ಹೋಗುವುದು ತನ್ನ ಆದ್ಯ ಕರ್ತವ್ಯ ಎಂಬುದನ್ನು ಭಾರತ ಅರಿತುಕೊಂಡಿದೆ. ಜೊತೆಗೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪೈಕಿ ಭಾರತವೇ ಮೊಟ್ಟಮೊದಲನೆಯ ದೇಶ.

ಬ್ಯಾಂಕಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವುದರಿಂದ ಭಾರತಕ್ಕೂ ಅನುಕೂಲವಾಗಿದೆ. ಭಾರತದ ತಜ್ಞರು ವಿವಿಧ ದೇಶಗಳಿಗೆ ಹೋಗಿ ತಮ್ಮ ಜ್ಞಾನವನ್ನು ಮತ್ತು ಅನುಭವವನ್ನು ಉಪಯೋಗಿಸಿಕೊಂಡು, ಅವುಗಳಿಗೆ ನೆರವು ನೀಡಲು ಅವಕಾಶ ದೊರೆತಿದೆ. ಭಾರತ ಈ ದೇಶಗಳೊಡನೆ ತನ್ನ ರಫ್ತು ವ್ಯಾಪಾರ ಹೆಚ್ಚಿಸಿಕೊಳ್ಳಲು ಅವಕಾಶ ಸಿಕ್ಕಿದೆ. ಭಾರತ ಈಗ ಅನೇಕರೀತಿಯ ಕೈಗಾರಿಕಾ ವಸ್ತುಗಳನ್ನು ಉತ್ಪಾದಿಸುತ್ತಿದೆ. ಅದರಲ್ಲೂ ಎಂಜಿನಿಯರಿಂಗ್ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿದೆ. ಈ ವಸ್ತುಗಳಿಗೆ ಏಷ್ಯದ ಸಣ್ಣ ರಾಷ್ಟ್ರಗಳಲ್ಲಿ ಒಳ್ಳೆಯ ಮಾರುಕಟ್ಟೆ ಇದೆ. ಆದ್ದರಿಂದ ತನ್ನ ಪ್ರಭಾವವನ್ನು ಈ ದೇಶದ ಮಾರುಕಟ್ಟೆಗಳಲ್ಲಿ ಹೆಚ್ಚಿಸಿಕೊಳ್ಳಲು ಭಾರತಕ್ಕೆ ಸುಸಮಯ ಒದಗಿದೆ. ಇನ್ನು ಮುಂದಿನ ವರ್ಷಗಳಲ್ಲಿ ಈ ದೇಶಗಳೊಡನೆ ಭಾರತ ಒಳ್ಳೆಯ ಬಾಂಧವ್ಯ ಇಟ್ಟುಕೊಂಡರೆ ಭಾರತಕ್ಕೆ ಒಳ್ಳೆಯ ಭವಿಷ್ಯವಿದೆ.

ಏಷ್ಯದ ಅಭಿವೃದ್ಧಿ ಬ್ಯಾಂಕನ್ನು ಸ್ಥಾಪಿಸುವುದಕ್ಕೆ ಮೊದಲು ಇದರ ಸಾಮರ್ಥ್ಯದ ವಿಷಯದಲ್ಲಿ ಅನೇಕ ದೇಶಗಳು ಸಂದೇಹ ವ್ಯಕ್ತಪಡಿಸಿದ್ದುವು. ಏಷ್ಯದಲ್ಲಿರುವ ದೇಶಗಳೆಲ್ಲವೂ (ಜಪಾನ್ ಹೊರತು) ಅಭಿವೃದ್ಧಿ ಹೊಂದುತ್ತಿರುವ ದೇಶಗಳು. ಇವುಗಳ ಆವಶ್ಯಕತೆ ಬಹಳ. ಇಂಥ ಪರಿಸ್ಥಿತಿಯನ್ನು ಎದುರಿಸಲು ಬ್ಯಾಂಕಿನಿಂದ ಸಾಧ್ಯವಿಲ್ಲ ಎಂಬ ಅಭಿಪ್ರಾಯವಿತ್ತು. ಆದರೆ ಕಳೆದ ೩ ವರ್ಷಗಳಿಂದ (೧೯೬೭–೭೦) ಬ್ಯಾಂಕು ನಿರ್ವಹಿಸಿರುವ ಕಾರ್ಯಗಳನ್ನು ನೋಡಿದರೆ

ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಂಡು ಬ್ಯಾಂಕನ್ನು ಸ್ಥಾಪಿಸಲಾಗಿದೆ ಎಂದು ಹೇಳಬಹುದು.

ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಬ್ಯಾಂಕು ವಿಶೇಷ ನಿಧಿಗಳನ್ನು ಸ್ಥಾಪಿಸಿಕೊಂಡಿರುವುದಲ್ಲದೆ ಬಾಂಡುಗಳ ಮೂಲಕ ಹಣ ಕೂಡಿಸಿದೆ. ೧೯೬೯ರಲ್ಲಿ ಪಶ್ಚಿಮ ಜರ್ಮನಿಯಲ್ಲಿ ಬಾಂಡುಗಳ ಮಾರಾಟ ಮಾಡಿತು. ಜರ್ಮನಿಯ ಬ್ಯಾಂಕುಗಳು ಏಷ್ಯದ ಅಭಿವೃದ್ಧಿ ಬ್ಯಾಂಕಿನ ಬಾಂಡುಗಳನ್ನು ಮಾರುವ ಜವಾಬ್ದಾರಿ ವಹಿಸಿಕೊಂಡುವು. ೧೩ ದೇಶಗಳಲ್ಲಿ ಬಾಂಡುಗಳು ಮಾರಾಟವಾಗಿ ೬೦೦ ಲಕ್ಷ ಜರ್ಮನ್ ಮಾರ್ಕ್‌ಗಳಷ್ಟು (ಸುಮಾರು ೧೨ ಕೋಟಿ ರೂಪಾಯಿ) ಬಂಡವಾಳವನ್ನು ಪಡೆಯಲಾಯಿತು.

ಬ್ಯಾಂಕು ವಿವಿಧ ದೇಶಗಳಿಗೆ ಒದಗಿಸಿರುವ ಸಹಾಯ ಇದುವರೆಗೆ ಅಲ್ಪವಾಗಿದ್ದರೂ ಇನ್ನು ಮುಂದೆ ತನ್ನ ಕಾರ್ಯವನ್ನು ವಿಸ್ತರಿಸಿಕೊಳ್ಳಬಲ್ಲುದು ಎಂಬ ಭರವಸೆ ಬಂದಿದೆ. ಕಳೆದ ೩ ವರ್ಷಗಳಿಂದ ಸಂಪೂರ್ಣ ಆಸಕ್ತಿಯಿಂದ ಬ್ಯಾಂಕು ಕಾರ್ಯ ನಿರ್ವಹಿಸುತ್ತಿದೆ. ಏಷ್ಯದ ಸಣ್ಣ ರಾಷ್ಟ್ರಗಳಿಗೆ ಬ್ಯಾಂಕಿನಿಂದ ಮಹದುಪಕಾರ ವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಬ್ಯಾಂಕು ತನ್ನ ಪಾತ್ರ ವಹಿಸುವುದರ ಮೂಲಕ ಈ ರಾಷ್ಟ್ರಗಳ ಮಧ್ಯೆ ಮಧುರಬಾಂಧವ್ಯ ಕಲ್ಪಿಸಬಲ್ಲುದು.

ಪರಿವರ್ತನೆಯ ಪಾತ್ರವೇನೆಂಬುದೇ ಆಧುನಿಕ ಆರ್ಥಿಕಜೀವನದ ಒಂದು ಕುತೂಹಲ. ಇದು ಬಹಳ ಅಗಾಧವಾದದ್ದೆಂದೇ ಸಾಮಾನ್ಯ ಭಾವನೆ. ಇದರ ನಾನಾ ರೂಪಗಳ ಪಟ್ಟಿ ಮಾಡುವುದು, ಇದರ ವ್ಯಾಪ್ತಿಯೆಷ್ಟೆಂಬುದನ್ನು ಒತ್ತಿ ಹೇಳುವುದು—ಎಂದರೆ ಸಾಮಾನ್ಯ ವಿಚಾರವೊಂದರ ವಿಶಿಷ್ಟಾರ್ಥದ ಮನವರಿಕೆಯೇ ಆಗಿದೆ. ಆದರೂ ಬಹಳಷ್ಟು ಬದಲಾವಣೆಯಾಗುತ್ತಿಲ್ಲವೆಂದೇ ಅನೇಕರ ಕಲ್ಪನೆ. ಅಮೆರಿಕ ಸಂಯುಕ್ತಸಂಸ್ಥಾನದ ಆರ್ಥಿಕವ್ಯವಸ್ಥೆ ಪರಿಪೂರ್ಣವಾದದ್ದೆಂದೇ ಸಾರ್ವಜನಿಕ ಸಮಾರಂಭಗಳಲ್ಲೆಲ್ಲ ಹೊಗಳಿಕೆಗೆ ಪಾತ್ರವಾಗಿದೆ. ಪರಿಪೂರ್ಣವಾದದ್ದನ್ನು ಪರಿಪೂರ್ಣಗೊಳಿಸುವುದು ಸುಲಭವಲ್ಲ. ಮೊತ್ತದಲ್ಲಿ ಇಲ್ಲೂ ಬದಲಾವಣೆಯಾಗುತ್ತಿದೆ. ಆದರೆ ಉತ್ಪತ್ತಿ ಹೆಚ್ಚಿದರೂ ಉಳಿದದ್ದೆಲ್ಲ ಎಂದಿನಂತೆಯೇ ಮುಂದುವರಿಯುತ್ತಿದೆ.

ಬದಲಾವಣೆಯಾಗುತ್ತಿರುವುದಂತೂ ನಿಸ್ಸಂದೇಹ. ಕಳೆದ ಎಪ್ಪತ್ತು ವರ್ಷಗಳಲ್ಲಿ, ಮುಖ್ಯವಾಗಿ ಎರಡನೆಯ ಮಹಾಯುದ್ಧಾರಂಭದಿಂದೀಚೆಗೆ, ಆರ್ಥಿಕ, ಜೀವನದಲ್ಲಾಗಿರುವ ಆವಿಷ್ಕಾರಗಳೂ ಬದಲಾವಣೆಗಳೂ ಯಾವ ಎಣಿಕೆಯಿಂದಲಾದರೂ ಬಹಳ ಮಹತ್ತ್ವದವೆನ್ನಬೇಕು. ಪದಾರ್ಥೋತ್ಪಾದನೆಗಾಗಿ ಅಧಿಕಾಧಿಕ ಜಟಿಲವೂ ಅನ್ಯೈಜವೂ ಆದ ತಂತ್ರದ ಪ್ರಯೋಗವಾಗುತ್ತಿರುವುದೇ ನಮಗೆ ಥಟ್ಟನೆ ಎದ್ದುತೋರುವ ಬದಲಾವಣೆ. ಮಾನವಶಕ್ತಿ ಅಡ್ಡಾದಿಡ್ಡಿಯಾಗಿ ಪ್ರಯೋಗವಾಗುವ ಬದಲು ಆ ಸ್ಥಾನಕ್ಕೆ ಯಂತ್ರಗಳು ಬಂದಿವೆ. ಇತರ ಯಂತ್ರಗಳಿಗೆ ಸೂಚನೆ ನೀಡುವ ಯಂತ್ರಗಳೂ ಅಧಿಕಾಧಿಕವಾಗಿ ಬಳಕೆಗೆ ಬರುತ್ತಿರುವುದರಿಂದ ಮಾನವನ ಕೆಳಮಟ್ಟದ ಬುದ್ಧಿಯೂ ಇಂದು ಅನಾವಶ್ಯಕವೆನಿಸಿದೆ.

ಪೆಟ್ರೋಲಿಯಂ, ಗಣಿಗಾರಿಕೆ, ರೈಲ್ವೆ, ಜಹಜು, ಉಕ್ಕು ಮುಂತಾದವೇ ಎಪ್ಪತ್ತು ವರ್ಷಗಳ ಹಿಂದಿನ ಬೃಹದ್ಗಾತ್ರ ಕೈಗಾರಿಕೆಗಳು. ಕಾರ್ಪೊರೇಷನ್ ಆಡಳಿತ ವ್ಯವಸ್ಥೆ ಇವಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಇಂದು ಹಾಗಲ್ಲ. ಜಿನಸಿ ಮಾರಾಟ, ಹಿಟ್ಟಿನ ಗಿರಣಿ, ಪತ್ರಿಕಾಪ್ರಕಟನೆ, ಸಾರ್ವಜನಿಕ ಮನೋರಂಜನೆ ಮುಂತಾದ ಕ್ಷೇತ್ರಗಳಿಗೂ ಕಾರ್ಪೊರೇಷನ್ ಪ್ರವೇಶಿಸಿದೆ. ಒಂದಾನೊಂದು ಕಾಲದಲ್ಲಿ ಇವೆಲ್ಲ ವ್ಯಕ್ತಿ ಮಾಲೀಕರ ಅಥವಾ ಸಣ್ಣಪುಟ್ಟ ಪಾಲುದಾರಿಕೆ ಸಂಸ್ಥೆಗಳ ಕ್ಷೇತ್ರವಾಗಿತ್ತು. ಇಂದು ದೈತ್ಯಾಕಾರದ ಸಂಸ್ಥೆಗಳು ಹಲವಾರು ಉದ್ಯಮಗಳಲ್ಲಿ ಕೋಟ್ಯಂತರ ಡಾಲರುಗಳ ಬೆಲೆಯ ಉಪಕರಣಗಳನ್ನು ತೊಡಗಿಸಿ ಸಹಸ್ರಾರು ಮಂದಿ ಉದ್ಯೋಗಿಗಳನ್ನು ನೇಮಿಸಿಕೊಂಡು ನೂರಾರು ಪದಾರ್ಥಗಳನ್ನು ತಯಾರಿಸುತ್ತಿವೆ. ಅಮೆರಿಕ ಸಂಯುಕ್ತಸಂಸ್ಥಾನದಲ್ಲಿ ವರ್ಷೇ ವರ್ಷೇ ಒದಗಿ ಬರುವ ಎಲ್ಲ ಸರಕು ಸೇವೆಗಳಲ್ಲಿ ಹತ್ತಿರ ಹತ್ತಿರ ಅರ್ಧದಷ್ಟನ್ನು ಅಲ್ಲಿನ ಐನೂರು ಬೃಹತ್ ಕಾರ್ಪೊರೇಷನುಗಳು ತಯಾರಿಸುತ್ತಿವೆ.

ಜೆ. ಕೆ. ಗ್ಯಾಲ್‌ಬ್ರೇತ್
('ದಿ ನ್ಯೂ ಇಂಡಸ್ಟ್ರಿಯಲ್ ಸ್ಟೇಟ್')

ಕುಕ್ಕಿಲ ಕೃಷ್ಣಭಟ್ಟ

ನಾಟ್ಯಶಾಸ್ತ್ರ ಹಾಗೂ ಸಂಸ್ಕೃತ ನಾಟಕಗಳು

ಭಾರತೀಯ ನಾಟ್ಯಪ್ರಯೋಗಕ್ಕೆ ಅತಿ ಪುರಾತನ ಇತಿಹಾಸವಿದೆ. ನಾಟ್ಯ, ಸಂಗೀತ ಇವೆರಡೂ ಕಲೆಗಳು ನಮ್ಮಲ್ಲಿ ಅನಾದಿಪರಂಪರೆಯಿಂದ ಜೊತೆಯಲ್ಲಿಯೇ ಹುಟ್ಟಿ ಬೆಳೆದು ಉಪವೇದಗಳೆಂಬ ಖ್ಯಾತಿ ಪಡೆದಿವೆ.[1] ವೇದೋಕ್ತ ಇತಿಹಾಸಗಳನ್ನು ನೃತ್ತಗೀತಸಹಿತವಾಗಿ ರಂಗಭೂಮಿಯಲ್ಲಿ ರಸೋತ್ಪತ್ತಿಯಾಗುವಂತೆ ಅಭಿನಯಿಸುವ ಪ್ರಯೋಗಕ್ಕೇ ಮೂಲತಃ ನಾಟ್ಯವೇದವೆಂದು ಹೆಸರಾದುದು. ಕ್ರಮೇಣ ಅಭಿನಯ ವಿಲ್ಲದ ಕೇವಲ ನರ್ತನಕ್ಕೂ ನಾಟ್ಯವೆಂಬ ಹೆಸರು ರೂಢಿಯಲ್ಲಿ ಬಂದಿದೆ[2]. ರಂಗ ಭೂಮಿಯ ಮೂಲಸ್ವರೂಪ ಹೇಗಿತ್ತು, ಕ್ರಮಶಃ ಅದು ಹೇಗೆ ವಿಕಾಸಗೊಂಡಿತು— ಎಂಬುದನ್ನು ನಾಟ್ಯಶಾಸ್ತ್ರದ ಆರಂಭಕ್ಕೆ ಭರತನು ವರ್ಣಿಸಿರುವ ನಾಟ್ಯೋತ್ಪತ್ತಿ 'ಕಥೆ'ಯಿಂದ ಸಾರೋದ್ಧಾರವಾಗಿ ಹೀಗೆ ಸಂಗ್ರಹಿಸಬಹುದು :

ಮೂಲತಃ ನಾಟ್ಯಪ್ರಯೋಗವು ವೈದಿಕಧರ್ಮದ ಪ್ರಸಾರಕ್ಕಾಗಿ (ಮಧ್ಯ ದೇಶದಲ್ಲಿ) ಹುಟ್ಟಿತು ಎನ್ನಬಹುದು. ಇಂದ್ರಾದಿ ದೇವತೆಗಳಿಗೂ ವೃತ್ರಾದಿ ದಾನವರಿಗೂ ಆಗಾಗ ಸಂಗ್ರಾಮಗಳು ನಡೆಯುತ್ತಿದ್ದು, ದೇವತೆಗಳು ದಾನವರನ್ನು ಜಯಿಸಿದ ಕಥೆಗಳು ವೇದಗಳಲ್ಲಿ ಪ್ರಸಿದ್ಧವಾಗಿವೆ. ವೇದಾಧಿಕಾರವಿಲ್ಲದ ಲೌಕಿಕರಲ್ಲಿ ದೇವತೆಗಳ ಮಹತ್ತ್ವ ಹಾಗೂ ಸತ್ತ್ವಸಾಮರ್ಥ್ಯಗಳ ಅರಿವುಂಟಾಗುವಂತೆ ಮಾಡಿ ಆ ಮೂಲಕ ಧಾರ್ಮಿಕಶ್ರದ್ಧೆಯನ್ನು ಹುಟ್ಟಿಸುವುದಕ್ಕಾಗಿ ಆ ವೇದೋಕ್ತ ಇತಿ

---

[1] ನಾಟ್ಯವೇದ ಏವ ಗೀತಪ್ರಧಾನವಿವಕ್ಷಯಾ ಗಾಂಧರ್ವವೇದ ಉಚ್ಯತೇ। ಅಭಿನಯ ಪ್ರಾಧಾನ್ಯವಿವಕ್ಷಯಾತು ನಾಟ್ಯವೇದ ಉಚ್ಯತೇ।

ಸಂ. ರ. ಅ ೩–೪ ವ್ಯಾಖ್ಯಾನ

[2] ನಾಟ್ಯಶಬ್ದೋ ರಸೇಮುಖ್ಯೋ ರಸಾಭಿವ್ಯಕ್ತಿಕಾರಣಾತ್
ಚತುರ್ಧಾಭಿನಯೋಪೇತಂ ಲಕ್ಷಣಾವೃತ್ತಿತೋ ಬುಧೈಃ
ನರ್ತನಂ ನಾಟ್ಯಮಿತ್ಯುಕ್ತಂ ಸತ್ವತ್ರಾಭಿನಯೋ ಭವೇತ್
ಕಾವ್ಯಬದ್ಧಂ ವಿಭಾವಾದಿ ವ್ಯಂಜಯನ್ ಯೋನಟೇಸ್ಥಿತಃ
ಸಾಮಾಜಿಕಾನಾಂ ಜನಯನ್ ನಿರ್ವಿಘ್ನರಸಸಂವಿದಂ ॥ ೧೯ ॥

(ಸಂ. ರ. ಅ ೭)

ಹಾಸಗಳನ್ನು ಅದ್ಭುತವಾಗಿ ನಟಿಸಿ ತೋರಿಸುವ ಸಂಪ್ರದಾಯವನ್ನು ಮಹರ್ಷಿಗಳೇ ನಿರೂಪಿಸಿದರೆನ್ನಬೇಕು.[3] ಆರಂಭದಲ್ಲಿ ಇದು 'ಛೇದ್ಯಭೇದ್ಯಾಹವಾತ್ಮಕವಾದ' ರೌದ್ರಾದ್ಭುತ ಪ್ರಯೋಗವಾಗಿತ್ತು.[4] ಎಂದರೆ ಕೇವಲ ಯುದ್ಧರೂಪಕವಾಗಿತ್ತು. ಆ ಪ್ರಯೋಗದಲ್ಲಿ ನಾಟ್ಯಾರಂಭಕ್ಕೆ ಇಂದ್ರ, ಅಗ್ನಿ, ವರುಣಾದಿ ವೈದಿಕ ದೇವತೆಗಳನ್ನು ಸ್ತುತಿಸಲಾಗುತ್ತಿತ್ತು.[5] ಬ್ರಹ್ಮದ್ವೇಷಿಯಾದ 'ದಸ್ಯು' ವರ್ಗದ ಜನಾಂಗವು ಇದನ್ನು ವಿರೋಧಿಸುತ್ತಿದ್ದುದಲ್ಲದೆ ಪ್ರಯೋಗವು ಯಶಸ್ವಿಯಾಗದಂತೆ ವಿಘ್ನಗಳನ್ನೂ ತಂದೊಡ್ಡುತ್ತಿದ್ದಿತು.[6] ಅದಕ್ಕಾಗಿ ಭದ್ರವಾದ ನಾಟ್ಯಗೃಹಗಳನ್ನು ನಿರ್ಮಿಸಲಾಯಿತು. ಕ್ರಮೇಣ ಈ ಪ್ರಯೋಗವನ್ನು ಹೆಚ್ಚು ಜನಪ್ರಿಯ

---

[3] ಗ್ರಾಮ್ಯಧರ್ಮ ಪ್ರವೃತ್ತೇ ತು ಕಾಮಲೋಭವಶಂಗತೇ
ಈರ್ಷ್ಯಾಕ್ರೋಧಾದಿಸಂಮೂಢೇ ಲೋಕೇ ಸುಖಿತದುಃಖಿತೇ ॥ ೯ ॥
ನ ವೇದವ್ಯವಹಾರೋಽಯಂ ಸಂಶ್ರಾವ್ಯಃ ಶೂದ್ರಜಾತಿಷು
ತಸ್ಮಾತ್ ಸೃಜಾಪರಂ ವೇದಂ ಪಂಚಮಂ ಸಾರ್ವವರ್ಣಿಕಂ ॥
ವೇದೋಪವೇದೈಃ ಸಂಬದ್ಧೋ ನಾಟ್ಯವೇದೋ ಮಹಾತ್ಮನಾ ॥ ೧೮ ॥
ಯ ಇಮೇ ವೇದಗುಹ್ಯಜ್ಞಾ ಮುನಯಃ ಸಂಶಿತವ್ರತಾಃ
ಏತೇಽಸ್ಯ ಗ್ರಹಣೇ ಶಕ್ತಾ ಪ್ರಯೋಗೇ ಧಾರಣೇ ತಥಾ ॥ ೨೩ ॥
ತದಂತೇಽನುಕೃತಿರ್ಬದ್ಧಾ ಯಥಾದೈತ್ಯಾಃ ಸುರೈರ್ಜಿತಾಃ ॥ ೫೯ ॥
(ನಾ. ಶಾ. ಅ ೧)

[4] ಭಾರತೀಂ ಸಾತ್ವತೀಂ ಚೈವ ವೃತ್ತಿಮಾರಭಟೀಂ ತಥಾ
ಸಂಫೇಟವಿದ್ರವಕೃತಾ ಛೇದ್ಯಭೇದ್ಯಾಹವಾತ್ಮಿಕಾ ॥ ೫೯ ॥
(ನಾ. ಶಾ. ಅ ೧)

[5] ಪೂರ್ವಂ ಕೃತಾ ಮಯಾ ನಾಂದೀ ಆಶೀರ್ವಚನ ಸಂಯುತಾ
ಅಷ್ಟಾಂಗಪದಸಂಯುಕ್ತಾ ವಿಶುದ್ಧಾ ವೇದಸಮ್ಮತಾ ॥ ೫೭ ॥
ಕ್ರಿಯತಾಂ ನಾಟ್ಯವಿಧಿವದ್ಯಜನಂ ನಾಟ್ಯಮಂಡಪೇ
ಬಲಿಪ್ರದಾನೈರ್ಹೋಮೈಶ್ಚ ಮಂತ್ರೌಷಧಿ ಸಮನ್ವಿತೈಃ ॥ ೧೧೯ ॥
ಯಜ್ಞೇನ ಸಂಮಿತಂ ಹ್ಯೇತತ್ಪ್ರಾಗ್ದೈವತ ಪೂಜನಂ ॥ ೧೨೩ ॥
(ನಾ. ಶಾ. ಅ ೧)

[6] ಏವಂ ಪ್ರಯೋಗೇ ಪ್ರಾರಬ್ಧೇ ದೈತ್ಯದಾನವನಾಶನೇ
ಅಭವನ್ ಕ್ಷುಭಿತಾಃ ಸರ್ವೇ ದೈತ್ಯಾ ಯೇ ತತ್ರ ಸಂಗತಾಃ ॥ ೬೫ ॥
ವಿರೂಪಾಕ್ಷಪುರೋಗಾಸ್ತು ವಿಘ್ನಾನ್ ಪ್ರೋತ್ಸಾದ್ಯ ತೇಽಬ್ರುವನ್ ।
ನೇತ್ಥಮಿಚ್ಛಾಮಹೇ ನಾಟ್ಯಮೇತದಾಗಮ್ಯತಾಮಿತಿ ॥ ೬೬ ॥
ತತಸ್ತೈರಸುರೈಃ ಸಾರ್ಧಂ ವಿಘ್ನಾ ಮಾಯಾಮುಪಾಶ್ರಿತಾಃ
ವಚಶ್ಚೇಷ್ಟಾಂ ಸ್ಮೃತಿಂ ಚೈವ ಸ್ತಂಭಯಂತಿ ಸ್ಮ ನೃತ್ಯತಾಂ ॥ ೬೯ ॥
ಕುರು ಲಕ್ಷಣಸಂಪನ್ನಂ ನಾಟ್ಯವೇಶ್ಮ, ಚಕಾರ ಸಃ ॥ ೮೦ ॥
(ನಾ. ಶಾ. ಅ ೧)

ಗೊಳಿಸುವುದಕ್ಕಾಗಿ ಇದರಲ್ಲಿ ಶೃಂಗಾರಸಂದರ್ಭಗಳನ್ನೂ ಯೋಜಿಸಲಾಯಿತು.[7] ಅದು ಸ್ವಲ್ಪಮಟ್ಟಿಗೆ ಯಶಸ್ವಿಯಾಗಿ ಕ್ರಮೇಣ ಈ ಪ್ರಯೋಗವು ಹಿಮಾಲಯ ಪ್ರಾಂತಗಳವರೆಗೂ ವ್ಯಾಪಿಸಿ ಪ್ರಚಾರಕ್ಕೆ ಬಂತು. ಅಲ್ಲಿ ಶೈವಧರ್ಮವು ಪ್ರಬಲವಾಗಿದ್ದುದರಿಂದ ಆ ಜನಾಂಗಕ್ಕೂ ಆದರಣೀಯವಾಗುವಂತೆ ಆರಂಭದ ನಾಂದೀ ವಿಧಿಯಲ್ಲಿ (ಪ್ರಾಯಶಃ ಅಲ್ಲಿ ಪ್ರರೂಢವಾಗಿದ್ದ) ಶಿವ ಪಾರ್ವತಿಯರ ತಾಂಡವ ಹಾಗೂ ಲಾಸ್ಯ ನೃತ್ತಗಳನ್ನೂ ಅಳವಡಿಸಲಾಯಿತಲ್ಲದೆ ಶೈವೇತಿಹಾಸಪ್ರಸಿದ್ಧವಾದ ತ್ರಿಪುರಸಂಹಾರಾದಿ ರೌದ್ರಾದ್ಭುತ ರೂಪಕಗಳನ್ನೂ ಪ್ರಯೋಗಕ್ಕೆ ತರಲಾಯಿತು.[8] ಕ್ರಮೇಣ, ಪ್ರಾಯಶಃ ಪೌರಾಣಿಕ ಯುಗಾರಂಭದಲ್ಲಿ, ಅಸುರ ವರ್ಗದವರ ದ್ವೇಷ, ಅವಹೇಳನ, ಪರಾಜಯ ಇತ್ಯಾದಿ ರೂಪಣೆಗಳಿಂದ ಸತ್ಪರಿಣಾಮವಿಲ್ಲವೆಂದು ಅವರನ್ನೂ ದೇವತೆಗಳೊಡನೆ ಸಮಾನಸ್ಕಂಧರನ್ನಾಗಿಟ್ಟು, ಅವರ ಶಕ್ತಿಸಾಮರ್ಥ್ಯಗಳಿಗೆ ಮನ್ನಣೆಕೊಟ್ಟು ನಾಟ್ಯದಲ್ಲಿ ಗೌರವಿಸುವುದರ ಮೂಲಕ ಪ್ರಯೋಗವನ್ನು ಸರ್ವಾದರಣೀಯವನ್ನಾಗಿ ಮಾಡುವ ಪ್ರಯತ್ನ ನಡೆಯಿತು.[9] ರಂಗಪೂಜೆ ನಾಂದೀ ವಿಧಿಗಳಲ್ಲಿ ರಾಕ್ಷಸರಿಗೂ ಬಲಿ, ವಂದನೆ, ಪೂಜೆ, ಅವರ ಪ್ರೀತ್ಯರ್ಥವಾದ ಗೀತ

---

7 ಅಥಾಹಮಾಂ ಸುರಗುರುಃ ಕೈಶಿಕೀಮಪಿಯೋಜಯ
ಕೈಶಿಕೀ ಶ್ಲಕ್ಷ್ಣನೇಪಥ್ಯಾ ಶೃಂಗಾರರಸಸಂಭವಾ ॥ ೪೩ ॥
(ನಾ. ಶಾ. ಅ ೧)

8 ತತಃ ಸಾರ್ಧಂ ಸುರೈರ್ಗತ್ವಾ ವೃಷಭಾಂಕ ನಿವೇಶನಂ
ತತೋ ಹಿಮವತಃ ಪೃಷ್ಠೇ ನಾನಾನಗಸಮಾವೃತೇ
ಬಹುಭೂತಗಣಾಕೀರ್ಣೇ ರಮ್ಯಕಂದರ ನಿರ್ಝರೇ
ತಥಾ ತ್ರಿಪುರದಾಹಶ್ಚ ಡಿಮಸಂಜ್ಞಃ ಪ್ರಯೋಜಿತಃ ॥ ೧೭ ॥
(ನಾ. ಶಾ. ಅ ೪)

9 ಅಲಂವೋ ಮನ್ಯುನಾ ದೈತ್ಯಾ, ವಿಷಾದಂ ತ್ಯಜತಾನಘಾಃ
ಭವತಾಂ ದೈವತಾನಾಂಚ ಶುಭಾಶುಭವಿಕಲ್ಪಕಃ ॥ ೧೦೨ ॥
ಕರ್ಮಭಾವಾನ್ವಯಾಪೇಕ್ಷೀ ನಾಟ್ಯವೇದೋ ಮಯಾಕೃತಃ
ನೈಕಾಂತತೋಽತ್ರ ಭವತಾಂ ದೇವಾನಾಂಚಾತ್ರ ಭಾವನಂ ॥ ೧೦೩ ॥
ತ್ರೈಲೋಕ್ಯಸ್ಯಾಸ್ಯ ಸರ್ವಸ್ಯ ನಾಟ್ಯಂ ಭಾವಾನುಕೀರ್ತನಂ
ಕ್ವಚಿತ್ ಧರ್ಮಃ ಕ್ವಚಿತ್ ಕ್ರೀಡಾ ಕ್ವಚಿದರ್ಥಃ ಕ್ವಚಿಚ್ಛ್ರಮಃ ॥ ೧೦೪ ॥
ಕ್ವಚಿದ್ಧಾಸ್ಯಂ ಕ್ವಚಿದ್ಯುದ್ಧಂ ಕ್ವಚಿತ್ಕಾಮಃ ಕ್ವಚಿದ್ವಧಃ
ತನ್ನಾತ್ರ ಮನ್ಯುಃ ಕರ್ತವ್ಯೋ ಭವದ್ಭಿರಮರಾನ್ ಪ್ರತಿ ॥ ೧೦೫ ॥
(ನಾ. ಶಾ. ಅ ೧)

ಸಶ್ಯಾಮುಕೇನಮಾಂಸೇನ ಸಂಪೂಜ್ಯಾ ರಕ್ಷಸಾಂಗಣಾಃ
ಸುರಾಮಾಂಸಪ್ರಧಾನೇನ ವಿಧಿನಾ ಪ್ರತಿಪೂಜಯೇತ್ ॥ ೪೧ ॥
ನಾನಾನಿಮಿತ್ತ ಸಂಭೂತಾ ಪೌಲಸ್ತ್ಯಾಃ ಸರ್ವ ಏವತು
ರಾಕ್ಷಸೇಂದ್ರಾ ಮಹಾಸತ್ವಾಃ ಪ್ರತಿಗೃಹ್ಣಂತ್ವಿಮಂಬಲಿಂ ॥ ೮೬ ॥
(ನಾ. ಶಾ. ಅ ೩)

ವಾದ್ಯಾದಿಗಳು ಇವನ್ನೆಲ್ಲಾ ಯೋಜಿಸಲಾಯಿತು; ದೇವದಾನವರ ಅನ್ಯೋನ್ಯ ಭಾವದ ದ್ಯೋತಕವಾಗಿ ಸಮುದ್ರಮಥನಾದಿ ಸಂದರ್ಭಗಳನ್ನು ಪ್ರಯೋಗಕ್ಕೆ ತರಲಾಯಿತು.[10] ಮುಂದೆ ಭಾಗವತಧರ್ಮ ಊರ್ಜಿತಕ್ಕೆ ಬರಲು ಎಷ್ಟೆಲ್ಲ ದೇವರ್ಕಳು ಹುಟ್ಟಿಬಂದರೋ ಅವರೆಲ್ಲರಿಗೂ ನಾಟ್ಯಾರಂಭದಲ್ಲಿ ಪೂಜೆ ಪುರಸ್ಕಾರಗಳನ್ನು ಸಲ್ಲಿಸುವ ಹಾಗೂ ಪುರಾಣೇತಿಹಾಸಗಳ ಎಲ್ಲ ಕಥಾಭಾಗಗಳನ್ನೂ ನಾಟಕರೂಪದಲ್ಲಿ ಪ್ರಯೋಗಿಸುವ ಸಂಪ್ರದಾಯವು ರೂಢಿಯಲ್ಲಿ ಬಂದು ಸರ್ವತ್ರ ಯಶಸ್ಸನ್ನು ಪಡೆಯಿತು. ಹೀಗೆ ಸಾರ್ವಲೌಕಿಕವಾದ ಹಾಗೂ ಸಾರ್ವವರ್ಣಿಕವಾದ (ಸೆಕ್ಯುಲರ್) ನಾಟ್ಯಪ್ರಯೋಗವು ಭರತಭೂಮಿಯ ನಾನಾ ಪ್ರದೇಶಗಳ ವೃತ್ತಿಪ್ರವೃತ್ತಿಗಳಿಂದ ವಿಶೇಷ ಸಂಸ್ಕಾರವನ್ನು ಪಡೆಯುತ್ತ ವೃದ್ಧಿಗೆ ಬಂದು ಸಂಸ್ಕೃತ ಪ್ರಾಕೃತ ಭಾಷೆಗಳು ಕೂಡಿನುಡಿಯುತ್ತಿದ್ದ ಆದೊಂದು ಸರ್ವಸಮೃದ್ಧಿಯ ಕಾಲದಲ್ಲಿ ಸಾಹಿತ್ಯದ ಶಿಖರವನ್ನೇರಿ ಪೂರ್ಣವೈಭವದಿಂದ ಶೋಭಿಸುತ್ತಿತ್ತು. ಕಾಲಕ್ರಮದಲ್ಲಿ ಆ ಭಾಷೆಗಳಿಗೆ ಮುಪ್ಪಡಸಿ, ಕೊನೆಗೊಮ್ಮೆ ಅವುಗಳ ಉಸಿರಾಟ ನಿಂತುಹೋದಂದಿಗೆ ಆ ನಮ್ಮ ರಂಗಭೂಮಿಯ ಕೊನೆಯ ಆಟವೂ ಮುಗಿಯಿತು. ಆಮೇಲೆ ಇಂದಿನವರೆಗೂ ಬೆಳಕಿಲ್ಲ. ಅಂದಿನ ಆ ದೃಶ್ಯದ ಹಾಗೂ ನಾಟಕರಚನೆಯ ಸ್ವರೂಪ ಲಕ್ಷಣಗಳನ್ನು ತಿಳಿಸುವ ಏಕೈಕಪ್ರಮಾಣಗ್ರಂಥವಾಗಿ ಉಳಿದಿರುವುದು ಭರತಮುನಿಯ ನಾಟ್ಯಶಾಸ್ತ್ರ ಒಂದೇ. ಇದೂ ಬಹಳ ಪುರಾತನ ರಚನೆ. ಕಾಳಿದಾಸನ ಕಾಲಕ್ಕೇ ಪೌರಾಣಿಕಐತಿಹ್ಯವೆನ್ನುವಷ್ಟು ಹಳೆಯದಾಗಿತ್ತೆಂದು ತೋರುವುದು.[11] ನಾಟಕಾದಿ ದೃಶ್ಯಕಾವ್ಯಗಳ ರಚನೆ ಹೇಗಿರಬೇಕು ಮತ್ತು ರಂಗದಲ್ಲಿ ಅವುಗಳನ್ನು ಹೇಗೆ ಪ್ರಯೋಗಕ್ಕೆ ತರಬೇಕು ಎಂಬ ಲಕ್ಷಣಗಳು ಅದರಲ್ಲಿ ವಿಸ್ತಾರವಾಗಿ

---

10 ತತೋಽಸ್ಮಿನ್ಪ್ರಯೋಗೇ ಭಗವತಾ ಯೋಜಯಾಮೃತಮಂಥನಂ
ತಸ್ಮಿನ್ ಸಮವಕಾರೇತು ಪ್ರಯುಕ್ತೇ ದೇವದಾನವಾಃ
ಹೃಷ್ಟಾಃ ಸಮಭವನ್ ಸರ್ವೇ ಕರ್ಮಭಾವಾನುದರ್ಶನಾತ್ ॥ ೪ ॥
ನಿರ್ಗೀತೇನಾವಬದ್ಧಾಸ್ತು ದೈತ್ಯದಾನವ ರಾಕ್ಷಸಾಃ
ಸಕ್ಷೋಭಂ ನವಿಘಾತಂಚ ಕರಿಷ್ಯಂತೀಹತೋಷಿತಾಃ ॥ ೪೬ ॥
ತತ್ರ ಥಾಪೂರ್ವರಂಗೇತು ಮಯಾಪ್ರೋಕ್ತಂ ದ್ವಿಜೋತ್ತಮಾಃ
ಸರ್ವದೈವತ ಪೂಜಾರ್ಹಂ ಸರ್ವದೈವತ ಪೂಜನಂ
ದೈತ್ಯದಾನವ ತುಷ್ಟ್ಯರ್ಥಂ ಸರ್ವೇಷಾಂಚ ದಿವೌಕಸಾಂ
ನಿರ್ಗೀತಾನಿ ಸಗೀತಾನಿ ಪೂರ್ವರಂಗಕೃತಾನಿತು ॥ ೫೭ ॥

(ನಾ. ಶಾ. ಅ ೫)

11 ಮುನಿನಾ ಭರತೇನ ಯಃ ಪ್ರಯೋಗೋ
ಭವತೀಷ್ವಷ್ಟರಸಾಶ್ರಯೋ ನಿಬದ್ಧಃ ।
ಲಲಿತಾಭಿನಯಂ ತಮದ್ಯ ಭರ್ತಾ
ಮರುತಾಂ ದ್ರಷ್ಟುಮನಾಃ ಸಲೋಕಪಾಲಃ ॥

(ವಿ. ಕ್ರ. ಅಂ ೨–೧೭)

ನಿರೂಪಿಸಲ್ಪಟ್ಟಿವೆ. ಆ ಲಕ್ಷಣಗಳ ಪ್ರಕಾರ ನೃತ್ಯ ಸಂಗೀತಗಳಿಲ್ಲದ ನಾಟಕ ಪ್ರಯೋಗವೆಂಬುದಿಲ್ಲ.[12] ಪ್ರಯೋಗ ಎಂಬುದಕ್ಕೆ ಭರತನು 'ಗೀತ ವಾದ್ಯಾಂಗ ಸಂಯೋಗಃ ಪ್ರಯೋಗ ಇತಿ ಸಂಜ್ಞಿತಃ' ಎಂಬ ಲಕ್ಷಣವನ್ನೇ ಹೇಳಿರುತ್ತಾನೆ. ಸಂಗೀತಶಾಸ್ತ್ರವನ್ನು ನಾಟ್ಯಶಾಸ್ತ್ರದ ಅಂಗವಾಗಿಯೇ ನಿರೂಪಿಸಿರುವುದಾದರೂ ಅದೇ ಉದ್ದೇಶದಿಂದ ಎಂಬುದು ಸ್ಪಷ್ಟವೇ ಸರಿ.

ಆದರೆ ನಮ್ಮಲ್ಲಿರುವ ಸಂಸ್ಕೃತ ನಾಟಕಗ್ರಂಥಗಳನ್ನು ನೋಡಿದರೆ ಅವುಗಳ ಅಭಿನಯಕ್ಕೆ ನೃತ್ತಸಂಗೀತಗಳ ಯೋಜನೆ ಇದ್ದಿರುವಂತೇನೂ ಕಾಣುವುದಿಲ್ಲ; ತಾಲಬದ್ಧವಾದ ಒಂದೇ ಒಂದು ಗೀತೆಯೂ ಅವುಗಳಲ್ಲಿರುವುದಿಲ್ಲ; ನರ್ತನಕ್ಕಾದರೂ ಒಂದೇ ಒಂದು ಅವಕಾಶವನ್ನು ಕಲ್ಪಿಸಿರುವುದಿಲ್ಲ; ಎಲ್ಲಿ ಹಾಡು ಎಲ್ಲಿ ಕುಣಿತ ಎಂಬ ಸೂಚನೆಯನ್ನು ಸಹ ಕೊಟ್ಟಿರುವುದಿಲ್ಲ. ಕಾಳಿದಾಸನ 'ವಿಕ್ರಮೋರ್ವಶೀಯ'ದ ಚತುರ್ಥಾಂಕವೊಂದರಲ್ಲಿ ಪುರೂರವನ ಪಾತ್ರಕ್ಕೆ ಕೆಲವೊಂದು ಗೀತೆಗಳು ಹಾಗೂ ಒಂದೆರಡು ಕುಣಿಯುವ ಸಂದರ್ಭಗಳು ಕಾಣುವುದಿದ್ದರೂ ಅದು ಪುರೂರವನ ಉನ್ಮಾದಾವಸ್ಥೆಯ ದೃಶ್ಯವಾಗಿರುವುದರಿಂದ ಆ ಹುಚ್ಚಿದ್ದ ಹಾಡಾಗಲಿ ಕುಣಿತವಾಗಲಿ ಕ್ರಮಬದ್ಧವಾದ ಗೀತನೃತ್ತ ಎನ್ನುವ ಹಾಗಿಲ್ಲ. ಕೆಲವು ನಾಟಕಗಳಲ್ಲಿ ಅಪರೂಪವಾಗಿಯಾದರೂ ಹಾಡುವ ಸಂದರ್ಭವಿದ್ದಲ್ಲಿ 'ನೇಪಥ್ಯೇಗೀಯತೇ' ಎಂಬ ಸೂಚನೆ ಇರುತ್ತದೆ. ಇದರಿಂದ ರಂಗಸ್ಥಳದಲ್ಲಿ ಗಾನಸಂಪ್ರದಾಯವಿದ್ದಿಲ್ಲವೇ ಎಂಬ ಸಂದೇಹಕ್ಕೆ ಬಲ ಕಾಣುವುದು.

ಹೀಗಿರುವುದರಿಂದ ವಿದ್ವಾಂಸರಲ್ಲಿ ಈ ಕುರಿತು ತರ್ಕವಿತರ್ಕಗಳು ಉಂಟಾಗಿವೆ:

ನಾಟ್ಯಶಾಸ್ತ್ರದಲ್ಲಿ ಕಾಣುವ ಪುರಾತನ ಸಂಪ್ರದಾಯವು ಭಾಸ ಕಾಳಿದಾಸಾದಿಗಳ ಕಾಲಕ್ಕೇ ಬಹುಶಃ ಸವೆದುಹೋಗಿದ್ದು ಕ್ರಮೇಣ ನೃತ್ತ ಸಂಗೀತಗಳು ನಾಟಕದಿಂದ ನಿಃಶೇಷವಾಗಿ ಹೊರಟುಹೋಗಿರಬೇಕು; ಅಥವಾ ಆ ಕಾಲಕ್ಕೆ ನೃತ್ತಾಭಿನಯಗಳಿದ್ದ ಗೀತನಾಟಕಗಳು ಬೇರೇ ಇದ್ದಿರಬೇಕು; ಭಾಸ ಕಾಳಿದಾಸಾದಿಮಹಾಕವಿಗಳ ಈ ನಾಟಕಗಳಲ್ಲಿ ಓದಿ ಕೇಳಿಯೂ ಆನಂದ ಪಡಬಹುದಾದ ಶ್ರವ್ಯಕಾವ್ಯಗುಣಗಳು ವಿಶೇಷವಿರುವುದರಿಂದ ಅವುಗಳಷ್ಟೇ ಬದುಕಿ

---

12 ಗೀತೇ ಪ್ರಯತ್ನಃ ಪ್ರಥಮಸ್ತು ಕಾರ್ಯಃ ।
ಶಯ್ಯಾಂ ಹಿ ನಾಟ್ಯಸ್ಯ ವದಂತಿ ಗೀತಂ ॥
ಗೀತೇಪಿ ವಾದ್ಯೇಪಿಚ ಸಂಪ್ರಯುಕ್ತೇ ।
ನಾಟ್ಯಪ್ರಯೋಗೋ ನ ವಿಪತ್ತಿಮೇತಿ ॥ ॥ ೪೩೫ ॥
........ಯಥಾನೃತ್ತಕೃತಂ ತಥಾ ।
ಯಥಾವರ್ಣಾದೃತೇ ಚಿತ್ರಂ ನಶೋಭೋತ್ಪಾದನಂ ಭವೇತ್
ಏವಮೇವ ವಿನಾಗಾನಂ ನಾಟ್ಯಂ ರಂಗಂ ನಗಚ್ಛತಿ ॥ ೪೨೫ ॥
(ನಾ. ಶಾ. ಅ ೩೨)

ನಿಂತು ಗೀತನಾಟಕಗಳು ಸ್ವಭಾವತಃ ಕಾಲಕ್ರಮದಲ್ಲಿ ಅಳಿದು ಹೋಗಿರಬೇಕು; ಅಥವಾ ನೃತ್ತಸಂಗೀತಗಳ ಗೊಂದಲವು ಅಭಿನಯದ ರಸೋತ್ಕರ್ಷಕ್ಕೆ ಪ್ರತ್ಯವಾಯ ವೆಂದು ಭಾವಿಸಿ ಭಾಸಕಾಳಿದಾಸಾದಿ ಮಹಾಕವಿಗಳೇ ಈ ಸುಧಾರಣೆಯನ್ನು ತಂದುದಿರಬೇಕು; ಸಾಮಾಜಿಕರಲ್ಲಿ ಬುದ್ಧಿಸಂಸ್ಕಾರ ಹೆಚ್ಚಿದಂತೆಲ್ಲ ಕೃತ್ರಿಮಕ್ಕೆ ಬೆಲೆ ಕಡಿಮೆಯಾಗುತ್ತ ಬಂದಿರುವುದೂ ಸಹಜ.

ಸಂಸ್ಕೃತ ನಾಟಕಗಳನ್ನು ಹೇಗೆ ರಂಗಕ್ಕೆ ತರುತ್ತಿದ್ದರೆಂಬುದನ್ನು ನಾಟ್ಯಶಾಸ್ತ್ರ ದಿಂದ ನಾವು ತಿಳಿಯಲಾರೆವು ಎಂದು ಒಂದೇಮಾತಿನಲ್ಲಿ ತೀರ್ಮಾನಿಸುವ ಸುಲಭದ ಪಂಡಿತರೂ ನಮ್ಮಲ್ಲಿದ್ದಾರೆ!

ಇಂಥ ಊಹನೆಗಳಿಗೆ ಬೆಂಬಲವಾಗಿ ಇನ್ನೂ ಒಂದಂಶವನ್ನು ಹೇಳಬಹುದು. ನಾಟಕಾರಂಭಕ್ಕೆ ಮೊದಲು ನಡೆಯತಕ್ಕ ನಾಂದೀವಿಧಿಯಲ್ಲಿ ನೃತ್ತ ಗೀತಾತ್ಮಕ ವಾದ ಪೂರ್ವರಂಗಪ್ರಯೋಗವು ಬಹಳ ವಿಸ್ತಾರವಾಗಿ ನಡೆಯತಕ್ಕದ್ದಿದೆ ಎಂದು ನಾಟ್ಯಶಾಸ್ತ್ರದ ಆ ಲಕ್ಷಣದಿಂದ ತಿಳಿಯುವುದು. ಅಲ್ಲಿಯೂ ಅನೇಕ ವಿಧದ ಗೀತೆಗಳಿವೆ. ಲಾಸ್ಯಪ್ರಯೋಗದಲ್ಲಿ ಗ್ರಾಮ್ಯಹಾಸ್ಯ ಹಾಗೂ ಅಶ್ಲೀಲ ಶೃಂಗಾರದ ವಿಕಟಸಂಭಾಷಣೆಯ ಪ್ರಸಂಗಗಳಿವೆ. ಇವುಗಳ ಪ್ರಸ್ತಾವವೂ ನಮ್ಮ ನಾಟಕಗಳಲ್ಲಿ ಕಾಣುವುದಿಲ್ಲವಷ್ಟೆ. ಸಂಗೀತನೃತ್ತಗಳೇ ಪ್ರಧಾನವಾಗಿರುವುದರಿಂದ ಆ ಭಾಗವನ್ನೂ ನಮ್ಮ ನಾಟಕಕವಿಗಳು ತೆಗೆದುಹಾಕಿ ಆ ಸ್ಥಾನದಲ್ಲಿ ಆಚಾರ ಮಾತ್ರಕ್ಕಾಗಿ ಒಂದೋ ಎರಡೋ ಮಂಗಳಶ್ಲೋಕಗಳನ್ನು 'ನಾಂದೀ' ಎಂದು ರಚಿಸಿದ್ದಿರಬೇಕು ಎಂದೂ ಎಣಿಸಬಹುದು. ಇದಕ್ಕೆ ಸಾಧಕವೆಂಬಂತೆ, ಮತ್ತೆ ಹುಟ್ಟಿದ ದಶರೂಪಕಾದಿ ನಾಟಕಲಕ್ಷಣ ಗ್ರಂಥಗಳಲ್ಲಿಯೂ ನೃತ್ತಗೀತಗಳ ಹಾಗೂ ಪೂರ್ವರಂಗದ ವಿಚಾರವಿರುವುದೂ ಇಲ್ಲ.

ಆದರೆ, ನಾಟ್ಯಶಾಸ್ತ್ರದ ಗೀತಲಕ್ಷಣಗಳನ್ನು ಚೆನ್ನಾಗಿ ಪರಿಶೀಲಿಸಿದಲ್ಲಿ ಇದು ಹೀಗಾಗಿರುವುದಕ್ಕೆ ಸಂಭವವಿಲ್ಲವೆಂದೇ ತೋರುವುದು. ನಮ್ಮಲ್ಲಿ ಈಗ ಸುಮಾರು ಒಂದು ಸಾವಿರ ವರ್ಷಗಳಿಂದ ಸಂಸ್ಕೃತನಾಟಕ ಪ್ರಯೋಗವಾಗಲಿ ರಚನೆಯಾಗಲಿ ಇಲ್ಲದಿರುವುದರಿಂದ ನಾಟ್ಯಶಾಸ್ತ್ರದ ಅಭ್ಯಾಸವೇ ಬಿಟ್ಟುಹೋಗಿದೆ. ಸಂಗೀತವೂ ಭರತಮಾರ್ಗವನ್ನು ಬಿಟ್ಟು ಬೇರೆ ದಾರಿ ಹಿಡಿದಿದ್ದು, ಲಕ್ಷ್ಯಾನುರೋಧವಾದ ಸಂಗೀತಶಾಸ್ತ್ರ ಗ್ರಂಥಗಳು ಕಾಲಕಾಲಕ್ಕೆ ಬೇರೆ ಬೇರೆ ಹುಟ್ಟಿಕೊಂಡಿರುವುದರಿಂದ ಆ ಬಗೆಯಲ್ಲಿಯೂ ನಾಟ್ಯಶಾಸ್ತ್ರವನ್ನು ನೋಡುವ ಆವಶ್ಯಕತೆ ಎಷ್ಟೋವರ್ಷಗ ಳಿಂದ ಬಂದಿರುವುದಿಲ್ಲ. ಆದ್ದರಿಂದ ಸರ್ವಸಾಮಾನ್ಯವಾಗಿ ವಿದ್ವಾಂಸರಲ್ಲಿಯೂ ಅದರ ಒಳಹೊಕ್ಕು ನೋಡುವ ಪ್ರವೃತ್ತಿ ಕಡಿಮೆಯಾಗುತ್ತ ಬಂದಿರುವುದರಲ್ಲಿ ಆಶ್ಚರ್ಯ ವಿಲ್ಲ. ದೊರಕಿದ ನಾಟ್ಯಶಾಸ್ತ್ರದ ಪ್ರತಿಗಳಲ್ಲಾದರೂ ಅದೆಷ್ಟೋ ತಪ್ಪುಗಳೂ ಪಾಠದೋಷಗಳೂ ಗ್ರಂಥಪಾತಗಳೂ ಪ್ರಕ್ಷೇಪಗಳೂ ಹೆಜ್ಜೆಹೆಜ್ಜೆಗೆ ಕಂಡು ಬರುವುದರಿಂದ ಮೂಲಗ್ರಂಥವನ್ನು ತಿಳಿದುಕೊಳ್ಳುವುದು ಪ್ರಯಾಸವೇ ಆಗಿತ್ತು. ಮೂಲದ ಎಷ್ಟೋ ಪಾರಿಭಾಷಿಕಸಂಜ್ಞೆಗಳ ನಿಜಾರ್ಥವನ್ನು ಹುಡುಕುವುದು

ಅಷ್ಟೇ ಕಷ್ಟವಾಗಿತ್ತು. ವ್ಯಾಖ್ಯಾನಗಳೂ ಉಪಲಬ್ಧವಿರಲಿಲ್ಲ. ಇಂದೀಗ ಹಾಗಲ್ಲ; ಅಭಿನವಗುಪ್ತಾಚಾರ್ಯನ ವ್ಯಾಖ್ಯಾನವು ಹರಿಮುರಿಯಾಗಿಯಾದರೂ ದೊರೆತಿರುವುದರಿಂದ ಸ್ವಲ್ಪಮಟ್ಟಿಗೆ ಬೆಳಕು ಬಿದ್ದಂತಾಗಿದೆ. ಅದರ ಸಹಾಯದಿಂದ ನಾವೀಗ ನಾಟ್ಯಶಾಸ್ತ್ರವನ್ನು ಆಮೂಲಾಗ್ರ ಪರಿಶೀಲಿಸಿದಲ್ಲಿ ನಾಟ್ಯದಲ್ಲಿ ನೃತ್ತಗೀತಗಳ ಯೋಜನೆ ಹಾಗೂ ಔಚಿತ್ಯವೇನಿದೆ ಎಂಬುದನ್ನು ತಿಳಿಯಬಹುದಾಗಿದೆ. ಆ ಕುರಿತು ಪರಿಶೀಲಿಸಿದ್ದರಲ್ಲಿ ಗೋಚರವಾಗುವ ವಿಚಾರಗಳು ಸಂಕ್ಷೇಪವಾಗಿ ಹೀಗಿವೆ:

ಕಾಳಿದಾಸನು ಹೇಳಿರುವಂತೆ[13] ನಾಟ್ಯಶಾಸ್ತ್ರವು ಪ್ರಯೋಗಪ್ರಧಾನವಾದ ಶಾಸ್ತ್ರವೇ ಆಗಿರುವುದಾದರೂ ಪ್ರಯೋಗಾರ್ಹವಾದ ನಾಟಕಾದಿರೂಪಕಗಳನ್ನು ಕವಿಗಳು ಹೇಗೆ ರಚಿಸಬೇಕು, ಅವುಗಳ ಸಂಧಿಸಂಧ್ಯಂಗಾದಿವಸ್ತುವಿನ್ಯಾಸ, ಅಂಕ ವಿಭಾಗ, ಭಾಷೆ, ಛಂದಸ್ಸು, ವಾಕ್ಯರಚನೆ, ಅಲಂಕಾರಾದಿ ಕಾವ್ಯಗುಣಗಳು ಹೇಗಿರಬೇಕು ಎಂಬ ಲಕ್ಷಣಗಳನ್ನು ವಾಚಿಕಾಭಿನಯದ ವಿಷಯವಾಗಿ ಭರತನು ಹೇಳಿರುತ್ತಾನೆ.[14] ಅಲ್ಲಿ ಶ್ಲೋಕವೃತ್ತಾದಿ ಪಾಠ್ಯವಸ್ತುಗಳನ್ನಷ್ಟೇ ಕಾವ್ಯರಚನೆಗೆ ನಿರ್ದೇಶಿಸಿರುವುದು ಹೊರತು ಹಾಡತಕ್ಕ ಗೀತೆಗಳನ್ನು ಕವಿಗಳು ರಚಿಸಬೇಕೆಂದೇನೂ ಹೇಳಿರುವುದಿಲ್ಲ.[15] ಆ ಪ್ರಕರಣಾರಂಭಕ್ಕಿರುವ ಉದ್ದೇಶಾನುಕ್ರಮಣಿಯಲ್ಲಿಯೂ ಗೇಯರಚನೆಗಳ ಸೂಚನೆ ಇಲ್ಲ. ಕಾವ್ಯಬಂಧಗಳಲ್ಲಿ ಕವಿಗಳು ರಚಿಸಬೇಕಾಗಿರುವುದು ಇದಿಷ್ಟೇ ಎಂದರೆ ಪಾಠ್ಯವಿಷಯಮಾತ್ರ ಎಂದು ಹೇಳಿ ಆ ಪ್ರಕರಣವನ್ನು ಅಲ್ಲಿಗೇ ಮುಗಿಸಿಬಿಟ್ಟಿದ್ದಾನೆ. ಗೀತರಚನೆಯ ಕುರಿತು, ಮುಂದೆ ಅಭಿನಯ ವಿಚಾರಗಳನ್ನೆಲ್ಲ ಮುಗಿಸಿದ ಮೇಲೆ, ಕೊನೆಯದಾದ ಸಂಗೀತ ವಿಭಾಗದಲ್ಲಿ (ಆತೋದ್ಯವಿಧಿ) ಹೇಳುತ್ತಾನೆ. ನಾಟ್ಯಪ್ರಯೋಗದಲ್ಲಿ ಗೇಯಾಂಶಕ್ಕೆ ವಿಶೇಷ ಪ್ರಾಧಾನ್ಯವನ್ನು ಕೊಟ್ಟಿದ್ದರೂ ಅರ್ಥವತ್ತಾದ ಹಾಗೂ ರಸಾನುಗುಣವಾದ ಗೀತವನ್ನೇ ಹಾಡುವುದಾಗಿದ್ದರೂ ಭರತನು ಸಂಗೀತವನ್ನು ಅಭಿನಯವೆಂದು ಪರಿಗಣಿಸಲಿಲ್ಲ. ನೃತ್ತವನ್ನಾದರೆ ಆಂಗಿಕಾಭಿನಯದ ವಿಷಯವಾಗಿ ಪರಿಗಣಿಸಿರುತ್ತಾನೆ. ಆ ಲೆಕ್ಕದಲ್ಲಿ ಗೀತವನ್ನೂ ವಾಚಿಕಾಭಿನಯದ ಅಂಗವೆಂದೆಣಿಸಲು

---

13 'ಪ್ರಯೋಗಪ್ರಧಾನಂ ಹಿ ನಾಟ್ಯಶಾಸ್ತ್ರಂ'
(ಮಾ. ಮಾಧವ ಅಂ ೧)
'ವಾಚಾ ವಿರಚಿತಃ ಕಾವ್ಯನಾಟಕಾದಿಸ್ತುವಾಚಿಕಃ' (ಸಂ. ರ. ೭–೨೨)

14 ವೃತ್ತೈ ್ರೇಪಂತು ವಿಸಿಧೈರ್ನಾನಾಛಂದಃ ಸಮುಧೃತ್ಯೈಃ
ಕಾವ್ಯಬಂಧಾಸ್ತು ಕರ್ತವ್ಯಾಃ ಷಟ್ತ್ರಿಂಶಲ್ಲಕ್ಷಣಾನ್ವಿತಾಃ ॥ ೧೬೯ ॥
(ನಾ. ಶಾ. ಅ ೧೬)

15 ದಶರೂಪ ವಿಧಾನೇತು ಯೋಜ್ಯಂ ಪಾಠ್ಯಂ ಪ್ರಯೋಕ್ತೃಭಿಃ ॥ ೭೭ ॥
(ನಾ. ಶಾ. ಅ ೧೯)

ನ್ಯಾಯವಿತ್ತು. ಹಾಗಿದ್ದರೂ ಅದನ್ನೇಕೆ ಹೊರತುಪಡಿಸಿದ್ದಾನೆ—ಎಂದು ಯೋಚಿಸಿದರೆ ಕೆಲವು ವಿಚಾರಗಳು ವ್ಯಕ್ತವಾಗುತ್ತವೆ: ನಾಟ್ಯಪ್ರಯೋಗದಲ್ಲಿ ಅಭಿನಯವೆಂಬುದು ನಟರ ಕೆಲಸ; ಅಭಿನೇಯ ವಸ್ತುವನ್ನು ವಾಚಿಕವಾಗಿ ನಿರೂಪಿಸುವುದು, ಎಂದರೆ ಕಾವ್ಯರಚನೆ, ಕವಿಯ ಕೆಲಸ. ಭರತನ ಪ್ರಯೋಗದಲ್ಲಿ ಹಾಡುವುದು ನಟರ ಪಾಲಿನ ಕೆಲಸವಲ್ಲ. ಅದಕ್ಕಾಗಿ ಗಾಯಕಗಾಯಕಿಯರು ಬೇರೆ ಇದ್ದಾರೆ. ಅಂತೆಯೇ ಹಾಡುಗಳನ್ನು ರಚಿಸುವುದೂ ಕವಿಯ ಕರ್ತವ್ಯಗಳಲ್ಲಿ ಸೇರಿದ್ದಲ್ಲ. ಅವುಗಳನ್ನು ರಚಿಸುವುದಕ್ಕಾದರೂ ಮುಖ್ಯವಾಗಿ ಗಾನನೃತ್ತಗಳ ಶಾಸ್ತ್ರೀಯ ಪರಿಜ್ಞಾನವೇ ಬೇಕಾಗಿರುವುದು ಹೊರತು ವಿಶೇಷ ಕವಿಪ್ರತಿಭೆಯ ಆವಶ್ಯಕತೆ ಇರುವುದಿಲ್ಲ. ಅವು ಅಂತಹ ಸಾಲಂಕಾರದ ರಚನೆಗಳಲ್ಲ. ಹಾಗೂ ನಾಟಕದ ಕಥಾವಸ್ತುವನ್ನು ಆಶ್ರಯಿಸಿರುವ ನಿಬಂಧಗಳೂ ಅಲ್ಲ. ಮೃದಂಗಾದಿ ವಾದ್ಯಗಳ ಛಂದೋಗತಿಗಳಿಗೆ ಮತ್ತು ನರ್ತನಕ್ಕೆ ಅನುಕೂಲವಾಗುವಂತೆ ತಾಳಪ್ರಧಾನವಾಗಿ ರಚಿಸಲ್ಪಡುವ, ಪ್ರಕರಣಾರ್ಥವಿಲ್ಲದ ಖಂಡ ಗೀತೆಗಳು ('ತುಂಡುಪದ' ಅಥವಾ 'ಚುಟುಕಿನಪದ್ಯ'ಗಳು) ಆಗಿರುತ್ತವೆ. ಭರತನು ಕೊಟ್ಟಿರುವ ಆ ಗೀತೆಗಳ ಲಕ್ಷ್ಯಲಕ್ಷಣಗಳಿಂದ ಇದು ವ್ಯಕ್ತವಾಗುವುದು. ಆ ಲಕ್ಷಣಗಳ ಮುಖ್ಯಾಂಶಗಳು ಹೀಗಿರುತ್ತವೆ:

ನೃತ್ತಾನುಕೂಲವಾದ ಈ ಗೀತೆಗಳಿಗೆ 'ಧ್ರುವಾಪದ'ಗಳೆಂದು ಹೆಸರು; ಇವುಗಳೆಲ್ಲಾ ಪ್ರಾಕೃತಭಾಷೆಯ ರಚನೆಗಳು; ಇವು ಶೂರಸೇನೀ ಪ್ರಾಕೃತದಲ್ಲಿರಬೇಕೆಂದು ಸಾಮಾನ್ಯ ನಿಯಮವನ್ನು ಹೇಳುತ್ತಾನೆ;[16] ಇವುಗಳಲ್ಲಿ ಅನೇಕ ವಿಧದ ಖಂಡತಾಲಗಳುಳ್ಳ ನಾನಾ ರೂಪದ ವಿಚಿತ್ರ ಬಂಧಗಳಿವೆ; ಎಲ್ಲವೂ ಆನೆ, ಎತ್ತು, ಹಂಸ, ಕೋಗಿಲೆ, ಕಾಗೆ, ಇತ್ಯಾದಿ ಮೃಗ ಪಕ್ಷಿಗಳನ್ನೋ ವಾಯು, ಅಗ್ನಿ, ಸೂರ್ಯ, ಚಂದ್ರ, ವೃಕ್ಷ, ಸಾಗರ ಮುಂತಾದ ವಸ್ತುಗಳನ್ನೋ ಉದ್ದೇಶಿಸಿ, ಅಭಿನಯಾರ್ಥ ಸಂದರ್ಭಗಳಿಗೆ ಹೋಲುವಂತೆ[17] ಅನ್ಯೋಕ್ತಿರೂಪದಲ್ಲಿ ರಚಿಸಲ್ಪಡಬೇಕಾದಂಥವು. ನಾಟಕದಲ್ಲಿ ನಾಯಕನಾಯಿಕೆಯರ ಶೃಂಗಾರಾಭಿನಯದ ದೃಶ್ಯವಿರುವು

---

16 ಭಾಷಾಂತು ಶೌರಸೇನೀಂಹಿ ಧ್ರುವಾಣಾಂ ಸಂಪ್ರಯೋಜಯೇತ್
ಯದಾಪಿ ಮಾಗಧೀಯತ್ರ ಕರ್ತವ್ಯಂ ನರ್ಕುಟಂ ತಥಾ ॥ ೩೮೩ ॥
(ನಾ. ಶಾ. ಅ ೩೨)

17 ಧ್ರುವಾಣಾಮಾಶ್ರಯಾಃ ಕಾರ್ಯಾ ಉಪಮ್ಯಗುಣಸಂಭವಾಃ
ಉತ್ತಮಾಧಮ ಮಧ್ಯಾನಾಂ ನೃಣಾಂ ಸ್ತ್ರೀಣಾಮಥಾಪಿಚ ॥ ೩೫೩ ॥
(ನಾ. ಶಾ. ಅ ೩೨)

ಏಕದ್ವಿಕಲಂತ್ರಿಕಲಾಶ್ಚತುಷ್ಕಲಾಸ್ತತೋಷ್ಟಕಲಾಃ
ಕಾರ್ಯಾಧ್ರುವಾವಿಧಾನೇ ಪ್ರಾವೇಶಿಕ್ಯಂತರಾಕ್ಷೇಪ್ಯೈಃ ॥ ೨೪೯ ॥
ವ್ಯಾ—ಏಕಕಲಾನುಸಾರಶ್ಚ ಯಥಾಕ್ಷರವಿಧಿನಾ ವಿಚಿತ್ರ
ರೂಪ ಇತಿ ಪ್ಲುತಗುರು ಲಘುದ್ರುತಾತ್ಮೇತ್ಯುಕ್ತಂಭವತಿ
(ನಾ. ಶಾ. ಅ ೩೨)

ದೆಂದಾದರೆ ಆಗ ಹಾಡಲಿಕ್ಕಿರುವ ಧ್ರುವದಲ್ಲಿ, ಗಂಡಾನೆಯೂ ಹೆಣ್ಣಾನೆಯೂ ಅನ್ಯೋನ್ಯಪ್ರೀತಿಯಿಂದ ಜೊತೆಯಾಗಿ ಕಾಡಿನಲ್ಲಿ ವಿಹರಿಸುತ್ತವೆ ಎಂಬ ಅರ್ಥವಿರುವುದು. ಅಥವಾ ಹಂಸಮಿಥುನವು ಸರೋವರದಲ್ಲಿ ಕ್ರೀಡಾಸಕ್ತವಾಗಿದೆ ಎಂಬ ಅನ್ಯೋಕ್ತಿ ಇರುತ್ತದೆ. ಇನ್ನೊಂದು ಸಂದರ್ಭದಲ್ಲಿ, ಕೋಪೋದ್ರಿಕ್ತನಾದ ರಾಜನ ಪ್ರವೇಶವಿರುವುದೆಂದಾದರೆ ಆಗ ಹಾಡತಕ್ಕ ಗೀತೆ, ಮದ್ದಾನೆಯೊಂದು ಗಿಡಮರಗಳನ್ನು ಸಿಟ್ಟಿನಿಂದ ಪುಡಿಮಾಡುತ್ತಾ ಭಯಂಕರವಾದ ಕಾನನವನ್ನು ಪ್ರವೇಶಿಸುತ್ತದೆ ಎಂಬ ಅನ್ಯೋಕ್ತಿಯಲ್ಲಿರಬಹುದು.

ಉದಾಹರಣೆ :

1 ' ಮಾಹವ | ಮಾಸ | ಸೋಹಿತ ಸ | ಮುಗ್ಗ | ಕೇ ಉವವ | ಣಮ್ಮಿ ಫುಳ್ಳಕುಸು | ಮೇ-
' ಣಿಚ್ಚಪ | ಮತ್ತ | ಜುತ್ತಬಹು | ಪಖ್ಖಿ | ಸಂಘಪರಿ | ಘುಟ್ಟ | ಣಾದಮುಹ | ಳೇ—
' ಫಳ್ಳಿದ | ಚೂಡ | ಸಂಡಸಹ | ಆರ | ಮುಂಜರಿವಿ | ಳೋಳ | ಣಾದಪವ | ಣೇ—
' ಹಿಂಡದಿ | ಛಪ್ಪ | ದಾಣುಗದ | ಮುಗ್ಗ | ಓಪರಹು | ದೋಣಿ | ವಿಟ್ಠವ ಅ | ಣೋ
(ನಾ. ಶಾ. ಅ ೩೨–೨೯೬)

ಮಧುಮಾಸದಲ್ಲಿ ಅರಳಿದ ಕುಸುಮಗಳುಳ್ಳ ಉಪವನದಲ್ಲಿ, ಪಕ್ಷಿರುತಗಳಿಂದ ಸದಾಮುಖರಿತವಾಗಿರಲು ಹಾಗೂ ಫಲಭರಿತವಾದ ಭೂತ ಮತ್ತು ಖಂಡ ಸಹಕಾರ ವೃಕ್ಷವಾಟಗಳಲ್ಲಿ ಬೀಸುವ ಗಾಳಿಯು ಮರ್ಮರಿಸುತ್ತಿರಲು, ಕೋಗಿಲೆಯೊಂದು ಜೋಲುಮುಖಮಾಡಿಕೊಂಡು ತುಂಬಿಗಳು ಹಾರಾಡುವಲ್ಲಿ ಅವುಗಳ ಹಿಂದೆ ಅಲೆದಾಡುತ್ತಿದೆ.

2 ' ವಣ | ಖಂಡ | ಕಂಜಹದಿ | ಕೋಪಿ | ಕೋವಾಯ | ಸಾಹ | ದೋ—
' ಭಯ | ಛೇದ | ಓಭಅದಿ | ಪಾದ | ಪಂದೀಣ | ದೀಣ | ಓ—
' ತರು | ಕೋಟ | ರಂವಸದಿ | ಸಂಪ | ದಂಳೋಳ | ಣೇತ್ತ | ಓ—
' ಸಮ | ಛಿದ್ದ | | ದೋಣಿ ಸಿಅ | ರೋಅ | ಅಂಪದಿವಿ | ಸೋಹಿ | ದೋ—
(ನಾ. ಶಾ. ೩೨- ೨೮೨)

ಕಾಗೆ ಜೆನ್ನಟ್ಟಿದ ಗೂಗೆಯೊಂದು ವನವನ್ನು ಬಿಟ್ಟೋಡಿ ಬಡವಾಗಿ ಒಂದು ಮರದ ಪೊಟರೆಯನ್ನು ಸೇರಿತ್ತು; ಆದೀಗ ಅಲ್ಲಿಂದಲೂ ಓಡಿಸಲ್ಪಟ್ಟು ಭಯಕಾತರದಿಂದ ಕಣ್ಣು ತಿರಿಗಿಸುತ್ತಾ ಈ ಕಡೆಗೆ ಬರುತ್ತಿದೆ.

3 ಮೇಹಸ | ಮೂಹಂ | ಪೀಣಬ | ಳಾಕಂ | ಬಿಜ್ಜು ಪ | ಳೀಕಂ |
ಪೇಖ್ಖಿಅ | ಏಸೋ ॥
ಉಟ್ಠದ | ರೋಸ್ಸೋ | ಭೀಮಣಿಣಾದೋ | ಧಾವದಿ | ಹತ್ಥೀ | ರುಖ್ಖವ | ಣಮ್ಮಿ
॥ ೨೦೨ ॥ ನಾ. ಶಾ.

ಮಿಂಚು ಥಳಪಿಸುತ್ತಿರುವ ಸಿಡಿಮುಗಿಲುಗಳುಳ್ಳ ಮೇಘ ಸಂಘವನ್ನು ನೋಡಿ ಈ ಆನೆಯೊಂದು ರೋಷಾವೇಷದಿಂದ ಗರ್ಜಿಸುತ್ತಾ ಗೊಂಡಾರಣ್ಯದಲ್ಲಿ ಧಾವಿಸುತ್ತಿದೆ.

4 ಕಾಳಿದಾಸನ ವಿಕ್ರಮೋರ್ವಶೀಯದಲ್ಲಿ ಪುರೂರವನ ಪ್ರವೇಶಕ್ಕಿರುವ ಅಕ್ಷಿಪ್ತಿಕೆ ' ಎಂಬ ಧ್ರುವಾಗೀತೆ :—

ಗಹಣಂಗಯಿಂದಣಾಹೋ ಪಿಆವಿರಹುಮ್ಮಾ ಅಪಅಅಪಿಹಾರೋ |
ವಿಸಈ ತರುಕುಸುಮಕಿಸಲ ಅ ಭೂಸಿ ಆಣೆಅ ದೇಹಪಬ್ಭಾರೋ ||

ತಲೆಹೆಗಲುಗಳಲ್ಲಿ ಮರಗಳ ಹೂತಳಿರುಗಳನ್ನು ಹೇರಿಕೊಂಡು ವಿರಹವಿಕಾರವನ್ನು ಪ್ರಕಟಿಸುತ್ತಾ ಮದ್ದಾನೆಯು ಕಾನನವನ್ನು ಪ್ರವೇಶಿಸುತ್ತದೆ.

ಸಂಸ್ಕೃತ ಪ್ರಾಕೃತ ಛಂದೋವೃತ್ತಗಳ ಪಾದಾಕ್ಷರ ಪ್ರಮಾಣದಲ್ಲಿ ಗುರುಲಘ್ವಕ್ಷರಗಳ ವ್ಯತ್ಯಾಸದಿಂದ ನಾನಾವಿಧದ ಧ್ರುವಾಗೀತೆಗಳನ್ನು ರಚಿಸುವ ವಿಧಾನವನ್ನು ಸೋದಾಹರಣವಾಗಿ ನಿರೂಪಿಸಲಾಗಿದೆ. ಆ ಪ್ರಕಾರ ಗೀತಭೇದಗಳು ಅಸಂಖ್ಯವಾಗುತ್ತವೆ ಎಂಬುದನ್ನು ಅಭಿನವಗುಪ್ತನು ಹೀಗೆ ಹೇಳುತ್ತಾನೆ—'ಗುರು ಲಘುಸನ್ನಿವೇಶೋ ಅಕ್ಷರಮಾತ್ರೇಯತ್ತಾ ರಸಭಾವಪ್ರಕೃತಿಭೇದಶ್ಚ | ತದಾಶ್ರಯೇಣ ಪ್ರಕಾರನಾನಾತ್ವಂ | ತಥಾಹಿ ಪ್ರಾವೇಶಿಕ್ಯಾ ಏವ ಸ್ಥಿತಾಕಾರಾದಿಭೇದಾಂತರಾತ್.. ಛಂದೋವೃತ್ತಭೇದಾಚ್ಚ ಸಂಖ್ಯಾಭೇದಾಃ |'

ಹೀಗೆ ನಾನಾ ರಸಭಾವ ಸಂದರ್ಭಗಳಿಗಿರುವ ಗೀತೆಗಳನ್ನು ಆಯಾ ಸಂದರ್ಭಗಳಿಗೆ ಉಚಿತವಾದ ಔಪಮ್ಯ ಗುಣದಲ್ಲಿ ರಚಿಸಬೇಕು ಎನ್ನುತ್ತಾನೆ. ನಾಟಕದಲ್ಲಿ ಬರುವ ನಾನಾ ಭೂಮಿಕೆಗಳ ಜಾತಿ, ಸ್ವಭಾವ, ಗುಣ, ಧರ್ಮ, ವಯಸ್ಸು ರೂಪಾದಿಗಳ ತಾರತಮ್ಯಕ್ಕನುಸಾರವಾಗಿ ಒಂದೊಂದಕ್ಕೂ ಯಾವಯಾವ ಪ್ರಾಣಿಗಳು ಅಥವಾ ವಸ್ತುಗಳು ಉಪಮಾನವಾಗಿ ಸಲ್ಲುತ್ತವೆ ಎಂಬುದನ್ನೂ ಹೇಳುತ್ತಾನೆ.[18] ಇಂಥ ನೂರಾರು ಗೀತೆಗಳನ್ನು ಭರತನು ತಾನೇ ಉದಾಹರಿಸಿರುವುದಲ್ಲದೆ ನಾಟ್ಯಾಚಾರ್ಯನೇ ಮೊದಲಾದ ನಾಟಕ ಪ್ರಯೋಕ್ತೃಗಳು ಸಂದರ್ಭೋ

---

18 ಆದಿತ್ಯಸೋಮಪವನಾ ದೇವಪಾರ್ಥಿವಯೋರ್ಮತಾಃ
ದೈತ್ಯಾನಾಂ ರಾಕ್ಷಸಾನಾಂಚ ಮೇಘಪರ್ವತಸಾಗರಾಃ || ೩೫೩ ||
ಸಿದ್ಧಗಂಧರ್ವಯಕ್ಷಾಣಾಂ ಗ್ರಹೋರು ವೃಷಭಾಮತಾಃ
ತಪಃ ಸ್ಥಿತಾನಾಂ ಸರ್ವೇಷಾಂ ಸೂರ್ಯಾಗ್ನಿಪವನಾಮತಾಃ
ಹವ್ಯವಾಹಸ್ತು ವಿಪ್ರಾಣಾಂ ಏಚಾನ್ಯೇಚ ತಪಃಸ್ಥಿತಾಃ
ಏತೇಷಾಮೇವಯಾ ನಾರ್ಯಾಸ್ತಾಸಾ ಮೌಪಮ್ಯಸಂಶ್ರಯಾಃ
ವಿದ್ಯುದುಲ್ಕಾರ್ಕರಶ್ಮ್ಯಾದಿ ದಿವ್ಯಾನಾಮಪಿಚ ಸ್ಮೃತಾಃ
ದೇವಾನಾಂತು ಪ್ರಯೋಜ್ಯಾಯೇ ನೃಪಾಣಾಮಪಿತೇ ಸ್ಮೃತಾಃ
ಉತ್ತಮಾನಾಂಪ್ರಯೋಕ್ತವ್ಯಾ ನಾನಾ ರಸ ಸಮಾಶ್ರಯಾಃ
ಮತ್ತಮಾತಂಗ ಸಹಿತಾ ರಾಜಹಂಸಾಶ್ಚಯೋಕ್ತೃಭಿಃ
ಕೋಕಿಲಂ ಷಟ್ಪದಂ ಧ್ವಾಂಕ್ಷಂ ಕುರರಂ ಕೌಶಿಕಂ ಬಕಂ
ಪಾರಾವತಂ ಸಕಾದಂಬಮಧಮೇಷು ಪ್ರಯೋಜಯೇತ್
ಶರ್ವರೀಚ ಸುಧಾಜ್ಯೋತ್ಸ್ನಾ ನಲಿನೀ ಕರಿಣೀನದೀ
ನೃಪಸ್ತ್ರೀಣಾಂ ಭವಂತ್ಯೇತಾ ಔಪಮ್ಯಗುಣಸಂಶ್ರಯಾಃ || ೩೬೨ ||
ಯದ್ದ್ರವ್ಯಂ ವಸುಧಾಸಂಸ್ಥಂ ಋತೇ ದೈವತ ಮಾನುಷಾತ್
ತತ್ಸರ್ವಮುಪನೇಯಂತು ಗಾನಯುಕ್ತ್ಯೋಪಮಾಶ್ರಯಂ || ೩೬೯ ||

ಚಿತವಾಗಿ ಬೇಕಷ್ಟು ಗೀತೆಗಳನ್ನು ರಚಿಸಿಕೊಳ್ಳಬೇಕೆಂದು ಹೇಳಿದ್ದಾನೆ.[19] ಪ್ರತಿಯೊಂದು ಗೀತಕ್ಕೂ ಅದು ಪ್ರಯೋಗಿಸಲ್ಪಡುವ ಸಂದರ್ಭದ ರಸಭಾವಗಳಿಗನುಗುಣವಾಗಿ ವಿಶಿಷ್ಟರೀತಿಯ ಬಂಧ, ವರ್ಣವಿನ್ಯಾಸ, ತಾಳ, ಲಯ, ಸ್ವರಾಲಂಕಾರ ಹಾಗೂ ರಾಗ ಜಾತಿಗಳು ಒಂದಕ್ಕೊಂದು ನಿಯತವಾದ ಸಂಬಂಧವನ್ನು ಹೊಂದಿಕೊಂಡಿರಬೇಕು ಎನ್ನುತ್ತಾನೆ. ವೀರೋತ್ಸಾಹಸಂದರ್ಭದಲ್ಲಿ ಉತ್ತಮ ಪುರುಷ ಪಾತ್ರವೊಂದು ರಂಗವನ್ನು ಪ್ರವೇಶಿಸುವಾಗ ಹಾಡತಕ್ಕ ಪ್ರಾವೇಶಿಕೀಧ್ರುವಾಗೀತ (ಆಕ್ಷಿಪ್ತಿಕಾ, ಶೀರ್ಷಕಾ) ಒಂದರ ತಾಳಲಯಾದಿಗಳಾವುವೂ ಅದೇ ಪಾತ್ರದ ಶೋಕ ಶೃಂಗಾರಾದಿ ಇತರ ಭಾವ ಸಂದರ್ಭಗಳ ಪ್ರಾವೇಶಿಕಗೀತದಲ್ಲಿರತಕ್ಕದ್ದಲ್ಲ. ಅಥವಾ ಅದೇ ಸಂದರ್ಭದಲ್ಲಿಯಾದರೂ ಮಧ್ಯಮ ನೀಚಪಾತ್ರಗಳು ಪ್ರವೇಶಿಸುವುದಾದಲ್ಲಿ ಅದಕ್ಕೊಪ್ಪುವ ರಚನೆ ಬೇರೆ ವಿಧದಲ್ಲಿರುತ್ತದೆ. ಪ್ರತಿಯೊಂದು ಗೀತವನ್ನು ಹಾಡುವಾಗಲೂ ಮೃದಂಗಾದಿ ವಾದ್ಯಗಳನ್ನು ಬಾರಿಸುವ ಹಾಗೂ ಪಾತ್ರಗಳು ಕುಣಿಯುವ ಕ್ರಮಗಳು ಬೇರೆ ಬೇರೆ ಇರುತ್ತವೆ. ಎಲ್ಲ ಗೀತೆಗಳಿಗೂ ಹಿಂದೆ ಹೇಳಿದಂತೆ ತಾಳ ಲಯಾದಿ ಸಂಬಂಧಗಳು ಪ್ರತ್ಯೇಕ ಸ್ಥಿರವಾಗಿರುವುದರಿಂದ ಇವಕ್ಕೆ ಧ್ರುವಾಪದಗಳೆಂದು ಅನ್ವರ್ಥವಾಗಿ ಹೆಸರಾಗಿದೆ ಎನ್ನುತ್ತಾನೆ.[20]

ಹೀಗೆ ನಾಟಕ ಪ್ರಯೋಗದಲ್ಲಿ ಗೀತನೃತ್ತಗಳನ್ನು ಪ್ರಯೋಗಿಸುವ ಸ್ಥಾನಗಳು ಎಂದರೆ ಅವಕಾಶಗಳು ಇವು: ೧ ಪ್ರವೇಶಕಾಲ. ೨ ಹೊರಟುಹೋಗುವಕಾಲ. ೩ ರಸಭಾವಗಳು ಬದಲಾಗುವ ಸಂದರ್ಭ ಎಂದರೆ ರಸಪ್ರವಾಹಕ್ಕೆ ಹಠಾತ್ತನೆ ಆಕ್ಷೇಪ[21] ಉಂಟಾಗುವ ಸಂದರ್ಭ. ಇದನ್ನು ಭಾವಸಂಕ್ರಮಣ ಎನ್ನಬಹುದು.

---

19 ಏವಂ ಭಾವಾನ್ ವಿದಿತ್ವಾತು ಧ್ರುವಾಕಾರ್ಯಾ ಪ್ರಯೋಕ್ತೃಭಿಃ
ವಸ್ತು ಪ್ರಯೋಗಂ ಪ್ರಕೃತಿಂ ರಸಭಾವಾನ್ವಪುಂ ವಯಃ
ದೇಶಂಕಾಲಮವಸ್ಥಾಂತು ಜ್ಞಾತ್ವಾಯೋಜ್ಯಾ ಧ್ರುವಾಬುಧೈಃ ॥ ೩೪೫ ॥
ವ್ಯಾ—' ನಾಟ್ಯಾಚಾರ್ಯೋಽತ್ರಪ್ರಯೋಜಕ ;
(ನಾ. ಶಾ. ಅ ೩೨)

20 ಧ್ರುವಾ ವರ್ಣಾಹ್ಯಲಂಕಾರಾಯತಯಃ ಪಾಣಯೋಲಯಾಃ
ಧ್ರುವಮನ್ಯೋನ್ಯ ಸಂಬಂಧಾಯಸ್ಮಾತ್ತಸ್ಮಾತ್ ಧ್ರುವಾಸ್ಮೃತಾಃ ॥ ೮ ॥
ವ್ಯಾ—' ಧ್ರುವಂಗೀಯಮಾನಂ ಪದಂ '
(ನಾ. ಶಾ. ಅ ೩೨)

21 ಕ್ರಮಮುಲ್ಲಂಘ್ಯ ವಿಧಿಜ್ಞೈಃ ಕ್ರಿಯತೇಯಾ ದ್ರುತಲಯೇನ ನಾಟ್ಯವಿಧೌ
ಅಕ್ಷೇಪಿಕೀ ಧ್ರುವಾಸೌ ದ್ರುತಾಸ್ಥಿತಾವಾಪಿ ವಿಜ್ಞೇಯಾ ॥ ೩೧೩ ॥
ವ್ಯಾ—ಕ್ರಮಮುಲ್ಲಂಘ್ಯ ಪ್ರಸ್ತುತಂರಸಂ ಉಲ್ಲಂಘ್ಯ ತತ್ರಾಽಕ್ಷಿ
ಪ್ರಮಾಣರಸಸ್ಯದೀಪ್ತತಯಾ ರಸಾಕ್ಷೇಪಯೋಜನವಿಷಯಾ ಅಕ್ಷೇಪಿಕೀ
(ನಾ. ಶಾ. ಅ ೩೨)

೪ ಹಾಗೆ ಬದಲಾದ ಭಾವಗಳು ಸಮಾಧಾನಕ್ಕೆ ಬರುವಾಗ.[22] ೫ ಅಭಿನಯ ಮಧ್ಯದಲ್ಲಿ ಕಾಲಯಾಪನೆ ಮಾಡುವ ಹಾಗೂ ದೋಷಪ್ರಚ್ಛಾದನೆ ಮಾಡತಕ್ಕ ಸಂದರ್ಭಗಳು[23] ಬರುವಾಗ. ಈ ಸ್ಥಾನಗಳಲ್ಲಿ ಹಾಡುವ ಗೀತಗಳಿಗೆ ಕ್ರಮವಾಗಿ ೧ ಪ್ರಾವೇಶಿಕೀಧ್ರುವಾ, ೨ ನೈಷ್ಕ್ರಾಮಿಕೀಧ್ರುವಾ, ೩ ಆಕ್ಷೇಪಿಕೀಧ್ರುವಾ, ೪ ಪ್ರಾಸಾದಿಕೀಧ್ರುವಾ, ೫ ಅಂತರಧ್ರುವಾ ಎಂಬ ಸಂಜ್ಞೆಗಳಿವೆ.[24] ಇವುಗಳೊಳಗೂ ಬಂಧಗೌರವಕ್ಕೆ ತಕ್ಕಂತೆ ಶೀರ್ಷಕಾ, ಆಕ್ಷಿಪ್ತಿಕಾ ಪುಟಚೂಲಿಕಾ, ಖಂಜಕ, ನರ್ಕುಟ, ದ್ವಿಪದೀಖಂಡ, ತ್ರಿಪದೀ, ಚೌಪದೀ, ಷಟ್ಪದೀ, ಭ್ರಮರತಾ ಇತ್ಯಾದಿ ಅಂಕಿತಗಳು ಬೇರೆ ಇವೆ. ಇದಲ್ಲದೆ ಈ ಐದು ವಿಧದ ಧ್ರುವಗಳಲ್ಲಿಯೂ ಪ್ರಯೋಗಿಸ ತಕ್ಕ ರಸಭಾವಗಳನ್ನು ಹೊಂದಿಕೊಂಡು ಶೀರ್ಷಕಾ, ಉದ್ಧತಾ, ಅನುಬದ್ಧಾ, ವಿಲಂಬಿತಾ, ಅಡ್ಡಿತಾ, ಅಪಕೃಷ್ಟಾ ಎಂಬ ಆರು ಜಾತಿ ಭೇದಗಳಿವೆ.[25] ಶೀರ್ಷಕಾ

---

[22] ಯಾಚ ರಸಾಂತರಮುಪಗತ ಮಾಕ್ಷೇಪವಶಾತ್ ಕೃತಂಪ್ರಸಾದಯತಿ
ರಾಗಪ್ರಸಾದಜನನೀಂ ವಿದ್ಯಾತ್‌ಪ್ರಾಸಾದಿಕೀಂ ತಾಂ ತು ॥ ೩೧೪ ॥
(ನಾ. ಶಾ. ಅ ೩೨)

[23] ವಿಷಣ್ಣೇ ಮೂರ್ಛಿತೇ ಭ್ರಾಂತೇ ವಸ್ತ್ರಾಭರಣ ಸಂಯಮೇ
ದೋಷಪ್ರಚ್ಛಾದನಾಯಾಚ ಗೀಯತೇ ಸಾಂತರಾಧ್ರುವಾ ॥
(ನಾ. ಶಾ. ಅ ೩೨)

[24] ಪ್ರವೇಶಾಕ್ಷೇಪ ನಿಷ್ಕ್ರಾಮ ಪ್ರಾಸಾದಿಕ ಮಥಾಂತರಂ
ಗಾನಂ ಪಂಚವಿಧಂ ವಿದ್ಯಾತ್ ಧ್ರುವಾಯೋಗ ಸಮನ್ವಿತಂ ॥ ೩೧೦ ॥
(ನಾ. ಶಾ. ಅ ೩೨)

[25] ಶೀರ್ಷಕಾಚೋದ್ಧತಾಚೈವ ಹ್ಯನುಬದ್ಧಾವಿಲಂಬಿತಾ
ಅಡ್ಡಿತಾಚಾಽಪಕೃಷ್ಟಾಚ ಷಟ್‌ಪ್ರಕಾರಾಧ್ರುವಾಸ್ಮೃತಾ ॥ ೩೨೯ ॥
ಶಿರಃಸ್ಥಾನೀಯ ಮೇತದ್ಧಿ ಯಸ್ಮಾತ್ತಸ್ಮಾತ್ತು ಶೀರ್ಷಕಂ
ಉದ್ಧತಾತೂದ್ಧತಾಯಸ್ಮಾತ್ತಸ್ಮಾಜ್ಜ್ಞೇಯಾಯಥಾಬುಧೈಃ

* ಯತಿಂಲಯಾನ್ ವಾದ್ಯಗತಿಂ ಪದಂ ವರ್ಣಾನ್ ಸ್ವರಾಕ್ಷರಂ
ಅನುಬಧ್ನಾತಿ ಯತ್ರೈವಂ ಅನುಬದ್ಧಾ ಭವೇತ್ತುಸಾ
ಆಕ್ರೀಡಿತಪ್ರವೃತ್ತೋಯಶ್ಚತುರ್ಥಲಯಕಾರಕಃ
ನಾಟ್ಯೋಪಚಾರಜನಿತಃ ಸೋನಬಂಧಃ ಪ್ರಕೀರ್ತಿತಃ
ಅಡ್ಡಿತಾತೂತ್ಕಟಗುಣಾ ಶೃಂಗಾರರಸಸಂಭವಾ
ಅನ್ಯಭಾವೇಷು ಕೃಷ್ಟಾಚ ಕೃಷ್ಟಹೇತುಷುಗೀಯತೇ
ಯಸ್ಮಾತ್ ಕಾರುಣ್ಯಸಂಯುಕ್ತಾ ಹ್ಯಪಕೃಷ್ಟಾ ಭವೇತ್ತತಃ ॥ ೩೩೫ ॥

* ವ್ಯಾ—ಏತದ್ಯತ್ಯಾದ್ಯಕ್ಷರಾಂತಂ ಯಸ್ಯಾಂ ಧ್ರುವಾಯಾಮೇವಮಿತಿ
ಪ್ರಯೋಗೌಚಿತ್ಯೇನ ಕವಿರ್ನಾಟ್ಯಾಚಾರ್ಯೋ ವರ್ಣಕವಿ
ರ್ಗಾತಾ ನಟೋವಾ ಯತ್ರಾನುಬಧ್ನಾತಿ ಸಾಧ್ರುವಾ ಅನುಬದ್ಧಾ ।
ಯತ್ಯಾದೇರಕ್ಷರಾಂತಸ್ಯ ವ್ಯಾಮಿಶ್ರೀಕರಣಾತ್ಮಾ ವರ್ಣಕವೇಃ ಕ್ರಿಯಾವಿಶೇಷಃ

ಎಂದರೆ ಇತರ ಎಲ್ಲವಕ್ಕಿಂತ ದೊಡ್ಡದಾದ ಹಾಗೂ ಪ್ರಥಮ ಪ್ರವೇಶದಲ್ಲಿ ಹಾಡತಕ್ಕ ಪ್ರಧಾನ ಕೃತಿ; ಶಿರಃಸ್ಥಾನದಲ್ಲಿರುವ ಗೀತೆ ಎಂಬ ಅರ್ಥವಾಗಿದೆ. ಉದ್ಧತಾ ಎಂಬುದು ರೌದ್ರಾದ್ಭುತ ಸನ್ನಿವೇಶಗಳ ಉದ್ಧತ ನೃತ್ತಕ್ಕೆ ಉಚಿತವಾದುದು ಎಂಬ ಅರ್ಥದಲ್ಲಿ ಬಂದ ಹೆಸರು. ಅಡ್ಡಿತಾ ಎಂದರೆ ಶೃಂಗಾರರಸೋಚಿತವಾದ ಉತ್ಕೃಷ್ಟ ಗುಣವುಳ್ಳದ್ದು ಎಂದು ಅರ್ಥ, ಅಪಕೃಷ್ಟಾ ಎಂದರೆ ದುಃಖ, ದುರ್ಗತಿ, ಕಷ್ಟ ಕಾರ್ಪಣ್ಯಾದಿ ಸಂದರ್ಭಕ್ಕೆ ಉಚಿತವಾದುದು ಎಂಬ ಅರ್ಥ. ವಿಲಂಬಿತಾ ಎಂಬುದು ದುಃಖಾತಿರೇಕ ವಿಪ್ರಲಂಭ ವಿಲಾಪಾದಿಸಂದರ್ಭಗಳಲ್ಲಿ ವಿಲಂಬಿತಲಯದಲ್ಲಿ ಹಾಡಬೇಕಾದ್ದು ಎಂಬರ್ಥ. ಅನುಬಂಧ ಎಂದರೆ ವಿಶೇಷ ಸಂದರ್ಭಗಳಲ್ಲಿ ಅಕಸ್ಮಾತ್ ಸಂಭವಿಸಬಹುದಾದ ಪರಿಸ್ಥಿತಿಗೆ ತಕ್ಕಂತೆ ರಾಗತಾಳಲಯಾದಿಗಳಲ್ಲಿ ತತ್ಕಾಲೋಚಿತವಾದ ವ್ಯತ್ಯಾಸವನ್ನು ಮಾಡಿ ಪ್ರಸಂಗಾವಧಾನದಿಂದ ಪ್ರಯೋಗಿಸುವ ಪ್ರತ್ಯುತ್ಪನ್ನ ಕೃತಿ ಎಂಬ ಅರ್ಥವಿರುವುದು (ಆಫ್-ಹ್ಯಾಂಡ್ ಕಾಂಪೊಸಿಷನ್).

ಔಪಮ್ಯಗುಣವನ್ನಾಶ್ರಯಿಸಿದ ಅನ್ಯೋಕ್ತಿ ರಚನೆಗಳಾಗಿರುವುದರಿಂದ ಇವನ್ನು ಯಾವ ನಾಟಕದಲ್ಲಿ ಬೇಕಿದ್ದರೂ ಪ್ರಯೋಗಿಸಬಹುದಾಗಿದೆ. ಹಾಗೆ ಸರ್ವ ಪ್ರಯೋಗಸಾಮಾನ್ಯವೆಂಬುದರಿಂದಲೂ ಇವಕ್ಕೆ ಧ್ರುವಗಳು ಎಂಬ ಹೆಸರು ಸಾರ್ಥಕವಾಗಿದೆ (ಧ್ರುವಾ, ಸ್ತ್ರೀಲಿಂಗ, ಗೀತೆ). ಈ ಗೀತೆಗಳನ್ನು ಹಾಡುವಾಗ ದುಃಖಾತಿರೇಕ, ತೀವ್ರ ಸಂತಾಪ, ವ್ಯಾಧಿ, ಮೂರ್ಛೆ, ಮೋಹ, ದೀರ್ಘಾಲೋಚನೆ, ನಿರ್ವೇದ, ದೈನ್ಯ ಇತ್ಯಾದಿ ಕೆಲವೊಂದು ಸಂದರ್ಭಗಳನ್ನು[26] ಬಿಟ್ಟು ಉಳಿದ ಸಂದರ್ಭಗಳಲ್ಲೆಲ್ಲ ಪಾತ್ರಗಳು ಕುಣಿಯಬೇಕು. ಆ ಕುಣಿತದಲ್ಲಿ ಸಾಮಾನ್ಯವಾಗಿ ಅಂಗವಿಕ್ಷೇಪಗಳು ಹೆಚ್ಚು ಗಡುಸಾಗಿರುವುದಿಲ್ಲ. ರೋಷಾವೇಶ, ರೌದ್ರಾದ್ಭುತ ಸನ್ನಿವೇಶಗಳಲ್ಲಿ ಉದ್ಧತ ನೃತ್ತವಿದ್ದರೆ ಆಗ ಗೀತೆಗಳನ್ನು ಹಾಡುವುದಿಲ್ಲ. ಅಂಥಲ್ಲಿ ತಾಳವಿಧಿಗನುಸಾರವಾದ ವಾದ್ಯಘೋಷಗಳಿಂದ ಮಾತ್ರ ನಿರ್ವಹಿಸಬೇಕು.[27] ಈ

---

26 ಅಧ್ರುವಾಸ್ತು ಪ್ರವೇಶಾಃಸ್ಯುರ್ಗಾಯತೋ ರುದತಸ್ತಥಾ
ಸಂಭ್ರಮೇಪ್ರೇಷಣೇಚೈವಹ್ಯುತ್ಪಾತೇ ವಿಸ್ಮಯೇತಥಾ ॥ ೩೨೭ ॥

27 ಸಂಭ್ರಮಾವೇಗಹರ್ಷೇಷು ಪ್ರವೇಶಾಯೇಭವಂತಿ ಹಿ
ಗ್ರಹೋಗಾನ ಸಮೋಯತತ್ರ ಸೋದ್ಘಾತ್ಯಃ ಸಂಪ್ರಕೀರ್ತಿತಃ
ಭೂಷಣವಾಸಃ ಪತನೇ ವೈಕಲ್ಯೇ ವಿಸ್ಮೃತೇ ಪರಿಶ್ರಾಂತೇ
ದೋಷಾಚ್ಛಾದನಹೇತೋರುದ್ಘಾತ್ಯಃ ಸಂಪ್ರಯೋಜ್ಯಸ್ತು ॥ ೪೨೩ ॥
ವ್ಯಾ—ಸಂಭ್ರಮಾದೌ ಉದ್ಘಾತ್ಯೇನ ಉಪ್ರೇಕಹನನಾರ್ಹೇಣ 'ಖಲಖಲೇನ'
(ನಾ. ಶಾ. ಅ ೩೨)

ಸಂಭ್ರಮಾವೇಗ ಹರ್ಷಾರ್ಥೇ ವಿಸ್ಮಯೋತ್ಸಾಹಶೋಕಜೇ।
ಗ್ರಹೋಗಾನಸ್ಯಯದ್ವಾದ್ಯಮುದ್ಘಾತ್ಯಂ ಸಂಪ್ರಕೀರ್ತಿತಂ॥
(ಅ ೩೪-೨೪೯)

ಸಂದರ್ಭಗಳಲ್ಲಿ ಪಾತ್ರಗಳು ಅತಿ ಸಂಭ್ರಮದಿಂದ ಪ್ರವೇಶಿಸುವಾಗ ಹಾಗೂ ಹೊರಟುಹೋಗುವಾಗ ಸಹ ಧ್ರುವಗಳನ್ನು ಹಾಡುವುದಿಲ್ಲ.[28] ವಾದ್ಯಗಳ ಛಂಧೋಗತಿಗನುಸಾರವಾದ ನೃತ್ತಗತಿಯಲ್ಲಿ ಅವುಗಳು ಪ್ರವೇಶಿಸುತ್ತವೆ. ಯುದ್ಧ ಮಾಡುತ್ತಿರುವಾಗಲೂ ವಾದ್ಯಗಳೇ ಹೊರತು ಗೀತಗಳಿಲ್ಲ. ಗೀತಸಹಿತವಾದ ಇತರ ಸಂದರ್ಭಗಳಲ್ಲಿಯೂ ಸಾಮಾನ್ಯವಾಗಿ ಗೀತದುದ್ದಕ್ಕೂ ನರ್ತನವಿರುವುದಿಲ್ಲ. ಸ್ವಲ್ಪಾಂಶ ನಾಟ್ಯಾಭಿನಯ, ಸ್ವಲ್ಪಾಂಶ ನೃತ್ತ, ಹೀಗೆ ಸಾಗುತ್ತದೆ. ಆದರೆ ಗೀತ ಕಾಲದಲ್ಲಿ ಪಾತ್ರಗಳು ಸುಮ್ಮನೇ ನಿಂತಿರುವಂತೆ ಇಲ್ಲ. ತಾಳಕ್ಕೆ ತಕ್ಕ ಹೆಜ್ಜೆ ಇಟ್ಟುಕೊಂಡು ಭಾವಕ್ಕೆ ತಕ್ಕ ಅಂಗಚೇಷ್ಟೆಗಳಿಂದ ರಂಗಕ್ಕೆ ಸುತ್ತಾಡುತ್ತಾ ಅಡ್ಡಾಡುತ್ತಾ ಇರುತ್ತವೆ.[29] ಇದಕ್ಕೆ ಗತಿಪ್ರಚಾರ, ಪರಿವರ್ತನ, ಪರಿಕ್ರಮಣ ಎಂಬ ಸಂಜ್ಞೆಗಳಿವೆ. ಹೆಚ್ಚಿನ ಗೀತ ಸಂದರ್ಭಗಳಲ್ಲಿ, ಮುಖ್ಯವಾಗಿ ಪ್ರವೇಶ ಕಾಲದಲ್ಲಿ ಗೀತ ವಾದ್ಯ ನೃತ್ತಗಳು ಏಕಕಾಲದಲ್ಲಿ ಒಟ್ಟಿಗೇ ಸುರುವಾಗುವುದಿಲ್ಲ. ಗಾಯಕನು ಗೀತವನ್ನಾರಂಭಿಸಿ ಒಂದಿಷ್ಟು ಮುಂದುವರಿಯುವಾಗ ವಾದ್ಯಗಳು ತೊಡಗುತ್ತವೆ.[30] ವಾದ್ಯಗಳಲ್ಲಿ ತಾಳದ ಒಂದೆರಡು ಆವರ್ತನಗಳಷ್ಟು ಮುಂದುವರಿಯುವಾಗ ಪಾತ್ರಗಳು ಆ ತಾಳಗತಿಯಿಂದ ಪ್ರವೇಶಿಸಿ ಮುಂದೆ ವಾಚ್ಯವಾಗಿ ಹೇಳಲಿಕ್ಕಿರುವ ವಾಕ್ಯಾರ್ಥಗಳನ್ನು ಸೂಚಿಸುವ ಸೂಚೀ,[31] ಅಂಕುರ ಮೊದಲಾದ ಅಭಿನಯಗಳೊಂದಿಗೆ ರಂಗಪರಿವರ್ತವನ್ನು ಮಾಡುತ್ತವೆ. ಕೊನೆಗೆ ಗೀತಾವಸಾನದಲ್ಲಿ 'ಗೀತಮೋಕ್ಷ'ದ ವಾದ್ಯವಿಧಿಗೆ ಅನುಸಾರವಾಗಿ ಕುಣಿದು ನಿಲ್ಲುತ್ತವೆ. ಆಮೇಲೆ ನಾಟಕದ ಮಾತುಕಥೆ, ಅಭಿನಯ ಇತ್ಯಾದಿಗಳು ಕ್ರಮದಂತೆ ನಡೆಯುತ್ತವೆ.

ಗೀತೆಗಳೂ ಉದ್ದುದ್ದವಾಗಿರುವುದಿಲ್ಲ. ಹಾಡುವ ಕ್ರಮದಲ್ಲಿಯೂ ಅರ್ಥಕ್ಕೆ ಕಷ್ಟವಾಗುವಂತೆ ಅಕ್ಷರಗಳನ್ನು ಎಳೆದೆಳೆದು ಉದ್ದ ಮಾಡಬಾರದು. ಹಾಡಿದ್ದನ್ನೇ

---

28 ಅಪಟಾಕ್ಷೇಪ ಕೃತಾಚೇದಾತ್ಯಯಿರೇ ಹರ್ಷರಾಗಶೋಕೋಚ್ಛ್ರೈಃ
ವಿಚ್ಛೇದಸ್ತತ್ರಸಮುಃ ಕಾರ್ಯಸ್ತಜ್ಞೈಃ ಪ್ರವೇಶೇಷು ॥ ೪೧೩ ॥
(ನಾ. ಶಾ. ಅ ೩೨)

29 ಗತ್ಯಾಶ್ರಯೇಣ ನಾಟ್ಯಜ್ಞೈಃ ವಾದ್ಯೈರನು ಗತ್ಯೈಸ್ತಥಾ
ಪರಿಕ್ರಮೇಣ ರಂಗಸ್ಯ ಗಾನೇನಾರ್ಥವಶೇ ನ ಚ ॥
(ನಾ. ಶಾ. ಅ ೩೨)

30 ಪೂರ್ವಂಗಾನಂ ತತೋವಾದ್ಯಂ ತತೋನೃತ್ತಂ ಪ್ರಯೋಜಯೇತ್ ॥ ೩೭೮ ॥
(ನಾ. ಶಾ. ಅ ೩೨)

31 ನಿವೃತ್ತ್ಯಂಕುರಸೂಚಾಸು ಕಾರ್ಯಸ್ತ್ವಭಿನಯಾನ್ವಿತಃ
ತತ್ರಪ್ರಾಸಾದಿಕೀಯೋಜ್ಯಾ ಪ್ರಹರ್ಷಾರ್ಥಗುಣೋದ್ಭವಾ ॥
(ನಾ. ಶಾ. ಅ ೩೨)

ಪುನಃ ಬೇಕಿದ್ದರೆ ಹಾಡಬಹುದು.[32] ರಾಗಲಾಪನದಿಂದ ಉದ್ದ ಮಾಡಬಾರದು. ಕಾಲಯಾಪನಕ್ಕಿರುವ ಅಂತರ ಧ್ರುವಗಳಲ್ಲಿ ಮಾತ್ರ ಸಂದರ್ಭಕ್ಕೆ ತಕ್ಕಂತೆ ರಾಗಾಲಾಪನಪೂರ್ವಕ ಗೀತೆಗಳನ್ನು ವಿಸ್ತರಿಸಬಹುದು ಹೊರತು ಇತರ ಸಂದರ್ಭಗಳಲ್ಲಿ ಯಥಾಕ್ಷರವಾಗಿಯೇ ಹಾಡಬೇಕು.[33] ಈ ಗೀತೆಗಳೆಲ್ಲವೂ ಧ್ರುತ, ಅರ್ಧಧ್ರುತ, ಬಿಂದು ಇತ್ಯಾದಿ ಖಂಡಕಲಾ ಪ್ರಮಾಣದ ಭಂಗತಾಲಗಳಲ್ಲಿ ನಿಬದ್ಧವಾಗುವಂಥವು. ತಾಳದ ಘಾತಪಾತಗಳಿಗೆ ಸರಿಬೀಳುವಂತೆಯೇ ಗೀತಾಕ್ಷರಗಳ ಗುರು ಲಘು ವಿನ್ಯಾಸವಿರಬೇಕು.[34] ತಾಳದ ಲಯಕ್ಕೆ ಸರಿಯಾದ ಯತಿ (ವಿರಾಮ), ತಾಳದ ಯತಿಗೆ (ಸ್ರೋತೋಗತಾದಿ) ಸರಿಯಾದ ಗತಿ, ತಾಳದ ಗುರುವಿಗೆ ಗೀತದ ಗುರ್ವಕ್ಷರ, ಲಘುವಿಗೆ ಲಘುವಕ್ಷರ, ಹೀಗೆಲ್ಲ ಕಟ್ಟುನಿಟ್ಟಾಗಿರುವ ಗೀತೆಗಳನ್ನು ತಾಳಕ್ಕೆ ವಿಷಮವಾಗಿ ಹಾಡುವಂತಿಲ್ಲ. ನರ್ತನದ ಹೆಜ್ಜೆಗಳೂ, ಅಂಗ ವಿಕ್ಷೇಪಗಳೂ, ರೇಖೆಗಳೂ, ಶಾಖಾದ್ಯಭಿನಯಗಳೂ ತಾಳಕ್ಕೆ ಸರಿಯಾಗಿ ನಡೆಯುತ್ತವೆ[35].

---

32 ನಹಿ ವರ್ಣಪ್ರಕರ್ಷಸ್ತು ಧ್ರುವಾಣಾಂ ಸಿದ್ಧಿರಿಷ್ಯತೇ
ಯಸ್ಮಾದರ್ಥಾನುರೂಪಾಹಿ ಧ್ರುವಾಕಾರ್ಯಾऽರ್ಥದರ್ಶಿಕಾ ॥ ೨೭ ॥
ಶ್ಯೇನೋವಾಪ್ಯಥವಾಬಿಂದುಯೋರ್ಜಾನ್ಯೇತು ಪ್ರಕರ್ಶಿಣಃ
ತೇಧ್ರುವಾಣಾಂ ಪ್ರಯೋಗೇಷು ನ ಕಾರ್ಯಾಸ್ಸಪ್ರಮಾಣತಃ ॥ ೨೮ ॥
(' ಶ್ಯೇನ,' ' ಬಿಂದು ' ಎಂಬವು ಗಾನವಿಸ್ತಾರವನ್ನು ಮಾಡುವ ಸ್ವರಾಲಂಕಾರಗಳು)
ಅಥವಾ ನೃತ್ತಶೋಭಾರ್ಥಮಂಗಾನಾಂ ಪರಿವರ್ತನಂ
ಸಂಗೀತಸ್ಯಪ್ರಕರ್ತವ್ಯಂ ಲಯಸ್ಯಚ ವಿವರ್ತನಂ ॥ ೨೯ ॥
(ನಾ. ಶಾ. ಅ ೩೧)
ವ್ಯಾ—ಪರಿವರ್ತನಂ ಕ್ವಚಿದನುಕ್ತಮಪಿ ನೃತ್ತೇ ಶೋಭಾರ್ಥಂ
ಕ್ರಿಯತ ಇತಿ । ಅತ ಏವ ಸಕಲಸ್ಯಾಪಿ ಗೀತಸ್ಯತ್ವವಿಲಂಬಿ
ತಾದೇರ್ಗೀತಶೋಭಾರ್ಥಂ ಪುನರಾವೃತ್ತಿರ್ಭವತೀತಿ ।
33 ದ್ರುತಗಮನೇ ಲಘುವರ್ಣಾ ವಿಲಂಬಿತಗತೌಚ ದೀರ್ಘವರ್ಣಕೃತಃ ॥
ಗುರ್ವಾದಿಸ್ತು ಗುರುಃ ಕಾರ್ಯೋ ಲಘ್ವಾದಿಸ್ತು ಲಘುಸ್ತಥಾ
ವ್ಯಾ—ನದ್ ವೃತ್ತ ಗುರುಲಘುಸ್ಥಾನೇ ಯಥಾಸಂಖ್ಯಂ
ತಾಲೋಚಿತ ಗುರುಲಘುಯೋಜನಂ ಕಾರ್ಯಮಿತಿ ।
34 ಸತಲಂಚಧ್ರುವಾऽರ್ಥೇಷುನಿಬದ್ಧಂ ಸರ್ವಸಾಧಕಂ
ನಿಯತಾಕ್ಷರ ಸಂಬದ್ಧಂ ಛಂದೋಯತಿ ಸಮನ್ವಿತಂ
ನಿಬದ್ಧಂಚ ಪದಂಜ್ಞೇಯಂ ಸತಾಲಪತನಾಕ್ಷರಂ
(ನಾ. ಶಾ. ಅ ೩೧)
ಯಂ ಯಂ ಗಾತಾ ಸ್ವರಂ ಗಚ್ಛೇತ್ತಮಾತೋದ್ಯೈರ್ವಿನಿರ್ದಿಶೇತ್
ಯತಿಪಾಣಿ ಸಮಾಯುಕ್ತಂ ಗುರುಲಘ್ವಕ್ಷರಾನ್ವಿತಂ ॥ ೩೪ ॥
35 ಮಾತ್ರಾಂಶಕ ವಿಕಲ್ಪಸ್ತು ಧ್ರುವಾಪಾದೇಷುಯೋಭವೇತ್
ಸತುಭಾಂಡೇನ ಕರ್ತವ್ಯಸ್ತಜ್ಜ್ಞೈರ್ಗತಿಪರಿಕ್ರಮೇ
ಏವಂಗತಿಪ್ರಚಾರೇಷು ಕಾರ್ಯಂ ವಾದ್ಯಂ ಪ್ರಯೋಕ್ತೃಭಿಃ ॥ ೧೭೮ ॥

ಎಲ್ಲವೂ ಒಟ್ಟಾಗಿ ಅಲಾತಚಕ್ರದಂತೆ ಏಕೀಭವಿಸಿ ರಸಭಾವಗಳಿಗೆ ದೀಪ್ತಿಯನ್ನು ಕೊಡುತ್ತವೆ.

ಇನ್ನು ನಾಟಕಾರಂಭಕ್ಕೆ ಪೂರ್ವರಂಗ ಪ್ರಯೋಗದಲ್ಲಿಯೂ ಹಾಡತಕ್ಕ ಕೆಲವು ಧ್ರುವಾ ಗೀತೆಗಳಿವೆ. ಸಂಸ್ಕೃತಪ್ರಾಯವಾದ್ದರಿಂದ ಆ ಗೀತೆಗಳು ಅನ್ಯೋಕ್ತಿಯ ರಚನೆಗಳಲ್ಲ. ಅವುಗಳ ವರ್ಣಾಲಂಕಾರಾದಿ ವೈಶಿಷ್ಟ್ಯಗಳು ನಾಟಕಧ್ರುವದಲ್ಲಿರುವುದಕ್ಕಿಂತ ಭಿನ್ನವಾದವು. ಎಲ್ಲವೂ ದೇವಸ್ತುತ್ಯಾಶ್ರಯವಾದ ಅರ್ಥವುಳ್ಳವು. ಅವುಗಳ ಗಾನವು ನಾಟಕಧ್ರುವಾಗಾನದಂತೆ ಶ್ರೋತೃರಂಜನೆಯೇ ಮುಖ್ಯೋದ್ದೇಶವಾಗಿರುವ ರಸಭಾವೋಚಿತವಾದ ಲೌಕಿಕ ಗಾನವಲ್ಲ. ಅದು ಅದೃಷ್ಟ ಫಲೋದ್ದೇಶವುಳ್ಳ ದೇವಪ್ರೀತ್ಯರ್ಥವಾದ ಗಾಂಧರ್ವಗಾನ.[36] ತಾಳಗಳೂ (ಆಸಾರಿತ ವರ್ಧಮಾನಾದಿ) ಸುದೀರ್ಘಪ್ರಸ್ತಾರಗಳುಳ್ಳ ಮಾರ್ಗ ತಾಳಗಳೇ ಹೊರತು ನಾಟಕಧ್ರುವಕ್ಕೆ ಹೇಳಿದ ದ್ರುತಾದಿ ಖಂಡಕಾಲದ ತಾಲಪ್ರಭೇದಗಳಲ್ಲ. ಅಲ್ಲಿ ನಡೆಯತಕ್ಕ ಲಾಸ್ಯತಾಂಡವ ನರ್ತನಗಳು ಕೇವಲದೇವತಾ ಪ್ರೀತ್ಯರ್ಥವಾಗಿಯೇ ಇರುವಂಥವು. ಲಾಸ್ಯವಿಧಿಯಲ್ಲಿ ನಡೆಯುವ ಹಾಸ್ಯವಿನೋದಗಳೂ ದೇವರ ಹೆಸರಲ್ಲೇ ನಡೆಯತಕ್ಕವು. ನಾಟ್ಯಶಾಸ್ತ್ರದಲ್ಲಿ ವಿಸ್ತಾರವಾಗಿ ವರ್ಣಿಸಿರುವ ಆ ಪೂರ್ವರಂಗದ ಸ್ವರೂಪವನ್ನು ಸಾಧಾರಣವಾಗಿ ಹೀಗೆ ತಿಳಿಯಬಹುದು :

ಚತುರಸ್ರಾಕಾರದ ರಂಗಭೂಮಿಯ ಹಿಂಬದಿಯ ಅಗಲಕ್ಕೂ ಪರದೆ ಇಳಿಬಿಟ್ಟಿರುತ್ತದೆ. ಪರದೆಯ ಎಡಬಲಗಳ ತುದಿಭಾಗಗಳಲ್ಲಿ ಕ್ರಮವಾಗಿ ನಟರು ಹೋಗುವ ಮತ್ತು ಹೊರಡುವ ದ್ವಾರಗಳಿರುವುವು. ಇವಕ್ಕೆ ನೇಪಥ್ಯದ್ವಾರಗಳೆಂದು ಹೆಸರು. ದ್ವಾರದೇಶಗಳ ಮಧ್ಯಕ್ಕೆ ಪರದೆಯ ಹಿಂಭಾಗದಲ್ಲಿ ಸಾಕಷ್ಟು ವಿಶಾಲವಾದ ಸ್ಥಳವಿರುತ್ತದೆ. ಇಲ್ಲಿ ಗಾಯಕವಾದಕರು ಕೂತಿರುತ್ತಾರೆ. ಆ ವಿಭಾಗಕ್ಕೆ ರಂಗ ಶೀರ್ಷಿಕೆ ಎಂದು ಹೆಸರು. ಇದಕ್ಕೆ ತಾಗಿ ಹಿಂದೆ ನೇಪಥ್ಯ ಗೃಹ (ಗ್ರೀನ್ ರೂಂ) ಇರುವುದರಿಂದ ಪರದೆಯ ಹಿಂದಿರುವ ಭಾಗಕ್ಕೆಲ್ಲ, ಗಾಯಕ ವಾದಕರು ಕೂತಿರುವ

ಯದ್ವೃತ್ತಂತು ಭವೇದ್ಗಾನೇತದ್ವೃತ್ತಂ ವಾದ್ಯಮಿಷ್ಯತೇ
ಗೀತವಾದ್ಯ ಪ್ರಮಾಣೇನ ಕುರ್ಯಾಚ್ಚಾಂಗವಿಚೇಷ್ಟಿತಂ ॥ ೧೭೩ ॥
ಯೋವಿಧಿರ್ಗಾನವಾದ್ಯಾನಾಂ ಪದಾಕ್ಷರಲಯಾನ್ವಿತಃ
ಏತುನ್ನೃತ್ತಾಂಗಹಾರೇಷು ಕರ್ತವ್ಯೋ ನಾಟ್ಯಯೋಕ್ತೃಭಿಃ ॥ ೧೮೪ ॥
(ನಾ. ಶಾ. ಅ ೩೪)

[36] ನಾ. ಶಾ. ಅ ೩೩ ರ ಆರಂಭದ ವ್ಯಾಖ್ಯಾನ ನೋಡುವುದು :—
" ಪೂರ್ವರಂಗೇ ಗಾಂಧರ್ವಮೇವಪ್ರಧಾನಂ "
" ನಾಽದೃಷ್ಟಾರ್ಥಂ ಧ್ರುವಾಪದಂ ಗಾಂಧರ್ವಪದವತ್ । ಅತ್ರಹಿ ಸಂಭವತ್ ಪದೇ ಸ್ತೋತ್ರಾಪೇಕ್ಷಾ । ಧ್ರುವಾಗಾನೇತುತದವಗಮಾಂ ಪ್ರಧಾನಂ ಸಾಮಾಜಿಕಂಪ್ರತಿ "

ಭಾಗ ಸಮೇತ, ನೇಪಥ್ಯವೆಂದೇ ನಾಟಕಗಳಲ್ಲಿ ವ್ಯವಹರಿಸಲಾಗಿದೆ. ಪಾತ್ರಗಳ ಪ್ರವೇಶ ನಿಷ್ಕ್ರಮಗಳಲ್ಲಿ ದ್ವಾರಭಾಗಗಳಷ್ಟು ಮಾತ್ರ ತೆರೆಯನ್ನು ಸರಿಸಲಾಗುವುದು. ಗಾಯಕವಾದಕರಿರುವ ಮಧ್ಯಭಾಗವು ನಾಟಕ ಪ್ರಯೋಗಕಾಲದಲ್ಲಿ ತೆರೆಯೊಳಗೇ ಇರುತ್ತದೆ. (ಆಧುನಿಕ ನಾಟಕಗಳಲ್ಲಿ ಇರುವಂತೆ ದೃಶ್ಯ ಬದಲಾಯಿಸುವ ಬೇರೆ ಬೇರೆ ಚಿತ್ರದ ಪರದೆಗಳು ಆಗ ಇದ್ದಂತಿಲ್ಲ.)

ಪೂರ್ವರಂಗದ ಆರಂಭಕ್ಕೆ ಗಾಯಕ ವಾದಕರೇ ನಿರ್ವಹಿಸುವ ನಿರ್ಗೀತ ಸಂಗೀತಗಳೆಂಬ ವಾದ್ಯವಿಧಿಗಳು ಪರದೆಯ ಒಳಭಾಗದಲ್ಲಿ ನಡೆಯುವಂಥವು. ಆ 'ಅಂತರ್ಯವನಿಕಾ' ಪ್ರಯೋಗಕ್ರಮದಲ್ಲಿ ಮೊದಲಾಗಿ ಗಾಯಕ ವಾದಕರು ವಾದ್ಯಗಳನ್ನು ತಂದಿಟ್ಟು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳುತ್ತಾರೆ.[37] ಮೃದಂಗ ಪಣವ ದರ್ದರವೆಂಬ ಚರ್ಮವಾದ್ಯಗಳ ವಾದಕರು ರಂಗಕ್ಕೆ ಮುಖಮಾಡಿ (ಮೂಡದಿಕ್ಕು) ಸಾಲಾಗಿ ಕುಳಿತುಕೊಳ್ಳುತ್ತಾರೆ. ಗಾಯಕ ಉತ್ತರಕ್ಕೆ ಮುಖಮಾಡಿ ಕುಳಿತುಕೊಳ್ಳುತ್ತಾನೆ. ಅವನ ಎಡಪಕ್ಕದಲ್ಲಿ ವೈಣಿಕನೂ ಬಲಪಕ್ಕದಲ್ಲಿ ವೇಣುವಾದಕನೂ ಇರುತ್ತಾರೆ. ಗಾಯಕನಿಗೆ ಎದುರಾಗಿ ಗಾಯಕಿ ಕುಳಿತು ಕೊಳ್ಳುತ್ತಾಳೆ. ವಾದ್ಯಗಳನ್ನೆಲ್ಲಾ ಶ್ರುತಿಮಾಡಿ ಆರಂಭದ ಶ್ರುತಿ ಗೀತೆಗಳನ್ನು ಬಾರಿಸುತ್ತಾರೆ. ಮೊದಲು ಕೇವಲ ವಾದ್ಯಗಳಿಂದಲೂ[38] ಇನ್ನೊಮ್ಮೆ ಹಾಡಿನೊಂದಿಗೆಯೂ ಸ್ತುತಿಗೀತೆ ನಡೆಯುತ್ತದೆ. ಇದಾಯಿತೆಂದರೆ ಇಡೀ ಪರದೆಯನ್ನು ಎತ್ತುತ್ತಾರೆ.[39] ಒಂದು ಗಾಂಧರ್ವ ಸ್ತುತಿಗೀತೆಯನ್ನು ಗಾಯಕನು ಹಾಡುವಾಗ ನಾಟ್ಯಾಚಾರ್ಯ ರಂಗಮಧ್ಯಕ್ಕೆ ಬಂದು ನಮಸ್ಕರಿಸುತ್ತಾನೆ. ಆಮೇಲೆ

---

37 ಪ್ರಯೋಗಮಿದಾನೀಂ ವಕ್ಷ್ಯಾಮಃ । ತತ್ರೋಪವಿಷ್ಟೇ ಪ್ರಾಙ್ಮುಖೇ ರಂಗೇ......ತತ್ರ ಪೂರ್ವೋಕ್ತಯೋರ್ನೇಪಥ್ಯ ಗೃಹದ್ವಾರಯೋರ್ಮಧ್ಯೇ ರಂಗಾಭಿಮುಖೋಮಾರ್ದಂಗಿಕಸ್ತಸ್ಯಪಾಣವಿಕದರ್ದರಿಕೌವಾಮತಃ, ತತ್ರೋತ್ತರಾಭಿಮುಖೋಗಾಯಕಃ, ಗಾಯಕಸ್ಯತು ವಾಮಪಾರ್ಶ್ವೇ ವೈಣಿಕಃ, ವೈಣಿಕಸ್ಯದಕ್ಷಿಣೇನ ವಂಶವಾದಕೌ, ಗಾತುರಭಿಮುಖಿಂಗಾಯಿಕಾ—ಇತಿ ಕುತಪವಿನ್ಯಾಸಃ ॥ ೨೧೫ ॥

ನಾ. ಶಾ. ಅ ೩೪)

38 ಪೂರ್ವಂಹಿ ಭಾಂಡವಾದ್ಯೇನ ಸಿದ್ಧಿರುತ್ಪಾದನೀಯಾ । ಸ್ತ್ರೀಬಾಲಮೂರ್ಖಾವಕೀರ್ಣೇಚರಂಗೇ ಕುತೂಹಲಜನನ ಸಮರ್ಥಂ ವಾದ್ಯಮುಪಪನ್ನಂಭವತಿ ॥ ೨೨೨ ॥

(ನಾ. ಶಾ. ಅ ೩೪)

39 ಏತಾನಿಚ ಬಹಿರ್ಗೀತಾನ್ಯಂತರ್ಯವನಿಗಾತೃಭಿಃ
ಪ್ರಯೋಕ್ತೃಭಿಃ ಪ್ರಯೋಜ್ಯಾನಿತಂತ್ರೀಭಾಂಡಕೃತಾನಿತು ॥ ೧೧ ॥
ಪಿಘಟ್ಯನ್ಯೈಯವನಿಕಾಂ ನೃತ್ತವಾದ್ಯಕೃತಾನಿಚ
ಗೀತಾನಾಂ ಮದ್ರಕಾದೀನಾಮೇಕಂಯೋಜ್ಯಂತು ಗೀತಕಂ
ವರ್ಧಮಾನಮಥಾಪೀಹತಾಂಡವಂ ಯತ್ರಯುಜ್ಯತೇ ॥ ೧೩ ॥

(ನಾ. ಶಾ. ಅ ೫)

ಉತ್ಥಾಪನೀ[40] ಎಂಬ ಧ್ರುವಾಗೀತೆಯನ್ನು ಹಾಡುವಾಗ ಸೂತ್ರಧಾರನೂ ಅವನ ಹಿಂದೆ ಅಂಜಲಿಯಲ್ಲಿ ಹೂಗಳನ್ನು ಹಿಡಿದ ಮೂವರು ನರ್ತಕಿಯರೂ ಅವರ ಹಿಂದೆ ಅಲಂಕರಿಸಿದ ಧ್ವಜವನ್ನು ಹಿಡಿದುಕೊಂಡು ಇಬ್ಬರು ಪಾರಿಪಾರ್ಶ್ವಕರೂ ಒಟ್ಟಿಗೆ ಪ್ರವೇಶಿಸಿ ನೃತ್ಯವಿಧಿಪ್ರಕಾರ ಲೆಕ್ಕಾಚಾರದ ಹೆಜ್ಜೆಗಳನ್ನಿಡುತ್ತಾ, ದಿಗ್ವಂದನೆ ಮಾಡುತ್ತಾ ರಂಗಭೂಮಿಯಲ್ಲಿ ಪ್ರದಕ್ಷಿಣೆ ಸುತ್ತುತ್ತಾರೆ.[41] ಹೀಗೆ ಮೂರು ಪ್ರದಕ್ಷಿಣೆಗಳನ್ನು ಮಾಡಿ ಸೂತ್ರಧಾರನು ಮಂತ್ರಪುರಸ್ಸರವಾಗಿ ಪಾರಿಪಾರ್ಶ್ವಕರ ಕೈಯಿಂದ ಧ್ವಜವನ್ನು ಸ್ವೀಕರಿಸುತ್ತಾನೆ. ಪುನಃ ಲಾಸ್ಯಗತಿಯಲ್ಲಿ ದಿಗ್ವಂದನೆ ಮಾಡಿ ನಾಂದೀ ಶ್ಲೋಕಗಳನ್ನು ಪಠಿಸುತ್ತಾನೆ.[42] ಆಗ ಮಧ್ಯಮಧ್ಯದಲ್ಲಿ ಪಾರಿಪಾರ್ಶ್ವಕರು 'ಹಾಗೇ ಆಗಲಿ, ನಾಟ್ಯಕ್ಕೆ ಜಯವಾಗಲಿ, ದೇವತೆಗಳಿಗೆ ಸಂತೋಷವಾಗಲಿ, ಲೋಕಕ್ಕೆ ಶುಭವಾಗಲಿ, ರಾಜನಿಗೆ ಜಯವಾಗಲಿ, ರಾಜ್ಯ ಸಂಪತ್ತು ವೃದ್ಧಿಯಾಗಲಿ, ನಾಟಕ ಆಡಿಸುವವರಿಗೂ ಆಡುವವರಿಗೂ ನಾಟಕ ವನ್ನು ರಚಿಸಿದ ಕವಿಗೂ ನಾಟ್ಯಪ್ರಯೋಗಕ್ಕೂ ಶುಭವಾಗಲಿ ಎಂಬ ನಾಂದೀ ಶ್ಲೋಕಗಳಲ್ಲಿ ಹೇಳಿದ ಅರ್ಥವನ್ನು ಮಾತುಗಳಿಂದ ಘೋಷಿಸುತ್ತಿರುತ್ತಾರೆ.[43]

---

[40] ಗೀತಕಾಂತೇ ತತಶ್ಚಾಪಿ ಕಾರ್ಯಾಹ್ಯುತ್ಥಾಪನೀಧ್ರುವಾ
ಕಾರ್ಯಂ ಮಧ್ಯಲಯಂತಜ್ಜ್ಞೈಃ ಸೂತ್ರಧಾರ ಪ್ರವೇಶನಂ ॥ ೬೮ ॥

[41] ಪುಷ್ಪಾಂಜಲೀಃ ಸಮಾಧಾಯ ರಕ್ಷಾಮಂಗಲ ಸಂಸ್ಕೃತಾಃ
ಶುದ್ಧವರ್ಣಾಃ ಸುಮನಸಃ ತಥಾಚಾದ್ಭುತದೃಷ್ಟಯಃ
ಸ್ಥಾನಂತುವೈಷ್ಣವಂ ಕೃತ್ವಾ ಪ್ರವಿಶೇಯುಃ ಸಮಂತ್ರಯಃ
ಭೃಂಗಾರಜರ್ಝರಧರೌ ಭವೇತಾಂ ಪಾರಿಪಾರ್ಶ್ವಕೌ ॥ ೭೦ ॥
(ನಾ. ಶಾ. ಅ ೫)

[42] ಪ್ರಯತ್ನಕೃತಶೌಚೇನ ಸೂತ್ರಧಾರೇಣ ಯತ್ನತಃ
ಸನ್ನಿಪಾತಸಮುಗ್ರಾಹ್ಯೋ ಜರ್ಝರೋವಿಘ್ನಜರ್ಜರಃ
ತತೋಭಿವಾದನಂಕುರ್ಯಾದ್ದೇವತಾನಾಂ ಯಥಾದಿಶಂ
ಸೂತ್ರಧಾರಃ ಪಠೇನ್ನಾಂದೀಂ ಮಧ್ಯಮಂಸ್ವರಮಾಶ್ರಿತಃ
(ಮಧ್ಯಮಸ್ವರೇಣ, ನಾತ್ಯುಚ್ಚೇನನಾತಿನೀಚೇನ ಮಧ್ಯಮಸ್ಥಾನೇನೇತ್ಯರ್ಥಃ)
ನಮೋಸ್ತುದೇವದೇವೇಭ್ಯಃ ದ್ವಿಜಾತಿಭ್ಯಃ ಶುಭಂತಥಾ ॥ ೧೦೭ ॥
....
ರಾಜ್ಯಃ ಪ್ರವರ್ಧತಾಂಚೈವ ರಂಗಶ್ಚಾಯಂ ಸಮೃಧ್ಯತಾಂ ॥ ೧೦೯ ॥
ಪ್ರೇಕ್ಷಾಕರ್ತುರ್ಮಹಾನ್‌ಧರ್ಮೋ ಭವತುಬ್ರಹ್ಮಭಾವಿತಃ
ಕಾವ್ಯಕರ್ತುರ್ಯಶಶ್ಚಾಸ್ತು ಧರ್ಮಶ್ಚಾಪಿಪ್ರವರ್ಧತಾಂ ॥ ೧೧೦ ॥
(ನಾ. ಶಾ. ಅ ೫)

[43] ನಾಂದೀಪದಾಂತರೇಶ್ವೇಷು ಏವಮಸ್ತ್ವಿತಿ ನಿತ್ಯಶಃ
ವಂದೇತಾಂ ಸಮ್ಯಗುಕ್ತಾಭಿರ್ಗೀರ್ಭಿಸ್ತೌ ಪಾರಿಪಾರ್ಶ್ವಕೌ ॥ ೧೧೧ ॥
(ನಾ. ಶಾ. ಅ ೫)

ಇದಾದ ಮೇಲೆ ಸೂತ್ರಧಾರನು ಧ್ವಜವನ್ನು ತನ್ನ ನಾಭಿಯಲ್ಲಿ ನೆಟ್ಟು, ಸಮತೋಲವಾಗಿ[44] ನಿಲ್ಲಿಸಿ ಹಿಂದಕ್ಕೂ ಮುಂದಕ್ಕೂ ನಾಟ್ಯಮಾಡುತ್ತಾನೆ. ಆಮೇಲೆ ಅದನ್ನು ಪುನಃ ಪಾರಿಪಾರ್ಶ್ವಕರ ಕೈಯಲ್ಲಿ ಕೊಟ್ಟು ತಾನು ತಾಂಡವ ನರ್ತನಕ್ಕೆ ತೊಡಗುತ್ತಾನೆ.[45] ಆಗ ಸ್ತ್ರೀಯರ ನರ್ತನವೂ ಪ್ರಾರಂಭವಾಗುತ್ತದೆ. ಭಾಗವತನು ಆಸಾಪಿತ ವರ್ಧಮಾನಾದಿ ತಾಳವಿಸ್ತಾರದಲ್ಲಿ ಧ್ರುವಾಗೀತೆಗಳನ್ನು ಹಾಡುತ್ತಾನೆ. ಅದಕ್ಕನುಗುಣವಾದ ವಾದ್ಯಘೋಷದೊಡನೆ ನಾಟ್ಯದ ಅದ್ಭುತ ಪ್ರಯೋಗ ಕೆಲ ಹೊತ್ತು ನಡೆಯುತ್ತದೆ. ಸೂತ್ರಧಾರ ಮಧ್ಯಮಧ್ಯ ನಾಂದೀಶ್ಲೋಕಗಳನ್ನು ಹೇಳುತ್ತಾನೆ. ನರ್ತಕಿಯರು ಪುಷ್ಪಾಂಜಲಿಯನ್ನು ಚೆಲ್ಲುತ್ತಿರುತ್ತಾರೆ.[46] ಒಬ್ಬೊಬ್ಬರಾಗಿಯೂ ಒಟ್ಟಾಗಿಯೂ ನಾನಾ ತಾಂಡವ ವಿಧಿಗಳಲ್ಲಿ ನರ್ತಿಸಿ "ಪಿಂಡೀಬಂಧ" ಗಳೆಂಬ ವಿಶಿಷ್ಟ ಸ್ಥಿರಭಂಗಿಗಳಲ್ಲಿ ನಾಟ್ಯವನ್ನು ಪೂರೈಸುತ್ತಾರೆ. ಈ ತಾಂಡವದ ಅದ್ಭುತದರ್ಶನವಾದ ಮೇಲೆ ಸುಕುಮಾರಪ್ರಯೋಗವಾದ ಲಾಸ್ಯವಿಧಿಯ ವಿನೋದನೃತ್ತ ಪ್ರಾರಂಭವಾಗುತ್ತದೆ.

ಇದರಲ್ಲಿ ನರ್ತಕಿಯರೊಂದಿಗೆ ನಟರೂ ಭಾಗವಹಿಸುತ್ತಾರೆ. ದಂಪತಿಗಳ ಮದನಾವಸ್ಥೆಯನ್ನು ವರ್ಣಿಸುವ ಶೃಂಗಾರ ಗೀತೆಗಳೂ ಲಲಿತಭಾವದ ನರ್ತನಗಳೂ ಸಾಮಾನ್ಯವಾಗಿ ಕೀಳ್ಮಟ್ಟದಲ್ಲಿಯೇ ನಡೆಯುತ್ತವೆ. ಕಾಮೋತ್ಕಂಠೆ, ಪ್ರಣಯ ಕಲಹ, ಅಶ್ಲೀಲಹಾಸ್ಯ, ಬೀದಿಯ ವಿನೋದ, ಇಂಥ ಪಾಮರರಂಜಕವಾದ

---

44 ನಾಭಿಪ್ರದೇಶೇವಿನ್ಯಸ್ಯ ಜರ್ಜರಂತುಲಯಾಧೃತಂ
ವಾಮ ಪಲ್ಲವ ಹಸ್ತೇನ ಪಾದೈಸ್ತಾ ಲಾಂತರಸ್ಥಿತೈ
ಗಚ್ಛೇತ್ ಪಂಚಪದೀಂಚೈವ ಸಮಾಲಾಸಾಂಗಚೇಷ್ಟಿತೈಃ ॥
(ನಾ.ಶಾ.ಅ ೪)

45 ಪಾರಿಪಾರ್ಶ್ವಕಯೋರ್ಹಸ್ತೇದತ್ವಾಜರ್ಜರಮುತ್ತಮಂ
ಮಹಾಚಾರೀಂ ತತಶ್ಚೈವ ಪ್ರಯುಂಜೀತಯಥಾವಿಧಿ ॥ ೧೨೭ ॥

ಅಲ್ಲಿ ಪ್ರಯೋಗಿಸುವ ತಾಂಡವಗೀತ:
ಪಾದತಲಾಹತ ಪಾತಿತ ಶೈಲಂ ।
ಕ್ಷೋಭಿತ ಭೂತ ಸಮಗ್ರ ಸಮುದ್ರಂ ॥
ತಾಂಡವನೃತ್ತಮಿದಂ ಪ್ರಲಯಾಂತೇ ।
ಪಾತುಹರಸ್ಯಸದಾಸುಖದಾಯಿ ॥ ॥ ೧೨೯ ॥

46 ಶುದ್ಧಾ: ಕುಸುಮ ಮಾಲಾಭಿರ್ವಿಕಿರೇಯು: ಸಮಂತತ:
ಅಂಗಹಾರೈಶ್ಚದೇವ್ಯಶ್ಚನ್ಯಾಸಾಪನ್ಯಾಸ ಸಂಯುತಾ:
ಏವಂಕೃತ್ವಾಯಥಾನ್ಯಾಯಂ ಶುದ್ಧಂ ಚಿತ್ರಂ ಪ್ರಯತ್ನತಃ
ತತಸ್ತ್ವಂತರ್ಹಿತಾ: ಸರ್ವಾಭವೇಯುರ್ದಿವ್ಯಯೋಷಿತಃ ॥ ॥ ೧೫೯ ॥
(ನಾ.ಶಾ. ಅ ೪)

ವೀಥ್ಯಂಗಗಳು ಮಧ್ಯ ಮಧ್ಯ ದೇವರ ಸ್ತುತಿಯೊಂದಿಗೆ[47] ಪ್ರಯೋಗಿಸಲ್ಪಡುತ್ತವೆ ಇದಾದ ಮೇಲೆ ನಟನಟಿಯರು ರಂಗದಿಂದ ಹೊರಟುಹೋಗುತ್ತಾರೆ. ಇಲ್ಲಿಗೆ ದೇವಸ್ತುತ್ಯಾಶ್ರಯವಾದ ಪೂರ್ವರಂಗವಿಧಾನ ಕೊನೆಗೊಳ್ಳುತ್ತದೆ. ಇದರ ಉಪಸಂಹಾರವಾಗಿ ಒಂದು ರೌದ್ರರಸದ ಶ್ಲೋಕವನ್ನು ಹಾಡಲಾಗುವುದು.[48] ಆಮೇಲೆ ಪಾರಿಪಾರ್ಶ್ವಕರು ಪ್ರವೇಶಿಸಿ ತಾವು ಬಂದಿರುವ ಉದ್ದೇಶ, ಪ್ರಯೋಗಿಸುವ ನಾಟಕದ ವಿಚಾರ, ಸಭಿಕರ ಉತ್ಸಾಹ ಇತ್ಯಾದಿ ವಿಷಯಗಳನ್ನು ತಮ್ಮೊಳಗಿನ ಸಂಭಾಷಣೆಯಲ್ಲಿ ಪ್ರಸ್ತಾಪಿಸುತ್ತಾರೆ. ಆಗ ವಿದೂಷಕನು ಹಾಸ್ಯವೇಷದ ವಿಕೃತಗತಿಯಲ್ಲಿ ಪ್ರವೇಶಿಸಿ ಅಸಂಬದ್ಧಪ್ರಲಾಪಗಳಿಂದ ಸೂತ್ರಧಾರಾದಿಗಳನ್ನು ನಗಿಸುತ್ತಾನೆ.[49] ಹಾಸ್ಯಪ್ರಧಾನವಾದ ಈ ಪ್ರಯೋಗಕ್ಕೆ ‘ಪ್ರರೋಚನೆ’ ಎಂದು ಹೆಸರು. ಇದರ ಕೊನೆಯಲ್ಲಿ ಎಲ್ಲರೂ ರಂಗದಿಂದ ಹೊರಟುಹೋಗುತ್ತಾರೆ. ಪರದೆ ಬೀಳುತ್ತದೆ.

ತದನಂತರ ಪ್ರಸ್ತಾವಕನೆಂಬ ಬ್ರಾಹ್ಮಣನ ಪಾತ್ರದ ಪ್ರವೇಶ. ಆತ ಕವಿಕಾವ್ಯ[50]ಪ್ರಶಂಸಾಪೂರ್ವಕ ನಾಟಕದ ಕಥಾವಸ್ತುವನ್ನು ಸರಾಗವಾಗಿ ವರ್ಣಿಸಿ ಆರಂಭದ ಪಾತ್ರಪ್ರವೇಶವನ್ನು ಪ್ರಸ್ತಾಪಿಸಿ ಹೊರಟುಹೋದಲ್ಲಿಗೆ ಕಾವ್ಯ

---

[47] ದೇವಸ್ತುತ್ಯಾಶ್ರಯಾಹ್ಯೇತತ್ ಸುಕುಮಾರಂ ನಿಬೋಧತ
ಸ್ತ್ರೀಪುಂಸಯೋಸ್ತು ಸಂಲಾಪೋಯಸ್ತು ಕಾಮಸಮುದ್ಭವಃ
ತದ್‌ಜ್ಞೇಯಂ ಸ್ವಕೃತಾರಂಭ ಶೃಂಗಾರರಸ ಸಂಭವಂ ॥ ೩೦೪ ॥
ಯತ್ರಸಂದೃಶ್ಯತೇ ಕಿಂಚಿತ್ ದಂಪತ್ಯೋರ್ಮದನಾಶ್ರಯಂ।
ಖಂಡಿತಾ ವಿಪ್ರಲಬ್ಧಾವಾ ಕಲಹಾಂತರಿತಾಪಿವಾ।
ಯಸ್ಮಿನ್ನಂಗೇತುಯುವತಿ ನೃತ್ತಂತರ್ತಪ್ರಯೋಜಯೇತ್ ॥ ೩೧೧ ॥
(ನಾ. ಶಾ. ಅ ೪)

[48] ತತೋ‌ತಾದ್ರ ರಸಂ ಶ್ಲೋಕಂ ಪದಸಂಹರಣಂ ಪಠೇತ್ ।
ತಸ್ಯಾಂತೇ ತು ತ್ರಿಪದ್ಯಾಥ ವ್ಯಾಹರೇತ್ ಪಾರಿಪಾರ್ಶ್ವಕಃ
ತಯೋರಾಗ ಮನಂ ಕಾರ್ಯಂ ಗಾನಂ ನರ್ಕುಟಕೇಬುಧೈಃ ॥ ॥ ೧೩೫ ॥
(ನಾ. ಶಾ. ಅ ೫)

[49] ವಿದೂಷಕಸ್ತ್ವೇಕ ಪದಾಂ ಸೂತ್ರ ಧಾರಸ್ಮಿತಾವಹಾಂ
ಅಸಂಬದ್ಧ ಕಥಾಪ್ರಾಯಾಂ ಕುರ್ಯಾತ್ ಕಥನಿಕಾಂತತ:
ವಿತಂಡಾಂ ಗಂಡಸಂಯುಕ್ತಾಂ ನಾಲಿಕಾಂಚ ಪ್ರಯೋಜಯೇತ್ ॥ ॥ ೧೩೮ ॥
(ನಾ. ಶಾ. ಅ ೫)

[50] ಸ್ಥಾಪಕಃ ಪ್ರವಿಶೇತ್ತತ್ರ ಸೂತ್ರಧಾರಗುಣಾಕೃತಿಃ
ಸುವಾಕ್ಯ ಮಧುರೈಃ ಶ್ಲೋಕೈರ್ನಾನಾ ಭಾವರಸಾನ್ವಿತೈ :
ಪ್ರಸಾದ್ಯ ರಂಗಂ ವಿಧಿವತ್ ಕವೇರ್ನಾಮಚಕೀರ್ತಯೇತ್
ಪ್ರಸ್ತಾವನಾಂತತ : ಕುರ್ಯಾತ್ ಕಾವ್ಯ ಪ್ರಖ್ಯಾಪನಾಶ್ರಯಂ ॥ ೧೬೦ ॥
(ನಾ. ಶಾ. ಅ ೫)

ಪ್ರಸ್ತಾವನೆ ಎಂಬ ವಿಧಿಯೂ ಕೊನೆಗೊಳ್ಳುವುದು. ಪೂರ್ವರಂಗದಲ್ಲಿ ಪ್ರಯೋಗಿಸ ತಕ್ಕ ಗೀತಗಳನ್ನೂ ನಾಟ್ಯಾಚಾರ್ಯನು ಅವನ ಸ್ವಬುದ್ಧಿಯಿಂದಲೇ ಯಥೋಚಿತ ವಾದ ತಾಳ ಲಯಗಳಲ್ಲಿ ರಚಿಸಿಕೊಳ್ಳಬೇಕಾದ್ದರಿಂದ ಅವುಗಳ ರಚನೆ ಹೀಗೆ ಇರಬೇಕೆಂದು ತಾನು ವಿಧಿಸುವುದಿಲ್ಲವೆಂದೇ ಭರತನು ಹೇಳುತ್ತಾನೆ:—

'ಏತತ್ ಪ್ರಮಾಣಂನಿರ್ದಿಷ್ಟಮುಭಯೋಃ ಪೂರ್ವರಂಗಯೋಃ |
ಆಚಾರ್ಯಬುಧ್ಯಾ ಕರ್ತವ್ಯಸ್ತ್ರ್ಯಶ್ರತಾಲ ಪ್ರಮಾಣತಃ |
ತಸ್ಮಾನ್ನಲಕ್ಷಣಂಪ್ರೋಕ್ತಂ ಪುನರುಕ್ತಂ ಭವೇದ್ಯತಃ ||

(ನಾ. ಶಾ. ಅ ೫)

ಈ ಪೂರ್ವರಂಗಪ್ರಯೋಗವೂ ಯಥಾವಿಧಿ ನಡೆಯುತ್ತಿತೆಂಬುದು ನಮ್ಮ ಸಂಸ್ಕೃತನಾಟಕಗಳ ಆರಂಭದಲ್ಲಿ ಬರುವ 'ಅಲಮಲಮತಿ ಪ್ರಸಂಗೇಣ', 'ಅಲಮನೇನ ಪರಿಷತ್ಕುತೂಹಲ ವಿಮರ್ದಕಾರಿಣಾ ಅತಿವಿಸ್ತರೇಣ' ಎಂಬ ಸೂತ್ರ ಧಾರನ ಮಾತುಗಳಿಂದ ವ್ಯಕ್ತವಾಗುವುದು. ಹೀಗೆ ಪೂರ್ವರಂಗಸಹಿತವಾದ ನಾಟಕಾಭಿನಯದಲ್ಲಿ ನೃತ್ತಗೀತಗಳು ರಸೋತ್ಕರ್ಷಕ್ಕೆ ಸಹಾಯವಾಗುವು ವೆಂದಷ್ಟೇ ಅಲ್ಲ. ಅವುಗಳಿಲ್ಲದೆ ನಾಟ್ಯದಲ್ಲಿ ರಸೋತ್ಪತ್ತಿಯಾಗುವುದಿಲ್ಲವೆಂದೇ ಭರತ ಹೇಳುತ್ತಾನೆ. ರಸವೆಂದರೆ ಒಂದು ಪ್ರತ್ಯೇಕ ವಸ್ತುವಲ್ಲ. ನಾಟ್ಯವೇ ರಸ ಎನ್ನುತ್ತಾನೆ. ಎಂದರೆ ನಾಟ್ಯವೆಂಬುದು ಅನುಭವೈಕಗಮ್ಯವಾದ ರಸದ ವ್ಯಕ್ತ ಸ್ವರೂಪ ಎಂಬ ತಾತ್ಪರ್ಯ. ಕೇವಲ ಅಭಿನಯವೊಂದೇ ನಾಟ್ಯವಲ್ಲ. ನರ್ತನ ವಿಲ್ಲದಿದ್ದರೆ ನಾಟ್ಯವೆಂಬ ಹೆಸರೇ ಹುಟ್ಟುವ ಕಾರಣವಿಲ್ಲ. ಹಾಗೆಂದು ನರ್ತನ ವೊಂದೇ ನಾಟ್ಯವಲ್ಲ. ಗೀತವಿಲ್ಲದೆ ನರ್ತನವಿಲ್ಲ. ಆದರೂ ಗೀತ ನರ್ತನ ಗಳಷ್ಟಕ್ಕೇ ನಾಟ್ಯವೆಂಬ ಸಂಜ್ಞೆ ಸಲ್ಲದು. ಗೀತ, ವಾದ್ಯ, ನರ್ತನ, ಅಭಿನಯ, ಮಾತು, ವೇಷ ಇವೆಲ್ಲವೂ ಸೇರಿರುವ ದೃಶ್ಯವೂ ಶ್ರವ್ಯವೂ ಆದ ನಾಟಕಾದಿ ರೂಪಕಪ್ರಯೋಗಕ್ಕೆ ನಾಟ್ಯ ಎಂಬ ಹೆಸರಿರುವುದು. ಆದುದರಿಂದಲೇ ಭರತನು ರಸಗಳನ್ನು ನಾಟ್ಯರಸಗಳೆಂದು ಹೇಳುತ್ತಾನೆಯೇ ಹೊರತು ಕಾವ್ಯರಸಗಳೆಂದು ಎಲ್ಲಿಯೂ ಹೇಳುವುದಿಲ್ಲ. ರೂಢಿಯಲ್ಲಿ ಅಭಿನೇಯವಸ್ತುಗಳಲ್ಲದ ಗದ್ಯಪದ್ಯಾದಿ ರಚನೆಗಳಿಗೆ ಶ್ರವ್ಯಕಾವ್ಯಗಳೆಂಬ ಹೆಸರಿರುವುದಾದರೂ ನಾಟ್ಯಶಾಸ್ತ್ರದ ಪರಿಭಾಷೆ ಯಲ್ಲಿ 'ಶ್ರವ್ಯ' ಎಂದರೆ 'ಗೇಯ' ಎಂದೇ ಅರ್ಥವಿರುವುದಾಗಿದೆ. ಗದ್ಯ, ಶ್ಲೋಕ, ವೃತ್ತಾದಿ ರಚನೆಗಳನ್ನು ಭರತನು 'ಪಾಠ್ಯ' ಎಂದೇ ಕರೆದಿರುವುದು ಹೊರತು ಶ್ರವ್ಯವೆಂದಲ್ಲ. ಹಾಗೆ ಪಾಠ್ಯ, ಗೇಯ, ನೃತ್ತ, ಅಭಿನಯ ಇವು ಸಮುಚಿತ ವಾಗಿ ಸೇರಿದ ಪಾಕವನ್ನೇ ರಸ ಎಂದಿರುವುದಾಗಿದೆ.

ಈ ಗೇಯ ವಸ್ತುಗಳು, ಎಂದರೆ ಧ್ರುವಾಗೀತೆಗಳು ಅನ್ಯೋಕ್ತಿಯಲ್ಲಿರುವುದ ರಿಂದ ರಸೋತ್ಕರ್ಷಕ್ಕೆ ವಿಶೇಷ ಅನುಕೂಲವಾಗುವುದೆಂದೂ ಹೇಳುತ್ತಾನೆ. ಎಂದರೆ,

ನಾಟಕದ ಪಾಠ್ಯರಚನೆಯಲ್ಲಿ ಅಭಿನಯಯೋಗ್ಯವಲ್ಲದ ಎಷ್ಟೋ ವಿಷಯಗಳನ್ನು ವಾಚಿಕವಾಗಿ ವರ್ಣಿಸುವುದಕ್ಕಾಗುವುದಿಲ್ಲ. ಆಲಿಂಗನ, ಚುಂಬನಾದಿ ಅಶ್ಲೀಲ ಚೇಷ್ಟೆಗಳು, ಕೊಲೆ, ಅಂಗಚ್ಛೇದ, ಚಿತ್ರಹಿಂಸೆ ಮುಂತಾದ ಭೀಭತ್ಸದೃಶ್ಯಗಳು ಅಭಿನಯಕ್ಕೆ ನಿಷಿದ್ಧವಾದವು. ಅಂಥವನ್ನು ಗೀತಗಳಲ್ಲಾದರೆ ಅನ್ಯೋಕ್ತಿಯ ಮೂಲಕ ವರ್ಣಿಸಬಹುದಾಗಿದೆ. ಆದರಿಂದ ಶ್ರೋತೃಗಳಲ್ಲಿ ಸಾನುಕೂಲವಾದ ಪರಿಣಾಮವುಂಟಾಗುತ್ತದೆ. ಇದೂ ಅಲ್ಲದೆ ಆಯಾ ದೃಶ್ಯಗಳ ದೇಶಕಾಲಾದಿ ಸನ್ನಿವೇಶಗಳ ಚಿತ್ರವನ್ನು ಶ್ರೋತೃಗಳ ಮನಸ್ಸಿನಲ್ಲಿ ಪ್ರತಿಬಿಂಬಿಸುವಂತೆ ಗೀತೆಗಳಲ್ಲಿ ವರ್ಣಿಸಬಹುದಾಗಿದೆ ಎನ್ನುತ್ತಾನೆ :—

‘ಯಾನಿ ವಾಕ್ಯೈಸ್ತು ನಬ್ರೂಯತ್ತಾನಿಗೀತ್ಯೈರುದಾಹರೇತ್ |
ಸತ್ಯೈರೇವತಕಾವ್ಯಾರ್ಥೈರಸ್ಯೈರೌಪಮ್ಯಸಂಶ್ರಯೈಃ ||’

ಆದ್ದರಿಂದ ಗೀತನೃತ್ತಗಳು ರಸಾನುಭವಕ್ಕೆ ಆತಂಕವೆಂದು ಅವನ್ನು ತೊಡೆದುಹಾಕಿರಬೇಕೆಂದೆಣಿಸುವುದು ಸಾಧುವಾಗಲಾರದು. ನಮ್ಮಲ್ಲಿ ಸಂಸ್ಕೃತ ನಾಟಕಗಳು ಎಂದಿನವರೆಗೆ ರಚನೆಯಾಗುತ್ತಿದ್ದುವೋ ಅಂದಿನವರೆಗೆ ನೃತ್ತಗೀತ ಸಹಿತವಾಗಿಯೇ ಅವು ಪ್ರಯೋಗಿಸಲ್ಪಡುತ್ತಿದ್ದುವೆಂದು ತಿಳಿಯಬೇಕು. ಈ ಗೀತ ಗಳನ್ನು ಕವಿಗಳು ರಚಿಸುವುದಲ್ಲವಾದ್ದರಿಂದ ನಮ್ಮ ಸಂಸ್ಕೃತ ನಾಟಕಗಳಲ್ಲಿ ಅವು ಸೇರಿಕೊಂಡಿಲ್ಲದಿರುವುದು ಸಹಜವೇ ಆಗಿದೆ. ಕಾಳಿದಾಸನ ‘ವಿಕ್ರಮೋರ್ವಶೀಯ’ ದಲ್ಲಿ ಕಾಣುವ ಗೀತಗಳು ಆತನ ರಚನೆಯಲ್ಲವೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುವುದು ನ್ಯಾಯವೇ ಸರಿ. ಅಂದು ಪ್ರಯೋಗದಲ್ಲಿದ್ದ ಕೆಲವೊಂದು ಗೀತ ಗಳು ಕೆಲವು ಹಸ್ತಪ್ರತಿಗಳಲ್ಲಿ ಉಳಿದುಬಂದಿವೆ. ಹಾಗೆ ಶ್ರೀಹರ್ಷ, ರಾಜ ಶೇಖರ, ಮುರಾರಿಮಿಶ್ರ, ಮುಂತಾದವರ ಕೆಲವು ನಾಟಕಗಳಲ್ಲಿಯೂ ಕೆಲವು ಗೀತೆಗಳು ಸೇರಿಕೊಂಡಿರುವುದನ್ನು ಕಾಣಬಹುದು. ಆ ನಾಟಕಗಳು ಸಗೀತವಾಗಿ ಪ್ರಯೋಗದಲ್ಲಿದ್ದುವೆಂಬುದಕ್ಕೆ ಅವೇ ಸಾಕ್ಷಿಗಳಾಗಿವೆ.

ಇದಕ್ಕೆ ಇನ್ನೂ ಒಂದು ಪ್ರಬಲವಾದ ಆಧಾರ ದೊರೆಯುವುದೇನೆಂದರೆ ಶಾರ್ಙ್ಗದೇವನ ವರೆಗಿನ ನಮ್ಮ ಪ್ರಸಿದ್ಧ ಸಂಗೀತ ಶಾಸ್ತ್ರ ಗ್ರಂಥಕರ್ತರು ರಾಗ ಲಕ್ಷಣಗಳನ್ನು ಕೊಡುವಾಗ ಇಂತಿಂಥ ರಾಗಗಳು ನಾಟಕದ ಇಂಥ ಸಂಧಿಗಳಲ್ಲಿ ಪ್ರಯೋಗಿಸಲ್ಪಡುತ್ತವೆ ಎಂದು ವಿನಿಯೋಗ ಲಕ್ಷಣಗಳನ್ನು ಹೇಳುತ್ತಾ ಬಂದಿರು ತ್ತಾರೆ. ನೃತ್ತಗೀತ ಸಹಿತವಾದ ನಾಟಕ ಪ್ರಯೋಗಗಳು ಕಳೆದ ಕ್ರಿ.ಶ. ಹದಿಮೂರನೆ ಶತಮಾನದ ವರೆಗೂ ನಮ್ಮಲ್ಲಿ ಪ್ರಯೋಗದಲ್ಲಿದ್ದುವೆಂಬುದಕ್ಕೆ ಇದು ಪ್ರಬಲವಾದ ಆಧಾರವಾಗಿ ಕಾಣುವುದು. ಉದಾಹರಣೆಗಾಗಿ ಸಂಗೀತರತ್ನಾಕರ ದಲ್ಲಿ ‘ಅಧುನಾಪ್ರಸಿದ್ಧ’ವೆಂದೇ ಶಾರ್ಙ್ಗದೇವನು ಕೊಟ್ಟಿರುವ ಕೆಲವು ರಾಗ ಲಕ್ಷಣಗಳು ಹೀಗಿವೆ :

ಮಧ್ಯಮ ಗ್ರಾಮ ರಾಗ—

ಲಕ್ಷ್ಮಾಧುನಾಪ್ರಸಿದ್ಧಾನಾಂ ಸಹೇತೂನಾಂಬ್ರುವೇಧುನಾ
ಪ್ರಸನ್ನಾದ್ಯವರೋಹಿಭ್ಯಾಂ ಮುಖಸಂಧೌನಿಯುಜ್ಯತೇ
ಮಧ್ಯಮಗ್ರಾಮರಾಗೋಯಂ ಹಾಸ್ಯಶೃಂಗಾರಕಾರಕಃ
ಗ್ರೀಷ್ಮೇಹ್ನೇ ಪ್ರಥಮೇಯಾಮೇ ಧ್ರುವಪ್ರೀತ್ಯೈ

ಬೋಟ್ಟ ರಾಗ—

ವಿಪ್ರಲಂಭೇ ಕಂಚುಕಿನಃ ಪ್ರವೇಶೇ ಕೇತುದೈವತಃ

ಗೌಡಪಂಚಮ ರಾಗ—

ಭಯಾನಕೇಚ ಭೀಭತ್ಸೇ ವಿಪ್ರಲಂಭೇರಸೋಭವೇತ್
ಉದ್ಭಟೇ ನಟನೇ ಗೇಯೋ........|

ಶುದ್ಧಪಂಚಮ ರಾಗ—

ಶೃಂಗಾರ ಹಾಸ್ಯಯೋಃ ಸಂಧಾವವಮರ್ಷೇ ಪ್ರಯುಜ್ಯತೇ |

ಶುದ್ಧಷಾಡವ ರಾಗ—

ಪೂರ್ವರಂಗೇ ಪ್ರಯೋಕ್ತವ್ಯೋ ಹಾಸ್ಯಶೃಂಗಾರದೀಪಕಃ |

ಭಿನ್ನಪಂಚಮ ರಾಗ—

ಭಯಾನಕೇ ಸಭೀಭತ್ಸೇ ಸೂತ್ರಧಾರಪ್ರವೇಶನೇ ||

ವರಾಟೀ ರಾಗ—

ವೀರರೌದ್ರಾದ್ಭುತರಸೇ ನಾರೀಹಾಸ್ಯೇ ನಿಯುಜ್ಯತೇ |

ಗೌಡೀ ರಾಗ—

ಷಡ್ಜಮಂದ್ರೇಪ್ರಯೋಕ್ತವ್ಯಾ ಪ್ರಿಯ ಸಂಭಾಷಣೇಬುಧೈಃ ||

ಕ್ರಿಸ್ತಶಕಾರಂಭದಲ್ಲಿಯೇ ದಕ್ಷಿಣಕ್ಕೆ ಕನ್ಯಾಕುಮಾರಿಯ ವರೆಗೂ ನಾಟ್ಯ ಶಾಸ್ತ್ರ ಹಾಗೂ ಅದರ ಪ್ರಯೋಗವು ಪ್ರಚಾರದಲ್ಲಿತ್ತೆಂಬುದನ್ನು ತಮಿಳರ 'ಶಿಲಪ್ಪದಿ ಕಾರಂ' ಕಾವ್ಯದಲ್ಲಿ ವರ್ಣಿಸಿರುವ ನಾಟ್ಯಸಂಗೀತಲಕ್ಷಣಗಳಿಂದ ಹಾಗೂ 'ತೊಲ್‌ಕಾಪ್ಪಿಯಂ' ಲಕ್ಷಣ ಗ್ರಂಥದಲ್ಲಿ ಕಾಣುವ ರಸಭಾವವಿವೇಕದಿಂದ ತಿಳಿಯಬಹುದಾಗಿದೆ. ಚಿದಂಬರದ ನಟರಾಜ ದೇವಾಲಯದಲ್ಲಿರುವ ನಾಟ್ಯ ಶಾಸ್ತ್ರೋಕ್ತ ಕರಣಾಂಗಹಾರಾದಿ ನೃತ್ತಭಂಗಿಗಳ ಯಥಾವತ್ತಾದ ಶಿಲ್ಪಕೃತಿ ಗಳಂತೂ ಇದಕ್ಕೆ ಮೂರ್ತಿಮಂತ ಆಧಾರಗಳಾಗಿವೆಯಷ್ಟೆ?

ಹೀಗೆ ದಕ್ಷಿಣದಲ್ಲಿ ಅಚಲಪ್ರತಿಷ್ಠೆಯನ್ನು ಪಡೆದ ಸಂಸ್ಕೃತ ನಾಟ್ಯ ಪ್ರಯೋಗವು

ಸಂಸ್ಕೃತವಿದ್ಯಾಭ್ಯಾಸವು ಸಾರ್ವಜನಿಕವಾಗಿ ವ್ಯಾಪಿಸಿದ್ದ ಕೇರಳದ ಪ್ರತಿ ದೇವಾಲಯದಲ್ಲಿಯೂ ಇತ್ತೀಚಿನವರೆಗೆ 'ಚಕ್ಕಿಯಾರಕ್ಕೂತ್ತು' ಎಂಬ ಹೆಸರಿನಿಂದ ನಿಯತವಾಗಿ ನಡೆಯುತ್ತಿತ್ತೆಂಬುದನ್ನು ಕೇರಳದ ಚರಿತ್ರೆಯಿಂದ ತಿಳಿಯಬಹುದು. ಪ್ರತಿ ದೇವಾಲಯದಲ್ಲಿಯೂ ಇದಕ್ಕಾಗಿಯೇ ನಿರ್ಮಿಸಲ್ಪಟ್ಟಿರುವ ರಂಗಮಂಟಪಗಳನ್ನು ಅಲ್ಲಿ (ಕೂತ್ತಂಬಲಂ) ನೋಡಬಹುದು. ಕೇರಳದಲ್ಲಿರುವಷ್ಟು ಹಾಗೂ ಅಲ್ಲಿ ಇದುವರೆಗೆ ದೊರೆತಿರುವಷ್ಟು ಭಾಸಾದಿ ಪ್ರಾಚೀನ ಕವಿಗಳ ಸಂಸ್ಕೃತ ನಾಟಕ ಗ್ರಂಥಗಳೂ ನಾಟ್ಯಶಾಸ್ತ್ರದ ಪ್ರತಿಗಳೂ ಇತರತ್ರ ದೊರೆತಿಲ್ಲವೆಂದು ಸಂಶೋಧಕರೇ ಹೇಳುತ್ತಾರೆ. ಈಗ ಸಮಗ್ರವಾಗಿ ಪ್ರಕಾಶಕ್ಕೆ ಬಂದಿರುವ ಅಭಿನವಗುಪ್ತನ ನಾಟ್ಯಶಾಸ್ತ್ರವ್ಯಾಖ್ಯಾನವಾದರೂ ಕೇರಳದಲ್ಲೇ ದೊರೆತಿರುವುದು. ಸಂಸ್ಕೃತ ನಾಟಕಪ್ರಯೋಗದ ಆಂಶೋದ್ಧಾರದಿಂದಲೇ ಕೇರಳದ 'ಕಥಕಳಿ' ರೂಪಿತವಾಗಿರುವುದು. ದಕ್ಷಿಣ ಕನ್ನಡದಲ್ಲಿ ಪ್ರಸಿದ್ಧವಾಗಿರುವ ಯಕ್ಷಗಾನದೃಶ್ಯಪ್ರಯೋಗಕ್ಕೆ ಶಾಸ್ತ್ರೀಯಸಂಸ್ಕಾರ ದೊರೆತಿರುವುದೂ ಕೇರಳದಿಂದಲೇ ಆಗಿದೆ. ಆದುದರಿಂದಲೇ ಅದು 'ತೆಂಕಮಟ್ಟು' ಎಂದು ಹೆಸರಾಗಿರುವುದು. ಕೇರಳಕ್ಕೆ 'ತೆಂಕ' ಎಂಬ ವ್ಯವಹಾರವು ದಕ್ಷಿಣಕನ್ನಡದಲ್ಲಿ ಚಿರಪ್ರಸಿದ್ಧವಾದುದೇ. 'ತೆಂಕಮಟ್ಟ'ನ ಪ್ರಯೋಗಸಂಪ್ರದಾಯವು ನಾಟ್ಯ ಶಾಸ್ತ್ರೋಕ್ತ ಲಕ್ಷಣಗಳಿಗೆ ಅದೆಷ್ಟು ಸಮನ್ವಯವಾಗಿದೆ ಎಂಬುದಕ್ಕೆ ಈ ಮೊದಲು ನಾನು ಬರೆದಿರುವ ಲೇಖನಗಳಲ್ಲಿ ವಿವೇಚಿಸಿದ್ದಾಗಿದೆ.[51]

[51] ೧೫ನೇ ವಾರ್ಷಿಕೋತ್ಸವದ ಪ್ರಕಾಶಿಕೆ—ಯಕ್ಷಗಾನ ಕಲಾಕ್ಷೇತ್ರ (ರಿ), ಜಂಗಮರ ಮಠ, ಉಡಿಪಿ, ದ.ಕ.

ಶ್ರೀನಿವಾಸರಾವ್

ಭಾರತೀಯ ತತ್ತ್ವಶಾಸ್ತ್ರ ಮತ್ತು ದೇವರು

ಬಹಳ ಹಿಂದಿನಿಂದಲೂ ಮನುಷ್ಯ ತನಗಿಂತ ಭಿನ್ನವಾದ ಅತಿಮಾನುಷ ವ್ಯಕ್ತಿ ಅಥವಾ ಶಕ್ತಿಯಲ್ಲಿ ನಂಬಿಕೆಯನ್ನಿಡುತ್ತ ಬಂದಿದ್ದಾನೆ. ಇಂಥ ನಂಬಿಕೆಯ ಸುತ್ತಲೂ ಬೆಳೆದುಬಂದ ಪರಂಪರೆಯನ್ನೇ ಧರ್ಮ ಅಥವಾ ಮತ ಎಂದು ಕರೆಯುವುದು ವಾಡಿಕೆಯಲ್ಲಿದೆ. ಪೂಜೆಗೊಳಗಾದ ಅತಿಮಾನುಷ ವ್ಯಕ್ತಿ ಅಥವಾ ಶಕ್ತಿಯನ್ನು "ದೇವರು" ಎಂದು ಹೆಸರಿಸುವುದು ರೂಢಿ. ದೇವರ ಬಗ್ಗೆ ಮನುಷ್ಯನ ಕಲ್ಪನೆ ಬದಲಾಗುತ್ತ, ವಿಕಾಸವಾಗುತ್ತ ಹೋದಾಗ ಧರ್ಮದಲ್ಲೂ ಗುರುತರವಾದ ಬದಲಾವಣೆಗಳಾಗಿವೆ. ಇಂಥ ಬದಲಾವಣೆಗಳಲ್ಲಿ ಧರ್ಮವಿಕಾಸದ ಬೇರೆ ಬೇರೆ ಹಂತಗಳನ್ನು ಗುರುತಿಸಬಹುದು.

ಜಗತ್ತಿನ ಪ್ರತಿಯೊಂದು ವಸ್ತುವೂ ತನ್ನಂತೆಯೇ ಜೀವಂದಿಂದೊಡಗೂಡಿದೆಯೆಂದು ಮನುಷ್ಯ ಭಾವಿಸಿದಾಗ ಮತ್ತು ಕಲ್ಲು, ಮರ ಮೊದಲಾದ ವಸ್ತುಗಳನ್ನು ಪೂಜಿಸತೊಡಗಿದಾಗ ಸರ್ವಚೇತನವಾದದ (ಅನಿಮಿಸಂ) ಉದಯವಾಯಿತು. ಅನಂತರ ಪ್ರಕೃತಿಯ ಅದ್ಭುತ ಶಕ್ತಿಗಳನ್ನು ಮೂರ್ತೀಕರಿಸಿ ಅವುಗಳನ್ನು ಸಂತೋಷಪಡಿಸುವುದರಲ್ಲೆ ತನ್ನ ಕ್ಷೇಮವಿರುವುದೆಂದು ಮನುಷ್ಯ ಭಾವಿಸಿದಾಗ ಇಂದ್ರ, ಅಗ್ನಿ, ವರುಣ ಮೊದಲಾದ ಅನೇಕ ದೇವತೆಗಳ ಕಲ್ಪನೆ ಹುಟ್ಟಿತು. ಇದರೊಂದಿಗೇ ಈ ದೇವತೆಗಳನ್ನು ತೃಪ್ತಿಪಡಿಸುವ ಸಲುವಾಗಿ ವಿಸ್ತಾರವಾದ ಯಜ್ಞಯಾಗಗಳನ್ನು ಆಚರಿಸುವುದೂ ಆರಂಭವಾಯಿತು. ಯಜ್ಞಯಾಗಗಳಿಂದ ದೇವತೆಗಳು ತೃಪ್ತರಾಗಿ ಮನುಷ್ಯನ ಇಷ್ಟಾರ್ಥಗಳು ಈಡೇರುವುವಲ್ಲದೆ ದೇವತೆಗಳ ಲೋಕವಾದ ಸ್ವರ್ಗಕ್ಕೂ ಪ್ರವೇಶ ಸಿಗುವುದೆಂದು ನಂಬಿದಾಗ ಆಸ್ತಿಕವಾದ ಇನ್ನೂ ಪ್ರಬಲವಾಯಿತು. ಈ ಬಹುದೇವತಾವಾದದಿಂದ ಸಹಜಕುತೂಹಲಿಯಾದ ಮನುಷ್ಯ ನಿಧಾನವಾಗಿ ಏಕದೇವತಾವಾದದ ಕಡೆಗೆ ಒಲಿಯಲಾರಂಭಿಸಿದ ದೇವತೆಗಳಿಗೆಲ್ಲ ಸಾಮಾನ್ಯವಾಗಿ ಇದ್ದ ವಿಶಿಷ್ಟ ಶಕ್ತಿಗಳನ್ನೇ ಮೂರ್ತೀಕರಿಸಿದಾಗ ಹೊಸ ದೇವರ ಕಲ್ಪನೆ ಹುಟ್ಟಿತು. ದೇವತೆಗಳ ಸರ್ವಶಕ್ತಿತ್ವ 'ವಿಶ್ವಕರ್ಮ'ನ ರೂಪ ತಾಳಿತು; ದೇವತೆಗಳ ವಿಶ್ವಕಾರಣತ್ವ 'ಪ್ರಜಾಪತಿ'ಯ ಕಲ್ಪನೆಗೆ ಕಾರಣವಾಯಿತು. ಹೀಗೆಯೇ

ಜಗತ್ತಿನ ಸಮಸ್ತ ವ್ಯಾಪಾರಗಳಿಗೂ ಕಾರಣನಾದ ಒಬ್ಬನೇ ದೇವರು ಇದ್ದಾನೆಂಬ ಕಲ್ಪನೆ ನಿಧಾನವಾಗಿ ಬಲಿಯಿತು. ಈ ದೇವರು ಒಬ್ಬ ವ್ಯಕ್ತಿ ಎನ್ನುವ ಭಾವನೆಯೂ ಮಾಯವಾಗಿ ದೇವರು ಒಂದು ಶಕ್ತಿ, ಎಲ್ಲಕ್ಕೂ ಕಾರಣವಾದ ತತ್ತ್ವ, ನಿರ್ಗುಣವಾದ ನಿರಾಕಾರವಾದ ಹೆಸರಿಸಲಾಗದ "ಅದು"—ಎಂಬಲ್ಲಿಗೆ ಕಲ್ಪನೆ ಹೋಗಿ ಮುಟ್ಟಿತು. ಆದರೆ ಇಂಥ 'ದೇವರು' ಅಥವಾ 'ತತ್ತ್ವ' ಸಾಮಾನ್ಯಮನುಷ್ಯರಿಗೆ ಎಟುಕದೆ ಇದ್ದುದರಿಂದ ಪುರಾಣ-ಪುಣ್ಯಕಥೆಗಳಲ್ಲಿನ ವ್ಯಕ್ತಿರೂಪದ ಸಾಕಾರ ದೇವರ ಕಲ್ಪನೆಗೆ ಹೊಸ ಜೀವ ಸಿಕ್ಕಿ ರಾಮಾಯಣ, ಭಾರತ, ಭಾಗವತಗಳ ಉದಯವಾಗಿ ವೈಷ್ಣವ, ಶೈವ ಮತ್ತಿತರ ಪರಂಪರೆಗಳು ಪ್ರಾರಂಭವಾಗಿ ತಡೆಯಿಲ್ಲದೆ ಭಾರತದಲ್ಲಿ ಬೆಳೆದು ಬಂದುವು.

ಬೌದ್ಧ ಮತ್ತು ಜೈನ ಧರ್ಮಗಳನ್ನು ನಾಸ್ತಿಕವೆಂದು ಕರೆಯುವುದು ವೈದಿಕರಲ್ಲಿ ವಾಡಿಕೆ. ನಾಸ್ತಿಕರೆಂದರೆ ವೇದಗಳಲ್ಲಿ ಮತ್ತು ದೇವರಲ್ಲಿ ನಂಬಿಕೆಯನ್ನಿಡದವರೆಂದು ಸಾಮಾನ್ಯವಾದ ಅರ್ಥ. ಆದರೆ ಈ ಧರ್ಮಗಳಲ್ಲಿ ವೇದೋಕ್ತ ಪುರಾಣೋಕ್ತ ದೇವತೆಗಳು ಕಾಣದಿದ್ದರೂ ಬೇರೆ ರೀತಿಯ ದೈವಕಲ್ಪನೆ ಇದ್ದೇ ಇದೆ. ಬೌದ್ಧರಿಗೆ ಬುದ್ಧನೇ ದೇವರು. ಹಿಂದೂಗಳ ದೇವರಿಗೆ ಸಲ್ಲುವ ಎಲ್ಲ ಗೌರವಗಳೂ ಅವನಿಗೆ ಸಲ್ಲುತ್ತವೆ. ಜೈನರು 'ದೇವರ'ನ್ನು ನಂಬದಿದ್ದರೂ ದೈವತ್ವಕ್ಕೆ ಅತ್ಯಂತ ಸಮೀಪಸ್ಥಿತಿಯನ್ನು ಹೊಂದಿದ ತೀರ್ಥಂಕರರನ್ನು, ಇತರರು ದೇವರನ್ನು ಪೂಜಿಸುವಂತೆಯೇ, ಪೂಜಿಸುತ್ತಾರೆ. ಮನುಷ್ಯ ತನಗಿಂತ ಭಿನ್ನವಾದ, ಉತ್ತಮವಾದ, ಶ್ರೇಷ್ಠವಾದ ಏನನ್ನೇ ಒಪ್ಪಿಕೊಂಡರೂ ಅದು ಅವನ ದೇವರಾಗುತ್ತದೆ. ಹೀಗೆ ದೇವರು ಎಲ್ಲ ಧರ್ಮಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಕಂಡುಬರುವ ವಸ್ತು.

ಧರ್ಮದಲ್ಲಿ ದೇವರು ನಂಬಿಕೆಯ ವಸ್ತು; ಜಿಜ್ಞಾಸೆಯ ವಸ್ತುವಲ್ಲ. ಧರ್ಮದಲ್ಲಿ 'ದೇವರಿದ್ದಾನೆಯೆ?' ಎಂಬ ಪ್ರಶ್ನೆಗೆ ಅವಕಾಶವೇ ಇಲ್ಲ. ಅವನು ನಾನು ಮತ್ತು ನೀವು ಇರುವಷ್ಟೇ ಖಂಡಿತವಾಗಿ—ಏಕೆ, ಅದಕ್ಕಿಂತಲೂ ಹೆಚ್ಚು ಖಂಡಿತವಾಗಿ—ಇದ್ದಾನೆ. ಅವನನ್ನು ಹೋಗಿ ಕಾಣುವ ಮಾರ್ಗವೂ ಇದೆ. ಅದನ್ನು ಹಿಡಿದು ಪ್ರಯಾಣ ಮಾಡುವುದಷ್ಟೇ ನಮ್ಮ ಕೆಲಸ. ಸ್ವರ್ಗವಷ್ಟೇ ಏಕೆ, ಮೋಕ್ಷಪ್ರಾಪ್ತಿಗೂ ಅವನೇ ಕಾರಣ. ಅವನನ್ನು ತ್ಯಜಿಸಿದರೆ ಶಾಶ್ವತ ದುಃಖ ಅಂಧಕಾರಗಳೇ ಗತಿ.

ಮನುಷ್ಯನಿಗೆ ಕುತೂಹಲ ಹೇಗೆ ಸಹಜವಾದುದೋ, ಅದು ಬಹಳ ಬೇಗ ಶಾಂತವಾಗುವುದೂ ಅಷ್ಟೇ ಸಹಜವಾದುದು. ಸಾಮಾನ್ಯ ಮನುಷ್ಯನ ಜೀವನದಲ್ಲಿ ಕುತೂಹಲ ಮಿಂಚಿನಂತೆ; ಒಂದು ಕ್ಷಣ ಕೋರೈಸಿ ಮಾಯವಾಗುತ್ತದೆ. ಆ ಕ್ಷಣದಲ್ಲಿ ಹುಡುಕಿ ತಿಳಿದುಕೊಂಡಷ್ಟರಿಂದಲೇ ಅವನು ತೃಪ್ತನಾಗುತ್ತಾನೆ. ಆದರೆ ಅಷ್ಟರಿಂದಲೇ ತೃಪ್ತರಾಗದವರೂ ಇರುತ್ತಾರೆ. ಅವರ ಕುತೂಹಲ ದೀಪದಂತೆ, ಸೂರ್ಯ

ನಂತೆ ಬಹಳ ಕಾಲದ ವರೆಗೂ ಬೆಳಗುವಂಥದು. ಅವರ ಜ್ಞಾನತೃಷೆ ಎಂದೆಂದೂ ತಣಿಯದಂಥದು. ಅವರು ತತ್‌ಕ್ಷಣ ಸಿಗುವ ಮಿಂಚಿನಂಥ ಉತ್ತರಗಳಿಂದ ತೃಪ್ತರಾಗುವುದಿಲ್ಲ. ಅವರಿಗೆ ಅನೇಕ ವೇಳೆ ಉತ್ತರ ಹೇಳುವುದಕ್ಕಿಂತ ಪ್ರಶ್ನೆಗಳನ್ನು ಕೇಳುವುದರಲ್ಲೇ ತೀವ್ರ ಆಸಕ್ತಿ. ಹೀಗೆ ಪ್ರಶ್ನೆ ಕೇಳುವವರ ಕುತೂಹಲದಿಂದ ಎರಡು ಪ್ರಕಾರದ ಜ್ಞಾನ ಹುಟ್ಟುತ್ತದೆ. ಒಂದು ವಿಜ್ಞಾನ; ಮತ್ತೊಂದು ತತ್ತ್ವಜ್ಞಾನ ಅಥವಾ ತತ್ತ್ವಶಾಸ್ತ್ರ. ಈ ಎರಡು ಪ್ರಕಾರಗಳಲ್ಲೂ ಪ್ರಶ್ನೆಗಳನ್ನು ಕೇಳುತ್ತ ಹೋಗುವುದೇ ಪ್ರಗತಿಯ ಜೀವಾಳ. ಈ ಎರಡು ಕ್ಷೇತ್ರಗಳಲ್ಲೂ ಅನೇಕ ಪ್ರಶ್ನೆಗಳಿಗೆ ಅನೇಕರು ಅನೇಕ ವಿಧವಾದ ಉತ್ತರಗಳನ್ನಿತ್ತಿದ್ದರೂ—ಬಹಳ ಪ್ರಗತಿ ಆಗಿದೆಯೆಂದು ನಾವು ಭಾವಿಸಿದರೂ—ಯಾವುದೇ ಮುಖ್ಯವಾದ ಪ್ರಶ್ನೆಗೂ ಅವರು ಸಮಂಜಸವಾದ ಉತ್ತರಗಳನ್ನು ಕೊಟ್ಟಿಲ್ಲ. 'ಜೀವ, ಜಡವಸ್ತುಗಳೆಂದರೇನು?' 'ಅವುಗಳ ಉತ್ಪತ್ತಿ ಹೇಗೆ?' 'ಆತ್ಮ, ದೇವರು—ಇವು ಇವೆಯೆ?' ಇತ್ಯಾದಿ ಪ್ರಶ್ನೆಗಳನ್ನೇ—ಸಾವಿರಾರು ವರ್ಷಗಳ ಹಿಂದಿನ ಜನಾಂಗಗಳವರು ಕೇಳಿದ ಪ್ರಶ್ನೆಗಳನ್ನೇ—ನಾವೂ ಇಂದು ಪುನಃ ಕೇಳುತ್ತಿದ್ದೇವೆ. ನಾವು ಇದುವರೆಗೂ ಪಡೆದಿರುವ ಜ್ಞಾನ ಅನೇಕ ವೇಳೆ ಹೆಚ್ಚು ಮಾರ್ಮಿಕವಾದ ಪ್ರಶ್ನೆಗಳನ್ನು ಕೇಳಲು ಸಹಾಯಕವಾಗಿದೆಯೇ ಹೊರತು ಹೆಚ್ಚು ನಿಷ್ಕೃಷ್ಟವಾದ ಉತ್ತರಗಳನ್ನು ನೀಡಲು ಸಹಾಯಕವಾಗಿಲ್ಲ. ಹಿಂದೆ ಪ್ರಶ್ನೆ ಸರಳವಾಗಿದ್ದಾಗ ಉತ್ತರವೂ ಸರಳವಾಗಿತ್ತು. ಈಗ ನಮ್ಮ ಪ್ರಶ್ನೆಗಳು ಗಹನವಾದಂತೆಲ್ಲ ಉತ್ತರಗಳೂ ಗೂಢವಾಗುತ್ತ ನಡೆದಿವೆ. ಇದಕ್ಕೆ ಬೆದರದೆ, ಜಗತ್ತಿಗೆ ತಮ್ಮಿಂದ ಉಪಯೋಗವುಂಟೇ ಇಲ್ಲವೇ ಎಂಬುದನ್ನೂ ಲಕ್ಷಿಸದೆ ವಿಜ್ಞಾನಿಗಳೂ ತತ್ತ್ವಜ್ಞಾನಿಗಳೂ ಪ್ರಶ್ನೆಗಳನ್ನು ಕೇಳುತ್ತಲೂ ಉತ್ತರಗಳನ್ನು ಹುಡುಕುತ್ತಲೂ ಸಾಗಿದ್ದಾರೆ.

ವಿಜ್ಞಾನದಲ್ಲಿ ವ್ಯವಸ್ಥಿತ ರೀತಿಯಲ್ಲಿ—ಸಾಧ್ಯವಾದಾಗ ಪ್ರಯೋಗಾತ್ಮಕವಾಗಿ—ಇಂದ್ರಿಯಗೋಚರವಾದ ವಸ್ತುಗಳ ಅಭ್ಯಾಸ ನಡೆದರೆ ತತ್ತ್ವಜ್ಞಾನದಲ್ಲಿ ಮನುಷ್ಯನ ಬುದ್ಧಿಗೆ ಸವಾಲು ಹಾಕುವ ಎಲ್ಲ ಬಗೆಯ ಕ್ಲಿಷ್ಟ ಸಮಸ್ಯೆಗಳ ಮಥನ ನಡೆಯುತ್ತದೆ. ವಿಜ್ಞಾನದಲ್ಲಿ ಮೂಲಭೂತ ಪ್ರಶ್ನೆಗಳನ್ನುಳಿದು ಇತರ ಅನೇಕ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ದೊರೆತಿದೆ. ಆದರೆ ತತ್ತ್ವಶಾಸ್ತ್ರದಲ್ಲಿ ಹೀಗಿಲ್ಲ. ಅದು ಸಮಸ್ಯೆಗಳ ಸಮುದ್ರ; ನಮ್ಮನ್ನು ಕಾಡುವ ಮೂಲಪ್ರಶ್ನೆಗಳ ತವರುಮನೆ. ಇಲ್ಲಿನ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಸಿಕ್ಕಿದ್ದೇ ಆದರೆ ಆ ಕ್ಷಣದಲ್ಲೇ ಆ ಪ್ರಶ್ನೋತ್ತರಗಳು ಗರಿಬಲಿತ ಮರಿ ತಾಯಿಹಕ್ಕಿಯನ್ನು ಬಿಟ್ಟು ಹಾರಿಹೋಗುವಂತೆ ಪಾರಾಗಿ ವಿಜ್ಞಾನದ ಯಾವುದೋ ಭಾಗವನ್ನು ಸೇರಿಕೊಳ್ಳುತ್ತವೆ.

ತತ್ತ್ವಜ್ಞಾನದಲ್ಲಿ ಪ್ರತಿಯೊಂದು ನಂಬಿಕೆಯನ್ನೂ ಪ್ರಶ್ನಿಸುವುದು ಸಾಧ್ಯವಿದೆ. ಯಾವುದೇ ನಂಬಿಕೆಯನ್ನೂ ಸಾಕಷ್ಟು ಪ್ರಶ್ನಿಸದೆ, ಪರೀಕ್ಷಿಸದೆ ಒಪ್ಪುವುದು ಸರಿಯಾದ ತತ್ತ್ವಜ್ಞಾನಿಯ ಲಕ್ಷಣವಲ್ಲ. ಆದ್ದರಿಂದ ಸಾಮಾನ್ಯ ಮನುಷ್ಯರ

ಜೀವನದಲ್ಲಿ ದೃಢವಾದ ನಂಬಿಕೆಗಳಾದ "ಈ ಮೇಜು ಗುಂಡಾಗಿದೆ", "ಬೆಳುದಿಂಗಳು ಸುಂದರವಾಗಿದೆ", "ದುಷ್ಕೃತ್ಯಗಳನ್ನು ಎಸಗಬಾರದು" ಮುಂತಾದವು ಕೂಡ ಬಹಳ ಸಮಸ್ಯಾತ್ಮಕವಾದ ನಂಬಿಕೆಗಳಾಗುತ್ತವೆ—ಆಲೋಚಿಸುವ ತತ್ತ್ವಜ್ಞಾನಿಗೆ ಮಾತ್ರ. ಹೀಗಿರುವಾಗ 'ದೇವರ ಬಳಿಗೆ ಹೋಗುವ ಮಾರ್ಗ ಯಾವುದು?' ಎಂಬ ಧರ್ಮದ ಪ್ರಶ್ನೆ ಮತ್ತು ಧರ್ಮಗಳು ಅದಕ್ಕೆ ಕೊಡುವ ಉತ್ತರಗಳು ತತ್ತ್ವಜ್ಞಾನಿಗೆ ವಿಚಿತ್ರವಾಗಿ ಕಾಣಿಸಬಹುದು. 'ಈ "ದೇವರು" ಇದ್ದಾನೆಯೆ?' ಎಂಬುದು ಅವನಿಗೆ ಮೂಲಪ್ರಶ್ನೆ. ಅದಕ್ಕೆ ಸಂಬಂಧಿಸಿದಂತೆ—ಆ ಪ್ರಶ್ನೆಗೆ ಹೌದೆಂದು ಉತ್ತರಕೊಟ್ಟು ಸಿದ್ಧಾಂತ ಮಾಡಿದರೂ—ಇನ್ನೂ ಅನೇಕ ಉಪಸಮಸ್ಯೆಗಳು ಅವನಿಗೆ ಗೋಚರಿಸುತ್ತವೆ. ಹೀಗೆ ಧರ್ಮದಲ್ಲಿ ಅಚಲವಾದ ಶ್ರದ್ಧೆ ನಂಬಿಕೆಗಳಿಗೆ ಆಧಾರವಾದ 'ದೇವರು' ತತ್ತ್ವಜ್ಞಾನಿಗೆ ಜಿಜ್ಞಾಸೆಯ ವಸ್ತುವಾಗುತ್ತಾನೆ. ಧರ್ಮದ ಅತಿ ಸರಳವಾದ ನಂಬಿಕೆ ತತ್ತ್ವಜ್ಞಾನದ ಅತ್ಯಂತ ಗಂಭೀರವಾದ ಸಮಸ್ಯೆಗಳಲ್ಲೊಂದಾಗುತ್ತದೆ.

ಈಗ ಭಾರತೀಯ ತತ್ತ್ವಶಾಸ್ತ್ರದಲ್ಲಿ ದೇವರ ಸಮಸ್ಯೆಯನ್ನು ಕುರಿತು ವಿಚಾರ ಮಾಡೋಣ. ಈ ಸಮಸ್ಯೆ ಅತ್ಯಂತ ಗಂಭೀರವಾದ ತಾತ್ತ್ವಿಕ ಸಮಸ್ಯೆಯಾಗದಿರಲು ಒಂದು ಮುಖ್ಯವಾದ ಕಾರಣವೆಂದರೆ ಭಾರತದಲ್ಲಿ ಧರ್ಮ ಮತ್ತು ತತ್ತ್ವಜ್ಞಾನಗಳು ಒಂದಾಗಿರುವುದು. ಬೌದ್ಧಮತ ಧರ್ಮವೂ ಹೌದು; ದರ್ಶನವೂ ಹೌದು. ಜೈನಮತವೂ ಅಷ್ಟೇ. ವೈಷ್ಣವ ಹಾಗೂ ಶೈವ ಮತಗಳೂ ಏಕಕಾಲದಲ್ಲಿ ಧರ್ಮಗಳೂ ದರ್ಶನಗಳೂ ಆಗಿವೆ. ಇದರಿಂದಾಗಿ ದೇವರ ಬಗ್ಗೆ ಶುದ್ಧವಾದ ತಾತ್ತ್ವಿಕ ದೃಷ್ಟಿಯಿಂದ ವಿಚಾರಮಾಡಿರುವುದು ಕಡಿಮೆ ಎನ್ನಬಹುದು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಧರ್ಮ ಮತ್ತು ತತ್ತ್ವಶಾಸ್ತ್ರಗಳು ಕೆಲವು ಕಾಲದಿಂದಾದರೂ ಬೇರೆಯಾಗಿ ಬೆಳೆದದ್ದರಿಂದ ಈಶ್ವರಸಮಸ್ಯೆಯ ಬಗ್ಗೆ ಅವರ ಆಲೋಚನೆಗಳು ಭಿನ್ನವಾಗಿವೆ. ಉದಾಹರಣೆಗೆ, ದೇವರು ಇದ್ದಾನೆಂದು ಸಿದ್ಧಾಂತ ಮಾಡುವ ಅನೇಕ ರೀತಿಯ ವಾದಗಳ ಸರಣಿ ತತ್ತ್ವಜ್ಞಾನದ ಸವಾಲಿನಿಂದಾಗಿ ಪಶ್ಚಿಮದಲ್ಲಿ ಬೆಳೆದಷ್ಟು ವಿಸ್ತಾರವಾಗಿ ಭಾರತದಲ್ಲಿ ಬೆಳೆಯಲೇ ಇಲ್ಲ[1].

ಭಾರತದಲ್ಲಿ ಮೊಟ್ಟಮೊದಲಿನ ದೇವರ ಕಲ್ಪನೆ ವೇದಗಳಲ್ಲಿ ಕಂಡುಬರುತ್ತದೆ. ವೇದಗಳ ಅಧಿಭಾಗದಲ್ಲಿರುವುದು ವಿಶೇಷವಾಗಿ ಬಹುದೇವತಾವಾದ. ಈ ದೇವತೆಗಳನೇಕರು ಪ್ರಾಕೃತಿಕ ಶಕ್ತಿಗಳಿಗೆ ಸಂಬಂಧಿಸಿದವರು. ಮಳೆಗೆ, ಯುದ್ಧಕ್ಕೆ ಅಧಿದೇವತೆಯಾದ ಇಂದ್ರ, ದೇವತೆಗಳಿಗೂ ಮನುಷ್ಯರಿಗೂ ಸಂಪರ್ಕಕ್ಕೆ ಕಾರಣನಾದ ಅಗ್ನಿ, ಜಗತ್ತಿನ ಸಕಲವ್ಯಾಪಾರಗಳೂ ವ್ಯವಸ್ಥಿತವಾಗಿ ನಡೆಯಲು ಕಾರಣವಾದ

---

1 ಈ ಬೆಳವಣಿಗೆ ವೇದಾಂತದ ಉದಯಕಾಲದ ವರೆಗೆ ಮಾತ್ರ ಚೆನ್ನಾಗಿ ಆಗಿರುವಂತೆ ಈ ಲೇಖಕನಿಗೆ ಕಂಡುಬಂದಿರುವುದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಈ ಮಾತನ್ನು ಹೇಳಿದೆ.

'ಋತ'ಕ್ಕೆ ಒಡೆಯನಾದ ವರುಣ—ಇವರು ಈ ದೇವತೆಗಳಲ್ಲಿ ಮುಖ್ಯರು. ವೇದ ಮಂತ್ರಗಳಲ್ಲಿನ ದೇವರ ಕಲ್ಪನೆ ಧಾರ್ಮಿಕವಾದುದು. ಆದರೆ ಬ್ರಾಹ್ಮಣಗಳಲ್ಲಿ ಸ್ವಲ್ಪಮಟ್ಟಿಗೆ ತಾತ್ತ್ವಿಕವಾದ ಕಲ್ಪನೆಗಳು ಕಾಣಿಸುತ್ತವೆ. ವಿಶ್ವಕರ್ಮ, ಹಿರಣ್ಯ ಗರ್ಭ, ಪ್ರಜಾಪತಿ ಇವರು ಜಗತ್ತಿನ ವಿವಿಧ ಸಾಮಾನ್ಯ ವ್ಯಾಪಾರಗಳ ದೃಷ್ಟಿ ಯಿಂದ ಕಲ್ಪಿಸಲಾದ ದೇವತೆಗಳು. ದೇವತೆಗಳು ನಮ್ಮಂತೆಯೇ ಇರುವರೆಂಬ ಮಂತ್ರಭಾಗದ ಕಲ್ಪನೆಗಳನ್ನು ತ್ಯಜಿಸಿ ಅವರನ್ನು ಆದಷ್ಟು ಅಮೂರ್ತವಾಗಿ ಮಾಡುವ ಯತ್ನವೂ ಇಲ್ಲಿ ನಡೆದಿದೆ.

ಈ ಚಿಂತನೆ ಹೀಗೆಯೇ ಮುಂದುವರಿದು ಕೊನೆಗೆ ಉಪನಿಷತ್ತುಗಳಲ್ಲಿ ದೇವತೆ ಗಳು, ಸ್ವರ್ಗಕಾಮನೆ, ಯಜ್ಞಯಾಗಗಳು ಇವೆಲ್ಲಾ ತಿರಸ್ಕರಿಸಲ್ಪಟ್ಟವು. ಆಲೋಚನೆಯ ದಿಕ್ಕನ್ನೇ ಕರ್ಮವಾದ ಬದಲಿಸಿ ಹೊಸಹೊಸ ಸಮಸ್ಯೆಗಳನ್ನು ಸೃಷ್ಟಿಸಿತು. ಆತ್ಮದ ಅಮೃತತ್ತ್ವ, ಪುನರ್ಜನ್ಮದ ನಂಬಿಕೆಗಳು, ಜೀವನ ಮರಣಗಳ ರಹಸ್ಯ, 'ಸ್ವರ್ಗದ ಶಾಶ್ವತತೆ', ಪ್ರಿಯವಾದುದಕ್ಕಿಂತಲೂ (ಪ್ರೇಯಸ್) ಉತ್ತಮವಾದದ್ದು ಇದೆಯೇ ಎಂಬುದರ ಅನ್ವೇಷಣೆ, ಸುಖ-ದುಃಖಗಳಿಗೆ ಏಕೈಕ ಕಾರಣವಾದ ಕರ್ಮಬಂಧನದಿಂದ ಬಿಡುಗಡೆಹೊಂದುವ ಸಾಧ್ಯತೆ—ಇವೇ ಮೊದಲಾದ ಹೊಸ ಸಮಸ್ಯೆಗಳು ಹುಟ್ಟಿಕೊಂಡುವು. ಆಗ ತತ್ತ್ವಶಾಸ್ತ್ರದ ಕೆಲವು ಮೂಲ ಸಮಸ್ಯೆಗಳ ಹಾಗೂ ಮಾನವಜೀವನದ ಕೆಲವು ಕ್ಲಿಷ್ಟ ಸಮಸ್ಯೆಗಳ ವಿಶ್ಲೇಷಣೆ ತಾತ್ತ್ವಿಕ ರೀತಿಯಲ್ಲಿ ಪ್ರಾರಂಭವಾಯಿತು. "ನಾನು" ಎಂದರೇನು? ಯಾವುದನ್ನು ತಿಳಿಯುವುದರಿಂದ ಇದೆಲ್ಲವೂ (ನಾನು ಮತ್ತು ಜಗತ್ತು) ತಿಳಿಯು ತ್ತವೆ?—ಇವಕ್ಕೆ ಹುಡುಕಿ ತೆಗೆದ ಉತ್ತರ ಏಕೈಕ "ತತ್ತ್ವ"ವಾದ "ಬ್ರಹ್ಮನ್" ಅಥವಾ "ಆತ್ಮನ್". ಸರ್ವಕಾಲಗಳಲ್ಲಿಯೂ ಎಲ್ಲೆಡೆಗಳಲ್ಲಿಯೂ ತಾನೇ ತಾನಾಗಿರುವ, ಸರ್ವಕಾರಣವಾದ ಈ ತತ್ತ್ವವೇ ಆತ್ಮವೂ ಜಗತ್ತೂ ಈಶ್ವರನೂ ಎಲ್ಲವೂ ಆಗಿದೆ. ಇದನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಜೀವನದ ಪರಮ ಗುರಿ; ಇದೇ ಮೋಕ್ಷ. ಈ ಬ್ರಹ್ಮ ಸಾಕಾರನೂ ಹೌದು, ನಿರಾಕಾರನೂ ಹೌದು; ಸಗುಣನೂ ಹೌದು; ನಿರ್ಗುಣನೂ ಹೌದು; ಕಾರಣವೂ ಹೌದು, ಕಾರ್ಯವೂ ಹೌದು. ಇದೆಲ್ಲದರ ತಾತ್ತ್ವಿಕ ಅರ್ಥ, ಈ ವಸ್ತು ಇಂಥ ಎಲ್ಲ ತಾಂತ್ರಿಕ ಭೇದಭಾವ ಗಳನ್ನೂ ಮೀರಿ ನಿಂತಿರುವಂಥದು ಎಂದು ಆಗುತ್ತದೆ. ಇದು ನೀತಿ ಧರ್ಮಗಳನ್ನು ಸಂಪೂರ್ಣವಾಗಿ ಮೀರಿ ನಿಲ್ಲುವ ಕಲ್ಪನೆ. ಈ ವಸ್ತುವನ್ನು ದೇವರು ಎಂದು ಕರೆದರೆ ವಿಚಿತ್ರವಾದೀತು. ಇದೊಂದು ಅದ್ವಿತೀಯವಾದ ನಿರಪೇಕ್ಷವಾದ ತತ್ತ್ವ.

ಷಡ್ದರ್ಶನಗಳಿಗೆ ಮುಂಚೆ ದೇವರ ಬಗ್ಗೆ ಅನೇಕ ತಾತ್ತ್ವಿಕ ಕಲ್ಪನೆಗಳಿದ್ದರೂ ತಾತ್ತ್ವಿಕ ಜಿಜ್ಞಾಸೆ ಕಂಡುಬರುವುದಿಲ್ಲ. ಇಂಥ ಜಿಜ್ಞಾಸೆ ಪ್ರಾರಂಭವಾಗುವುದು ದೇವರ ಅಸ್ತಿತ್ವ ಇತ್ಯಾದಿಗಳನ್ನು ಪ್ರಶ್ನಿಸಿದಾಗ. ಆದ್ದರಿಂದ ಭಾರತೀಯರಲ್ಲಿ ದೇವರ ಬಗ್ಗೆ ನಡೆದ ತಾತ್ತ್ವಿಕ ಜಿಜ್ಞಾಸೆ ಈ ಕಾಲದ್ದು. ಜೈನರಾಗಲಿ ಬೌದ್ಧ

ರಾಗಲಿ ತಾತ್ತ್ವಿಕವಾಗಿ ದೇವರ ಕಲ್ಪನೆಯನ್ನೇ ಒಪ್ಪಿಕೊಳ್ಳದಿದ್ದುದರಿಂದ ಅವರಿಗೆ ಇಂಥ ಜಿಜ್ಞಾಸೆಯ ತೀವ್ರತೆ ಕಾಣಿಸಲಿಲ್ಲ. ಚಾರ್ವಾಕರು ಪ್ರತ್ಯಕ್ಷ ಗೋಚರ ವಾದದ್ದನ್ನು ಮಾತ್ರ ಇದೆಯೆಂದು ಒಪ್ಪುವುದರಿಂದ ಪ್ರತ್ಯಕ್ಷ ಗೋಚರವಲ್ಲದ ಶಾಶ್ವತ ಆತ್ಮ, ದೇವರ ಪ್ರಶ್ನೆ—ಇವು ಅವರ ಸಿದ್ಧಾಂತದಲ್ಲಿ ಉದ್ಭವಿಸುವುದಿಲ್ಲ. ಇನ್ನು ಉಳಿದ ಆರು ದರ್ಶನಗಳನ್ನು ಅವುಗಳ ಮೂಲದಲ್ಲಿ ಮಾತ್ರ ಗಮನಿಸುವು ದಾದರೆ ಅಲ್ಲಿಯೂ ದೇವರ ಕಲ್ಪನೆಗೆ ಸಿಕ್ಕುವ ಆಸರೆ ಅತ್ಯಲ್ಪ. ನ್ಯಾಯ–ವೈಶೇಷಿಕ, ಸಾಂಖ್ಯ, ಮೀಮಾಂಸಾ ದರ್ಶನಗಳ ಬೆಳೆವಣಿಗೆಯಲ್ಲಿ ದೇವರ ಕಲ್ಪನೆ, ಮತ್ತು ಅವನ ಅಸ್ತಿತ್ವವನ್ನು ಕುರಿತ ಸಿದ್ಧಾಂತಗಳು ಮೊದಲಿನಲ್ಲಿ ಕಾಣಿಸದೆ ಅನಂತರದಲ್ಲಿ ಕಾಣಿಸುತ್ತವೆ. ಮೀಮಾಂಸಾ ದರ್ಶನದಲ್ಲಂತೂ ಆದಿಯಲ್ಲಿ ಇದ್ದ ನಾಸ್ತಿಕತೆ ಮಾಯವಾಗಿ ಆಸ್ತಿಕತೆ ಬಂದುಬಿಡುತ್ತದೆ. ಷಡ್ದರ್ಶನದಲ್ಲಿ ದೇವರ ಅಸ್ತಿತ್ವವನ್ನು ಅಲ್ಲಗಳೆಯುವುದರಲ್ಲಿ ಮೀಮಾಂಸಕರೂ ಸಿದ್ಧಪಡಿಸುವುದರಲ್ಲಿ ನೈಯಾಯಿಕರೂ ವಿಶೇಷ ಆಸಕ್ತಿ ವಹಿಸಿರುವುದು ಕಂಡುಬರುತ್ತದೆ.

ವೈಶೇಷಿಕದರ್ಶನದ ಮೂಲಗ್ರಂಥವಾದ ಕಣಾದರ ವೈಶೇಷಿಕ ಸೂತ್ರ ದಲ್ಲಿರುವ ಸೂಚನೆ ದೇವರನ್ನು ಕುರಿತದ್ದಲ್ಲವೆಂದು ಹೇಳಬಹುದು.[2] ಅವರು ಋಷಿಗಳು ತಮ್ಮ ತಪಃಪ್ರಭಾವದಿಂದ ಸಂಪಾದಿಸಿದ ಆರ್ಷಜ್ಞಾನದಿಂದ ವೇದ ಪ್ರಾಮಾಣ್ಯವನ್ನು ಪ್ರತಿಪಾದಿಸುತ್ತಾರೆ. ಅವರ ಪ್ರಕಾರ ಅಣುಗಳಲ್ಲಿ ಉಂಟಾಗುವ ಪ್ರಥಮ ಚಲನೆಯೇ ಸೃಷ್ಟಿಗೆ ಕಾರಣ. ಈ ಚಲನೆಗೆ ಜೀವಗಳ ಪಾಪಪುಣ್ಯಗಳು ಮತ್ತು "ಅದೃಷ್ಟ" ಕಾರಣವೇ ಹೊರತು ದೇವರಲ್ಲ. ಶಂಕರರ ಬ್ರಹ್ಮಸೂತ್ರ ಭಾಷ್ಯದಲ್ಲೂ ಇದಕ್ಕೆ ಸಮರ್ಥನೆ ಇದೆ.[3] ವೇದಗಳಿಗೆ ಜನಕರು ಋಷಿಗಳು, ದೇವರಲ್ಲ, ಎನ್ನುವ ಅಭಿಪ್ರಾಯ ಸೂತ್ರಭಾಷ್ಯಕಾರರಾದ ಪ್ರಶಸ್ತಪಾದರಲ್ಲೂ ಕಂಡು ಬರುತ್ತದೆ;[4] ಆದರೆ ಜಗತ್ತಿನ ಸೃಷ್ಟಿ ಮಾತ್ರ ದೇವರಿಂದಲೇ ಆದದ್ದೆಂದು ಅವರು ನಂಬುತ್ತಾರೆ. ದೇವರ ಇಚ್ಛೆಗನುಗುಣವಾಗಿ ಕಾಲಕಾಲಕ್ಕೆ ಸೃಷ್ಟಿ ಪ್ರಳಯಗಳು ಆಗುತ್ತವೆ.[5] ಧರ್ಮದಿಂದುಂಟಾಗುವ ಮೋಕ್ಷವೂ ಈಶ್ವರನಿಂದಾಗಿಯೇ.[6] ಈಶ್ವರ ಜಗತ್ತಿಗೆ ನಿಮಿತ್ತಕಾರಣ, ಅಣುಗಳು ಉಪಾದಾನಕಾರಣ. ಹೀಗೆ ಪ್ರಾರಂಭದಲ್ಲಿ ನಾಸ್ತಿಕವಾಗಿದ್ದ ವೈಶೇಷಿಕದರ್ಶನ ಕೊನೆಗೆ ಆಸ್ತಿಕವಾಗುತ್ತದೆ.

---

[2] 'ತದ್ವಚನಾದಾಮ್ನಾಯಸ್ಯ ಪ್ರಾಮಾಣ್ಯಂ,' ವೈಶೇಷಿಕ ಸೂತ್ರ, I. 1.3; Faddegon ಅವರ Vaisesika Systemನ ೩೫೪ನೆಯ ಪುಟವನ್ನೂ ನೋಡಿ.

[3] ಬ್ರಹ್ಮಸೂತ್ರ ಶಾಂಕರಭಾಷ್ಯ (ಮೋತೀಲಾಲ್ ; ದೆಹಲಿ), II. ೨.೧೧ ; ಪುಟ ೧೮೨

[4] ಪ್ರಶಸ್ತಪಾದಭಾಷ್ಯ, ಸಂ: ಗೋಪೀನಾಥ ಕವಿರಾಜ್ (ಚೌಖಾಂಬಾ: ೧೯೩೦), ಪುಟ ೬೨೧–೬೨೨. ಇದರ ಮೇಲಿನ ವ್ಯೋಮಶಿವನ ಭಾಷ್ಯವನ್ನೂ ಅಲ್ಲೇ ನೋಡಿ.

[5] ಹಿಂದಿನ ಪುಸ್ತಕದಲ್ಲೇ. ಪುಟ ೨೭೮ ; Faddegon : ಪುಟ ೧೬೩

[6] ಪ್ರಶಸ್ತಪಾದರ 'ಪದಾರ್ಥ ಧರ್ಮ ಸಂಗ್ರಹ,' ಅನು: ಗಂಗಾನಾಥ ಝಾ, ಪುಟ ೧೭

ವ್ಯೋಮಶಿವ,[7] ಶ್ರೀಧರ, ಉದಯನ, ಪದ್ಮನಾಭಮಿಶ್ರ, ಜಗದೀಶ,[8] ಮಾಧವ ಸರಸ್ವತಿ, ಶಂಕರ ಮಿಶ್ರ[9] ಮೊದಲಾದವರು ಈಶ್ವರನ ಅಸ್ತಿತ್ವವನ್ನು ಪ್ರತಿಪಾದಿಸುವ ವಿವಿಧ ವಾದಗಳನ್ನು ಮಂಡಿಸುತ್ತಾರೆ.

ಅಣುಗಳೇ ಜಗತ್ತಿಗೆ ಉಪಾದಾನಕಾರಣ, ಸಮವಾಯಿಕಾರಣ; ಈ ಅಣುಗಳ ಸಂಯೋಗ ಅಸಮವಾಯಿಕಾರಣ; ಜೀವಗಳ ಪಾಪ ಪುಣ್ಯಗಳು ಸಹಕಾರೀಕಾರಣ; ದೇವರೇ ನಿಮಿತ್ತಕಾರಣ.[10] ದೇವರು ತನ್ನ ಜ್ಞಾನದಿಂದ ಅಣುಗಳನ್ನೂ ಸಮಸ್ತ ಜೀವಗಳ ಪಾಪಪುಣ್ಯಗಳನ್ನೂ ಗ್ರಹಿಸುತ್ತಾನೆ; ತನ್ನ ವೈರಾಗ್ಯದಿಂದ ಕರ್ಮನಿಯಮಕ್ಕನುಸಾರವಾಗಿ ಜೀವಿಗಳಿಗೋಸ್ಕರ ವೈವಿಧ್ಯಮಯವಾದ ಜಗತ್ತನ್ನು ಪಕ್ಷಪಾತವಿಲ್ಲದೆ ಸೃಷ್ಟಿಸುತ್ತಾನೆ; ತನ್ನ ಮಹಿಮೆಯಿಂದಾಗಿ ('ಐಶ್ವರ್ಯ') ಜೀವಿಗಳ ಪಾಪಪುಣ್ಯಗಳು ಪಕ್ವವಾದಾಗ ಯೋಗ್ಯ ಫಲವನ್ನೇ ಕೊಡುವಂತೆ ನಿಯಂತ್ರಿಸುತ್ತಾನೆ. ಅವನು ಕಾರುಣ್ಯಮಯ. ಏಕೆಂದರೆ ಅವನು ಸೃಷ್ಟಿಸಿದ ಜಗತ್ತಿನಲ್ಲಿ ಕರ್ಮಕ್ಕೆ ಯೋಗ್ಯಫಲವನ್ನು ಅನುಭವಿಸುತ್ತಾ ಜೀವಿಗಳು ಪರಿಶುದ್ಧರೂ, ವೈರಾಗ್ಯಪೂರ್ಣರೂ ಆಗುತ್ತಾರೆ. ಕರ್ಮನಿಯಮಕ್ಕನುಸಾರವಾಗಿ ಅವನು ನಡೆದುಕೊಳ್ಳುವುದರಿಂದ ಅವನ ಕಾರುಣ್ಯಕ್ಕಾಗಲಿ ಸರ್ವಶಕ್ತಿತ್ವಕ್ಕಾಗಲಿ ಸಾರ್ವಭೌಮ ಸ್ವಾತಂತ್ರ್ಯಕ್ಕಾಗಲಿ ಚ್ಯುತಿ ಬರುವುದಿಲ್ಲ.[11]

ಆದರೆ ಅಣುಗಳ ಸಂಯೋಗದಿಂದ ಜಗತ್ತಿನ ಸೃಷ್ಟಿಯಾಗುತ್ತದೆಂದು ಒಪ್ಪಿಕೊಂಡರೂ ಅದಕ್ಕೆ ಚೈತನ್ಯಮಯವಾದ ನಿಮಿತ್ತಕಾರಣವೇ ಇದೆಯೆಂದು (ಅಂದರೆ ದೇವರೇ ಕರ್ತನೆಂದು) ಏಕೆ ತಿಳಿಯಬೇಕು? ಮಡಕೆಗೆ ಕುಂಬಾರ ಕಾರಣನಾದರೂ ಬೀಜಗಳು ಮೊಳೆಯಲು ಯಾವನೂ ನಿಮಿತ್ತವಲ್ಲವಷ್ಟೆ. ಯಾವ ತೋಟಗಾರನೂ ಇಲ್ಲದ ಅರಣ್ಯದಲ್ಲೂ ಬೀಜಗಳು ಮೊಳೆತು ಮರವಾಗು

---

7 ಪ್ರಶಸ್ತಪಾದಭಾಷ್ಯ, ಸಂ: ಗೋಪೀನಾಥ ಕವಿರಾಜ್, ಪುಟ ೩೦೧

8 ಪ್ರಶಸ್ತಪಾದಭಾಷ್ಯ, ಜಗದೀಶನ 'ಸೂಕ್ತಿ'ಯೊಂದಿಗೆ, ಸಂ: ಕಾಲೀಪಾದ ತರ್ಕಾಚಾರ್ಯ (ಕಲ್ಕತ್ತ), ಪುಟ ೬--೭

9 ಕಣಾದರ ವೈಶೇಷಿಕಸೂತ್ರ (ಶಂಕರಮಿಶ್ರ ಹಾಗೂ ಜಯನಾರಾಯಣರ ಭಾಷ್ಯದೊಂದಿಗೆ), Sacred Books of the Hindus Series, ಸಂ: ಮೇಜರ್ ಬಸು, ಅಲಹಾಬಾದ್, ೧೯೧೧, ಪುಟ ೭–೮

10 'ಮಹೇಶ್ವರೇಚ್ಛಾ ನಿಮಿತ್ತಕಾರಣಮಾತ್ಮಾನಾಮಣುಭಿ: ಸಂಯೋಗಾಶ್ಚಾ ಸಮವಾಯಿಕಾರಣಂ ಅಣವಸ್ತು ಸಮವಾಯಿನ ಇತ್ಯಣುಷು ಕರ್ಮಾಣ್ಯುತ್ಪದ್ಯಂತೇ': ಪ್ರಶಸ್ತಪಾದಭಾಷ್ಯ, ಸಂ: ಗೋಪೀನಾಥ ಕವಿರಾಜ್, ಪುಟ ೨೯೮

11 'ನ ಚೈವಂ ಸತಿ ಕರುಣಾವಿರೋಧೋ ದುಃಖೋತ್ಪಾದಸ್ಯ ವೈರಾಗ್ಯಜನನದ್ವಾರೇಣ ಪರಮಪುರುಷಾರ್ಥ ಹೇತುತ್ವಾತ್': ಶ್ರೀಧರರ 'ನ್ಯಾಯಕಂದಲೀ,' ಸಂ: ವಿ.ಪಿ.ದ್ವಿವೇದಿನ್, Vizianagaram Sanskrit Series, ನಂ. ೬ (೧೮೯೫), ಪುಟ ೫೩

ತ್ತವೆ. ಆದ್ದರಿಂದ ಪರಿಣಾಮಗಳಿಗೂ ಕರ್ತೃಗಳಿಗೂ ಅನಿವಾರ್ಯವಾದ ವ್ಯಾಪ್ತಿ ಸಂಬಂಧವೇನೂ ಇಲ್ಲ. ಈಶ್ವರನೇ ಕರ್ತೃವಿದ್ದರೂ ಸರ್ವದಾ ಅಗೋಚರನಾದ್ದರಿಂದ ಅಂತಹ ಕರ್ತನಿರಬಹುದೇ ಎಂದು ಶಂಕಿಸಬಹುದು. ಇದಕ್ಕೆ ಉತ್ತರವಾಗಿ ಶ್ರೀಧರರು ಸಾಮಾನ್ಯತೋದೃಷ್ಟ ಅನುಮಾನದಿಂದ ಅಗೋಚರ ಕರ್ತೃವಿನ ಅಸ್ತಿತ್ವವನ್ನು ಸಿದ್ಧಪಡಿಸಬಹುದೆಂದು ವಾದಿಸುತ್ತಾರೆ.[12]

ಘಟ ಮುಂತಾದ ವಸ್ತುಗಳು ಕರ್ತೃವಿಲ್ಲದೆ ಹೇಗೆ ಉಂಟಾಗಲಾರವೋ ಹಾಗೆಯೇ ಈ ಜಗತ್ತೂ ಒಬ್ಬ ಬುದ್ಧಿವಂತನಾದ ಕರ್ತೃವಿಲ್ಲದೆ ಆಗಲಾರದೆಂದು ಒಪ್ಪಿಕೊಂಡರೂ ಈ ಕರ್ತೃ ಘಟಾದಿಗಳ ಕರ್ತೃವಿನಂತೆಯೇ ಸಶರೀರಿಯಾಗಿರಬೇಕಲ್ಲವೆ? ಅದರೆ ಶ್ರೀಧರರು ಕರ್ತೃತ್ವಕ್ಕೂ ಸಶರೀರತ್ವಕ್ಕೂ ಮಧ್ಯೆ ಅನಿವಾರ್ಯವಾದ ವ್ಯಾಪ್ತಿ ಸಂಬಂಧವೇನೂ ಇಲ್ಲವೆಂದು ವಾದಿಸುತ್ತಾರೆ. ಸಶರೀರತ್ವವಿರುವಲ್ಲೆಲ್ಲ ಕರ್ತೃತ್ವವಿರುವುದಾದರೆ ನಿದ್ರಾವಶನಾಗಿರುವವರೂ ಉದಾಸೀನರಾಗಿರುವವರೂ ಇಚ್ಛಾಪ್ರಯತ್ನವಿಲ್ಲದವರೂ ಸಶರೀರಿಗಳಾಗಿರುವುದರಿಂದ ಕರ್ತೃಗಳೇ ಆಗಬೇಕಾಗುತ್ತದೆ. ಆದ್ದರಿಂದ ಕರ್ತೃತ್ವವಿರುವುದು ಸಶರೀರತ್ವದಲ್ಲಲ್ಲ; ಅದಿರುವುದು ಉಪಾದಾನಕಾರಣಗಳು ಪರಿಣಾಮಗಳನ್ನುಂಟುಮಾಡುವಂತೆ ಪ್ರೇರೇಪಿಸುವುದರಲ್ಲಿ.[13] ಈ ರೀತಿ ಪ್ರೇರೇಪಣೆ ಮಾಡುವ ಶಕ್ತಿ ಕರ್ತೃವಿಗೆ ಆವಶ್ಯಕವೇ ಹೊರತು ಶರೀರವಲ್ಲ. ಆದ್ದರಿಂದ ಕರ್ತೃ ಸಶರೀರಿಯಾಗಿರಬಹುದು; ಶರೀರರಹಿತನೂ ಆಗಿರಬಹುದು. ಅಶರೀರಿಯಾದ ಆತ್ಮ ದೃಗ್ಗೋಚರವಾದ ದೇಹಾದಿ ಪದಾರ್ಥಗಳನ್ನು ಪ್ರೇರೇಪಿಸುವಂತೆ ಈಶ್ವರನೂ ಅಶರೀರಿಯಾದರೂ ಅಣುಗಳಲ್ಲಿ ಚಲನೆ ಇತ್ಯಾದಿಗಳನ್ನು ಉಂಟುಮಾಡಬಲ್ಲ.[14]

ಜಗತ್ತಿನ ಉತ್ಪತ್ತಿಗೆ ಪ್ರೇರಣೆ ಬೇಕೆಂದು ಒಪ್ಪಿದರೂ ಜೀವಗಳೇ ಏಕೆ ಅಣುಗಳನ್ನು ಸೃಷ್ಟಿಗೆ ಪ್ರೇರೇಪಿಸಬಾರದು? ಇದು ಅಸಾಧ್ಯವೆಂದು ಶ್ರೀಧರರು ವಾದಿಸುತ್ತಾರೆ. ಏಕೆಂದರೆ ಜೀವಗಳು ಶರೀರಗಳಿಲ್ಲದೆ ಕಾರ್ಯಪ್ರವೃತ್ತವಾಗಲಾರವು. ಅಲ್ಲದೆ ಜೀವಗಳ ಜ್ಞಾನ ಇಂದ್ರಿಯಗಳನ್ನೇ ಅವಲಂಬಿಸಿರುತ್ತದೆ. ಸೃಷ್ಟಿಗೆ ಮುಂಚೆ ಈ ಇಂದ್ರಿಯ ಮತ್ತು ಶರೀರಗಳು ಇರುವುದಾದರೂ ಎಲ್ಲಿ? ಇಂದ್ರಿಯವಿಹೀನವಾದ ಜೀವಗಳು ಜ್ಞಾನವಿಹೀನವೂ ಆಗಿರುವುದರಿಂದ ಅವು ಸೃಷ್ಟಿಕಾರ್ಯವನ್ನು ನಿರ್ದೇಶಿಸಲು ಅಸಮರ್ಥವಾಗಿರುತ್ತವೆ. ಅಣುಗಳು ಸ್ವಯಂ ಅಚೇತನವಸ್ತುಗಳಾದ್ದರಿಂದ ಜೀವಿಗಳಿಂದ ಭಿನ್ನವಾದ ಈಶ್ವರನೆ ಸೃಷ್ಟಿಕಾರ್ಯದ

12 ನ್ಯಾಯಕಂದಲೀ, ಪುಟ ೫೪

13 'ಕರ್ತೃತ್ವಂ ಪರಿದೃಷ್ಟ ಸಾಮರ್ಥ್ಯಕಾರಕಪ್ರಯೋಜಕತ್ವಂ', ನ್ಯಾಯಕಂದಲೀ, ಪುಟ ೫೬

14 'ತಚ್ಚ ಅಶರೀರಸ್ಯಾಪಿ ನಿರ್ವಹತಿ ಯಥಾ ಸ್ವಶರೀರಪ್ರೇರಣಾಯಾಂ ಆತ್ಮನಃ,' ನ್ಯಾಯಕಂದಲೀ, ಪುಟ ೫೬

ನಿರ್ದೇಶಕನಾಗಿರಬೇಕೆಂದು ನಿರ್ಣಯಿಸಬೇಕಾಗುತ್ತದೆ[15] ಈ ಈಶ್ವರ ಕ್ಲೇಶ, ಕರ್ಮಫಲಾನುಭವ ಇತ್ಯಾದಿಗಳನ್ನು ಮೀರಿದ ವಿಶಿಷ್ಟ ಪುರುಷ.[16]

ಗೌತಮರ ನ್ಯಾಯಸೂತ್ರದಲ್ಲಿ ದೇವರ ಬಗ್ಗೆ ಇರುವ ಸೂಚನೆಗಳ ವ್ಯಾಖ್ಯಾನ ಬೇರೆಬೇರೆ ನೈಯಾಯಿಕರಿಂದ ಬೇರೆಬೇರೆ ರೀತಿಯಲ್ಲಿ ಆಗಿದೆ. ಆದರೂ ವಾತ್ಸಾಯನ, ಉದ್ಯೋತಕಾರ ಮತ್ತು ವಾಚಸ್ಪತಿ ಇವರ ಅಭಿಪ್ರಾಯದಲ್ಲಿ ಈ ದರ್ಶನದಲ್ಲಿ ದೇವರು ನಿಮಿತ್ತಕಾರಣ. ದೇವರು ಅಸಂಖ್ಯ ಆತ್ಮಗಳಲ್ಲಿ ವಿಶಿಷ್ಟವಾದ ಗುಣಗಳನ್ನು ಪಡೆದವನು.[17]

ಉದ್ಯೋತಕಾರರು ಈಶ್ವರ ಇದ್ದಾನೆಂದು ಈ ಕೆಳಕಂಡಂತೆ ವಾದಿಸುತ್ತಾರೆ. ಅಚೇತನವಾದ ಅಣುಗಳು ಸ್ವಯಂ ಪ್ರವರ್ತನಶಕ್ತಿಯನ್ನು ಹೊಂದದೆ ಇರುವುದರಿಂದ ಅವುಗಳ ಸಂಯೋಗ ಇತ್ಯಾದಿಗಳಿಗೆ ಕಾರಣನಾದ ಈಶ್ವರ ಇರಬೇಕು.[18] ಪುಣ್ಯ ಪಾಪಗಳ ಜ್ಞಾನವಿಲ್ಲದ ಜೀವಗಳು ಅವುಗಳಿಗನುಗುಣವಾಗಿ ಸುಖ ದುಃಖಗಳನ್ನು ಉತ್ಪತ್ತಿ ಮಾಡಲು ಅಶಕ್ತವಾದ್ದರಿಂದ ಈ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಈಶ್ವರನೊಬ್ಬ ಇರಬೇಕು.[19]

ಯಾವ ವಸ್ತುವೇ ಆಗಲಿ ಅದು ಒಂದು ಕಾರ್ಯವಾಗಿದ್ದರೆ ಅಥವಾ ಅಚೇತನ ಪದಾರ್ಥದಿಂದ ಮಾಡಲ್ಪಟ್ಟಿದ್ದರೆ ಅದಕ್ಕೆ ನಿಮಿತ್ತವಾದ ಚೈತನ್ಯಪೂರ್ಣ ಕರ್ತೃ ಇರಲೇಬೇಕೆಂದು ವಾಚಸ್ಪತಿಯ ವಾದ.[20] ಜಯಂತಭಟ್ಟರಲ್ಲಿ ಉದ್ಯೋತ

---

15 'ತೇಭ್ಯಃ ಪರಃ ಸರ್ವಾರ್ಥದರ್ಶಿಸಹಜಜ್ಞಾನಮಯಃ ಕರ್ತೃಸ್ವಭಾವಃ ಕೋಽಪಿ ಅಧಿಷ್ಠಾತಾ ಕಲ್ಪನೀಯಃ ಚೇತನಂ ಅಧಿಷ್ಠಾತಾರಂ ಅಂತರೇಣಾಽಚೇತನಾನಾಂ ಪ್ರವೃತ್ತ್ಯಭಾವಾತ್,' ನ್ಯಾಯಕಂದಲೀ, ಪುಟ ೫೭

16 'ಕ್ಲೇಶಕರ್ಮವಿಪಾಕಾಶಯೈರಪ್ರಮೃಷ್ಟಃ ಪುರುಷವಿಶೇಷ ಈಶ್ವರಃ,' ನ್ಯಾಯಕಂದಲೀ, ಪುಟ, ೫೮

17 'ಗುಣವಿಶಿಷ್ಟಮಾತ್ಮಾಂತರಮೀಶ್ವರಃ' ವಾತ್ಸ್ಯಾಯನರ ನ್ಯಾಯಭಾಷ್ಯ, IV, ೧.೨೧ ನ್ಯಾಯಸೂತ್ರಂ, ಸಂ: ಗಂಗಾನಾಥ ಝಾ (ಪೂನಾ, ೧೯೩೯), ಪುಟ ೨೫೨ನ್ನೂ ನೋಡಿ.

18 'ಕಃ ಪುನರೀಶ್ವರಸ್ಯ ಕಾರಣತ್ವೇ ನ್ಯಾಯಃ ಅಯಃ ನ್ಯಾಯೋಽಭಿಧೀಯತೇ. ಪ್ರಧಾನಪರಮಾಣುಕರ್ಮಾಣಿ ಪ್ರಾಕ್ಪ್ರವೃತ್ತೇರ್ಬುದ್ಧಿಮತ್ಕಾರಣಾಧಿಷ್ಠಿತಾನಿ ಪ್ರವರ್ತಂತೇ ಅಚೇತನತ್ವಾತ್ ವಾಸ್ಯಾದಿವದಿತಿ,' ನ್ಯಾಯವಾರ್ತಿಕಂ, IV, ೧.೨೧ ಪುಟ ೪೬೧

19 'ಧರ್ಮಾಧರ್ಮೌ ಬುದ್ಧಿಮತ್ಕಾರಣಾಧಿಷ್ಠಿತೌ ಪುರುಷಸ್ಯೋಪಭೋಗಂ ಕುರುತಃ ಕರಣತ್ವಾತ್ ವಾಸ್ಯಾದಿವದಿತಿ,' ನ್ಯಾಯವಾರ್ತಿಕಂ, IV, ೧.೨೧. ಪುಟ ೪೬೩

20 'ತರುಮಹೀಧರಾದಯ ಉಪಾದಾನಾಭಿಜ್ಞಕರ್ತೃಕಾ ಉತ್ಪತ್ತಿಮತ್ತ್ವಾತ್ ಅಚೇತನೋಪಾದಾನತ್ವಾತ್ ವಾ,' ವಾಚಸ್ಪತಿ ಮಿಶ್ರರ ನ್ಯಾಯವಾರ್ತಿಕತಾತ್ಪರ್ಯಟೀಕಾ, IV, ೧, ೨೧, Vizianagaram Sanskrit Series (೧೮೯೮), ಪುಟ ೪೨೧

ಕಾರರಲ್ಲಿರುವಂತೆಯೆ ಎರಡು ವಿಧವಾದ ವಾದಗಳೂ ಕಂಡುಬರುತ್ತವೆ. ಜೊತೆಗೆ ಜಗತ್ತಿನಲ್ಲಿ ಕಂಡುಬರುವ ಕ್ರಮಪ್ರಕಾರವಾದ ಜೋಡಣೆ ಬುದ್ಧಿಪೂರ್ವಕವಾದ ಚೈತನ್ಯದ ಲಕ್ಷಣವೆಂಬ ವಾದವೂ ಇದೆ.[21] ಮನುಷ್ಯನಿರ್ಮಿತವಾದ ಜೋಡಣೆಗೂ ಪ್ರಾಕೃತಿಕವಾದ ಕ್ರಮಬದ್ಧತೆಗೂ ವ್ಯತ್ಯಾಸವಿರುವುದೆಂದು ಇದಕ್ಕೆ ಯಾರಾದರೂ ಆಕ್ಷೇಪಿಸಬಹುದು. ಆದರೆ ಜೋಡಣೆ ಯಾವ ವಿಧವಾದ್ದೇ ಆಗಿರಲಿ ಅದು ಒಬ್ಬ ಕರ್ತೃವಿಗೆ ಅನಿವಾರ್ಯವಾಗಿ ಸಂಬಂಧಿಸಿರಲೇಬೇಕೆಂದು ಜಯಂತರು ವಾದಿಸುತ್ತಾರೆ. ಪಾಕಶಾಲೆಯಲ್ಲಿ ಬೆಂಕಿಯಿಂದ ಹೊಗೆ ಬರುವುದಕ್ಕೂ ಕಾಡ್ಗಿಚ್ಚಿನಿಂದ ಬರುವುದಕ್ಕೂ ಎಷ್ಟೇ ವ್ಯತ್ಯಾಸವಿದ್ದರೂ ಬೆಂಕಿಗೂ ಹೊಗೆಗೂ ಇರುವ ವ್ಯಾಪ್ತಿಸಂಬಂಧದಿಂದಾಗಿ ನಮಗೆ ತೀರ್ಮಾನಕ್ಕೆ ಬರಲು ತೊಂದರೆಯಾಗುವುದಿಲ್ಲ. ಜೋಡಣೆ ಯಾವುದೇ ವಿಧವಾಗಿದ್ದರೂ ಅದಕ್ಕೂ ಅದರ ಕರ್ತೃವಿಗೂ ಇರುವ ಸಂಬಂಧ ಇಂಥದೇ.[22]

ಉದಯನಾಚಾರ್ಯರು ಕೊಡುವ ಕಾರಣಗಳು ಹೀಗಿವೆ : ಜಗತ್ತು ಒಂದು ಕಾರ್ಯವಾದ್ದರಿಂದ ಅದಕ್ಕೆ ಕಾರಣವಾದ ಈಶ್ವರ ಇರಬೇಕು. ಅಚೇತನವಾದ ಅಣುಗಳ ಸಂಯೋಗಕ್ಕೂ ಈ ಸಂಯೋಗದಿಂದ ಸೃಷ್ಟಿಯಾದ ಜಗತ್ತಿನ ಧಾರಣೆ, ಸಂಹಾರಗಳಿಗೂ ಪದ, ವಿಧಿ, ಪ್ರತ್ಯಯ, ಶ್ರುತಿ, ವಾಕ್ಯ, ಸಂಖ್ಯಾವಿಶೇಷಗಳಿಗೂ ಕಾರಣನಾದ ಈಶ್ವರ ಇರಬೇಕು.[23]

ದೇವರೇ ಸಕಲ ಕುಶಲಕಲೆಗಳಿಗೂ ಭಾಷೆಗೂ ಜನ್ಮದಾತ. ಇವುಗಳನ್ನು ನಾವು ಹಿರಿಯರಿಂದ ಕಲಿಯಬಹುದು. ಆದರೆ ಇವುಗಳ ಮೂಲ ಕರ್ತೃ ಈಶ್ವರನೇ. ವೇದಗಳಿಗೂ ಅವುಗಳಲ್ಲಿ ಹೇಳಿರುವ ನಾವು ಅನುಸರಿಸಬೇಕಾದ ವಿಧಿಗಳಿಗೂ ಈಶ್ವರನೇ ಕರ್ತೃ. ನಾಸ್ತಿಕರ ಅನೇಕ ಆಕ್ಷೇಪಣೆಗಳಿಗೆ ಉದಯನರು ಕೊಟ್ಟಿರುವ ಉತ್ತರಗಳಲ್ಲಿ ಒಂದು ಸ್ವಾರಸ್ಯವಾದ ಉತ್ತರವನ್ನು ಇಲ್ಲಿ ತಿಳಿಸಬಹುದು. 'ದೇವರು ಗೋಚರನಲ್ಲವಾದ್ದರಿಂದ ಇಲ್ಲ'—ಇದು ಆಕ್ಷೇಪಣೆ. 'ಗೋಚರಿಸಬಹುದಾದ (ಅಂದರೆ ಇಂದ್ರಿಯಗೋಚರವಾದ)ವಸ್ತುಗಳು ಗೋಚರಿಸದೆ ಇದ್ದರೆ

---

21 'ಯದ್ವತ್ ಸನ್ನಿವೇಶವಿಶಿಷ್ಟಂ ತತ್ತದ್ ಬುದ್ಧಿಮತ್ಕರ್ತೃಕಮ್', ನ್ಯಾಯಮಂಜರಿ, ಸಂ: ಸೂರ್ಯನಾರಾಯಣ ಶರ್ಮಶುಕ್ಲ, (ಕಾಶೀ, ಶಕ ೧೯೯೩), ಪುಟ ೧೮೧

22 'ಅಥ ವಿಶೇಷರಹಿತಂ ಧೂಮಮಾತ್ರಮಗ್ನಿಮಾತ್ರೇಣ ವ್ಯಾಪ್ತಂ ಅವಗತಮಿತಿ ತತಸ್ತದನುಮಾನಂ ಇಹಾಪಿ ಸನ್ನಿವೇಶಮಾತ್ರಂ ಕರ್ತೃಮಾತ್ರೇಣ ವ್ಯಾಪ್ತಮಿತಿ ತತೋಽಪಿ ತದನುಮೀಯತಾಂ', ನ್ಯಾಯಮಂಜರಿ, ಪುಟ ೧೭೯

23 'ಕಾರ್ಯಾಯೋಜನಧೃತ್ಯಾದೇಃ ಪದಾತ್ ಪ್ರತ್ಯಯತಃ ಶ್ರುತೇಃ
ವಾಕ್ಯಾತ್ ಸಂಖ್ಯಾ ವಿಶೇಷಾಚ್ಚ ಸಾಧ್ಯೋ ವಿಶ್ವವಿದವ್ಯಯಃ ॥'
ನ್ಯಾಯಕುಸುಮಾಂಜಲಿ (ಚೌಖಾಂಬಾ), V. ೧. ಪುಟ ೪೭೯

ಅವು ಇಲ್ಲವೆಂದು ತಿಳಿಯಬಹುದು.[24] ಆದರೆ ಈಶ್ವರ ಸ್ವಭಾವತಃ ಇಂದ್ರಿಯಗಳಿಗೆ ಅಗೋಚರನಾದ್ದರಿಂದ ಅವನು ಇಲ್ಲವೆಂದು ತರ್ಕಿಸುವುದು ತಪ್ಪಾಗುತ್ತದೆ.

ಈ ಜಗತ್ತು ಒಂದು ಪರಿಣಾಮ ಎಂದಾದರೂ ಏಕೆ ಒಪ್ಪಿಕೊಳ್ಳಬೇಕು? ಇದು ಸಿದ್ಧಾಂತವಾಗದೆ ಈಶ್ವರ ಜಗತ್ಕಾರಣನೆಂದು ಹೇಗೆ ಒಪ್ಪಲು ಸಾಧ್ಯ? ಇದಕ್ಕೆ ಜಯಂತಭಟ್ಟರು ಉತ್ತರ ನೀಡಿದ್ದಾರೆ. ಚಾರ್ವಾಕರೂ ವೇದಗಳೂ ಕುಟಿಲ ಬುದ್ಧಿಯ ಪುರೋಹಿತರ ಕಾರ್ಯವೆಂದು ಹೇಳುತ್ತಾರೆ. ಹೀಗಿರುವಾಗ ಜಗತ್ತಿನಲ್ಲಿರುವ ವಸ್ತುಗಳೂ ಇದೇ ಸ್ವಭಾವದವೆಂದು ಅವರು ಒಪ್ಪದಿರುವುದು ಹೇಗೆ ಸಾಧ್ಯ? ಸೃಷ್ಟಿಯಾದದ್ದೆಲ್ಲವೂ ನಾಶವಾಗಬೇಕೆಂದು ಮೀಮಾಂಸಕರೂ ಹೇಳುತ್ತಾರೆ. ಆದ್ದರಿಂದ ಸೃಷ್ಟಿಯಾಗಿ ಅನಂತರ ನಾಶವಾಗುವ ಈ ಪ್ರಪಂಚದಲ್ಲಿನ ವಸ್ತುಗಳು ಪರಿಣಾಮಗಳೇ (ಕಾರ್ಯ) ಅಲ್ಲವೆ? ಬೌದ್ಧರೂ ಎಲ್ಲ ವಸ್ತುಗಳೂ ಕ್ಷಣಿಕವೆಂದು ಹೇಳುವಾಗ ಅವು ಸೃಷ್ಟಿಯಾಗಿ ನಾಶವಾಗುತ್ತವೆಂದು ನಂಬುತ್ತಾರೆ. ಆದ್ದರಿಂದ ಅವರೂ ಈ ಜಗತ್ತು ಒಂದು ಪರಿಣಾಮವೆಂದು ಒಪ್ಪಿದಂತಾಯಿತು. ಪರಿಣಾಮಗಳಿಗೆ ಕಾರಣ ಇರಲೇಬೇಕು ಮತ್ತು ಈ ಕಾರಣ ಚೈತನ್ಯಸ್ವರೂಪವೂ ಅಶರೀರಿಯೂ ಆಗಿರಬೇಕು—ಎಂಬ ವಾದವನ್ನು ಆಗಲೇ ಗಮನಿಸಿದ್ದೇವೆ.[25]

ಯೋಗದರ್ಶನದ ಪ್ರವರ್ತಕರಾದ ಪತಂಜಲಿಗಳು ದೇವರು ಇದ್ದಾನೆಂದು ಈ ರೀತಿಯಲ್ಲಿ ವಾದಿಸುತ್ತಾರೆ: ಜ್ಞಾನದಲ್ಲಿ ವಿವಿಧ ಮಟ್ಟಗಳಿವೆ. ಕೆಲವರು ಹೆಚ್ಚು ಜ್ಞಾನಿಗಳೂ ಕೆಲವರು ಕಡಿಮೆ ಜ್ಞಾನಿಗಳೂ ಇನ್ನು ಕೆಲವರು ಅಜ್ಞಾನಿಗಳೂ ಆಗಿರುತ್ತಾರೆ. ಸರ್ವಜ್ಞತ್ವವನ್ನುಳ್ಳ ವ್ಯಕ್ತಿಯೇ ಈಶ್ವರ.[26] ಭಾಷ್ಯಕಾರರಾದ ವ್ಯಾಸರು ಈಶ್ವರ ವೇದಗಳ ಸೃಷ್ಟಿಕರ್ತನಾದ್ದರಿಂದ ಅವನು ಇರಲೇಬೇಕೆಂದು ವಾದಿಸುತ್ತಾರೆ. ಯೋಗದಲ್ಲಿ ದೇವರು ಪ್ರಕೃತಿಯ ಸಮಸ್ಥಿತಿಯನ್ನು ಭಂಗಪಡಿಸಿ ಸೃಷ್ಟಿಗೆ ಕಾರಣನಾಗುತ್ತಾನೆ. ಆದರೆ ಈ ಕೆಲಸದಲ್ಲಿ ಅವನ ಪಾತ್ರ ಸಕ್ರಿಯ. ಪ್ರಕೃತಿ ತಾನಾಗಿಯೇ ವಿಕಾಸವಾಗುತ್ತ ಹೋಗುತ್ತದೆ. ಅದಕ್ಕೆ ಇರುವ ಪ್ರತಿಬಂಧಕಗಳನ್ನು ನಿವಾರಿಸುವುದಷ್ಟೇ ಈಶ್ವರನ ಕೆಲಸ (ಪ್ರತಿಬಂಧಾಪನಯನ). ಪಾಪಪುಣ್ಯಗಳಾಗಲಿ ಪುರುಷಾರ್ಥವಾಗಲಿ ಪ್ರಕೃತಿಯ ವಿಕಾಸಕ್ಕೆ ನಿಮಿತ್ತಕಾರಣಗಳಾಗಲು ಅಸಾಧ್ಯವಾದ್ದರಿಂದ ವ್ಯಾಸ ಮತ್ತು ಭೋಜರು ಒಪ್ಪದೆ ಇದ್ದ ಈಶ್ವರ

---

24 '...ದೃಶ್ಯಮಾತ್ರನಿಯತತ್ವಾತ್ ಪ್ರತ್ಯಕ್ಷಬಾಧಸ್ಯ,' ಉದಯನರ ಆತ್ಮತತ್ತ್ವವಿವೇಕ, ಚತುರ್ಥ ಪರಿಚ್ಛೇದ (ಚೌಖಾಂಬಾ), ೧೯೪೦

25 ಮೇಲೆ ೧೪ ನೋಡಿ. ನ್ಯಾಯಮಂಜರಿಯಲ್ಲಿನ 'ಈಶ್ವರಸ್ಯಾಶರೀರತ್ವಂ' ಎಂಬ ಭಾಗವನ್ನೂ (ಪುಟ ೧೮೫–೧೮೮) ನೋಡಿ.

26 'ತತ್ರ ನಿರತಿಶಯಂ ಸರ್ವಜ್ಞಬೀಜಮ್,' ಯೋಗಸೂತ್ರ, I, ೨೫, Woods ಅವರ Yoga System of Patanjali ಯ (Harvard Oriental Series) ಪುಟ ೫೫–೫೯ನ್ನೂ ನೋಡಿ.

ನಿಮಿತ್ತತ್ವವನ್ನು ವಾಚಸ್ಪತಿಗಳು ಒಪ್ಪಿಕೊಳ್ಳುತ್ತಾರೆ.[27] ಈಶ್ವರ ತಡೆಗಳನ್ನು ನಿವಾರಿಸಿ (ಅಖಿಲಾವರಣಭಂಗ) ಪ್ರಕೃತಿಯ ವಿಕಾಸಕ್ಕೆ ನೆರವಾಗುತ್ತಾನೆಂದು ವಿಜ್ಞಾನಭಿಕ್ಷುವೂ ನಂಬುತ್ತಾರೆ.[28]

ಯೋಗವನ್ನು ಸೇಶ್ವರಸಾಂಖ್ಯವೆಂದೂ ಕರೆಯುತ್ತಾರೆ. ಸರ್ವದರ್ಶನ ಸಂಗ್ರಹದಲ್ಲಿ ಪತಂಜಲಿಗಳನ್ನು ಸೇಶ್ವರಸಾಂಖ್ಯಪ್ರವರ್ತಕರೆಂದು ಕರೆಯಲಾಗಿದೆ.[29] ನಿರೀಶ್ವರಸಾಂಖ್ಯದಲ್ಲಿ ಒಪ್ಪಿರುವ ಪ್ರಕೃತಿ ಅಚೇತನವಾದುದರಿಂದಲೂ ಪುರುಷ ನಿಷ್ಕ್ರಿಯನಾದ್ದರಿಂದಲೂ ಸೃಷ್ಟಿಕಾರ್ಯಕ್ಕೆ ನಿಮಿತ್ತವಾಗಿ ಇಲ್ಲಿ ಈಶ್ವರನನ್ನು ಒಪ್ಪಿದಂತೆ ಕಂಡುಬರುತ್ತದೆ. ಆದರೆ ಸಾಂಖ್ಯದರ್ಶನದಲ್ಲಿ ಈಶ್ವರನ ಅಸ್ತಿತ್ವವನ್ನು ಒಪ್ಪದೆ ಸೃಷ್ಟಿ ಇತ್ಯಾದಿ ವ್ಯಾಪಾರಗಳನ್ನು ವಿವರಿಸುವ ಯತ್ನವಿದೆ.

ಸಾಂಖ್ಯದಲ್ಲಿ ಈ ಜಗತ್ತು ಒಂದು ಪರಿಣಾಮ ಎಂಬ ವಾದವನ್ನು ಒಪ್ಪಿ ಇದಕ್ಕೆ ನಿಮಿತ್ತವಾದ ಚೈತನ್ಯವೊಂದು ಇರಬೇಕೆಂಬ ವಾದವನ್ನು ನಿರಾಕರಿಸ ಲಾಗಿದೆ. ಪ್ರಕೃತಿಯೇ ಜಗತ್ತಿನ ಮೂಲ. ಸತ್ವ, ರಜಸ್, ತಮಸ್‌ಗಳಿಂದೊಡ ಗೂಡಿದ ಪ್ರಕೃತಿ ಸಂಪೂರ್ಣವಾಗಿ ಅಚೇತನ, ಸ್ವಯಂಚಾಲಿತ ಪದಾರ್ಥ. ಇದರಲ್ಲಿ ಯಾರೂ ಚಲನೆಯನ್ನು ಉಂಟುಮಾಡುವುದಿಲ್ಲ. ಚೇತನಸ್ವರೂಪರಾದ ಪುರುಷರನ್ನು ಸಾಂಖ್ಯ ಒಪ್ಪಿಕೊಂಡರೂ ಅವರೆಲ್ಲ ಸಂಪೂರ್ಣರಾಗಿ ನಿಷ್ಕ್ರಿಯರು. ಅವರ ಸಾನ್ನಿಧ್ಯದಲ್ಲಿ ಪ್ರಕೃತಿಯಲ್ಲಿ ತುಮುಲವೆದ್ದು ಸೃಷ್ಟಿಕಾರ್ಯ ಪ್ರಾರಂಭ ವಾದರೂ ಪುರುಷರು ಮಾತ್ರ ಇದಕ್ಕೆ ಕಾರಣರಲ್ಲ. ಪ್ರಕೃತಿ ವಿಕಾಸಹೊಂದುವುದು ಪುರುಷರ ಭೋಗ ಮತ್ತು ಮೋಕ್ಷಾರ್ಥವಾಗಿ. ಆದರೆ ಪ್ರಕೃತಿ ಅಚೇತನವಾದ್ದರಿಂದ ಅದಕ್ಕೆ ಇದರ ಪರಿವೆಯೇ ಇಲ್ಲ, ಅಷ್ಟೆ. ಒಂದು ವೇಳೆ ದೇವರೇ ಸೃಷ್ಟಿಕರ್ತ ನಾದರೂ ಅವನ ಈ ಕಾರ್ಯಕ್ಕೆ ಸ್ವಾರ್ಥವೋ ಕಾರುಣ್ಯವೋ ಕಾರಣವಾಗಿರ ಬೇಕು. ಸದಾ ಪರಿಪೂರ್ಣನಾದ ಈಶ್ವರನಲ್ಲಿ ಅಪೂರ್ಣ ಕಾಮನೆಗಳಿರಲು ಸಾಧ್ಯ ವಿಲ್ಲವಾದ್ದರಿಂದ ಸ್ವಾರ್ಥವೂ ಸೃಷ್ಟಿಗೆ ಮುಂಚೆ ಜೀವಿಗಳೇ ಇರುವುದಿಲ್ಲವಾದ್ದರಿಂದ ಕಾರುಣ್ಯವೂ ಅಸಾಧ್ಯವಾಗುತ್ತವೆ.

ಆದರೆ ಜೀವಿಗಳ ಪಾಪಪುಣ್ಯಗಳಿಂದಾಗಿ ಸೃಷ್ಟಿ ಆವಶ್ಯಕವಾಗುವುದಿಲ್ಲವೆ? ಅನಿರುದ್ಧರ ಪ್ರಕಾರ ಇದು ಸರಿಯಾದ ವಾದವಲ್ಲ. ಪಾಪಪುಣ್ಯಗಳಿಗಾಗಿಯೇ ಸೃಷ್ಟಿಯೆಂದಾದರೆ ಅವುಗಳೇ ಸೃಷ್ಟಿಗೆ ಕಾರಣ; ದೇವರಲ್ಲ. ಅಲ್ಲದೆ ದೇವರು ಸ್ವತಂತ್ರ ಕರ್ತನೇ ಆಗಿದ್ದಲ್ಲಿ ಅವನು ಪಾಪಪುಣ್ಯಗಳ ನೆರವಿಲ್ಲದೆ ಸೃಷ್ಟಿಸಲು

---

27 ತತ್ತ್ವವೈಶಾರದೀ, IV, ೩, Woodsರ ಪುಸ್ತಕದ ಪುಟ ೩೦೨ ನೋಡಿ.

28 'ಈಶ್ವರಸ್ತು ಸಾಮ್ಯಪರಿಣಾಮಾದಿರೂಪಾಖಿಲಾವರಣಭಂಗೇನೋದ್ಬೋದಕಃ,' ಯೋಗವಾರ್ತಿಕಂ, IV, ೩ (ಕಾಶಿ, ೧೮೮೪) ಪುಟ ೨೬೧

29 ಸರ್ವದರ್ಶನಸಂಗ್ರಹ, ಇಂಗ್ಲಿಷ್ ಅನು : Cowell and Gough (London, ೧೯೧೪) ಪುಟ ೨೩೧

ಶಕ್ತನಾಗಿರಬೇಕು. ದೇವರ ಅಸ್ತಿತ್ವ ಪ್ರತ್ಯಕ್ಷ, ಅನುಮಾನ ಅಥವಾ ಶಬ್ದದಿಂದ ಸಿದ್ಧವಾಗುವುದಿಲ್ಲ. ವೇದದಲ್ಲಿರುವ ವರ್ಣನೆಗಳು ಅಲೌಕಿಕ ಶಕ್ತಿಗಳಿರುವ ಮುಕ್ತಾತ್ಮಗಳ ಪ್ರಶಂಸೆಯೇ ಹೊರತು ಈಶ್ವರವರ್ಣನೆಯಲ್ಲ.[30]

ವಿಜ್ಞಾನಭಿಕ್ಷುಗಳ ಪ್ರಕಾರ ಸಾಂಖ್ಯ ಈಶ್ವರನನ್ನು ನಿರಾಕರಿಸುವುದಿಲ್ಲ. ಸಾಂಖ್ಯಸೂತ್ರ ಈಶ್ವರನ ಅಸ್ತಿತ್ವಕ್ಕೆ ಸಿದ್ಧಾಂತದ ಅಭಾವವಿದೆ (ಈಶ್ವರಾಸಿದ್ಧೇಃ) ಎನ್ನುವುದೇ ಹೊರತು ಈಶ್ವರನ ಅಭಾವವನ್ನು ಹೇಳುವುದಿಲ್ಲ.[31]

ಮೀಮಾಂಸಾ ದರ್ಶನದ ಕರ್ತೃವಾದ ಜೈಮಿನಿಗಳು ದೇವರ ಬಗ್ಗೆ ಏನನ್ನೂ ಹೇಳುವುದಿಲ್ಲ. ಕುಮಾರಿಲ ಮತ್ತು ಪ್ರಭಾಕರರಲ್ಲಿಯೂ ದೇವರ ಬಗ್ಗೆ ಮಾರ್ದವತೆ ಇಲ್ಲ. ಅವರ ಪ್ರಕಾರ ದೇವರು ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣನಲ್ಲ. ಪಾಪ ಪುಣ್ಯಗಳಿಗೆ ತಕ್ಕ ಫಲಗಳನ್ನು ನಿಯಂತ್ರಿಸಿ ನೀಡುವವನು ಈಶ್ವರನಲ್ಲ. ವೇದಗಳ, ವಿಧಿನಿಯಮಗಳ ಸೃಷ್ಟಿಕರ್ತನಂತೂ ಅಲ್ಲವೇ ಅಲ್ಲ.

ದೇವರ ಅಸ್ತಿತ್ವ ಅಸಾಧ್ಯವೆಂದು ಕುಮಾರಿಲರು ಹೀಗೆ ವಾದಿಸುತ್ತಾರೆ: ದೇವರು ಸೃಷ್ಟಿಕರ್ತನಾಗಿದ್ದರೆ ಅವನು ಸಶರೀರಿಯಾಗಿರಬೇಕು. ಮನಸ್ಸು–ಇಂದ್ರಿಯಗಳೊಂದಿಗೆ ಆತ್ಮ ಸಂಪರ್ಕಕ್ಕೆ ಬಾರದಿದ್ದರೆ ಇಚ್ಛೆ ಅಸಾಧ್ಯವಾದ್ದರಿಂದ ಸೃಷ್ಟಿಸುವ ಇಚ್ಛೆಯಿರುವ ಈಶ್ವರ ಸಶರೀರಿಯಾಗಿರಬೇಕು. ಆದ್ದರಿಂದ ಸೃಷ್ಟಿಗೆ ಮುಂಚೆಯೇ ಈಶ್ವರನ ಶರೀರ ಇರಬೇಕಾಗುತ್ತದೆ. ಈ ಶರೀರವನ್ನು ಅವನೇ ಸೃಷ್ಟಿಸಿಕೊಳ್ಳಲು ಅಸಾಧ್ಯ. ಅದನ್ನು ಇನ್ನೊಬ್ಬ ಈಶ್ವರ ಸೃಷ್ಟಿಸಿರಬೇಕು. ಆದರೆ ಸೃಷ್ಟಿಸಲು ಆ ಇನ್ನೊಬ್ಬ ಈಶ್ವರನಿಗೂ ಶರೀರ ಬೇಕಷ್ಟೆ? ಅದನ್ನು ಮತ್ತೊಬ್ಬ ಈಶ್ವರ ಸೃಷ್ಟಿಸಿರಬೇಕು. ಈ ತರ್ಕ ಕೊನೆಮುಟ್ಟುವುದಿಲ್ಲವಾದ್ದರಿಂದ ಅನವಸ್ಥಾದೋಷಕ್ಕೆ ಈಡಾಗುತ್ತದೆ. ಆದರೆ ದೇವರ ಶರೀರ ಸೃಷ್ಟಿತವಾಗದೆ ನಿತ್ಯವಾದದ್ದೇ ಆಗಿರಬಹುದಲ್ಲ? ಆಗ ಅದು ಜಡವಾಗಿರಲು ಸಾಧ್ಯವಿಲ್ಲ. ಏಕೆಂದರೆ ಸೃಷ್ಟಿಗೆ ಮುಂಚೆ ಪೃಥ್ವಿ ಮುಂತಾದ ತತ್ತ್ವಗಳು (ಶರೀರ ಮಾಡಲು ಬೇಕಾದವು) ಇರುವುದಿಲ್ಲ. ಅಲ್ಲದೆ ಅವನ ಶರೀರ ಜಡವಾಗಿದ್ದರೆ ಅದು ನಿತ್ಯವಾಗಿರಲು ಸಾಧ್ಯವಿಲ್ಲ. ಏಕೆಂದರೆ ಆಗ ನಮ್ಮ ದೇಹಗಳೂ ಜಡವಾದ್ದರಿಂದ ಅವೂ ನಿತ್ಯ ವಸ್ತುಗಳೇ ಆಗಬೇಕಾಗುತ್ತದೆ. ದೇವರು ತನ್ನ ದೇಹವನ್ನು ತಾನೇ ಸೃಷ್ಟಿಸಿಕೊಂಡನೆಂದರೆ ಅವನು ನಿಶ್ಶರೀರಿಯಾಗಿಯೇ ಆ ಕೆಲಸವನ್ನು ಮಾಡಿರಬೇಕು. ಆದರೆ ನಿಶ್ಶರೀರಿಯಾದ ದೇವರು ನಿಶ್ಶರೀರಿಯಾದ ಆತ್ಮ (ಮುಕ್ತ ಆತ್ಮ)ದಂತೆಯೇ

---

[30] Sānkhya Sutras with Aniruddha's Commentary, Tr: Richard Garbe (Calcutta ೧೮೯೨), i, ೯೫ ; ಪುಟ ೫೪–೫೫

[31] 'ಈಶ್ವರೇ ಪ್ರಮಾಣಾಭಾವಾನ್ನದೋಷ ಇತ್ಯನುವರ್ತತೇ,' ಸಾಂಖ್ಯಪ್ರವಚನಭಾಷ್ಯ, I, ೯೩ (Harvard Oriental Series, ೧೯೪೩), ಪುಟ ೪೬

ಇರುವುದರಿಂದ ಮುಕ್ತ ಆತ್ಮದಂತೆಯೇ ಅವನಿಗೂ ದೇಹಾಧಿಪತ್ಯ ಸಾಧ್ಯವಿಲ್ಲ. ದೇಹವಿಲ್ಲದೆ ಈಶ್ವರ ತನ್ನ ಇಚ್ಛೆಯಿಂದ ಅಚೇತನ ಅಣುಗಳು ಸೃಷ್ಟಿ ಅಥವಾ ಪ್ರಳಯದಲ್ಲಿ ತೊಡಗುವಂತೆ ಮಾಡಲು ಸಾಧ್ಯವಿಲ್ಲ. ಆದರೆ ಈಶ್ವರನಿಗೆ ದೇಹವಿರುವುದೂ ಸಾಧ್ಯವಿಲ್ಲ. ಆದ್ದರಿಂದ ಸೃಷ್ಟಿ ಮೊದಲಾದ ಘಟನೆಗಳಿಗೆ ಈಶ್ವರ ಕಾರಣನಲ್ಲ.[32]

ದೇವರು ಜೀವಿಗಳ ಪಾಪ ಪುಣ್ಯಗಳಿಗನುಸಾರವಾಗಿ ಯೋಗ್ಯ ಜಗತ್ತೊಂದನ್ನು ನಿರ್ಮಿಸುತ್ತಾನೆ ಎಂಬ ವಾದಕ್ಕೂ ಕುಮಾರಿಲರ ಆಕ್ಷೇಪವಿದೆ. ಪ್ರಳಯವೆಂದರೆ ಸರ್ವನಾಶವಾದ್ದರಿಂದ ಆ ಸಂದರ್ಭದಲ್ಲಿ ಕರ್ಮ ಪುಣ್ಯ ಪಾಪಾದಿಗಳೆಲ್ಲವೂ ನಾಶವಾಗಬೇಕು. ಹೀಗೆ ನಾಶವಾದದ್ದರ ಪುನರುತ್ಪತ್ತಿ ಸಾಧ್ಯವಿಲ್ಲ. ಅಲ್ಲದೆ ದೇವರು ನಿಜವಾಗಿಯೂ ಸರ್ವಜ್ಞನೂ ಸರ್ವಶಕ್ತನೂ ಆಗಿದ್ದರೆ ಕರ್ಮಾದಿಗಳ ನೆರವು ಇಲ್ಲದೆಯೇ ಸೃಷ್ಟಿಸಬೇಕು. ಅವುಗಳ ನೆರವನ್ನು ಅಪೇಕ್ಷಿಸಿದರೆ ಅವನ ಸರ್ವಜ್ಞತ್ವ, ಸರ್ವಶಕ್ತಿತ್ವಗಳಿಗೆ ಬಾಧೆಬರುತ್ತದೆ. ಅಲ್ಲದೆ ದೇವರು ಸೃಷ್ಟಿ ಅಥವಾ ಲಯಕರ್ತನೆಂದು ನಂಬಲು ಆಧಾರಗಳಿಲ್ಲ. ಈ ವಿಷಯದಲ್ಲಿ ದೇವರು ಹೇಳುವುದನ್ನು ನಂಬಲು ಆಗುವುದಿಲ್ಲ. ಏಕೆಂದರೆ ಅವನು ಸುಳ್ಳಾಡಬಹುದು. ಸೃಷ್ಟಿ ಅಥವಾ ಪ್ರಳಯ ಕಾರ್ಯವನ್ನು ನೋಡುವ ಸಾಕ್ಷಿದಾರರು ಯಾರೂ ಇಲ್ಲದಿರುವುದರಿಂದ ದೇವರೇ ಇವನ್ನು ಮಾಡುತ್ತಾನೆಂದು ನಂಬಲು ಆಗುವುದಿಲ್ಲ. ಸೃಷ್ಟಿಗೆ ಕಾರುಣ್ಯ ಕಾರಣವೆಂದರೆ ಸೃಷ್ಟಿಗೆ ಮುಂಚೆ ಜೀವಿಗಳೇ ಇರುವುದಿಲ್ಲವಾದ್ದರಿಂದ ಅವುಗಳ ಬಗ್ಗೆ ಕಾರುಣ್ಯ ಸಾಧ್ಯವಿಲ್ಲ. ಅಲ್ಲದೆ ಈಶ್ವರ ಕರುಣಾಮಯನಾಗಿದ್ದರೆ ಇಷ್ಟೊಂದು ದುಃಖದಿಂದ ತುಂಬಿದ ಜಗತ್ತನ್ನು ಏಕೆ ಸೃಷ್ಟಿಸುತ್ತಿದ್ದ? ದುಃಖರಹಿತವಾದ ಜಗತ್ತನ್ನು ಸೃಷ್ಟಿಸದಿದ್ದರೆ ಅವನು ಕರುಣಾಳುವಲ್ಲ. ಸೃಷ್ಟಿಸಲಾರನೆಂದರೆ ಸರ್ವಶಕ್ತನಲ್ಲ. ಕರ್ಮನಿಯಮ, ಸ್ವಾಭಾವಿಕ ನಿಯಮಗಳಿಗನುಸಾರವಾಗಿ ಸೃಷ್ಟಿಸಿದರೆ ಸ್ವತಂತ್ರನಲ್ಲ. ಉದ್ದೇಶವೇ ಇಲ್ಲದೆ ಸೃಷ್ಟಿಸಿದ್ದರೆ ಬುದ್ಧಿಹೀನ; ಉದ್ದೇಶವಿದ್ದರೆ ಅಥವಾ ಕ್ರೀಡಾರ್ಥವಾಗಿ ಸೃಷ್ಟಿಸಿದರೂ ಅಪರಿಪೂರ್ಣ.[33]

ಮೀಮಾಂಸಕರ ಪ್ರಕಾರ ದೇವರು ವೇದಗಳ ಸೃಷ್ಟಿಕರ್ತನಲ್ಲ. ನೈಯಾಯಿಕರು ಹೇಳುವಂತೆ ಭಾಷೆಗೆ ಮೂಲವಾದ ಸಂಕೇತಗಳ ಸೃಷ್ಟಿ ದೇವರಿಂದ ಆದುದಲ್ಲ.[34] ಅಕ್ಷರಗಳು, ವರ್ಣಗಳು ಮತ್ತು ವೇದಗಳಲ್ಲಿ ಇವುಗಳ ವಿಶಿಷ್ಟ ಜೋಡಣೆ, ಶಬ್ದ ಮತ್ತು ಅರ್ಥಗಳ ಸಂಬಂಧ ಇವೆಲ್ಲವೂ ಸ್ವಾಭಾವಿಕ ಹಾಗೂ

---

[32] [33], ಶ್ಲೋಕವಾರ್ತಿಕಂ (ಇಂಗ್ಲಿಷ್ ಅನು: ಗಂಗಾನಾಥ ಝಾ) ೧೬ನೆಯ ಪರಿಚ್ಛೇದ: ಸಂಬಂಧಾಕ್ಷೇಪಪರಿಹಾರ: ಪುಟ ೩೫೫-೩೬೮

[34] 'ತೇನಾನಾದಿರೇವ ವೃದ್ಧಪರಂಪರಾಶಬ್ದಾರ್ಥಾವಗಮೋ, ಹೇತುರ್ನ ಸೃಷ್ಟ್ಯಾದ್ಯಾವೀಶ್ವರಕೃತಃ ಸಂಕೇತಃ' ಶಾಲಿಕನಾಥರ 'ಪ್ರಕರಣಪಂಚಿಕಾ,' ಪುಟ ೧೪೯

ನಿತ್ಯ. ವೇದಗಳು ಅಪೌರುಷೇಯ ಮತ್ತು ನಿತ್ಯ. ಕರ್ಮನಿಯಮವೇ ಸೃಷ್ಟಿಸಿ ಸಮರ್ಪಕ ವಿವರಣೆ ನೀಡಬಲ್ಲದು. ಕರ್ಮ ಮಾಡಿದಾಗ ಅದರೊಂದಿಗೇ 'ಅಪೂರ್ವ'ವೆಂಬ ಅದೃಷ್ಟ (ಕಾಣಿಸದ) ವಸ್ತು ಉತ್ಪತ್ತಿಯಾಗಿ ಕಾಲಾಂತರದಲ್ಲಿ ಫಲಾನುಭವಕ್ಕೆ ಕಾರಣವಾಗುವುದು.[35] ಆದ್ದರಿಂದ ಕರ್ಮಫಲನಿಯಂತ್ರಣ ಮಾಡುವ ಈಶ್ವರನ ಆವಶ್ಯಕತೆ ಇಲ್ಲ. ಪಾಪಪುಣ್ಯಗಳೇ ಕಾರಣಗಳೆಂದು ಇಟ್ಟು ಕೊಂಡರೂ ಇವಕ್ಕೂ ಈಶ್ವರನಿಗೂ ಸಂಬಂಧವಿರಬೇಕು. ಈ ಸಂಬಂಧ ಸಂಯೋಗ ಅಥವಾ ಸಮವಾಯವಾಗಿರಬೇಕು. ಸಂಯೋಗವೂ ದ್ರವ್ಯಗಳಲ್ಲಿ ಮಾತ್ರ ಸಾಧ್ಯ. ಪಾಪ ಪುಣ್ಯಗಳು ಜೀವಿಗಳ ಗುಣಗಳು. ಆದ್ದರಿಂದ ದ್ರವ್ಯವಾದ ಈಶ್ವರನ ಸಂಬಂಧ ಇವುಗಳೊಂದಿಗೆ ಸಾಧ್ಯವಿಲ್ಲ. ಧರ್ಮಾಧರ್ಮಗಳಿಗೆ ಜೀವಿ ಗಳೊಂದಿಗೆ ಮಾತ್ರ ಸಮವಾಯ ಸಂಬಂಧ ಸಾಧ್ಯವೇ ಹೊರತು ಈಶ್ವರ ನೊಂದಿಗಲ್ಲ. ಈಶ್ವರೇಚ್ಛೆಯಿಂದ ಅಣುಗಳು ಒಟ್ಟುಗೂಡಿ ಸೃಷ್ಟಿ ಸಾಧ್ಯವಾಗು ತ್ತದೆಂದರೆ ನಿತ್ಯನಾದ ಈಶ್ವರನ ಇಚ್ಛೆಯೂ ನಿತ್ಯವೇ ಆದುದರಿಂದ ನಿರಂತರವಾಗಿ ಸೃಷ್ಟಿಕಾರ್ಯ ಸಾಗಬೇಕಾಗುತ್ತದೆ.[36] ಆದ್ದರಿಂದ ಈ ಜಗತ್ತು ಹಿಂದೆ ಇಲ್ಲದಿದ್ದು ಅನಂತರ ಈಶ್ವರನಿಂದ ಸೃಷ್ಟಿಯಾಯಿತೆನ್ನುವುದು ಸುಳ್ಳು. ಈ ಜಗತ್ತು ಹಿಂದೆ ಇದ್ದುದಕ್ಕಿಂತ ಭಿನ್ನವಾಗಿದ್ದುದೆಂದೂ ಇಲ್ಲ.[37]

ಉತ್ತರಮೀಮಾಂಸೆ ಅಥವಾ ವೇದಾಂತದಲ್ಲಿ ಅದರಲ್ಲೂ ಶೈವ, ವೈಷ್ಣವ ಪಂಥಗಳಲ್ಲಿ ಕೆಲವರು ಧರ್ಮದ ದೇವರನ್ನು ವೇದಾಂತದ 'ತತ್ತ್ವ'ದೊಂದಿಗೆ ಒಂದುಗೂಡಿಸುತ್ತಾರೆ. ಇದರಿಂದಾಗಿ ಆದರ್ಶವನ್ನು ಒಪ್ಪಿಕೊಂಡರೆ ಧರ್ಮವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ. ಏಕೈಕ ತತ್ತ್ವವಾದ ನಿರಪೇಕ್ಷ ನಿರ್ಗುಣ ಬ್ರಹ್ಮವನ್ನು ಒಪ್ಪಿಕೊಳ್ಳುವ ಅದ್ವೈತದಲ್ಲಿಯೂ ಈಶ್ವರನಿದ್ದಾನೆ. ಅವನು ಸೋಪಾಧಿಕ ಅಥವಾ ಮಾಯಾಯುಕ್ತ ಬ್ರಹ್ಮ. ಅದ್ವೈತದಲ್ಲಿ ಪ್ರಕೃತಿಯಾಗಲಿ ಅಣುಗಳಾಗಲಿ ಜಗತ್ತಿನ ಉಪಾದಾನಕಾರಣವಲ್ಲ. ಬ್ರಹ್ಮನೇ ಉಪಾದಾನಕಾರಣ, ಬ್ರಹ್ಮನೇ ನಿಮಿತ್ತ ಕಾರಣ. ಈ ಈಶ್ವರ ಬೇರೆ ಯಾವುದೇ ತತ್ತ್ವದ ವಿಕಾರವೂ (ಪರಿಣಾಮ) ಅಲ್ಲ. ಅವನು ಅಕಾರಣ.

ಜಡವಾದ ಜಗತ್ತು ಚೈತನ್ಯಪೂರ್ಣ ಈಶ್ವರನಿಂದ ಹೇಗೆ ಉಂಟಾಗಬಲ್ಲುದು? ಆದರೆ ಅಚೇತನವಾದ ಉಗುರು, ಕೂದಲುಗಳು ಚೈತನ್ಯಮಯ ಶರೀರದಿಂದಲೇ

---

35 ಶ್ಲೋಕವಾರ್ತಿಕಂ, ಇಂಗ್ಲಿಷ್ ಅನು: ಗಂಗಾನಾಥ ಝಾ, Introduction, xliii

36 'ನಚೇಚ್ಛಾಯಾಮಪಿ ಹೇತುರಸ್ತಿ ನಚ ನಿತ್ಯೈವೇಚ್ಛಾ ನಿತ್ಯತ್ವಪ್ರಸಂಗಾತ್,' ಶಾಲಿಕನಾಥರ 'ಪ್ರಕರಣಪಂಚಿಕಾ', ಪುಟ ೧೪೯

37 'ನ ಕದಾಚಿತ್ ಅನೀದೃಶಂ ಜಗತ್,' Quoted by M. Hiriyanna, 'Outlines of Indian Philosophy,' ಪುಟ ೩೨೩

ಹುಟ್ಟುವುದಿಲ್ಲವೆ? ಹೌದು, ಆದರೆ ಅವೆರಡೂ ಪೃಥ್ವೀತತ್ತ್ವವನ್ನೂ ಒಳಗೊಂಡಿವೆ. ಹಾಗೆಯೇ ಈಶ್ವರ ಜಗತ್ತುಗಳೆರಡೂ ಇರುವಿಕೆಯನ್ನು (ಸತ್ತಾ) ಸಾಮಾನ್ಯ ಲಕ್ಷಣವಾಗಿ ಪಡೆದಿವೆ.[38] ಜಗತ್ತು ಈಶ್ವರನಿಂದ ಹುಟ್ಟಿ ಈಶ್ವರನಲ್ಲೇ ಲೀನವಾಗುತ್ತದೆಂದು ಹೇಳಿದರೆ ಜಗತ್ತಿನ ಲಕ್ಷಣಗಳಾದ ಸ್ಥೂಲತ್ವ, ಸಾವಯವತ್ವ, ಅಚೇತನತ್ವ, ಪರಿಚ್ಛಿನ್ನತ್ವ, ಅಶುದ್ಧಿ ಮೊದಲಾದವು ಜಗತ್ಕಾರಣನಾದ ಈಶ್ವರನಲ್ಲೂ ಇರಬೇಕಾಗುತ್ತದಲ್ಲವೆ?[39] ಆದರೆ ಜಗತ್ತು ಈಶ್ವರನಿಂದ ಹೊರಬರುವಾಗ ಈ ಲಕ್ಷಣಗಳನ್ನು ಹೊಂದಿ ಅವನಲ್ಲಿ ಪುನಃ ಐಕ್ಯವಾಗುವಾಗ ಅವನ್ನು ಕಳೆದುಕೊಳ್ಳುವುದರಿಂದ ಈ ಆಕ್ಷೇಪ ಸರಿಯಲ್ಲ. ಕಾರ್ಯಕಾರಣಗಳು ಅನನ್ಯ (ಒಂದರಿಂದೊಂದು ಬೇರೆಯಲ್ಲ)ವಾದರೂ ಕಾರಣದೊಂದಿಗೆ ಕಾರ್ಯ ತದ್ರೂಪವನ್ನು ಹೊಂದಿರುತ್ತದೆಯೇ ಹೊರತು ಕಾರ್ಯದೊಂದಿಗೆ ಕಾರಣ ಅಲ್ಲ.[40] ಆದ್ದರಿಂದ ಜಗತ್ತು ಈಶ್ವರಸ್ವರೂಪಿ; ಈಶ್ವರ ಜಗತ್ಸ್ವರೂಪನಲ್ಲ. ಈಶ್ವರ ನಿಜವಾದ ಕಾರಣ; ಜಗತ್ತು ಮಿಥ್ಯಾಕಾರ್ಯ.

ಜಗತ್ತು ಪ್ರಳಯದಲ್ಲಿ ಈಶ್ವರನೊಂದಿಗೆ ಲೀನವಾಗಿ ತನ್ನ ಭಿನ್ನತೆಯನ್ನು ಕಳೆದುಕೊಳ್ಳುತ್ತದೆಂದು ಒಪ್ಪಿಕೊಂಡರೂ ಜೀವ ಜಗತ್ತುಗಳ ಸರ್ವಸ್ವಭಾವಗಳೂ ನಷ್ಟವಾಗಿರುವುದರಿಂದ ಪುನಃ ಸೃಷ್ಟಿ ಸಾಧ್ಯವಿಲ್ಲ. ಇದಕ್ಕೆ ಶಂಕರರ ಉತ್ತರ: ಸುಷುಪ್ತಿಯಲ್ಲಿ ವ್ಯಕ್ತಿ ಅಭೇದ ಐಕ್ಯ ಸ್ಥಿತಿಯನ್ನು ಹೊಂದಿದರೂ ಎಚ್ಚೆತ್ತ ಅನಂತರ ಭೇದಸ್ಥಿತಿಗೆ ಹಿಂತಿರುಗುವಂತೆಯೇ ಮುಕ್ತರಾಗದ ಜೀವರು ಪುನಃ ಈಶ್ವರನಿಂದ ಉದಯಿಸುತ್ತಾರೆ.[41] ಈಶ್ವರ ಜಗತ್ಕಾರಣನಾದರೆ ಸುಖದುಃಖಗಳೆರಡನ್ನೂ ಸೃಷ್ಟಿಸುವ ಅವನು ಪಕ್ಷಪಾತರಹಿತನೂ ಶುದ್ಧನೂ ಹೇಗೆ ಆಗುತ್ತಾನೆ? ಇದಕ್ಕೆ ಉತ್ತರ: ಈಶ್ವರ ಜಗತ್ತಿಗೆ ಸಾಧಾರಣಕಾರಣ; ಜೀವಿಗಳ ಕರ್ಮ ಅಸಾಧಾರಣಕಾರಣ. ಮಳೆ ಎಲ್ಲ ಬೀಜಗಳ ಮೇಲೂ ಒಂದೇ ರೀತಿಯಾಗಿ ಬಿದ್ದರೂ ಹೇಗೆ ಬೀಜಗಳು ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಮೊಳೆತು, ಬೇರೆ ಬೇರೆ ವೃಕ್ಷಗಳಾಗುತ್ತವೋ ಹಾಗೆಯೇ ಜೀವಿಗಳ ಸುಖದುಃಖಗಳಲ್ಲಿನ

---

38 ಬ್ರಹ್ಮಸೂತ್ರಶಾಂಕರಭಾಷ್ಯಂ (ಮೋತೀಲಾಲ್ : ದೆಹಲಿ), II ೧.೬ ಪುಟ ೧೪೭

39 ಬ್ರಹ್ಮಸೂತ್ರಶಾಂಕರಭಾಷ್ಯಂ (ಮೋತೀಲಾಲ್ : ದೆಹಲಿ), II ೧.೮ ಪುಟ ೧೪೯

40 'ಅನನ್ಯತ್ವೇऽಪಿ ಕಾರ್ಯಕಾರಣಯೋಃ ಕಾರ್ಯಸ್ಯ ಕಾರಣಾತ್ಮತ್ವಂ ನ ತು ಕಾರಣಸ್ಯ ಕಾರ್ಯಾತ್ಮತ್ವಂ ಆರಂಭಣಶಬ್ದಾದಿಭ್ಯಃ,' (ಬ್ರ. ಸೂ. II, ೧.೧೪) ಇತ್ಯತ್ರ ವಕ್ಷ್ಯಾಮಃ' ಬ್ರಹ್ಮಸೂತ್ರಶಾಂಕರಭಾಷ್ಯಂ, II, ೧.೯, ಪುಟ ೧೪೯

41 ಯಥಾಹಿ ಸುಷುಪ್ತಿಸಮಾಧ್ಯಾದಾವಪಿ ಸತ್ಯಾಂ ಸ್ವಾಭಾವಿಕ್ಯಾಮವಿಭಾಗಪ್ರಾಪ್ತೌ ಮಿಥ್ಯಾಜ್ಞಾನಸ್ಯ ಅನಪೋದಿತತ್ವಾತ್ಪೂರ್ವವತ್ಪುನಃ ಪ್ರಬೋಧೇ ವಿಭಾಗೋ ಭವತ್ಯೇವಮಿಹಾಪಿ ಭವಿಷ್ಯತಿ,' ಬ್ರಹ್ಮಸೂತ್ರ ಶಾಂಕರಭಾಷ್ಯಂ, II, ೧.೯, ಪುಟ ೧೫೦

ವ್ಯತ್ಯಾಸಗಳಿಗೆ ಅವರ ಕರ್ಮಗಳೇ ಹೊಣೆಯೇ ಹೊರತು ದೇವರಲ್ಲ.[42] ಆದರೆ ಕರ್ಮಮಾಡಲು ಅವಶ್ಯವಾದ ಶರೀರ ಸೃಷ್ಟಿಗೆ ಮುಂಚೆ ಇರುವುದಾದರೂ ಎಲ್ಲಿ ಎಂದು ಆಕ್ಷೇಪಿಸಿದರೆ ಸಂಸಾರ ಅನಾದಿಯಾದ್ದರಿಂದ ಈ ಆಕ್ಷೇಪ ಸರಿಯಲ್ಲವೆಂದು ಸಮಾಧಾನ.[43] ಈಶ್ವರನೇ ಜಗತ್ತಿಗೆ ಉಪಾದಾನಕಾರಣನೂ ಆಗಿದ್ದರೆ ಅವನು ಸೃಷ್ಟಿಕಾಲದಲ್ಲಿ ತನ್ನನ್ನೇ ಈ ಜಗತ್ತನ್ನಾಗಿ ಪರಿವರ್ತಿಸಬೇಕು. ಅವನು ತನ್ನನ್ನು ಸಂಪೂರ್ಣವಾಗಿ ಪರಿವರ್ತಿಸಿಕೊಂಡರೆ ಸೃಷ್ಟಿಯ ಅನಂತರ ಈಶ್ವರನೇ ಇರುವುದಿಲ್ಲ; ಜಗತ್ತು ಮಾತ್ರ ಇರುತ್ತದೆ. ಹೀಗಲ್ಲದೆ ಅವನು ತನ್ನ ಭಾಗವೊಂದನ್ನು ಮಾತ್ರ ಪರಿವರ್ತಿಸುತ್ತಾನೆಂದರೆ ಆಗ ಈಶ್ವರ ಸಾವಯವಿಯೂ ಆದ್ದರಿಂದ ಅನಿತ್ಯನೂ ಆಗುತ್ತಾನೆ.[44] ಇದಕ್ಕೆ ಸಮಾಧಾನ: ಜಗತ್ತಿನ ಸೃಷ್ಟಿ ಆದರೂ ಬ್ರಹ್ಮ ಅವಿಕೃತನಾಗಿಯೇ ಉಳಿಯುತ್ತಾನೆ. ಸ್ವಪ್ನದಲ್ಲಿ ಆತ್ಮ ಅನೇಕಾನೇಕ ವಸ್ತುಗಳನ್ನು ಸೃಷ್ಟಿಸಿಕೊಳ್ಳುತ್ತಿದ್ದರೂ ಹೇಗೆ ಅದರ ಸ್ವಭಾವ ಇದರಿಂದ ಬದಲಾಗುವುದಿಲ್ಲವೋ[45] ಅದೇ ರೀತಿಯಲ್ಲಿ ಈಶ್ವರನಿಂದ ಈ ಜಗತ್ತಿನ ಸೃಷ್ಟಿಯಾದರೂ ಅದು ಅವನ ಸ್ವಭಾವಕ್ಕೆ ಧಕ್ಕೆ ತರುವುದಿಲ್ಲ. ಜೀವವೂ ಬ್ರಹ್ಮವೇ ಆದುದರಿಂದ ಜೀವವೇ ಸೃಷ್ಟಿಸುತ್ತದೆಂದು ಏಕೆ ಹೇಳಬಾರದು? ಜೀವವೇ ಸೃಷ್ಟಿಗೆ ಕಾರಣವಾದರೆ ಆ ಜೀವ ತನಗೆ ಅನುಕೂಲವಾದಂಥ ಸೃಷ್ಟಿಯನ್ನೇ ಮಾಡಿಕೊಳ್ಳುತ್ತಾನೆ. ಯಾವ ಸ್ವತಂತ್ರವ್ಯಕ್ತಿಯೂ ತಾನೇ ಒಂದು ಸೆರೆಮನೆಯನ್ನು ಕಟ್ಟಿಕೊಂಡು ಅದರಲ್ಲಿ ತಾನಾಗಿಯೇ ಸೆರೆಯಾಗುವುದಿಲ್ಲ.[46] ಆದ್ದರಿಂದ ಜೀವ ಸೃಷ್ಟಿಗೆ ಕಾರಣವಲ್ಲ.

---

42 'ಯಥಾಹಿ ಪರ್ಜನ್ಯೋ ವ್ರೀಹಿಯವಾದಿಸೃಷ್ಟೌ ಸಾಧಾರಣಂ ಕಾರಣಂ ಭವತಿ, ವ್ರೀಹಿಯವಾದಿ ವೈಷಮ್ಯೇ ತು ತತ್ತದ್ಬೀಜಗತಾನ್ಯೇವ ಅಸಾಧಾರಣಾನಿ ಸಾಮರ್ಥ್ಯಾನಿ ಕಾರಣಾನಿ ಭವಂತಿ, ಏವಮೀಶ್ವರೋ ದೇವಮನುಷ್ಯಾದಿಸೃಷ್ಟೌ ಸಾಧಾರಣಂ ಕಾರಣಂ ಭವತಿ' ಬ್ರಹ್ಮಸೂತ್ರಶಾಂಕರಭಾಷ್ಯಂ, II, ೧,೩೪, ಪುಟ ೧೭೨. ಇದೇ ಪುಸ್ತಕದಲ್ಲಿ II, ೩, ೪೨ (ಪುಟ ೨೪೦)ನ್ನೂ ನೋಡಿ.

43 ಬ್ರಹ್ಮಸೂತ್ರಶಾಂಕರಭಾಷ್ಯಂ, II, ೧,೩೫ (ಪುಟ ೧೭೩)

44 ಬ್ರಹ್ಮಸೂತ್ರಶಾಂಕರಭಾಷ್ಯಂ, II, ೧,೨೬ (ಪುಟ ೧೭೯)

45 'ಯತ ಆತ್ಮನ್ಯಪ್ಯೇಕಸ್ಮಿನ್ ಸ್ವಪ್ನದೃಶೀ ಸ್ವರೂಪಾನುಪಮರ್ದೇನೈವ ಅನೇಕಾಕಾರಾ ಸೃಷ್ಟಿಃ ಪಠ್ಯತೇ...', ಬ್ರಹ್ಮಸೂತ್ರಶಾಂಕರಭಾಷ್ಯಂ, II, ೧.೨೮, ಪುಟ ೧೭೯

46 'ಅತಶ್ಚ ಸ್ವತಂತ್ರಃ ಕರ್ತಾ ಸನ್ ಹಿತಮೇವಾತ್ಮನಃ ಸೌಮನಸ್ಯಕರಂ ಕುರ್ಯಾನ್ನಾಹಿತಂ ಜನ್ಮಮರಣಜರಾರೋಗಾದ್ಯನೇಕಾನರ್ಥಜಾಲಂ ನಹಿ ಕಶ್ಚಿದಪರತಂತ್ರೋ ಬಂಧನಾಗಾರಮಾತ್ಮನಃ ಕೃತ್ವಾನುಪ್ರವಿಶತಿ', ಬ್ರಹ್ಮಸೂತ್ರಶಾಂಕರಭಾಷ್ಯಂ, II, ೧,೨೧. ಪುಟ ೧೭೪

ದೇವರೇ ಜಗತ್ತಿನಲ್ಲಿರುವ ವ್ಯವಸ್ಥೆಗೆ ಕಾರಣ.[47] ಕರ್ಮಕ್ಕನುಗುಣವಾಗಿ ಫಲ ವಿತರಣೆಯಾಗುವಂತೆ ನೋಡಿಕೊಳ್ಳುವ ಕರ್ಮಾಧ್ಯಕ್ಷನೂ ಅವನೇ.[48] ಕರ್ಮ ಫಲ ವಿತರಣೆಗೆ ಮೀಮಾಂಸಕರು ಹೇಳುವಂತೆ 'ಅಪೂರ್ವ' ಕಾರಣವಲ್ಲ. ಏಕೆಂದರೆ ಅಪೂರ್ವ ಅಚೇತನವಸ್ತು. ಅದು ಚೇತನವಸ್ತುವಿನ ಸಹಾಯವಿಲ್ಲದೆ ಕೆಲಸ ಮಾಡಲಾರದು. ಆದ್ದರಿಂದ ಕರ್ಮಫಲಾನುಭವಕ್ಕೆ ಈಶ್ವರನೇ ಕಾರಣ.[49] ಅವನ ಅಸ್ತಿತ್ವವನ್ನು ಅರಿಯಲು ಇರುವ ಮಾರ್ಗವೆಂದರೆ ಶ್ರುತಿ.

ಈಗ ಈ ವಾದಗಳ ಸ್ಥೂಲ ಲಕ್ಷಣಗಳನ್ನು ಗಮನಿಸಿ ಅವು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತವೆಂಬುದನ್ನು ನೋಡೋಣ.

ಈಶ್ವರ ಜಗತ್ಕಾರಣವೆಂಬ ವಾದದ ಮುಖ್ಯ ಅಂಶಗಳು ಹೀಗಿವೆ : ಈ ಜಗತ್ತು ಒಂದು ಕಾರ್ಯ ಅಥವಾ ಪರಿಣಾಮ. ಇದು ತಾನಾಗಿಯೇ ಉಂಟಾಗಲಾರದು. ಆದ್ದರಿಂದ ಇದನ್ನು ಉಂಟುಮಾಡುವ ಕಾರಣವೊಂದು ಇರಬೇಕು. ಈ ಕಾರಣ ಚೈತನ್ಯಮಯವಾಗಿರಬೇಕು (ಕಾರಣಚೇತನತ್ವ). ಈ ಕಾರಣ ಸರ್ವಜ್ಞ ಮತ್ತು ನಿಶ್ಶರೀರಿಯೂ ಆಗಿರಬೇಕು.

ಈ ಜಗತ್ತು ಒಂದು ಕಾರ್ಯವೆಂಬ ಅಂಶ ಅತ್ಯಂತ ವಿವಾದಾತ್ಮಕವಾದುದು. ಜಗತ್ತಿನ ಕಾರ್ಯತ್ವವನ್ನು ನಿರೀಶ್ವರವಾದಿಗಳೆಲ್ಲರೂ ವಿರೋಧಿಸಿದ್ದಾರೆ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವೂ ಕಾರ್ಯವಾದರೂ ಇಡೀ ಜಗತ್ತೇ ಒಂದು ಕಾರ್ಯವೆಂದು ಹೇಳುವುದು ಕಷ್ಟ. ಉದಾಹರಣೆಗೆ ಮನುಷ್ಯಶರೀರದ ಪ್ರತಿಯೊಂದು ಅಂಗಕ್ಕೂ ಒಂದು ಉದ್ದೇಶವಿದೆ : ಕಣ್ಣು ನೋಡುವುದಕ್ಕಾಗಿ, ಹೃದಯ ರಕ್ತಪರಿಚಲನೆಗಾಗಿ ಇತ್ಯಾದಿ. ಶರೀರದ ಪ್ರತಿಯೊಂದು ಅಂಗಕ್ಕೂ ಉದ್ದೇಶವಿರುವುದರಿಂದ ಈ ಎಲ್ಲ ಅಂಗಗಳ ಸಮೂಹವಾದ ಇಡೀ ಶರೀರಕ್ಕೇ ಒಂದು ಪ್ರತ್ಯೇಕ ಉದ್ದೇಶವಿದೆಯೆಂದು ಹೇಳಲಾಗುತ್ತದೆಯೆ? ಒಂದೊಂದೇ ಅವಯವವನ್ನು ಪರೀಕ್ಷಿಸಿದಾಗ ಎದ್ದುಕಾಣುವ ಉದ್ದೇಶ, ಉಪಯುಕ್ತತೆಗಳು ಸಮಗ್ರ ಶರೀರವನ್ನೇ ಒಂದಾಗಿ ನೋಡುವಾಗ ಕಾಣಿಸುವುದಿಲ್ಲ. ಹೀಗೆಯೇ ಜಗತ್ತಿನಲ್ಲಿ ನಡೆಯುವ ಘಟನೆಗಳಿಗೆ ಕಾರಣಗಳಿವೆಯೆಂದ ಮಾತ್ರಕ್ಕೆ ಇಡೀ ಜಗತ್ತಿಗೇ ಒಂದು ಕಾರಣವಿರಬೇಕೆಂದು ಹೇಳಲು ಆಗುವುದಿಲ್ಲ. ಕಾರಣರಹಿತನಾದ ಈಶ್ವರನಿರುವುದು

---

47 ಬ್ರಹ್ಮಸೂತ್ರಶಾಂಕರಭಾಷ್ಯಂ, II, ೨, ೧. ಪುಟ ೧೭೫-೧೭೬

48 '........ಕರ್ಮಾಧ್ಯಕ್ಷತ್ಸರ್ವಭೂತಾಧಿವಾಸಾತ್ ಸಾಕ್ಷಿಣಶ್ಚೇತಯಿತುರೀಶ್ವರಾತ್ ತದನುಜ್ಞಯಾ ಕರ್ತೃತ್ವಭೋಕ್ತೃತ್ವಲಕ್ಷಣಸ್ಯ ಸಂಸಾರಸ್ಯ ಸಿದ್ಧಿಃ..." ಬ್ರಹ್ಮಸೂತ್ರಶಾಂಕರಭಾಷ್ಯಂ, II, ೩,೪೧. ಪುಟ ೨೪೦

49 'ಅಪೂರ್ವಸ್ಯಾಚೇತನಸ್ಯ ಕಾಷ್ಠಲೋಷ್ಟಸಮಸ್ಯ ಚೇತನೇನಾಪ್ರವರ್ತಿತಸ್ಯ ಪ್ರವೃತ್ತ್ಯನುಪಪತ್ತೇಃ,' ಬ್ರಹ್ಮಸೂತ್ರಶಾಂಕರಭಾಷ್ಯಂ, III, ೨,೩೮, ಪುಟ ೩೦೭

ಸಾಧ್ಯವೆಂದು ತರ್ಕಿಸಬಹುದಾದರೆ ಕಾರಣರಹಿತವಾದ ವಿಶ್ವವೂ ಇರುವುದೆಂದು ತರ್ಕಿಸಬಹುದು. ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ವಿಶಿಷ್ಟ ವಸ್ತುಗಳ ಸೃಷ್ಟಿ, ಸಂಹಾರಗಳಾಗುತ್ತಿರುತ್ತವೆಯೇ ಹೊರತು ಇಡೀ ಜಗತ್ತು ಒಂದೇ ಬಾರಿಗೆ ಸೃಷ್ಟಿಯಾಗುವುದಾಗಲಿ, ನಾಶವಾಗುವುದಾಗಲಿ ಇಲ್ಲ ಮತ್ತು ಈ ಜಗತ್ತು ಅನಾದಿ, ಅನಂತ. ಇದು ಮೀಮಾಂಸಕರ ವಾದದ ತಿರುಳು. ಜಡವಸ್ತುವಿನ ಸೃಷ್ಟಿ ಜಗತ್ತಿನಲ್ಲಿ ಸಂತತವಾಗಿ, ನಿರಂತರವಾಗಿ ನಡೆದಿದೆ ಎಂಬ ವಾದ ಆಧುನಿಕ ವಿಜ್ಞಾನಿಗಳ ದೃಷ್ಟಿಯಲ್ಲಿ ಅಸಂಗತವೇನೂ ಅಲ್ಲದಿರುವುದು ಇಲ್ಲಿ ಗಮನಾರ್ಹ.[50]

ಕಾರಣಚೇತನತ್ವವನ್ನೂ ಸಾಂಖ್ಯರು ಮತ್ತು ಸ್ವಭಾವವಾದಿಗಳು ಪೂರ್ಣವಾಗಿ ವಿರೋಧಿಸಿದ್ದಾರೆ. ಸಾಂಖ್ಯರ ಪ್ರಕಾರ ಅಚೇತನವಾದ ಪ್ರಕೃತಿಯೇ ಜಗತ್ತಿಗೆ ಕಾರಣ. ಪ್ರಕೃತಿಯ ವಿಕಾಸ ಪುರುಷರ ಭೋಗಮೋಕ್ಷಾರ್ಥವಾಗಿ ಸಹಜವಾಗಿಯೇ ನಡೆಯುವ ಕ್ರಿಯೆ. ಆದ್ದರಿಂದ ಸಾಂಖ್ಯರು ಕಾರಣಾಚೇತನತ್ವವಾದಿಗಳು. ಸ್ವಭಾವವಾದಿಗಳು ಒಂದು ವಸ್ತುವಿನ ಕಾರಣವನ್ನು ಆ ವಸ್ತುವಿನ ಹೊರಗಡೆ ಹುಡುಕಬೇಕಾಗಿಲ್ಲವೆಂದೂ ಆ ಕಾರಣ ಅದರೊಳಗೇ ಇರುತ್ತದೆಂದೂ ವಾದಿಸುತ್ತಾರೆ.[51] ಯಾವ ಆಗುಹೋಗುಗಳಿಗೂ ಅವುಗಳಿಂದ ಭಿನ್ನವಾದ ಬಾಹ್ಯ ಕಾರಣಗಳು (ಚೇತನ ಅಥವಾ ಅಚೇತನ) ಇರುವುದು ಅಸಾಧ್ಯ. ಇದರ ಸಾರಾಂಶ ಜಗತ್ತಿನಲ್ಲಿ ನಡೆಯುವ ಘಟನೆಗಳು ಸ್ವಯಂಪ್ರೇರಿತ ಎಂದಾಗುತ್ತದೆ. ಆದರೆ ಆಸ್ತಿಕರು, ವಿಶೇಷವಾಗಿ ನೈಯಾಯಿಕರು ಇದನ್ನು ಅಲ್ಲಗಳೆಯುತ್ತಾರೆ. ಅವರ ವಾದ ಈ ರೀತಿ ಇದೆ: "ಜಗತ್ತಿನಲ್ಲಿ ಕೆಲವು ಘಟನೆಗಳಾದರೂ ಚೇತನಕಾರಣಗಳಿಂದಾಗಿ ಆಗುತ್ತವೆಂದು (ಉದಾ: ಕುಂಬಾರನಿಲ್ಲದೆ ಮಡಕೆಯಾಗದು) ಎಲ್ಲರೂ ಒಪ್ಪುತ್ತಾರಷ್ಟೆ. ಕೆಲವು ಘಟನೆಗಳು ಸ್ವಯಂಪ್ರೇರಿತವೆಂದು (ಉದಾ: ಬೀಜ ಮೊಳೆತು ಮರವಾಗುವುದು) ಪ್ರತಿಪಕ್ಷದವರ ವಾದ. ಇದು ನಿರ್ವಿವಾದವೆ? ಅಲ್ಲ. ಏಕೆಂದರೆ ನಾವು ಇದನ್ನು ಒಪ್ಪುವುದಿಲ್ಲ. (ಯಾರೂ ಆಕ್ಷೇಪಿಸದೇ ಇದ್ದದ್ದು ಮಾತ್ರ ನಿರ್ವಿವಾದವಷ್ಟೆ?)." ಈ ವಾದದ ಸ್ವಾರಸ್ಯವೆಂದರೆ ಇದರ ಎದುರಿನಲ್ಲಿ ಯಾವ ಘಟನೆಯನ್ನೂ ಸ್ವಯಂಪ್ರೇರಿತವೆಂದು ನಿರ್ವಿವಾದವಾಗಿ ಸಮರ್ಥಿಸಲು ಆಗುವುದಿಲ್ಲ. ಏಕೆಂದರೆ ಯಾವುದೇ ದೃಷ್ಟಾಂತವನ್ನು ನಿರ್ವಿವಾದವೆಂದು ಪ್ರತಿಪಕ್ಷದವರು ಭಾವಿಸಿದರೂ ನೈಯಾಯಿಕರು ಅದನ್ನು ಪ್ರಶ್ನಿಸಿ ವಿವಾದಾತ್ಮಕ

---

[50] Fred Hoyle ಅವರ Frontiers of Astronomy ಪುಸ್ತಕದ ೨೦ನೆಯ ಅಧ್ಯಾಯವನ್ನು (ಪುಟ ೩೪೨-೩೪೯) ನೋಡಿ. ೩೧೮ನೆಯ ಪುಟವನ್ನೂ ನೋಡಿ. (ELBS Books, ೧೯೬೩)

[51] M. Hiriyanna : Outlines of Indian Philosophy ಪುಟ ೧೦೩-೧೦೪.

ವನ್ನಾಗಿ ಮಾಡಿಬಿಡುತ್ತಾರೆ. ಚೇತನಕಾರಣತ್ವವನ್ನು ಯಾವುದೇ ದೃಷ್ಟಾಂತವೂ ಅಲ್ಲಗಳೆಯಲಾರದಾದ್ದರಿಂದ ಅದು ಸತ್ಯ.

'ಕಾರಣ ಸಶರೀರಿಯಾಗಿರಬೇಕು' ಎಂಬ ನಾಸ್ತಿಕರ ವಾದದ ಬಗ್ಗೆ ಆಸ್ತಿಕರು ತುಂಬಾ ತಲೆಕೆಡಿಸಿಕೊಂಡಿದ್ದಾರೆ. ಇದರ ಪರಿಣಾಮ ಎರಡು ವಿಧವಾಗಿದೆ. ಒಂದು: ತಾತ್ತ್ವಿಕರಲ್ಲಿ ಕೆಲವರು ಈಶ್ವರನ ಅಶರೀರತ್ವವನ್ನು ಸಿದ್ಧಾಂತ ಪಡಿಸಲು ಹೆಣಗಿದ್ದಾರೆ. ಎರಡು: ಇಂಥ ಪ್ರಯತ್ನವನ್ನು ಮಾಡದೆ ಇನ್ನು ಕೆಲವರು (ಉದಾ: ವೈಷ್ಣವಪಂಥಿಗಳು ಇತ್ಯಾದಿ) ದೇವರಿಗೆ ಒಂದು ಶರೀರವನ್ನೇ (ಪಂಚಭೂತಾತ್ಮಕವಲ್ಲ)—ಒಂದು ಬೇರೆ ಲೋಕವನ್ನೇ—ಕೊಟ್ಟುಬಿಟ್ಟಿದ್ದಾರೆ. ನಿಶ್ಶರೀರಿಯಾಗಿದ್ದರೂ ಆತ್ಮ ಶರೀರವ್ಯಾಪಾರಗಳಿಗೆ ಕಾರಣನಾಗಿರುವ ಉದಾ ಹರಣೆಯನ್ನು ಈಶ್ವರನ ಅಶರೀರತ್ವ ಸಾಧನೆಗೆ ಉಪಯೋಗಿಸಿಕೊಂಡಿರುವುದನ್ನು ಕಂಡಿದ್ದೇವೆ. 'ಶರೀರವಿದ್ದರೂ ಕರ್ತೃತ್ವವಿರುವುದಿಲ್ಲ (ಉದಾ: ನಿಷ್ಕ್ರಿಯರಲ್ಲಿ). ಆದ್ದರಿಂದ ಕರ್ತೃತ್ವವಿದ್ದರೂ ಶರೀರ ಇರಬೇಕಾದ್ದಿಲ್ಲ'. ಇದು ಈ ವಾದದ ಸಾರಾಂಶ. ಈ ವಾದ ಶರೀರತ್ವವಿರುವಲ್ಲೆಲ್ಲ ಕರ್ತೃತ್ವವಿರುತ್ತದೆಂಬ ವಾದವನ್ನು ಸುಳ್ಳು ಮಾಡುತ್ತದೆಯೇ ಹೊರತು ಕರ್ತೃತ್ವ ಇರುವೆಡೆಯಲ್ಲಿ ಅಶರೀರತ್ವವಿರಲು ಸಾಧ್ಯವೆಂದು ಸಿದ್ಧಪಡಿಸುವುದಿಲ್ಲ. ಪರಿವರ್ತನೆಯ ಸಾಮಾನ್ಯ ನಿಯಮವನ್ನು ಈ ವಾದ ಉಲ್ಲಂಘಿಸುತ್ತದೆ.

ಯೋಗದ 'ತತ್ರ ನಿರತಿಶಯಂ ಸರ್ವಜ್ಞಬೀಜಂ' ಸೂತ್ರದಲ್ಲಿನ ವಾದವೂ ಸ್ವಾರಸ್ಯವಾದುದೇ. ಬೇರೆಬೇರೆ ಮಟ್ಟದ ಜ್ಞಾನವಿರುವ ವ್ಯಕ್ತಿಗಳು ನಿಜ ವಾಗಿಯೂ ಈ ಜಗತ್ತಿನಲ್ಲಿ ಇರುವುದರಿಂದ ಇದೇ ಸರಣಿಯ ತುಟ್ಟತುದಿಗೆ ಸರ್ವಜ್ಞ ನೊಬ್ಬ ಇದ್ದೇ ಇರಬೇಕು (ನಿರತಿಶಯನಾದ ಸರ್ವಜ್ಞಪುರುಷ) ಎಂಬುದು ಈ ವಾದದ ಸಾರಾಂಶ. ಆದರೆ ಈ ವಾದವನ್ನು ನಿರತಿಶಯವಾದ ಯಾವುದೇ ವಸ್ತುವಿನ ಅಸ್ತಿತ್ವವನ್ನಾದರೂ ಸಿದ್ಧಪಡಿಸಲು (ಉದಾ: ಸೈತಾನನ ಅಸ್ತಿತ್ವ) ಉಪ ಯೋಗಿಸಬಹುದು. ಇದೇ ಈ ವಾದದ ದೌರ್ಬಲ್ಯ.

ಜಗತ್ತಿನಲ್ಲಿ ವ್ಯವಸ್ಥೆಯಿರುವುದರಿಂದ ಅದಕ್ಕೆ ಕಾರಣನಾದ ಈಶ್ವರ ಇರ ಬೇಕೆಂಬ ವಾದವೂ ಸರಿಯಲ್ಲ. ವ್ಯವಸ್ಥೆಯ ಕಲ್ಪನೆ ಸಾಪೇಕ್ಷವಾದುದು. ಜಗತ್ತಿನಲ್ಲಿ ಕಂಡುಬರುವ ವ್ಯವಸ್ಥೆ ಹಾಗೂ ಕ್ರಮಬದ್ಧತೆಗಳು ಆಕಸ್ಮಿಕವಾಗಿ ಉಂಟಾಗುವುದು ಅಸಂಭವವೇನೂ ಅಲ್ಲ. ಹುಳು ಮರವನ್ನು ಕೊರೆಯುವಾಗ ಅದು ಅಕ್ಷರದ ರೂಪ ತಾಳಬಹುದು. ಆದರೆ ಅದನ್ನು ನೋಡಿ ಇದು ಯಾರೋ ಶಿಕ್ಷಿತರ ಕೆಲಸವೇ ಇರಬೇಕೆಂದು ತರ್ಕಿಸಿದರೆ ತಪ್ಪಾಗುವುದಿಲ್ಲವೆ? ಜಗತ್ತಿನ ವ್ಯವಸ್ಥೆ ಹೀಗಿರಬಾರದೇಕೆ?

ಇನ್ನುಳಿದ ಮುಖ್ಯವಾದ ಅಂಶವೆಂದರೆ ದೈವಾಸ್ತಿತ್ವದ ಅಪ್ರಾಮಾಣ್ಯದ ಬಗ್ಗೆ ಉದಯನರ ನಿಲವು. ಉದಯನರ 'ಕುಸುಮಾಂಜಲಿ'ಯ ಐದನೆಯ

ಪರಿಚ್ಛೇದದ ಮುಖ್ಯಾಂಶವೆಂದರೆ ಹೇಗೆ ಯಾವ ಪ್ರಮಾಣವೂ ದೇವರ ಇಲ್ಲದಿರುವಿಕೆಯನ್ನು ಸಿದ್ಧಾಂತಮಾಡಲಾರದು ಎಂಬುದರ ವಿವರಣೆ. ಯಾವ ಪ್ರಮಾಣವೂ ದೇವರು ಇಲ್ಲವೆಂದು ಸಿದ್ಧಾಂತ ಮಾಡಲಾರದು. ಆದ್ದರಿಂದ ನಾವು ದೇವರು ಇದ್ದಾನೆಂದು ನಂಬಬಹುದೆಂದು ಈ ವಾದದ ಸಾರಾಂಶ.[52] ಆದರೆ 'ದೇವರಿಲ್ಲ' ಎಂದು ಸಿದ್ಧಾಂತವಾಗಿಲ್ಲವಾದ್ದರಿಂದ ಇದರ ವ್ಯಾಘಾತವಾದ 'ದೇವರಿದ್ದಾನೆ' ಎಂಬುದು ಸಿದ್ಧಾಂತವಾದಂತೆ ಆಗಲಿಲ್ಲ. ಈ ತರ್ಕ ದೇವರ ಅಸ್ತಿತ್ವ 'ಸಾಧ್ಯ' ಎಂದು ತೋರಿಸುತ್ತದೆಯೇ ಹೊರತು ಅದು 'ಸಿದ್ಧ'ವೆಂದು ತೋರಿಸುವುದಿಲ್ಲ. ಈ ವಾದದ ಆಧಾರದ ಮೇಲೆ 'ದೇವರಿದ್ದಾನೆ' ಎನ್ನುವುದು 'ಸತ್ಯ' ಎಂದು ತರ್ಕಿಸಲು ಸಾಧ್ಯವಿಲ್ಲ. ಏಕೆಂದರೆ 'ಸತ್ಯ'ವೆಂದರೆ ಸತ್ಯವೆಂದು ಸಿದ್ಧಾಂತ ಮಾಡಲು ಸಾಧ್ಯವಿರುವುದು ಅಥವಾ ಸತ್ಯವೆಂದು ಆಗಲೇ ಸಿದ್ಧಾಂತವಾಗಿರುವುದು ಎಂದು ಅರ್ಥ. ಅಂದರೆ 'ಇದು ಹೀಗಿದೆ' ಅಥವಾ 'ಇದು ಹೀಗಿಲ್ಲ' ಎಂದು ಸಿದ್ಧಾಂತಮಾಡಿ ತೋರಿಸಲು ಸಾಧ್ಯವಿರುವುದನ್ನು ಮಾತ್ರ 'ಸತ್ಯ', 'ಅಸತ್ಯ' ಎಂಬ ಶಬ್ದಗಳಿಂದ ವ್ಯವಹರಿಸಬಹುದು. ಉದಾಹರಣೆಗೆ 'ಭೂಮಿ ಗುಂಡಗಿದೆ' ಎಂಬುದನ್ನು ಅದು ಹಾಗಿದೆಯೆಂದು ಸಿದ್ಧಾಂತಮಾಡಿ ತೋರಿಸಲು ಸಾಧ್ಯವಿದೆ; 'ಭೂಮಿ ಒಂದು ಬೆಣ್ಣೆಯ ಮುದ್ದೆ' ಎಂಬುದನ್ನು ಅದು ಹಾಗಿಲ್ಲವೆಂದು ಸಿದ್ಧಾಂತಮಾಡಿ ತೋರಿಸಲು ಸಾಧ್ಯವಿದೆ. ಆದ್ದರಿಂದ ಈ ನಂಬಿಕೆಗಳನ್ನು 'ಸತ್ಯ', 'ಅಸತ್ಯ' ಎಂದು ಕರೆಯಬಹುದು. ಆದರೆ 'ದೇವರಿದ್ದಾನೆ', 'ದೇವರಿಲ್ಲ' ಎಂಬ ನಂಬಿಕೆಗಳ ವಿಷಯದಲ್ಲಿ ಈ ರೀತಿ ಸಿದ್ಧಾಂತಮಾಡಿ ತೋರಿಸುವುದು ಸಾಧ್ಯವಿಲ್ಲ. 'ದೇವರಿದ್ದಾನೆ' ಎಂಬ ವಾಕ್ಯವನ್ನು ನಿರಾಕರಿಸಬಹುದು. ಹಾಗೆಯೇ 'ದೇವರಿಲ್ಲ' ಎಂಬ ವಾಕ್ಯವನ್ನೂ ನಿರಾಕರಿಸಬಹುದು. ಹೀಗೆ ನಿರಾಕರಿಸುವುದರಲ್ಲಿ ತಾರ್ಕಿಕ ಸ್ವವಿರೋಧ ಇರುವುದಿಲ್ಲ. ಆದ್ದರಿಂದ ಈ ವಾಕ್ಯಗಳನ್ನು ಸಕಾರಣವಾಗಿಯೇ ಅಂಗೀಕರಿಸಬೇಕಾಗುತ್ತದೆ ಅಥವಾ ನಿರಾಕರಿಸಬೇಕಾಗುತ್ತದೆ. ಅವನ್ನು 'ಸತ್ಯ', 'ಅಸತ್ಯ' ಎಂದು ಕರೆಯುವುದು ವಿಚಿತ್ರವಾಗಿ ಕಾಣಿಸುತ್ತದೆ.

ಭಾರತದಲ್ಲಿ ಈಶ್ವರನ ಅಸ್ತಿತ್ವವನ್ನು ಕುರಿತ ಚರ್ಚೆ ಬಲುಹಿಂದೆಯೇ ನಿಂತು ಹೋದರೂ ಪಶ್ಚಿಮದಲ್ಲಿ ಅದು ಇನ್ನೂ ಮುಂದುವರಿದಿದೆ. 'ದೇವರಿದ್ದಾನೆ' ಎನ್ನುವುದು "ಅರ್ಥಹೀನ" ಶಬ್ದಸಮೂಹವೆಂದು ಕೆಲವರೂ, "ಅರ್ಥಪೂರ್ಣ, ಆದರೆ ಸುಳ್ಳು" ಎಂದು ಮತ್ತೆ ಕೆಲವರೂ "ಅರ್ಥಪೂರ್ಣ ಮತ್ತು ಸತ್ಯ" ಎಂದು ಇನ್ನು ಕೆಲವರೂ ವಾದಿಸುತ್ತಾರೆ.

[52] M. Hiriyanna : Outlines of Indian Philosophy ಪುಟ ೨೪೩

ಎಲ್ಲ ದರ್ಶನಕಾರರೂ ತಮ್ಮ ತಮ್ಮ ಸಿದ್ಧಾಂತವೇ ತತ್ತ್ವವಾದುದು, ಯಥಾರ್ಥವಾದುದು, ಕಲ್ಪಿತವಲ್ಲದಿರುವುದು ಎಂದು ವಿಶ್ವಾಸವಿಟ್ಟಿರುವರು. ಮಧ್ಯಸ್ಥವಾದ ದೃಷ್ಟಿಯಲ್ಲಿ ಪರಸ್ಪರ ವಿರುದ್ಧವಾದ ಸಕಲ ಸಿದ್ಧಾಂತಗಳೂ ಹೇಗೆ ಸಮರಸಗಳಾಗುವುವು? ಎಂದು ಆಕ್ಷೇಪವಿರುತ್ತದೆ. ಇದಕ್ಕೆ ಶಾಸ್ತ್ರಕಾರರು ಕೆಲವರು ಸರ್ವವಸ್ತುಗಳಿಗೂ ಸರ್ವಸ್ವಭಾವವನ್ನೂ ಅಂಗೀಕರಿಸಿ ವಿರೋಧ ಪರಿಹಾರಮಾಡಿರುವರು. ಇದಕ್ಕೆ ಅನೇಕಾಂತ ವಾದವೆಂದು ಹೆಸರು. ಏಕಾಂತ ವೆಂದರೆ ಒಂದೇ ಸ್ವಭಾವ, ಅನೇಕಾಂತವೆಂದರೆ ನಾನಾಸ್ವಭಾವ. ಇದೇ ಸಾರ್ವಾತ್ಮ್ಯ ವಾದ,

ಕೆಲವರು ಸಕಲ ವಸ್ತುಗಳೂ, ಅವುಗಳ ಸ್ವಭಾವಗಳೂ ಪರಮಾರ್ಥಗಳಲ್ಲ, ವಸ್ತುವೆಂಬುದೇ ಇಲ್ಲದಿರುವುದರಿಂದ ವಿರೋಧವಿಲ್ಲ ಎಂದು ಹೇಳುವರು. ಇದಕ್ಕೆ ನೈರಾತ್ಮ್ಯವಾದವೆಂದೂ ಶೂನ್ಯವಾದವೆಂದೂ ಹೆಸರು.

ಕೆಲವರ ತಾತ್ಪರ್ಯವಿದು—ಪ್ರತ್ಯಕ್ಷಗೋಚರವಾದ ಮಹಾವೃಕ್ಷ, ಮಹಾ ಪರ್ವತ ಮೊದಲಾದುವು ಒಂದೊಂದು ದಿಕ್ಕಿನಲ್ಲಿ ನೋಡಿದರೆ ಒಂದೊಂದು ರೀತಿಯಿಂದ ಕಾಣುತ್ತಿರುವಲ್ಲಿ, ಅತ್ಯಂತ ಪರೋಕ್ಷವಾದ ಮತ್ತು ಉಪದೇಶದಿಂದಲೇ ತಿಳಿಯತಕ್ಕದಾದ ಪ್ರಪಂಚಮೂಲಕಾರಣ ತತ್ತ್ವದಲ್ಲಿ ದೃಷ್ಟಿಭೇದದಿಂದಲೂ ಕಾಲದೇಶಭೇದಗಳಿಂದಲೂ ಮತಭೇದಗಳು, ಅಭಿಪ್ರಾಯಭೇದಗಳು ಏತಕ್ಕೆ ಉದಯಿಸಲಾರವು? ಸಾಮರಸ್ಯವು ಏತಕ್ಕೆ ಬರಲಾರದು? ಇದಕ್ಕೆ ಅಂಧಗಜ ಪರೀಕ್ಷಾ ವೃತ್ತಾಂತವೇ ನಿದರ್ಶನವಾಗುವುದು. ಅದೆಂತೆಂದರೆ—ನಾಲ್ಕು ಕುರುಡರು ಆನೆಯನ್ನು ತಿಳಿಯಬೇಕೆಂಬ ಅಪೇಕ್ಷೆಯಿಂದ ಒಬ್ಬ ಪುರುಷನ ಸಹಾಯದಿಂದ ಗಜವನ್ನು ಮುಟ್ಟಿ ನೋಡಿದರು. ಅವರಲ್ಲಿ ಕಾಲನ್ನು ಮುಟ್ಟಿ ನೋಡಿದವನು ಆನೆ ಕಂಭದಂತಿರುವುದೆಂದು ತಿಳಿದನು. ಬಾಲವನ್ನು ಮುಟ್ಟಿದವನು ಕಸಪೊರಕೆ ಯಂತೆ ಗಜವಿರುವುದೆಂದು ತಿಳಿದನು. ಹೀಗೆ ಕಿವಿಯನ್ನು ಮುಟ್ಟಿದವನು ಮೊರದಂತೆ ಗಜಸ್ವರೂಪವನ್ನೂ ದಂತವನ್ನು ಮುಟ್ಟಿದವನು ಕಲ್ಲಿನಂತೆ ಗಜ ಸ್ವರೂಪವನ್ನೂ ತಿಳಿದರು. ಇದರಲ್ಲಿ ಎಲ್ಲವೂ ತಪ್ಪು, ಎಲ್ಲವೂ ನಿಶ್ಚಯ. ಎಂದರೆ, ಯಾವುದೂ ಸಮಗ್ರವಲ್ಲ, ಏಕದೇಶವೆಂದು ತಾತ್ಪರ್ಯ ಆಗುತ್ತದೆ. ಅದರಂತೆ ತತ್ತ್ವವಿಚಾರವೂ ಇರಬಹುದು; ಪರಸ್ಪರ ಅಭಿಪ್ರಾಯ ಭೇದಗಳೂ ಇರಬಹುದು ಎಂದು ಕೆಲವರ ಸಿದ್ಧಾಂತ.

ಇದರಿಂದ ಸಾರ್ವಾತ್ಮ್ಯ, ನೈರಾತ್ಮ್ಯ, ಏಕದೇಶ ಎಂದು ಮೂರು ಮಾರ್ಗಗಳು ಸಾಮರಸ್ಯೋಪಾಯಗಳೆಂದು ಅಭಿಪ್ರಾಯವಾಗುವುದು.[1]

—ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ

---

[1] ಹಿಂದೂದರ್ಶನಸಾರ, ಮೈಸೂರು ವಿಶ್ವವಿದ್ಯಾನಿಲಯ, ೧೯೪೦, ಪು. ೫-೬.

ಡಿ. ಎನ್. ಸೀತಾರಾಮಯ್ಯ

ಜಾನ್ ಆಮೋಸ್ ಕೊಮೀನಿಯಸ್

ಶತಾಬ್ದಿ ಸ್ಮರಣೆ

ಆಧುನಿಕ ಶಿಕ್ಷಣಕ್ರಮದ ಪ್ರವಾದಿಗಳಲ್ಲೊಬ್ಬನಾದ ಜಾನ್ ಆಮೋಸ್ ಕೊಮೀನಿಯಸ್ (೧೫೯೨-೧೬೭೦) ಕಾಲವಾಗಿ ಕಳೆದ ವರ್ಷಕ್ಕೆ ಮೂರು ಶತಮಾನಗಳಾದುವು. ಈಗಿನ ಜೆಕೊಸ್ಲವಾಕಿಯದಲ್ಲಿ ಹುಟ್ಟಿದ ಕೊಮೀನಿಯಸ್ ವೃತ್ತಿಯಲ್ಲಿ ಪಾದ್ರಿ. ಆದರೆ ಅವನು ಸಂಪಾದಿಸಿದ ಜ್ಞಾನದಿಂದ, ನಡೆಸಿದ ಪ್ರಯೋಗಗಳಿಂದ, ಸ್ಥಾಪಿಸಿ ನಿರೂಪಿಸಿದ ಶಾಲಾಪದ್ಧತಿಗಳಿಂದ ಕೆಲವು ಪ್ರಮುಖ ಶಿಕ್ಷಣತತ್ತ್ವಗಳನ್ನು ಪ್ರತಿಪಾದಿಸಲು ಸಮರ್ಥನಾದ. ಇಂದಿಗೂ ಅವನ ಶಿಕ್ಷಣತತ್ತ್ವಗಳು ಮಾರ್ಗದರ್ಶಕವಾಗಿದ್ದು ಅವನಿಗೆ "ಆಧುನಿಕ ಶಿಕ್ಷಣಕ್ರಮದ ಪ್ರವಾದಿ" ಎಂಬ ಕೀರ್ತಿ ತಂದಿವೆ.

ಶಿಕ್ಷಣದ ಉದ್ದೇಶ

ಕೊಮೀನಿಯಸ್ ಶ್ರದ್ಧಾವಂತ ಕ್ರೈಸ್ತನಾಗಿದ್ದುದರಿಂದ ಬದುಕಿನ ಕೃತಕೃತ್ಯತೆ ಇರುವುದು ಪರಮಾತ್ಮ ಸಾನ್ನಿಧ್ಯ ಸಂಪಾದನೆಯಲ್ಲಿ ಎಂದು ನಂಬಿದ್ದ. ಇದೇ ಬದುಕಿನ ಪರಮೋದ್ದೇಶ ಅಂತೆಯೇ ಶಿಕ್ಷಣದ ಗುರಿಯೆಂದರೆ ಧರ್ಮಶ್ರದ್ಧೆ. ಶಿಕ್ಷಣದ ಇತರ ಮೂಲೋದ್ದೇಶಗಳು ಜ್ಞಾನಸಂಪಾದನೆ ಮತ್ತು ಶೀಲಸಂವರ್ಧನೆ. ಇಹಲೋಕದ ಸತ್ಯಸಂಗತಿಗಳನ್ನು ಅರಿಯದ ಹೊರತು ನಿತ್ಯಸತ್ಯದ ಅರಿವು ಅಸಾಧ್ಯ. ಪ್ರಕೃತಿಸಿದ್ಧ ಪ್ರಪಂಚದ ತಿಳಿವಳಿಕೆಯೇ ಪರಮಾರ್ಥಸಾಧನೆಗೆ ಮೆಟ್ಟಿಲು. ವಿಜ್ಞಾನದ ಮೂಲಕವೇ ನಿಜವಾದ ಜ್ಞಾನ ಸಾಧ್ಯ. ಧರ್ಮಶ್ರದ್ಧೆ ಮತ್ತು ಜ್ಞಾನಸಂಪಾದನೆಗಳಂತೆಯೇ ಸದ್ಗುಣಸಂಪಾದನೆಯೂ ಅತಿ ಮುಖ್ಯವೆಂದು ಕೊಮೀನಿಯಸ್ ಭಾವಿಸಿದ್ದ.

ಶಾಲೆಯ ಮಹತ್ತ್ವ

ಕೊಮೀನಿಯಸನ ಕಾಲದಲ್ಲಿ ಶಾಲೆಗಳು ಶ್ರೀಮಂತರ ಮತ್ತು ಬುದ್ಧಿವಂತರ

ಸ್ವತ್ತುಗಳಾಗಿದ್ದುವು. ಅವು ಬಹುತೇಕ ಗಂಡುಮಕ್ಕಳಿಗೆ ಮೀಸಲು. "ದೇವರಿಂದ ಇಂದ್ರಿಯಶಕ್ತಿ ಮತ್ತು ಬುದ್ಧಿಶಕ್ತಿ ಪಡೆಯದ ನತದೃಷ್ಟನೊಬ್ಬನನ್ನು ಬಿಟ್ಟು ಮಿಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಶಾಲಾಶಿಕ್ಷಣದ ಸೌಲಭ್ಯ ದೊರೆಯಬೇಕು" ಎಂಬುದು ಕೊಮೀನಿಯಸನ ಸೂತ್ರವಾಗಿತ್ತು. ಅವರವರ ಶಕ್ತಿಸಾಮರ್ಥ್ಯಗಳಿಗನುಗುಣ ವಾಗಿ ಶಿಕ್ಷಣದ ಮೂಲೋದ್ದೇಶಗಳಾದ ಧರ್ಮಶ್ರದ್ಧೆ, ಶೀಲ ಮತ್ತು ಜ್ಞಾನ ಸಂಪಾದನೆಯಲ್ಲಿ ಎಲ್ಲರಿಗೂ ಅವಕಾಶವಿರಬೇಕೆಂದು ಅವನು ವಾದಿಸಿದ.

ಶಿಕ್ಷಣ ತನ್ನ ಪವಿತ್ರ ಗುರಿಗಳನ್ನು ಸಂಪಾದಿಸಬೇಕಾದರೆ ಶಾಲೆಯಲ್ಲಿ ಒಂದು ವ್ಯವಸ್ಥೆಯಿರಬೇಕು. ಮಗು ಮೊದಲ ಆರು ವರ್ಷಗಳ ಕಾಲ ತಾಯಿ ಯೊಂದಿಗೆ ಮನೆಯಲ್ಲಿ ಬೆಳೆಯಬೇಕು. ಅನಂತರ ೬ರಿಂದ ೧೨ನೆಯ ವರ್ಷದ ವರೆಗೆ ದೇಶಭಾಷಾ ಶಾಲೆಗಳಲ್ಲಿ (ವರ್ನಾಕ್ಯುಲರ್ ಸ್ಕೂಲ್) ಕಲಿಯಬೇಕು. ಅನಂತರ ೧೨ರಿಂದ ೧೮ರ ವರೆಗಿನ ವಿದ್ಯಾಭ್ಯಾಸ ಲ್ಯಾಟಿನ್ ಶಾಲೆಗಳಲ್ಲಿ ನಡೆಯ ಬೇಕು. ಕೊನೆಯಲ್ಲಿ ೧೮ರಿಂದ ೨೪ನೆಯ ವಯಸ್ಸಿನ ವರೆಗೆ ವಿಶ್ವವಿದ್ಯಾನಿಲಯದಲ್ಲಿ ಮುಂದುವರಿಯಬೇಕು. ಮೊದಲ ರೀತಿಯ ಶಾಲೆಗಳು ಪ್ರತಿಯೊಂದು ಮನೆ ಯಲ್ಲಿಯೂ, ದೇಶಭಾಷಾಶಾಲೆಗಳಾದ ಪ್ರಾಥಮಿಕ ಶಾಲೆಗಳು ಪ್ರತಿ ಹಳ್ಳಿ ಯಲ್ಲಿಯೂ, ಲ್ಯಾಟಿನ್ ಶಾಲೆಗಳು ಪ್ರತಿ ನಗರದಲ್ಲಿಯೂ, ವಿಶ್ವವಿದ್ಯಾನಿಲಯಗಳು ಪ್ರತಿ ದೇಶದಲ್ಲಿಯೂ ಸ್ಥಾಪಿತವಾಗಬೇಕು. ಪ್ರಾಥಮಿಕ ಶಾಲೆಗಳು ಮತ್ತು ಲ್ಯಾಟಿನ್ ಶಾಲೆಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶವಿರಬೇಕು; ಶ್ರೀಮಂತರಿಗೆ, ಬುದ್ಧಿವಂತರಿಗೆ ಮಾತ್ರ ಆಗಬಾರದು. ವಿಶ್ವವಿದ್ಯಾನಿಲಯಗಳ ಲ್ಲಾದರೋ ನೈಜ ಬುದ್ಧಿಶಾಲಿಗಳಿಗೆ ಮಾತ್ರ ಪ್ರವೇಶಸೌಲಭ್ಯವಿರಬೇಕು.

ಬೋಧನೆಯ ವಸ್ತು

ಶಿಕ್ಷಣದ ಪರಮೋದ್ದೇಶಸಾಧನೆಗೆ ಅತ್ಯಂತ ಮುಖ್ಯ ಮಾರ್ಗವೆಂದರೆ ಜ್ಞಾನ ಸಂಪಾದನೆ. ಆದರೆ "ಜ್ಞಾನ"ವೆಂದರೆ ಕೇವಲ ಧಾರ್ಮಿಕಗ್ರಂಥಗಳಿಗೆ ಮತ್ತು ಲ್ಯಾಟಿನ್ ಭಾಷೆಗೆ ಸಂಬಂಧಪಟ್ಟ ವಿಷಯಗಳಿಗೆ ಮಾತ್ರ ಸೀಮಿತವಲ್ಲ. ವಿಜ್ಞಾನದ ಮೂಲಕ ಸಂಪಾದನೆಮಾಡಿದ ತಿಳಿವಳಿಕೆಯೂ ಬಹಳ ಮುಖ್ಯ. ಆಗ ತಾನೆ ಸರ್ ಫ್ರಾನ್ಸಿಸ್ ಬೇಕನ್ ಪ್ರಚುರಪಡಿಸುತ್ತಿದ್ದ ವಿಜ್ಞಾನವಿಷಯಗಳಿಗೆ ಶಾಲಾ ಕಾಲೇಜುಗಳಲ್ಲಿ ಮಹತ್ತ್ವದ ಸ್ಥಾನವಿರಬೇಕೆಂದು ಕೊಮೀನಿಯಸ್ ಸಾರಿದ.

ಕೊಮೀನಿಯಸ್ ತನ್ನ "ಪ್ಯಾನ್‌ಸೋಫಿಯ" ಎಂಬ ತತ್ತ್ವಕ್ಕೆ ಪ್ರಸಿದ್ಧ ನಾಗಿದ್ದಾನೆ. ಪ್ಯಾನ್‌ಸೋಫಿಯ ಎಂದರೆ ಅಖಂಡ ವಿವೇಕ ಪ್ರಪಂಚದ ಎಲ್ಲ ಜ್ಞಾನದ ತಿರುಳು; ಅರಿವಿನ ಸಾರ. ಈ ಸಾರಸರ್ವಸ್ವವನ್ನು ಪ್ರತಿಯೊಬ್ಬ ವ್ಯಕ್ತಿಗೂ ತಿಳಿಯಪಡಿಸಬೇಕು. ಈ ಪ್ರಕೃತಿಸಿದ್ಧ ತಿಳಿವಳಿಕೆಯೇ ಶಿಕ್ಷಣದ ಪವಿತ್ರ ಉದ್ದೇಶವಾದ ಧರ್ಮಶ್ರದ್ಧೆಯ ಬೆಳೆವಣಿಗೆಗೆ ಸೋಪಾನ. ಎಲ್ಲ ಶಾಲೆಗಳೂ

ಶಿಕ್ಷಣ ಸಂಸ್ಥೆಗಳೂ ಈ ಅಖಂಡ ವಿವೇಕದ ಪರಿಚಯವನ್ನು ತಮ್ಮ ವಿದ್ಯಾರ್ಥಿಗಳಿಗೆ ಮಾಡಿಸಬೇಕು.

ಬೋಧನೆಯ ಕ್ರಮ

ಕೊಮೀನಿಯಸನ ದೃಷ್ಟಿಯಲ್ಲಿ ಅಂದಿನ ಶಿಕ್ಷಣಕ್ರಮದ ದೋಷಗಳಲ್ಲಿ ಅತ್ಯಂತ ಮೂಲಭೂತವಾದುದು ಬೋಧನೆಯ ಕ್ರಮ. "ಶಾಲೆಗಳು ಕೇವಲ ಕಟುಕರ ಮನೆಗಳು; ಬರಿಯ ಬೆದರಿಕೆ ಹಿಂಸೆಗಳಿಂದ ಮಕ್ಕಳನ್ನು ಬೆಳಸಿ ಅವರ ಬುದ್ಧಿಶಕ್ತಿಯನ್ನೇ ಮೊಟಕುಮಾಡುತ್ತಿವೆ. ಶಾಲೆಗಳಲ್ಲಿನ ಬೋಧನೆಯ ಕ್ರಮದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಆದ ಹೊರತು ಶಿಕ್ಷಣಕ್ಕೆ ಮೋಕ್ಷವಿಲ್ಲ" ಎಂದು ಆತ ಹೇಳಿದ. ಶಾಲೆಯ ಕಾರ್ಯಕ್ಷೇತ್ರಕ್ಕೆ ಬೋಧನೆಯ ಕ್ರಮವೇ ಜೀವಾಳ. ಆದುದರಿಂದ:

(i) ಮಗು ಎಳೆಯದಾಗಿದ್ದಾಗಲೇ ಶಿಕ್ಷಣ ಪ್ರಾರಂಭವಾಗಬೇಕು.

(ii) ಸುಲಭವಾದ ವಿಷಯಗಳ ಮೂಲಕ ಗಹನವಿಷಯಗ್ರಹಣಕ್ಕೆ ಪ್ರಯತ್ನಪಡಬೇಕು.

(iii) ಪ್ರಾರಂಭದಲ್ಲಿ ವಿದ್ಯೆ ಇಂದ್ರಿಯಗಳ ಮೂಲಕ ನಡೆಯಬೇಕು. ಮೂರ್ತ ಅಂಶಗಳ ಮೂಲಕವೇ ಅಮೂರ್ತ ಭಾವನೆಗಳ ಕಲಿಕೆ ನಡೆಯಬೇಕು.

(iv) ಬಾಲಕನ ಸ್ವಭಾವ, ಶ್ರದ್ಧಾಸಕ್ತಿ ಮತ್ತು ಚೇತನಶಕ್ತಿಗಳಿಗನುಸಾರವಾಗಿ ಶಿಕ್ಷಣ ನೀಡಬೇಕು.

(v) ಬದುಕಿಗೆ ಸಹಾಯಕವಾಗುವ ಅಂಶಗಳನ್ನಷ್ಟೇ ಭೋಧಿಸಲು ಪ್ರಯತ್ನಿಸಬೇಕು. ಅಂದರೆ ಕಲಿಯುವ ಪ್ರತಿಯೊಂದು ವಿಷಯದ ವಸ್ತುವಿನ ಉಪಯುಕ್ತತೆಯ ಬಗ್ಗೆ ಸರಿಯಾದ ಮಾಹಿತಿ ಪಡೆದೇ ಅವುಗಳ ಬೋಧನೆಗೆ ಕೈಹಚ್ಚಬೇಕು.

(vi) ಬೋಧನೆ ಕೇವಲ ವಿಷಯಗಳ ಸಂಗ್ರಹಣೆ ಮತ್ತು ನಿರೂಪಣೆಯಾಗಿ ಮಾತ್ರ ಉಳಿಯಬಾರದು. ಹಾಗಾದರೆ ಆ ವಿಷಯಗಳು ವ್ಯಕ್ತಿಯ ರಕ್ತಗತವಾಗುವುದಿಲ್ಲ. ಅಂತೆಯೇ ಅದು ಶಿಕ್ಷಣವೂ ಅಲ್ಲ. "ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಸ್ವಂತ ಕಣ್ಣಿನಿಂದ, ತನ್ನ ಸ್ವಂತ ಮನಸ್ಸಿನಿಂದ ವಿಷಯಗಳನ್ನು ಕಂಡು, ಮನನ ಮಾಡಿ ತನ್ನದಾಗಿ ಮಾಡಿಕೊಳ್ಳಬೇಕು." ಎಂದರೆ ಶಿಕ್ಷಣ ಕ್ರಮದಲ್ಲಿ ವ್ಯಕ್ತಿಚಿಂತನೆಗೆ ಸದವಕಾಶವಿರಬೇಕು.

(vii) ಎಲ್ಲ ಜ್ಞಾನವನ್ನೂ ಎಲ್ಲರಿಗೂ ಒಂದೇ ಸಮನಾಗಿ ಸರ್ವಶಕ್ತಿ ಯುತ ಬೋಧನೆಯ ಕ್ರಮವನ್ನನುಸರಿಸಿ ಬೋಧಿಸುವಂತಾಗ ಬೇಕು. ಅಂದರೆ ಶಿಕ್ಷಣ ಎಲ್ಲ ಕಾಲಕ್ಕೂ ಎಲ್ಲ ವ್ಯಕ್ತಿಗೂ ಅನುಗುಣವಾದ ಶಿಷ್ಟ ಬೋಧನೆಯ ಕ್ರಮವನ್ನು ಅನುಸರಿಸ ಬೇಕು.

ಶಿಕ್ಷಣದಲ್ಲಿ ಹೇಗೆ ಬೋಧನೆಯ ಪದ್ಧತಿಗೆ ಶ್ರೇಷ್ಠ ಸ್ಥಾನವಿದೆಯೋ ಹಾಗೆಯೇ ಪಠ್ಯಪುಸ್ತಕಗಳಿಗೆ ಪ್ರಧಾನಸ್ಥಾನವಿದೆ. ಆಗಿನ ಕಾಲದ ಪುಸ್ತಕಗಳಲ್ಲಿ ಅನೇಕ ದೋಷಗಳನ್ನು ಕಂಡುಹಿಡಿದ ಕೊಮೀನಿಯಸ್ ತನ್ನದೇ ಆದ ಸುಧಾರಿತ ಲ್ಯಾಟಿನ್ ಭಾಷಾಬೋಧೆಗಳನ್ನು ಪ್ರಕಟಿಸಿದ. ಮೊದಲಬಾರಿಗೆ ಅವುಗಳಲ್ಲಿ ಚಿತ್ರಗಳನ್ನೂ ದೇಶಭಾಷೆಯನ್ನೂ ಸೇರಿಸಿದ.

ಆಧುನಿಕ ಶಿಕ್ಷಣಶಾಸ್ತ್ರದ ದೃಷ್ಟಿಯಿಂದ ಕೊಮೀನಿಯಸನ ವಿಚಾರಗಳಲ್ಲಿ ಹಲವು ದೋಷಗಳಿವೆಯಾದರೂ ಅವನು ಬೋಧಿಸಿದ "ಎಲ್ಲರಿಗೂ ವಿದ್ಯಾಭ್ಯಾಸ ವಿರಬೇಕು, ಶಾಲೆಗಳು ಎಲ್ಲರ ಸ್ವತ್ತು" ಎಂಬ ತತ್ತ್ವದ ಮಹತ್ತ್ವದ ಅರಿವು ೨೦ನೆಯ ಶತಮಾನದಲ್ಲೂ ಇನ್ನೂ ಸಂಪೂರ್ಣವಾಗಿ ಆಗಿಲ್ಲ. ಸಾರ್ವತ್ರಿಕ ಕಡ್ಡಾಯ ಶಿಕ್ಷಣದ ಮತ್ತು ಸಾರ್ವಜನಿಕ ಶಾಲೆಯ ತತ್ತ್ವಗಳು ಇನ್ನೂ ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಶಿಕ್ಷಣಕ್ಕೆ ಅರ್ಹ, ಅದು ಅವನ ಆಜನ್ಮ ಹಕ್ಕು ಎಂಬುದನ್ನು ಮೂರು ಶತಮಾನಗಳ ಹಿಂದೆಯೇ ನಂಬಿ ಸಾರಿದ್ದು ಕೊಮೀನಿಯಸನ ಹೆಚ್ಚುಗಾರಿಕೆ.

ಶಿಕ್ಷಣವಸ್ತುವಿನ ಬಗ್ಗೆ ಅವನು ತಳೆದಿದ್ದ ತಿಳಿವಳಿಕೆ (ಅದರಲ್ಲೂ ಪಾನ್ ಸೋಫಿಯ ತತ್ತ್ವ) ಅಷ್ಟಾಗಿ ಶಾಸ್ತ್ರೀಯವೂ ಅನ್ವಯಸಾಧ್ಯವೂ ಆಗಿರಲಿಲ್ಲ ನಿಜ. ಶಾಲೆಗಳ ಮೇಲೆ ಅವು ಹೊರಲಾಗದಷ್ಟು ಹೊರೆ ಹೇರಿದುವೆಂಬುದೂ ನಿಜ. ಆದರೆ ವಿಜ್ಞಾನವಿಷಯಗಳಿಗೆ ನೀಡಿದ ಪ್ರಾಧಾನ್ಯ, ದೇಶಭಾಷೆಯ ಮನ್ನಣೆ—ಇವುಗ ಳಿಂದಾಗಿ ಕೊಮೀನಿಯಸ್ ಶಿಕ್ಷಣದಲ್ಲಿ ಹೊಸ ಹೆಜ್ಜೆ ತುಳಿದ.

ಶಿಕ್ಷಣ ಮಕ್ಕಳ ಮನಸ್ಸಿನ ಶಕ್ತಿ ಆಸಕ್ತಿ ಸಾಮರ್ಥ್ಯಗಳಿಗೆ ಅನುಗುಣ ವಾಗಿರಬೇಕೆಂಬ, ಈಗಿನ ಕಾಲದಲ್ಲಿ ಅತ್ಯುತ್ತಮವೆಂದು ಪರಿಗಣಿಸಲಾಗಿರುವ, ತತ್ತ್ವವನ್ನು ರೂಸೋ, ಪೆಸ್ಟೊಲಾಡ್ಜಿ ಮೊದಲಾದ ಶಾಸ್ತ್ರಜ್ಞರಿಗಿಂತ ಮೊದಲೇ ಕೊಮೀನಿಯಸ್ ಸಾರಿದ. ಇದು ಶಿಕ್ಷಣಕ್ಕೆ ಕೊಮೀನಿಯಸನ ಕ್ರಾಂತಿಕಾರಕವಾದ ಶಾಶ್ವತ ಕೊಡುಗೆ.

ಕೊಮೀನಿಯಸ್ ಮತ್ತು ಅವನ 'ದಿ ಗ್ರೇಟ್ ಡೈಡಾಕ್ಟಿಕ್' ಶಿಕ್ಷಣ ರಂಗದಲ್ಲಿ ಎಂದಿಗೂ ಅಳಿಯದ ಹೆಸರುಗಳು.

ಡಾ. ಪಿ. ಗುರುರಾಜ ಭಟ್

ದಕ್ಷಿಣ ಕನ್ನಡದ ಗಣೇಶ ಬಿಂಬಗಳು

ವಿಘ್ನೇಶ್ವರ ಅಥವಾ ಗಣೇಶನ ಆರಾಧನೆಯನ್ನು ಹಿಂದೂ ಧರ್ಮಾವಲಂಬಿಗಳು ಯಾವ ಒಂದು ಸಂಸ್ಕಾರ ಅಥವಾ ಧಾರ್ಮಿಕ ಸತ್ಕರ್ಮವನ್ನು ಆರಂಭಿಸುವ ಮೊದಲು ಮಾಡುವುದು ಪದ್ಧತಿಯಾಗಿದೆ. ಈತ ವಿಘ್ನ ವಿನಾಶಕನಾಗಿಯೂ ಕ್ಷಿಪ್ರಫಲಪ್ರದಾಯಕನಾಗಿಯೂ ಆರಾಧಿಸಲ್ಪಡುವುದು ಸಂಪ್ರದಾಯವಾಗಿದೆ. ವಿಘ್ನೇಶ್ವರನ ಹುಟ್ಟು ಹೇಗೆ ಎಂಬುದರ ಬಗೆಗೆ ಬಹಳ ಭಿನ್ನಾಭಿಪ್ರಾಯಗಳಿವೆ. ಧಾರ್ಮಿಕ ಸಾಹಿತ್ಯಗಳಾಗಲಿ ಒಂದೇ ಮತವನ್ನು ವ್ಯಕ್ತಮಾಡುವುದಿಲ್ಲ. ಈ ವಿಚಿತ್ರ ದೇವತೆಯ ಹುಟ್ಟಿನ ಕುರಿತಾಗಿ ಲಿಂಗಪುರಾಣ, ಶಿವಪುರಾಣ, ಸ್ಕಾಂದಪುರಾಣ, ವರಾಹಪುರಾಣ ಹಾಗೂ ಮತ್ಸ್ಯಪುರಾಣಗಳಲ್ಲಿ ಬೇರೆ ಬೇರೆ ವಿವರಗಳು ಕಂಡು ಬರುತ್ತವೆ. ಸುಪ್ರಭೇದಾಗಮ ಒಂದು ರೀತಿಯ ವಿವರವನ್ನೀಯುತ್ತದೆ. ಬ್ರಹ್ಮವೈವರ್ತ ಪುರಾಣ ಗಣೇಶನನ್ನು ಕೃಷ್ಣನೆಂಬುದಾಗಿಯೇ ಕರೆದು ಸರ್ವ ಶಕ್ತನನ್ನಾಗಿ ಅಂಗೀಕರಿಸುತ್ತದೆ. ಐತರೇಯ ಬ್ರಾಹ್ಮಣದ ಪ್ರಕಾರ ವಿಘ್ನೇಶ್ವರ ಬ್ರಹ್ಮನೂ ಬ್ರಹ್ಮಣಸ್ಪತಿಯೂ ಬೃಹಸ್ಪತಿಯೂ ಆಗಿದ್ದಾನೆ.

ವಿಘ್ನೇಶ್ವರ ಅಥವಾ ವಿನಾಯಕನ ಹುಟ್ಟು ಬೆಳೆವಣಿಗೆ ಹಾಗೂ ಕಾರ್ಯ ಕಲಾಪಗಳ ಕುರಿತಾಗಿ ವಿವರ ವಿಮರ್ಶೆಯನ್ನೀಯುವ ಉದ್ದೇಶವನ್ನು ಇಟ್ಟು ಕೊಂಡು ಬರೆದ ಲೇಖನವಿದಲ್ಲ. ದಕ್ಷಿಣ ಕನ್ನಡದಲ್ಲಿ ವಿಘ್ನೇಶ್ವರನ ಆರಾಧನೆ ಎಂದಿನಿಂದ ಪ್ರಾರಂಭವಾಯಿತು ಮತ್ತು ಶಿಲ್ಪದಲ್ಲಿ ಈತನ ನಿರ್ದೇಶನ ಯಾವ ಯಾವ ರೀತಿಯಲ್ಲಿ ಯಾವ ಯಾವ ಶೈಲಿಯಲ್ಲಿ ಯಾವ ಯಾವ ಕಾಲಮಾನಕ್ಕೆ ಒಪ್ಪುವಂತೆ ಕಂಡುಬರುತ್ತದೆ ಎಂಬ ಐತಿಹಾಸಿಕ ವಿವೇಚನೆಯನ್ನೊಳಗೊಂಡ ಒಂದು ಲೇಖನವಿದಾಗಿದೆ. ಇದರಲ್ಲಿ ನಮೂದಿಸಿದ ಕಾಲಮಾನ ಸ್ಥೂಲವಾಗಿ ಸ್ವೀಕೃತವಾಗಬಹುದು.

ಗಣೇಶ ದೇವಾಲಯಗಳು

ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ಇತಿಹಾಸದಲ್ಲಿ ಗಣೇಶನ ಉಪಾಸನೆ ಸಾಕಷ್ಟು ಮಹತ್ತ್ವದ ಸ್ಥಾನ ಹೊಂದಿದೆ. ಆದಿ ಶಂಕರಾಚಾರ್ಯರ ಕಾಲಕ್ಕಿಂತಲೂ

ಪೂರ್ವದಲ್ಲಿ ದಕ್ಷಿಣ ಕನ್ನಡದಲ್ಲಿ ಸಾರಸ್ವತ, ಗಾಣಪತ್ಯ, ಶಾಕ್ತೇಯ, ಶೈವ, ಸೌರ ಪಂಥಗಳು ಪ್ರಬಲವಾಗಿದ್ದು ತಮ್ಮ ತಮ್ಮ ಶ್ರೇಷ್ಠತೆಯನ್ನೇ ಪ್ರತಿಪಾದಿಸುತ್ತಿದ್ದುವೆಂದೂ ಆಚಾರ್ಯರು ಈ ಮತಗಳನ್ನು ಖಂಡಿಸಿ ಪಂಚಾಯತನವನ್ನು [ಶಿವ, ವಿಷ್ಣು, ಅಂಬಿಕಾ, ಆದಿತ್ಯ, ಗಣಪತಿ ಇವರ ಆರಾಧನೆ] ಬಳಕೆಗೆ ತಂದರೆಂದೂ ಶ್ರೀ ಶಂಕರವಿಜಯದಿಂದ ತಿಳಿದುಬರುತ್ತದೆ. ಈ ಜಿಲ್ಲೆಯ ಎಲ್ಲ ಕಡೆಗಳಲ್ಲೂ ಆರಾಧಿಸಲ್ಪಡುವ [ಮೂಲಸ್ಥಾನ ಮೂರ್ತಿಯಾಗಿಯೂ ಉಪಸ್ಥಾನ ಮೂರ್ತಿಯಾಗಿಯೂ ಇರುವ] ಶ್ರೀ ಗಣೇಶ ವಿಗ್ರಹಗಳನ್ನು ಪರಿಶೀಲಿಸಿದಾಗ ಶಿಲ್ಪಶೈಲಿಯ ವೈವಿಧ್ಯ ಮಾತ್ರವಲ್ಲದೆ ಕಾಲಮಾನ ಸ್ಥೂಲವಾಗಿ ವೇದ್ಯವಾಗುತ್ತದೆ. ಈ ಪ್ರದೇಶದಲ್ಲಿ ಶಿಲ್ಪಶೈಲಿಯಲ್ಲಿ ಕಂಡುಬರುವ ವಿವಿಧತೆ ಇತರತ್ರ ದುರ್ಲಭವೆಂದೆನಿಸುವಷ್ಟು ಆಶ್ಚರ್ಯದಾಯಕವಾಗಿದೆ. ಈ ಮೂರ್ತಿಗಳು ಉಪಾಸನೆಯ ದೃಷ್ಟಿಯಿಂದ ನಿರ್ಮಿಸಲ್ಪಟ್ಟು ಪ್ರತಿಷ್ಠಾಪಿತವಾದವುಗಳಾಗಿವೆ. ಇವು ಪ್ರಮಾಣದಲ್ಲಿ ಸುಮಾರು ಎಂಟು ಅಂಗುಲಗಳಿಂದ ಆರಂಭವಾಗಿ ಆರು ಅಡಿ ಎತ್ತರವಾಗಿ ಇರುವುದು ಕಂಡುಬರುತ್ತದೆ. ಪ್ರಮುಖವಾದ ಶೈವಶಾಕ್ತೇಯ ದೇವಾಲಯಗಳಲ್ಲೆ ಉಪಸ್ಥಾನ ದೇವತೆಯಾಗಿ ಶ್ರೀ ಗಣೇಶ ಉಪಾಸನೆಗೆ ಒಳಗಾಗಿದ್ದಾನೆ. ಅಂತೆಯೇ ವಿಘ್ನೇಶ್ವರನೇ ಮೂಲಸ್ಥಾನ ದೇವತೆಯಾಗಿರುವ ದೇವಾಲಯಗಳು ಅಧಿಕ ಸಂಖ್ಯೆಯಲ್ಲಿರುವುದು ಈ ದೇವತೆಯ ಕಡೆಗಿರುವ ಭಕ್ತಿ ಶ್ರದ್ಧೆಯನ್ನೂ ಈ ಪಂಥದ ಪ್ರಾಬಲ್ಯವನ್ನೂ ತಿಳಿಯಪಡಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಷ್ಟು ವಿಘ್ನೇಶ್ವರ ದೇವಾಲಯಗಳು ಪ್ರಾಯಶಃ ಇತರ ಕಡೆಗಳಲ್ಲಿ ದುರ್ಲಭವೆನ್ನಬಹುದು. ಗಣಪತಿಯ ಈ ಕೆಳಗಿನ ದೇವಮಂದಿರಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು :

(೧) ಉದಯಪುರದ ದ್ವಿಬಾಹು ಶ್ರೀ ಗಣೇಶ ದೇವಾಲಯ,
(೨) ಉಡುಪಿಯ ಬಳಿ ಇರುವ ಉಪ್ಪೂರಿನ ಶ್ರೀ ಗಣಪತಿ ದೇವಾಲಯ,
(೩) ಕುಂದಾಪುರ ತಾಲ್ಲೂಕಿನ ಆನೆಗುಡ್ಡೆ ಗಣಪತಿ ದೇವಾಲಯ,
(೪) ಐತಿಹಾಸಿಕ ಪ್ರಸಿದ್ಧಿಪಡೆದ ಬಾರಕೂರಿನ ದ್ವಿಬಾಹು ಬಟ್ಟೆವಿನಾಯಕ ದೇವಾಲಯ,
(೫) ಬಾರಕೂರಿನ ಚೌಳಿಕೇರಿಯ ದ್ವಿಬಾಹು ಶ್ರೀ ಗಣಪತಿ ದೇವಾಲಯ,
(೬) ಬಾರಕೂರಿನ ಮೂಡುಕೇರಿಯ ಶ್ರೀ ಗಣಪತಿ ದೇವವಿಗ್ರಹ,
(೭) ಬಾರಕೂರಿನ ಇಲಿ ಗಣಪತಿ ದೇವಾಲಯ,
(೮) ಈ ಊರಿನ ಇನ್ನಿತರ ಮೂರು ಗಣಪತಿ ದೇವಾಲಯಗಳು,
(೯) ಕಡಬದ ಶ್ರೀಮಹಾಗಣಪತಿ ದೇವಾಲಯ,

(೧೦) ಉಡುಪಿ ತಾಲ್ಲೂಕಿನ ಕೆಮ್ಮಣ್ಣಿನ ಶ್ರೀ ಮಹಾಗಣಪತಿ ದೇಗುಲ,
(೧೧) ಇದೇ ತಾಲ್ಲೂಕಿನ ಪಾದೂರಿನ ಶ್ರೀ ಗಣೇಶ ದೇಗುಲ,
(೧೨) ಕಾರ್ಕಳದ ವಿನಾಯಕ ಬೆಟ್ಟಿನ ದೇಗುಲ,
(೧೩) ಕುಂದಾಪುರ ತಾಲ್ಲೂಕಿನ ಹಟ್ಟಿಯ ಕುದುರಿನ ಶ್ರೀ ವಿನಾಯಕ ದೇವಾಲಯ,
(೧೪) ಅದೇ ತಾಲ್ಲೂಕಿನ ಗುಡ್ಡೆಟ್ಟು ಎಂಬಲ್ಲಿಯ ಗಣಪತಿ ದೇವಾಲಯ,
(೧೫) ಉಡುಪಿ ತಾಲ್ಲೂಕಿನ ಕೋಟದ ಎರಡು ಗಣೇಶ ದೇಗುಲಗಳು,
(೧೬) ಅದೇ ತಾಲ್ಲೂಕಿನ ಪೇರಂಪಳ್ಳಿಯ ವಿನಾಯಕ ದೇಗುಲ.

ಮಹತ್ತ್ವ ಹಾಗೂ ಆರಾಧನೆಯ ದೃಷ್ಟಿಯಿಂದ ವಿವೇಚಿಸುವಾಗ ಶ್ರೀ ಗಣಪತಿಯ ಉಪಸ್ಥಾನ ಮೂರ್ತಿಗಳಲ್ಲಿ ಮಧೂರು, ನಂದಾವರ, ಮಂಗಳೂರಿನ ವರಮು, ಪೆರಣಂತಿಲ, ಉಡುಪಿಯ ಅನಂತೇಶ್ವರ, ಕೋಟೀಶ್ವರ ಇಲ್ಲಿಯ ವಿನಾಯಕ ಮೂರ್ತಿಗಳು ಬಹಳ ಪ್ರಾಮುಖ್ಯ ಹೊಂದಿವೆ.

ಪ್ರಾಚೀನ ಸಾಹಿತ್ಯದಲ್ಲಿ ವಿಘ್ನೇಶ್ವರನ ಉಲ್ಲೇಖ

ಕಾಲಮಾನದ ದೃಷ್ಟಿಯಿಂದ ವಿವೇಚಿಸುವಾಗ ಸುಮಾರು ಏಳೆಂಟು ಶತಮಾನಗಳಿಂದ ಆರಂಭವಾಗಿ ಕೆಳದಿ ನಾಯಕರ ಆಳ್ವಿಕೆಯ ಕಾಲದ ಎಂದರೆ ಕ್ರಿ. ಶ. ೧೭ನೆಯ ಶತಮಾನದ ವರೆಗೆ ನಿರ್ಮಾಣವಾದ ಗಣೇಶಮೂರ್ತಿಗಳು ಕಂಡು ಬರುತ್ತವೆ. ಕ್ರಿ. ಶ. ೧೦-೧೧ನೆಯ ಶತಮಾನಕ್ಕಿಂತ ಪ್ರಾಚೀನವಾದ ವಿಗ್ರಹಗಳೂ ಅನೇಕ ಇವೆ. ಸಮಗ್ರ ಭಾರತದಲ್ಲೇ ಶ್ರೀ ವಿನಾಯಕನ ಆರಾಧನೆಯನ್ನು ಶಿಲ್ಪದಲ್ಲಿ ಸುಮಾರು ಕ್ರಿ. ಶ. ೫ನೆಯ ಶತಮಾನಕ್ಕಿಂತ ಹಿಂದಣ ಕಾಲಕ್ಕೆ ಕೊಂಡೊಯ್ಯುವುದು ಕಷ್ಟ. ಅದಕ್ಕಿಂತ ಹಳೆಯ ಕಾಲದ ಮೂರ್ತಿಗಳು ಇಷ್ಟರ ತನಕ ದೊರಕಿದ್ದಿಲ್ಲ. ಆದರೆ ಅಮರಕೋಶ ನಿರ್ಮಾಣವಾದ ಕಾಲಕ್ಕೆ ಎಂದರೆ ಕ್ರಿ. ಶ. ೫ನೆಯ ಶತಮಾನದ ಸುಮಾರಿಗೆ ಶ್ರೀ ಗಣೇಶನನ್ನು ವಿನಾಯಕ, ವಿಘ್ನರಾಜ, ದ್ವೈಮಾತುರ, ಗಣಾಧಿಪ, ಏಕದಂತ, ಹೇರಂಬ, ಲಂಬೋದರ ಮತ್ತು ಗಜಾನನ ಎಂಬ ಎಂಟು ಹೆಸರುಗಳನ್ನಾಂತು ಶಿಲ್ಪದಲ್ಲಿ ನಿರ್ದೇಶನ ಮಾಡಿ ಆರಾಧಿಸುವುದು ಪ್ರಾರಂಭವಾಗಿತ್ತೆಂದು ತಿಳಿದುಬರುತ್ತದೆ. ಪ್ರಾಚೀನ ಸಾಹಿತ್ಯಗಳನ್ನು ಪರಿಶೀಲಿಸಿದಾಗ ಶ್ರೀ ಗಣಪತಿಯ ಉಲ್ಲೇಖ ಹಲವಲ್ಲಿ ಕಂಡುಬರುತ್ತದೆ. ವೈದಿಕ ಸಾಹಿತ್ಯದಲ್ಲಿ ನಮೂದಿಸಲ್ಪಟ್ಟ ಗಣಪತಿ ಪರಮಾತ್ಮನೇ ಹೊರತು ಗಜಮುಖನಾದ ಪೌರಾಣಿಕ ಗಣೇಶನಲ್ಲವೆಂಬುದು ವಿದ್ವಾಂಸರ ಅಭಿಪ್ರಾಯ. ಕ್ರಿ. ಪೂ. ಸುಮಾರು ೨೦೦ರಿಂದ ಕ್ರಿ. ಶ. ೨೦೦ರ ಅವಧಿಯಲ್ಲಿ ರಚನೆಯಾಗಿರಬಹುದಾದ ಮಾನವ ಗೃಹ್ಯ ಸೂತ್ರದಲ್ಲಿಯೂ ಕ್ರಿ. ಶ. ಸುಮಾರು ೨೦೦ರ ಕಾಲಕ್ಕೆ ಅನ್ವಯಿಸ

ಬಹುದಾದ ಬೌದ್ಧಾಯನ ಗೃಹಪರೇಶ ಶೇಷಸೂತ್ರದಲ್ಲಿಯೂ ಮಹಾಭಾರತ ದಲ್ಲಿಯೂ ಶ್ರೀ ಗಣೇಶನ ಉಲ್ಲೇಖವಿದೆ. ಅಮರಕೋಶದ ರಚನೆಯ ಕಾಲದ ಅನಂತರದಲ್ಲಿ ನಿರ್ಮಾಣವಾದ ಕ್ರಿ. ಶ. ಸುಮಾರು ೬ನೆಯ ಶತಮಾನದ ಗ್ರಂಥವಾದ ವರಾಹಮಿಹಿರನ ಬೃಹತ್‌ಸಂಹಿತೆಯಲ್ಲಿಯೂ ಕ್ರಿ. ಶ. ೭ನೆಯ ಶತಮಾನದ ಗ್ರಂಥ ವಾದ ಬಾಣನ ಹರ್ಷಚರಿತೆಯಲ್ಲಿಯೂ ಸುಮಾರು ಲನೆಯ ಶತಮಾನಕ್ಕೆ ಅನ್ವಯಿಸಲ್ಪಡುವ ಭವಭೂತಿಯ ಮಾಲತೀಮಾಧವ ಮತ್ತು ಉತ್ತರ ರಾಮ ಚರಿತೆಯಲ್ಲಿಯೂ ಕ್ರಿ. ಶ. ಸುಮಾರು ೯–೧೧ನೆಯ ಶತಮಾನದ ಆನಂದಗಿರಿಯ ಶಂಕರ ವಿಜಯದಲ್ಲಿಯೂ ಗಣಪತಿಯನ್ನು ಸ್ತುತಿಸಲಾಗಿದೆ.

ಶಿಲ್ಪದಲ್ಲಿ ವಿನಾಯಕ

ಶಿಲ್ಪಶಾಸ್ತ್ರಕ್ಕನುಗುಣವಾಗಿ ಅರವತ್ತನಾಲ್ಕು ವಿಧಾನಗಳಲ್ಲಿ ಗಣೇಶನ ಸ್ವರೂಪ ವನ್ನು ಕಾಣಬಹುದು. ಆದರೆ ಈ ಎಲ್ಲ ವೈವಿಧ್ಯ ಪರಿಭೇದಗಳು ಜನಾದರ ಣೀಯವಾಗಿವೆ ಎಂಬಂತಿಲ್ಲ. ನಾನಾ ಭಂಗಿಗಳಲ್ಲಿ ಈ ದೇವತೆಯ ನಿರ್ದೇಶನವನ್ನು ಕಾಣಬಹುದಾದರೂ ಕೆಲವು ಮಾತ್ರ ಹೆಚ್ಚಿನ ಬಳಕೆಯಲ್ಲಿ ಕಂಡುಬರುತ್ತವೆ. ಸರ್ವಸಾಮಾನ್ಯವಾಗಿ ಗಣೇಶ ವಿಗ್ರಹಗಳು ಕುಳಿತ ಭಂಗಿಯಲ್ಲೂ ಬಲಕಾಲು ನೇರಾಗಿ ಮಡಚಲ್ಪಟ್ಟು ಎಡಗಾಲು ಅಡ್ಡಕ್ಕೆ ಮಡಚಿ ಇರಿಸಲ್ಪಟ್ಟು ಉದರ ಹೆಚ್ಚು ಕಡಿಮೆ ಪೀಠದ ಮೇಲೆಯೇ ಇರುವಂತೆಯೂ ತೋರಿಸಲಾದ ನಿರ್ದೇಶನ ಬಹಳ ಜನಾದರಣೀಯವಾದುದಾಗಿದೆ. ಇದು ಸಾಮಾನ್ಯವೂ ಆಗಿದೆ. ಸಮಭಂಗಿ ಮತ್ತು ತ್ರಿಭಂಗಿಯಲ್ಲಿ ಗಣಪತಿಯ ಶಿಲ್ಪ ಕಂಡುಬರುತ್ತದೆ. ನೃತ್ಯಭಂಗಿಯಲ್ಲಿಯೂ ಕೆಲವೊಮ್ಮೆ ನಿರ್ದೇಶನವಿದೆ. ಲಾಕ್ಷಣಿಕವಾಗಿ ಪರಿಶೀಲಿಸಿದಾಗ ಶಕ್ತಿಗಣಪತಿಯೂ ಹೇರಂಭ ಗಣಪತಿಯೂ ವಿಘ್ನರಾಜಗಣಪತಿಯೂ ಬಾಲಗಣಪತಿಯೂ ವಿಶೇಷ ವಾಗಿ ಕಂಡುಬರುತ್ತವೆ. ಶಕ್ತಿಗಣಪತಿವರ್ಗಕ್ಕೆ ಲಕ್ಷ್ಮೀಗಣಪತಿ, ಉಚ್ಛಿಷ್ಟಗಣಪತಿ, ಮಹಾಗಣಪತಿ, ಊರ್ಧ್ವಗಣಪತಿ ಮತ್ತು ಪಿಂಗಳಗಣಪತಿ ಎಂಬೀ ರೂಪಗಳು ಸೇರುತ್ತವೆ. ಪಂಚಮುಖ ಗಣಪತಿ ವಿಗ್ರಹಗಳೂ ಒಮ್ಮೊಮ್ಮೆ ಕಂಡುಬರುತ್ತವೆ.

ಶಿಲ್ಪಶಾಸ್ತ್ರದಲ್ಲಿ ಕಾಲಮಾನ ನಿರ್ಧಾರ

ಶಿಲ್ಪದ ಶೈಲಿಯನ್ನಾಧರಿಸಿ ಕಾಲಮಾನವನ್ನು ತಕ್ಕಮಟ್ಟಿಗೆ ನಿರ್ಧರಿಸಲು ಸಾಧ್ಯವಿದೆ. ಈ ಶೈಲಿ ಕಿರೀಟ, ಮುಖದ ಲಕ್ಷಣ, ಕೈಗಳ ಸಂಖ್ಯೆ, ಸೊಂಡಿಲಿನ ರೀತಿ, ಪ್ರಭಾವಳಿಯ ಕ್ರಮ ಮತ್ತು ಭಂಗಿ ಮತ್ತು ಪ್ರಮಾಣ ಕಲ್ಪನೆ ಇವನ್ನು ಹೆಚ್ಚಾಗಿ ಹೊಂದಿಕೊಂಡಿದೆ. ಕಿರೀಟವೇ ಇಲ್ಲದ ಮೂರ್ತಿಗಳಾಗಲಿ ಏನೇನೂ ಪ್ರಮಾಣವಿಲ್ಲದ ವಿಕಲ್ಪ ಮೂರ್ತಿಗಳಾಗಲಿ ಅತಿ ಪ್ರಾಚೀನವೆನ್ನಬಹುದು. ಗೋಕರ್ಣ, ಇಡಗುಂಜಿ ಮತ್ತು ದ. ಕನ್ನಡದ ಕಿರಿಮಂಜೇಶ್ವರದ ಗಣೇಶ ವಿಗ್ರಹ

ಗಳು ಈ ತೆರನಾದವುಗಳಾಗಿವೆ. ಅಂತೆಯೇ ಕೇವಲ ಒಂದು ವಿಧದ ಉಬ್ಬುಶಿಲ್ಪ ಕಂಡುಬಂದರೆ ಕೆಲವೊಮ್ಮೆ ಅದು ಬಹು ಪ್ರಾಚೀನತೆಗೆ ಹೋಗುತ್ತದೆ. (ಉಡುಪಿ ತಾಲ್ಲೂಕಿನ ಉವರ್ಗಳಿನ ಗಣೇಶಬಿಂಬ ಇದಕ್ಕೆ ಸಾಕ್ಷಿಯಾಗಬಹುದು.) ಚಿಕ್ಕದಾದ ಕಿರೀಟವಿದ್ದರೂ ಶಿರ ಜಟಾಮುಕುಟವಿದ್ದರೂ ಬಹಳ ಕಿರಿದಾದ ಆಯುಧಗಳಿದ್ದರೂ ಪ್ರಾಚೀನತೆಯನ್ನು ಸೂಚಿಸುತ್ತದೆ ಎಂದು ಸ್ಥೂಲವಾಗಿ ಹೇಳಬಹುದು. ಅಂತೆಯೇ ಸೊಂಡಿಲು ಬಾಯಿಯಿಂದಲೇ ತಿರುಗಿದರೂ ಅಥವಾ ಕೆಳಗಿನ ವರೆಗೆ ನೇರವಾಗಿ ಇಳಿದು ಅನಂತರ ಸ್ವಲ್ಪ ತಿರುಗಿದರೂ ಸಂಪೂರ್ಣ ಪದ್ಮಾಸನದಲ್ಲಿ ಕುಳಿತ ಭಂಗಿಯಲ್ಲಿದ್ದರೂ ಏನೇನೂ ಆಲಂಕಾರಿಕ ನಿರ್ದೇಶನವಿಲ್ಲದೆ ಪ್ರಭಾವಳಿ ವಿರಚಿತವಾಗಿದ್ದರೂ ಪ್ರಾಚೀನತೆಯನ್ನು ನಿರ್ಧರಿಸಲು ಸಹಾಯಕ ವಾಗುತ್ತದೆ. ಗಣಪತಿಗೆ ಶಿಲ್ಪದಲ್ಲಿ ವಾಹನವಾದ ಇಲಿ ನಿರ್ದೇಶನ ಹೊಂದಿ ದುದು ಕ್ರಿ. ಶ. ೧೦–೧೧ನೆಯ ಶತಮಾನದ ಅನಂತರವೆನ್ನಬಹುದು. ಪ್ರಾಚೀನ ಶಿಲ್ಪಗಳಲ್ಲಿ ಇಲಿಗಳು ಕಂಡುಬರುವುದಿಲ್ಲ. ಅಂತೆಯೇ ಸರ್ಪ ಉದರಬಂಧವಾಗಿ ಶಿಲ್ಪದಲ್ಲಿ ನಿರ್ದೇಶನವಾದುದು ಸ್ವಲ್ಪ ಅನಂತರವೆಂದೇ ತಿಳಿಯಬಹುದು. ಒಟ್ಟಿನಲ್ಲಿ ಹೇಳುವುದಾದರೆ ಇವು ಸಾಮಾನ್ಯ ಲಕ್ಷಣಗಳೆಂದು ಮಾತ್ರ ತಿಳಿಯತಕ್ಕದ್ದು. ಇವುಗಳಿಗೆ ಅಪವಾದವಿಲ್ಲವೆಂದಿಲ್ಲ.

ದಕ್ಷಿಣ ಕನ್ನಡದಲ್ಲಿ ಗಣೇಶ ಬಿಂಬಗಳ ಶಿಲ್ಪನಿರ್ದೇಶ

ದಕ್ಷಿಣ ಕನ್ನಡದಲ್ಲಿ ಕಂಡುಬರುವ ಗಣೇಶ ಮೂರ್ತಿಗಳನ್ನು ಪರಿಶೀಲಿಸಿದಾಗ ಕ್ರಿ. ಶ. ೭–೮ನೆಯ ಶತಮಾನಗಳಿಂದ ಆರಂಭವಾಗಿ ವಿಜಯನಗರದ ಆಳ್ವಿಕೆಯ ಅಂತ್ಯದ ವರೆಗೆ ಎಂದರೆ ೧೬ನೆಯ ಶತಮಾನದ ಕೊನೆಯ ವರೆಗೆ ಶ್ರೀ ಗಣೇಶ ಬಿಂಬಗಳನ್ನು ಕೆತ್ತಿ ಅರ್ಚಿಸುವ ಪದ್ಧತಿ ವಿಶೇಷವಾಗಿತ್ತೆಂದು ತಿಳಿದುಬರುತ್ತದೆ.

ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರದಲ್ಲಿಯ ೧೨ ಅಂಗುಲ ಎತ್ತರದ, ಸಮಭಂಗದಲ್ಲಿ ನಿಂತಿರುವ ದ್ವಿಬಾಹು ಗಣೇಶಮೂರ್ತಿ ಈ ಜಿಲ್ಲೆಯ ಅತ್ಯಂತ ಪ್ರಾಚೀನ ಮೂರ್ತಿ ಎಂಬುದಾಗಿ ಸ್ಥೂಲವಾಗಿ ಸ್ವೀಕರಿಸಬಹುದು. ಕಾಲಮಾನದಲ್ಲಿ ಇದನ್ನು ಕ್ರಿ. ಶ. ೭ನೆಯ ಶತಮಾನಕ್ಕಿಂತಲೂ ಅನ್ವಯಿಸುವುದರಲ್ಲಿ ಸಂದೇಹ ವಿರಲಾರದು. ಈ ವಿಗ್ರಹ ಸಾಮಾನ್ಯವಾಗಿ ಗ್ರಂಥದಲ್ಲಿ ಕಂಡುಬರುವ ಯಾವ ಶಿಲ್ಪವಿವರಗಳಿಗೂ ಸರಿಹೋಲುವುದಿಲ್ಲ. ಇದೊಂದು ವಿಕಲ್ಪಮೂರ್ತಿ. ಅದೇ ತಾಲ್ಲೂಕಿನ ಹಟ್ಟಿಯಂಗಡಿಯ ಲೋಕನಾಥೇಶ್ವರ ದೇವಾಲಯದ ಉಪಸ್ಥಾನ ಮೂರ್ತಿಯಾದ ದ್ವಿಬಾಹು ಗಣೇಶ ಪ್ರಾಚೀನವೆಂದೇ ಹೇಳಬೇಕು (ಕ್ರಿ. ಶ. ೭–೮ನೆಯ ಶತಮಾನ). ಇದೊಂದು ಉಬ್ಬುಶಿಲ್ಪ. ಹೆಸರಿಗೆ ಮಾತ್ರ ಕಿರೀಟವಿದೆ. ದಪ್ಪನಾದ ಯಜ್ಞೋಪವೀತ, ಬಲಗೈಯಲ್ಲಿ ಕಬ್ಬಿನ ತುಂಡು, ಎಡಗೈಯಲ್ಲಿ ಗದೆ (ಜಂಬೂಫಲ ?) ಆಯುಧವಾಗಿರುವ, ಕಿರುಕಾಲುಗಳಿಂದಲೂ ಜೋಲುತ್ತಿರುವ

ಕಿವಿಗಳಿಂದಲೂ ವಿಶೇಷ ದೊಡ್ಡದಾದ ಉದರದಿಂದಲೂ ಕೂಡಿರುವ ಮೂರ್ತಿ ಪ್ರಾಚೀನ ಶಿಲ್ಪದ ಒಂದು ವಿಶಿಷ್ಟ ನಿದರ್ಶನವೆನ್ನಬಹುದು. ಕಾರ್ಕಳ ತಾಲ್ಲೂಕಿನ ಬೆಳುವಾಯಿಯ ಸಮೀಪದ ಕೆಲ್ಲಪುತ್ತಿಗೆಯ ಈಶ್ವರಾಲಯದ ಹೊರಗೆ ಕಂಡು ಬರುವ ಎರಡೂವರೆ ಅಡಿ ಎತ್ತರದ ಕಿರೀಟವಿರಹಿತ ದ್ವಿಬಾಹು ಗಣೇಶಮೂರ್ತಿ ಜಿಲ್ಲೆಯ ಅತ್ಯಂತ ಪ್ರಾಚೀನ ವಿಗ್ರಹಗಳಲ್ಲಿ ಒಂದಾಗಬಹುದು. ಇದರಲ್ಲಿ ಗಣೇಶ ಸಂಪೂರ್ಣ ಪದ್ಮಾಸನಸ್ಥನಾಗಿದ್ದಾನೆ. ಈ ವಿಗ್ರಹವನ್ನು ಕ್ರಿ. ಶ. ೮ನೆಯ ಶತಮಾನಕ್ಕಾದರೂ ಅನ್ವಯಿಸಬಹುದು. ಕುಂದಾಪುರ ತಾಲ್ಲೂಕಿನ ಗುಡ್ಡೆಟ್ಟು ಹಳ್ಳಿಯಲ್ಲಿ ಇರುವ ಗುಹಾಲಯದಲ್ಲಿ ಕಂಡುಬರುವ ಗಣೇಶಮೂರ್ತಿ ಪ್ರಾಚೀನವೇ ಸರಿ. ಇದು ಸಹ ವಿಕಲ್ಪ ಮೂರ್ತಿ. ನಾಲ್ಕು ಅಡಿ ಎತ್ತರ ವಾಗಿದೆ. ದ್ವಿಬಾಹುಗಳುಳ್ಳದ್ದಾಗಿ ಚಿಕ್ಕ ತಲೆ, ಚಿಕ್ಕ ಸೊಂಡಿಲು, ದೊಡ್ಡಕಾಯ ಮತ್ತು ಎಡಕಾಲು ಹಿಂಬದಿಗೆ ಮಡಚಿ ಬಲಕಾಲು ಅಡ್ಡಕ್ಕೆ ಇರಿಸಿಕೊಂಡಿರುವ ಈ ಮೂರ್ತಿ ಪ್ರಾಕ್ತನ ವಿಮರ್ಶಕರ ಮನಸ್ಸನ್ನು ಸೆಳೆಯಬಹುದು. ಇದನ್ನು ಕ್ರಿ. ಶ. ೭–೮ನೆಯ ಶತಮಾನಕ್ಕೆ ಅನ್ವಯಿಸಬಹುದು. ಜಿಲ್ಲೆಯ ಆದ್ಯಂತ ಪರಿಶೋಧನೆ ಮಾಡಿದರೆ ಪ್ರಾಚೀನವಾದ ಇನ್ನೂ ಹಲವು ಮೂರ್ತಿಗಳು ದೊರಕಬಹುದು. (ಕಾರ್ಕಳ ತಾಲ್ಲೂಕಿನ ಮಾಳದ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿರುವ ಚಿಕ್ಕದಾದ, ದ್ವಿಬಾಹುವುಳ್ಳ ಕಿರೀಟವಿರಹಿತ ಗಣೇಶವಿಗ್ರಹವೂ ಕುಂದಾಪುರ ತಾಲ್ಲೂಕಿನ ಉಪ್ಪುಂದದ ದುರ್ಗಾಪರಮೇಶ್ವರ ದೇವಾಲಯದ ಎದುರಿರುವ ಚಿಕ್ಕದಾದ ಒಂದು ದ್ವಿಬಾಹು ಗಣೇಶ ವಿಗ್ರಹವೂ ಪ್ರಾಚೀನತೆಯ ಪ್ರಥಮ ಹಂತಕ್ಕೆ ಸೇರಬಹುದು.) ಬಾರಕೂರಿನ ಚೌಳಿಕೇರಿಯ ಗಣಪತಿ ದೇವಾಲಯದ ಶ್ರೀ ಗಣೇಶ ವಿಗ್ರಹ ಈ ಕಾಲಕ್ಕೆ ಅನ್ವಯವಾಗಬಹುದು. ಇದೂ ಒಂದು ವಿಚಿತ್ರ ಬಿಂಬ. ಬಾಹುಗಳು ಎರಡು, ಎಡಗೈಯಲ್ಲಿ ಮೋದಕ, ಬಲಗೈಯಲ್ಲಿ ಗದೆ–ಕಿರೀಟ ಲಾಕ್ಷಣಿಕ ವಾಗಿ ಮಾತ್ರವಿದೆ. ಮುಖ ವರಾಹದಂತೆ ಕಂಡುಬರುತ್ತದೆ. ಸೊಂಡಿಲು ಕಿರಿದಾಗಿದ್ದು ಬಾಯಿಯ ಒಳಗೆ ಸೊಂಡಿಲನ್ನು ಹಾಕಿದಂತಿದೆ. ಈ ವಿಗ್ರಹವಿರುವ ದೇವಾಲಯ ಕ್ರಿ.ಶ. ೧೩–೧೪ನೆಯ ಶತಮಾನದ್ದಾದರೂ ಇದರ ಪ್ರಾಚೀನತೆಯನ್ನು ಅಲ್ಲ ಗಳೆಯುವಂತಿಲ್ಲ. ಇದು ಸಮೀಪದಲ್ಲಿರುವ ಕೆರೆಯಲ್ಲಿ ದೊರಕಿದ್ದೆಂದೂ ಅದನ್ನು ತೆಗೆದು ಪುನಃ ಪ್ರತಿಷ್ಠೆ ಮಾಡಿದ್ದೆಂದೂ ಒಂದು ಐತಿಹ್ಯವಿದೆ.

ಇತರ ಪ್ರಾಚೀನ ದ್ವಿಬಾಹು ಗಣೇಶ ವಿಗ್ರಹಗಳು

ದ್ವಿಬಾಹು ಗಣೇಶ ವಿಗ್ರಹಗಳು ದ. ಕನ್ನಡ ಜಿಲ್ಲೆಯಲ್ಲಿರುವಷ್ಟು ಸಂಖ್ಯೆಯಲ್ಲಿ ಇತರೆಡೆಗಳಲ್ಲಿ ದೊರಕುವುದು ದುರ್ಲಭ. ಸಂಶೋಧನ ಗ್ರಂಥಗಳಲ್ಲೂ ದ್ವಿಬಾಹು ಗಣೇಶಮೂರ್ತಿಗಳ ವಿಶಿಷ್ಟವಾದ ಉಲ್ಲೇಖ ಕಂಡುಬರುವುದಿಲ್ಲ. ಮೇಲೆ ನಮೂದಿಸಿದ ವಿಗ್ರಹಗಳಲ್ಲದೆ ಇತರ ಹಲವು ಮೂರ್ತಿಗಳು ಈ ವರ್ಗಕ್ಕೆ ಸೇರುವುವು. ಬಾರಕೂರಿನ

ಕೋಟಿಕೇರಿಯ ಬಟ್ಟೆ ವಿನಾಯಕಮೂರ್ತಿ ದ್ವಿಬಾಹು ಗಣಪತಿಯಾಗಿದ್ದು ಕ್ರಿ. ಶ. ಸುಮಾರು ೯-೧೦ನೆಯ ಶತಮಾನದಷ್ಟು ಪ್ರಾಚೀನವಾಗಬಹುದು. ಮಂಗಳೂರು ತಾಲ್ಲೂಕಿನ ಸುರತ್ಕಲ್ಲಿನ ಸದಾಶಿವ ದೇವಾಲಯ, ಕುಂದಾಪುರ ತಾಲ್ಲೂಕಿನ ಹಟ್ಟಿಯಂಗಡಿಯ ಗಣಪತಿ ದೇವಾಲಯ, ಉಡುಪಿ ತಾಲ್ಲೂಕಿನ ವಿದ್ಯಾವರದ ಗಣಪತಿ ದೇವಾಲಯ ಮತ್ತು ಅದೇ ತಾಲ್ಲೂಕಿನ ಕೋಟಗ್ರಾಮದ ದೇವಾಲಯಗಳ ಮೂರ್ತಿಗಳು ದ್ವಿಬಾಹುವಾಗಿರುವುದು ಮಾತ್ರವಲ್ಲದೆ ಇವೆಲ್ಲವೂ ಕ್ರಿ.ಶ. ೧೦ನೆಯ ಶತಮಾನಕ್ಕಿಂತ ಹಳೆಯ ಕಾಲದವೆನ್ನಬಹುದು. ಈ ಯಾವ ಮೂರ್ತಿಗಳಲ್ಲೂ ಇಲಿಯ ನಿರ್ದೇಶನವಿಲ್ಲ.

ಕಡುಶರ್ಕರಪಾಕದಿಂದ ನಿರ್ಮಾಣವಾದ ಬಿಂಬಗಳು

ಇವು ಮೃಣ್ಮಯಮೂರ್ತಿಗಳು. ಈ ತೆರನಾದ ಮೂರ್ತಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಕಂಡುಬರುತ್ತವೆ. ಇವೆರಡೂ ಕಾಲಮಾನದಲ್ಲಿ ಕ್ರಿ. ಶ. ೧೦ನೆಯ ಶತಮಾನಕ್ಕಿಂತ ಮೊದಲಿನವು. ಕಾಸರಗೋಡು ತಾಲ್ಲೂಕಿನ ಮಧೂರಿನ ಶಿವಾಲಯದ ಉಪಸ್ಥಾನ ದೇವತೆ ಶ್ರೀ ಗಣೇಶ. ಈ ಮೂರ್ತಿ ಒಂದು ಉಬ್ಬು ಶಿಲ್ಪ. ಎತ್ತರದಲ್ಲಿ ಸುಮಾರು ೫-೬ ಅಡಿ. ಚಿಕ್ಕ ಕಿರೀಟ ಮತ್ತು ಚಿಕ್ಕ ಆಯುಧಗಳು, ಸಣ್ಣ ಕೈಕಾಲುಗಳು ಮತ್ತು ಬಲಬದಿಗೆ ತಿರುಗಿದ ರತ್ನ ಕಲಶಗಳನ್ನು ಧರಿಸಿದ ಸೊಂಡಿಲು ಇವುಗಳನ್ನು ಲಕ್ಷಣವಾಗಿ ಹೊಂದಿಕೊಂಡಿದೆ. ಅಂತೆಯೇ ಮಂಗಳೂರು ತಾಲ್ಲೂಕಿನ ಪೊಳಲಿಯ ಶ್ರೀ ರಾಜರಾಜೇಶ್ವರಿ ದೇವಾಲಯದ ಉಪಸ್ಥಾನ ಮೂರ್ತಿಯಾದ ಶ್ರೀ ಗಣೇಶಬಿಂಬವೂ ಮೃಣ್ಮಯಮೂರ್ತಿಯಾಗಿದೆ. ಇದು ದ್ವಿಬಾಹು. ಎಂಟು ಅಡಿ ಎತ್ತರ. ಇದರ ಪ್ರತಿಮಾ ಲಕ್ಷಣ ಇದರ ನಿರ್ಮಾಣ ಕಾಲವನ್ನು ಎಷ್ಟೆಂದರೂ ೯-೧೦ನೆಯ ಶತಮಾನಕ್ಕೆ ಒಯ್ಯಬಹುದು. ಇಂಥ ಮೂರ್ತಿ ಕರ್ನಾಟಕದಲ್ಲಿ ಇತರತ್ರ ದೊರಕುವುದು ದುರ್ಲಭ. ಸೊಂಡಿಲು ನೇರಾಗಿ ಕೆಳಗಿಳಿದ ರೀತಿ ಬಲು ಆಕರ್ಷಣೀಯ.

ಚತುರ್ಬಾಹು ಮೂರ್ತಿಗಳು

ದಕ್ಷಿಣ ಕನ್ನಡ ಜಿಲ್ಲೆಯ ಹೆಚ್ಚಿನ ಬಿಂಬಗಳು ಚತುರ್ಭುಜ ಮೂರ್ತಿಗಳು. ಪ್ರಾಚೀನತೆ ಹಾಗೂ ಶಿಲ್ಪ ದೃಷ್ಟಿಯಿಂದ ಅವುಗಳಲ್ಲಿ ಕೆಲವು ವಿಗ್ರಹಗಳ ವಿಶಿಷ್ಟತೆಯನ್ನು ಕೆಳಗೆ ಕೊಟ್ಟಿದೆ. ಈ ತೆರನಾದ ಬಿಂಬಗಳಲ್ಲಿ ಅತ್ಯಂತ ಪ್ರಾಚೀನವಾದುದು ಕೋಟೇಶ್ವರದ ಕೋಟೀನಾಥ ದೇವಾಲಯದ ನವರಂಗ ದಲ್ಲಿರುವ ಉಪಸ್ಥಾನ ದೇವತೆಯಾದ ಮೂಲ ಗಣಪತಿ ಎಂಬ ಹೆಸರುಳ್ಳ ಮೂರ್ತಿ. ಸುಮಾರು ೯ನೆಯ ಶತಮಾನಕ್ಕಿಂತ ಮೊದಲಿನದಾಗಬಹುದಾದ ಈ ಬಿಂಬ ಪ್ರಭಾವಳಿವಿರಹಿತವಾದ ಪೂರ್ಣ ಬಿಂಬವಾಗಿದೆ. ಎತ್ತರದಲ್ಲಿ ಎರಡು ಅಡಿ

ಯಾಗಿದ್ದು ಚಿಕ್ಕದಾದ ಕಿರೀಟ ಧರಿಸಿ ಬಾಯಿಯಿಂದಲೇ ಸೊಂಡಿಲು ಎಡಕ್ಕೆ ತಿರುಗಿ, ಜಪಸರವನ್ನು ಧರಿಸಿಕೊಂಡ ಚತುರ್ಭುಜಗಳುಳ್ಳ ದೊಡ್ಡ ಉದರದ ಈ ಮೂರ್ತಿ ಯಾವ ರೀತಿಯ ಕೆತ್ತನೆ ಕೆಲಸವನ್ನೂ ಹೊಂದದೆ ನಮ್ಮ ಗಮನವನ್ನು ಸೆಳೆಯುವಂಥದು.

ಇತಿಹಾಸಪ್ರಸಿದ್ಧ ಸ್ಥಳವಾದ ಕಡಬದಲ್ಲಿ ಶಿವ ಮತ್ತು ಗಣಪತಿ ದೇವಾಲಯಗಳು ಒತ್ತೊತ್ತಾಗಿವೆ. ಶಿವದೇಗುಲದ ಎದುರಿಗಿರುವ ಪ್ರಧಾನ ಬಲಿಪೀಠವನ್ನೂ ಮಹಾಗಣಪತಿಯ ಎರಡು ಅಡಿ ಎತ್ತರದ ವಿಗ್ರಹವನ್ನೂ ಪರಿಶೀಲಿಸಿದರೆ ಈ ದೇವಾಲಯಗಳು ಕ್ರಿ. ಶ. ೯–೧೦ನೆಯ ಶತಮಾನಗಳಲ್ಲಿ ರಚಿತವಾದುವೆನ್ನಬಹುದು. ಜಟಾಮುಕುಟಧಾರಿಯಾದ, ರತ್ನಕಲಶವನ್ನು ಸೊಂಡಿಲಿನ ಸುರುಳಿಯಲ್ಲಿ ಧರಿಸಿದ, ಲಾಳಾಕಾರದ ಸಪೂರ ಪ್ರಭಾವಳಿಯನ್ನು ಹೊಂದಿದ ಈ ವಿಗ್ರಹ ದಕ್ಷಿಣ ಕನ್ನಡದ ಪ್ರಧಾನ ವಿಗ್ರಹಗಳಲ್ಲಿ ಒಂದಾಗಿದೆ. ಕಡಬಕ್ಕೆ ಗಾಣಪತ್ಯಪುರವೆಂಬ ಹೆಸರಿತ್ತೆಂದೂ ತಿಳಿದುಬರುತ್ತದೆ.

ಉಡುಪಿ ತಾಲ್ಲೂಕಿನ ಬ್ರಹ್ಮಾವರದ (ಬ್ರಹ್ಮಪುರ) ಮಹತೋಭಾರ ಮಹಾಲಿಂಗೇಶ್ವರ ದೇವಾಲಯದ ಈಶಾನ್ಯ ದಿಕ್ಕಿನಲ್ಲಿರುವ ಉಪಸ್ಥಾನಮೂರ್ತಿ ಕ್ರಿ. ಶ. ಸುಮಾರು ೮–೯ನೆಯ ಶತಮಾನಕ್ಕೆ ಅನ್ವಯಿಸುವಂತಿದ್ದು ಇದೊಂದು ಉಬ್ಬುಶಿಲ್ಪವನ್ನು ಹೋಲುತ್ತದೆ. ಸೊಂಡಿಲು ಬಾಯಿಯಿಂದಲೇ ಎಡಕ್ಕೆ ತಿರುಗಿ ಎಲ್ಲಾ ತರದ ಪ್ರಾಚೀನ ಶಿಲ್ಪಲಕ್ಷಣಗಳನ್ನೂ ಒಳಗೊಂಡ ಮೂರ್ತಿ ಇದು.

ಉಡುಪಿ ತಾಲ್ಲೂಕಿನ ಸಾಲಿಗ್ರಾಮದ ಗುರುನರಸಿಂಹ ದೇವಾಲಯದ ಉಪಸ್ಥಾನ ದೇವತಾಮೂರ್ತಿಯ ಶಿಲ್ಪ ಜಿಲ್ಲೆಯ ಹಲವು ಮೂರ್ತಿಗಳಿಗೆ ಮಾದರಿಯಾಗಿದೆ. ಮೂಡಬಿದರೆಯ ಗೌರಿ ದೇವಾಲಯ, ಪಡುಬಿದರೆಯ ಮಹಾಲಿಂಗೇಶ್ವರ ದೇವಾಲಯ, ಫಲಿಮಾರಿನ ಮಹಾಲಿಂಗೇಶ್ವರ ದೇವಾಲಯ ಇವುಗಳ ಉಪಸ್ಥಾನ ಮೂರ್ತಿಗಳು, ಸಾಲಿಗ್ರಾಮದ ಮೂರ್ತಿಯನ್ನೇ ಸಾಮಾನ್ಯ ಲಕ್ಷಣಗಳಲ್ಲಿ ಹೋಲುತ್ತವೆ (ಜಟಾಮುಕುಟ, ವೃತ್ತಾಕಾರದ ಸಪೂರ ಪ್ರಭಾವಳಿ, ಪದ್ಮಪೀಠ ಇತ್ಯಾದಿ ಸಾಮಾನ್ಯ ಲಕ್ಷಣಗಳು). ಆದರೆ ಸಾಲಿಗ್ರಾಮದ ಮೂರ್ತಿ ರುದ್ರಾಕ್ಷಿ ಶಿಲೆಯಿಂದ ಕೊರೆಯಲ್ಪಟ್ಟುದು.

ಕ್ರಿ. ಶ. ಸುಮಾರು ೧೧ನೆಯ ಶತಮಾನದ ೪ ಬಲಮುರಿ ವಿಗ್ರಹಗಳು ಚಿಕ್ಕವಾದರೂ ಆಕರ್ಷಣೀಯ. ಮಂಗಳೂರಿನ ಸಮೀಪವಿರುವ ಮರೋಳಿ ಸೂರ್ಯ ದೇವಾಲಯ, ಚಿತ್ರಾಪುರದ ದುರ್ಗಾಲಯ ಮತ್ತು ಕುಂಜೂರಿನ ಮಹಿಷಮರ್ದಿನಿ ದೇವಾಲಯ ಇವುಗಳಲ್ಲಿರುವ ಉಪಸ್ಥಾನ ಮೂರ್ತಿಯ ಬಿಂಬ ಶಿಲ್ಪವಿಜ್ಞಾನಿಗಳ ಗಮನವನ್ನು ಸೆಳೆಯಬಹುದು. ಅಂತೆಯೇ ಮೂಡಬಿದರೆಯ ಅಲಂಗಾರಿನ ಶಿವಾಲಯದ ಗಣೇಶವಿಗ್ರಹ ಬಲಮುರಿಯಾಗಿದ್ದು ಈ ಕಾಲಮಾನದ ಒಂದು ಉತ್ತಮ ಶೈಲಿಯನ್ನು ನಿರ್ದೇಶಿಸುತ್ತದೆ. ಚಿತ್ರಾಪುರ ದುರ್ಗಾಲಯದ ಗಣೇಶ

ಬಿಂಬದಲ್ಲಿ ಒಂದು ವೈಶಿಷ್ಟ್ಯವಿದೆ. ಕೆಳಗಿನ ಎಡಗೈ ಮೊಣಗಂಟಿನ ಮೇಲೆ ಇರಿಸಲ್ಪಟ್ಟು ಬಲಗೈಯಲ್ಲಿ ಮೋದಕ (ಫಲ ?) ಕಂಡುಬರುತ್ತದೆ.

ದೊಡ್ಡದಲ್ಲವಾದರೂ ಶಿಲ್ಪಶೈಲಿಯಲ್ಲಿ ವೈಶಿಷ್ಟ್ಯ ಹೊಂದಿರುವ ಒಂದಡಿ ಎತ್ತರದ ಜಟಾಮುಕುಟಧಾರಿ ಗಣೇಶವಿಗ್ರಹವೊಂದು ಹಂಬಾಡಿಯ ಗೋಪಾಲ ಕೃಷ್ಣ ದೇವಾಲಯದ ಗರ್ಭಗೃಹದ ಒಳಗೆ ಕಂಡುಬರುತ್ತದೆ. ಇದಾವ ಕಾರಣ ದಿಂದ ಇಲ್ಲಿದೆ ಎಂದು ತಿಳಿದುಬಂದಿಲ್ಲ. ಅದರ ಸೊಂಡಿಲು ನೇರಾಗಿ ಇಳಿದು ಸ್ವಲ್ಪ ಸುರುಳಿಯಾಗಿ ಎಡಕ್ಕೆ ತಿರುಗಿದೆ. ಪಾಶಾಂಕುಶ ಮತ್ತು ದಂತ, ಲಡ್ಡು ಧರಿಸಿದ ಸಪೂರವಾದ ಅರ್ಧವೃತ್ತಾಕಾರದ ಪ್ರಭಾವಳಿ ಇವನ್ನೊಳಗೊಂಡ ಈ ಮೂರ್ತಿ ಕ್ರಿ. ಶ. ೧೦ನೆಯ ಶತಮಾನಕ್ಕೆ ಸೇರಬಹುದು.

ಬಾರಕೂರಿನ ಪಂಚಲಿಂಗೇಶ್ವರ ದೇವಾಲಯದ ನವರಂಗದಲ್ಲಿ ಇರಿಸಿರುವ ಎರಡು ಅಡಿ ಎತ್ತರದ ವಿಗ್ರಹ ಶಿಲ್ಪದ ಶೈಲಿಯಿಂದಲೂ ಕಾಲಮಾನದ ದೃಷ್ಟಿ ಯಿಂದಲೂ ವೈಶಿಷ್ಟ್ಯ ಉಳ್ಳದ್ದಾಗಿದೆ. ಇದು ಸ್ವಲ್ಪ ಭಿನ್ನವಾದಂತೆ ಕಂಡುಬರುತ್ತದೆ. ಮೇಲಿನ ಎರಡು ಕೈಗಳಲ್ಲಿ ದಂತ ಮತ್ತು ಪಾಶ ಮತ್ತು ಕೆಳಗಿನ ಎರಡೂ ಕೈಗಳಲ್ಲಿ ಉಂಡೆ ನಿರ್ದೇಶಿತವಾಗಿವೆ. ಸೊಂಡಿಲು ನೀಳವಾಗಿ ಕೆಳಗಿದು ನಿಷ್ಕ್ರಿಯೆಯಲ್ಲಿದೆ. ಸ್ವಲ್ಪ ಉಬ್ಬಿದ ಎದೆಯಿಂದ ಕೂಡಿ ಎರಡೂ ಕಾಲುಗಳು ಒಂದೇರೀತಿಯಲ್ಲಿ ಮಡಚಿ ಪ್ರಭಾವಳಿರಹಿತವಾದ ಈ ವಿಗ್ರಹ ಎಷ್ಟೆಂದರೂ ಕ್ರಿ. ಶ. ೧೦ನೆಯ ಶತಮಾನಕ್ಕಿಂತ ಅರ್ವಾಚೀನವಲ್ಲ. ಬಹು ಸುಂದರವಾದ ಮೂರ್ತಿ ಇದಾಗಿದೆ.

ಪುತ್ತೂರು ತಾಲ್ಲೂಕಿನ ಮಹಾಲಿಂಗೇಶ್ವರ ದೇವಾಲಯದ ಉಪಸ್ಥಾನ ಮೂರ್ತಿ ವಿಗ್ರಹ ಚಿಕ್ಕದಾಗಿದ್ದು ರತ್ನಕಲಶಧಾರಿಯೂ ಜಟಾಮುಕುಟಧಾರಿಯೂ ಆಗಿದೆ. ಈ ದೇವಾಲಯ ಈಗ ಜೀರ್ಣೋದ್ಧಾರ ಹೊಂದಿದ್ದರೂ ಕ್ರಿ. ಶ. ೧೦–೧೧ನೆಯ ಶತಮಾನಕ್ಕೊಪ್ಪುವ ಶಿಲಾಶಾಸನ ಈ ದೇಗುಲದ ಪರಿಚಯವನ್ನು ಮಾಡಿಕೊಡುತ್ತದೆ. ಈ ವಿಗ್ರಹವನ್ನು ಪರಿಶೀಲಿಸಿದಾಗಲೂ ಕಾಲಮಾನ ವಿದಿತ ವಾಗುತ್ತದೆ. ಅಂತೆಯೇ ಜಿಲ್ಲೆಯ ಹಿರಿಯ ದೇವಾಲಯಗಳಲ್ಲೊಂದಾದ ವಿಠಲ ಪಂಚಲಿಂಗೇಶ್ವರ ದೇಗುಲದ ಉಪಸ್ಥಾನ ಮೂರ್ತಿಯೂ ಇದೇ ಲಕ್ಷಣಗಳನ್ನೊಳ ಗೊಂಡ ಕ್ರಿ. ಶ. ೧೦ನೆಯ ಶತಮಾನಕ್ಕಿಂತ ಅರ್ವಾಚೀನವಲ್ಲದ ಮೂರ್ತಿಯಾಗಿದೆ. ಕಾಲಮಾನದಲ್ಲಿಯೂ ಪ್ರಾಚೀನ ಲಕ್ಷಣಗಳಲ್ಲಿಯೂ ವಿಶೇಷತೆಯನ್ನು ಹೊಂದಿರುವ ಇನ್ನೊಂದು ಮೂರ್ತಿ ಎಂದರೆ ಮಂಗಳೂರು ಮಂಗಳಾವತಿ ದೇವಾಲಯದ ಉಪ ಸ್ಥಾನಮೂರ್ತಿ ಗಣೇಶ. ವಿಗ್ರಹದ ಲಕ್ಷಣಗಳು ಕುಳ್ಳದಾಗಿದ್ದು ಸಾಧಾರಣ ಮಧೂರಿನ ಗಣೇಶನನ್ನೇ ಹೋಲುತ್ತದೆ. ಕ್ರಿ. ಶ. ೧೦ನೆಯ ಶತಮಾನದ ವಿಗ್ರಹ ವಿದಾಗಿರಬಹುದು.

ಕುಂದಾಪುರ ತಾಲ್ಲೂಕಿನ ಕೋಟೇಶ್ವರದ ಆದಿಗಣಪತಿಯೆಂಬ ರುದ್ರಾಕ್ಷಿ ಶಿಲೆಯಿಂದ ಕೊರೆದ ೨½' ಎತ್ತರದ ಮೂರ್ತಿಯೂ ಅದೇ ದೇವಾಲಯದ ಸಪ್ತ

ಮಾತೃಕೆಯರೊಡನಿರುವ ಮೂರ್ತಿಯೂ ಉಳ್ಳಾಲ ಸೋಮನಾಥೇಶ್ವರ ದೇವಾಲಯದ ಮೂರ್ತಿಯೂ ಸುಮಾರು ೧೦ನೆಯ ಶತಮಾನದ ಬಿಂಬಗಳ ಯೋಗ್ಯ ಮಾದರಿಗಳಾಗಿವೆ.

ಚಾಳುಕ್ಯ ಶಿಲ್ಪವೈಖರಿ

ಬೈಂದೂರು ಸೇನೇಶ್ವರ ದೇವಾಲಯದ ನವರಂಗದ ಒಂದು ಗೂಡಿನಲ್ಲಿರುವ ಮೂರಡಿ ಎತ್ತರದ ಗಣೇಶ ಪೂರ್ಣಬಿಂಬದಿಂದ ಶಿಲ್ಪಿಯ ಚೈತನ್ಯದ ಸಂಪೂರ್ಣ ಪ್ರತಿಫಲ ನಮಗೆ ದೊರಕುವಂತಿದೆ. ಈ ವಿಗ್ರಹ ಅಖಿಲ ಕರ್ನಾಟಕ ಮಹತ್ವವುಳ್ಳದ್ದಾಗಿದೆ. ಕಲ್ಯಾಣ ಚಾಳುಕ್ಯ ಶಿಲ್ಪವೈಖರಿಯನ್ನು ಇದು ಉತ್ಕೃತ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ. ಸರ್ಪಾಕಾರದ ತೋರಣವುಳ್ಳ ಪ್ರಭಾವಳಿ, ಬಾಯಿಯಿಂದಲೇ ಎಡಬದಿಗೆ ತಿರುಗಿದ ಸೊಂಡಿಲು, ಮೇಲಿನ ಬಲಗೈಯಲ್ಲಿ ಅಂಕುಶ, ಎಡಗೈಯಲ್ಲಿ ಪಾಶ, ಕೆಳಗಿನ ಬಲಗೈಯಲ್ಲಿ ದಂತ, ಎಡಗೈಯಲ್ಲಿ ಫಲ ಧರಿಸಿದ ಸರ್ವಾಲಂಕಾರದಿಂದ ಕೂಡಿದ ಕಿರೀಟ ಮತ್ತು ದೇಹ, ಹಿರಿದಾದ ಹೊಟ್ಟೆಯಿಂದ ಕಾಲನ್ನು ಮಡಚಲೂ ಅಸಾಧ್ಯವಾದ ಲಕ್ಷಣ. ಘನವಾದ ಏಕದಂತ ಇವೇ ಲಕ್ಷಣಗಳುಳ್ಳ ಈ ವಿಗ್ರಹ ಕಲೋಪಾಸಕರ ಮನಸ್ಸನ್ನು ಮನದಣಿಯೆ ಸೆಳೆಯುವಂತಹುದಾಗಿದೆ. ಇದೇ ಕಾಲಕ್ಕೆ ಅನ್ವಯಿಸಬಹುದಾದ ಇನ್ನೊಂದು ವಿಗ್ರಹವೆಂದರೆ ಉಡುಪಿ ತಾಲ್ಲೂಕಿನ ಕೋಟದಲ್ಲಿರುವ ಒಂದು ಚಿಕ್ಕ ಗುಡಿಯ ಗಣಪತಿ. ಇದು ೨೪' ಎತ್ತರವಾಗಿದ್ದು ಬಲು ಸುಂದರಮೂರ್ತಿಯಾಗಿದೆ. ಇದರ ಕಿರೀಟದ ಆಲಂಕಾರಿಕ ಕೆತ್ತನೆ ಕೆಲಸವೂ ಸೊಂಡಿಲು ನೇರಾಗಿ ಕೆಳಗಿಳಿದು ಎಡಕ್ಕೆ ತಿರುಗಿದ ರೀತಿಯೂ ಬಹು ಆಕರ್ಷಣೀಯವಾಗಿದ್ದು ಇಲಿಯ ನಿರ್ದೇಶನವನೊಳಗೊಳ್ಳದೆ ಇರುವ ಬಿಂಬವಾಗಿದೆ. ಕ್ರಿ.ಶ. ಸು. ೧೨-೧೩ನೆಯ ಶತಮಾನದ ೩೯' ಎತ್ತರದ ಮನೋಹರಮೂರ್ತಿಯೊಂದು ಬಾರಕೂರಿನ ಮೂಡುಕೇರಿಯ ಒಂದು ಚಿಕ್ಕ ಗುಡಿಯಲ್ಲಿದೆ. ಇದರಲ್ಲಿ ಸರ್ಪಾಕಾರದ ತೋರಣವಿಲ್ಲ. ಉಳಿದ ಎಲ್ಲ ಲಕ್ಷಣಗಳೂ ಹೊಯ್ಸಳ ಶಿಲ್ಪವನ್ನು ಚೆನ್ನಾಗಿ ಪ್ರತಿಬಿಂಬಿಸುತ್ತವೆ. ಮೇಲಿನ ಕೈಗಳಲ್ಲಿ ಕುಠಾರ ಮತ್ತು ಅಂಕುಶ, ಕೆಳಗಿನ ಕೈಗಳಲ್ಲಿ ದಂತ ಮತ್ತು ಫಲ ಕಂಡುಬರುತ್ತವೆ. ಸೊಂಡಿಲು ಬಾಯಿಯಿಂದಲೇ ಎಡಬದಿಗೆ ತಿರುಗಿ ಸುರಳಿಯಾಗಿ ನಿರ್ದೇಶಿತವಾಗಿದೆ.

ಕ್ರಿ.ಶ. ೧೨ನೆಯ ಶತಮಾನದ್ದೆಂದು ಶಾಸನದ ಆಧಾರವನ್ನವಲಂಬಿಸಿ ಹೇಳಬಹುದಾದ ಒಂದು ಮೂರ್ತಿ ಉಡುಪಿ ತಾಲ್ಲೂಕಿನ ಪಾದೂರುಗ್ರಾಮದ ದೆಲಂಚಾರದಲ್ಲಿ ಚಿಕ್ಕದಾದ ಕಗ್ಗಲ್ಲಿನ ದೇವಗೃಹದಲ್ಲಿ ಕಂಡುಬರುತ್ತದೆ. ಇದರ ಪ್ರಭಾವಳಿ ಬೀಸಣಿಗೆಯಾಕಾರದಲ್ಲಿದ್ದು ತಳದ ಮೇಲೆಯೆ ಉದರ ಇರಿಸಲ್ಪಟ್ಟಿದೆ. ಕೆಳಗಿನ ಎರಡು ಕೈಗಳು ಮಾತ್ರ ಪ್ರಬಲವಾಗಿ ನಿರ್ದೇಶಿತವಾಗಿವೆ.

ಕ್ರಿ.ಶ. ಸುಮಾರು ೧೨-೧೩ನೆಯ ಶತಮಾನಕ್ಕೆ ಅನ್ವಯಿಸಬಹುದಾದ



ಕೋಟದ ಹಂಡೆ ದೇವಾಲಯದ ಪಂಚಲೋಹದ
ಬಲಿದೇವತೆ—ಕ್ರಿ.ಶ. ೧೬ನೆಯ ಶತಮಾನ



ಬಾರಕೂರಿನ ಚೋಳಿಕೇರಿಯ ಗಣಪತಿ ದೇವಾಲಯದ ಪಂಚ
ಲೋಹದ ವಿಗ್ರಹ—ಕ್ರಿ.ಶ. ೧೦ನೆಯ ಶತಮಾನ



ಹಾಲಾಡಿ ಲಕ್ಷ್ಮೀನರಸಿಂಹ ದೇವಾಲಯದ ಪಂಚಲೋಹದ ಚತು
ರ್ಬಾಹು ಬಲಮುರಿ ಗಣೇಶ—ಕ್ರಿ.ಶ. ೧೪ನೆಯ ಶತಮಾನ



ತೋಟದ ಪಶುವೈದ್ಯಶಾಲೆಯ ಎದುರಿರುವ ಗಣಪತಿ ದೇವಾ
ಲಯದ ವಿಗ್ರಹ—ಕ್ರಿ.ಶ. ೧೧-೧೨ನೆಯ ಶತಮಾನ

ಜಿಲ್ಲೆಯ ಗಣೇಶ ಬಿಂಬಗಳಲ್ಲಿ ವಿಶೇಷ ತರದ ಶಿಲ್ಪತೇಜಸ್ಸನ್ನೂ ಪುರುಷಚೈತನ್ಯವನ್ನೂ ತೋರಿಸುವ ವಿಗ್ರಹವೆಂದರೆ ಉಡುಪಿ ತಾಲ್ಲೂಕಿನ ಉಪ್ಪೂರಲ್ಲಿರುವ ಗಣಪತಿ ದೇವಾಲಯದ ಶ್ರೀ ಗಣೇಶಮೂರ್ತಿ. ೩' ಎತ್ತರವೂ ಜಟಾಮುಕುಟಧಾರಿಯೂ ಆದ ಈ ವಿಗ್ರಹ ಚೋಳಶಿಲ್ಪಶೈಲಿಯನ್ನು ತಕ್ಕಮಟ್ಟಿಗೆ ತೋರಿಸುತ್ತದೆ. ಕಿರೀಟ ಸುದೀರ್ಘವಾಗಿದೆ. ವಾಹನದ ನಿರ್ದೇಶನವಿಲ್ಲ. ಕರಿಶಿಲೆಯಿಂದ ಕೊರೆದ ಮೂರ್ತಿ ಇದು.

ವಿಜಯನಗರ ಕಾಲದ ಶಿಲ್ಪ

ವಿಜಯನಗರಕಾಲದ ಶಿಲ್ಪವನ್ನು ಎತ್ತಿತೋರಿಸುವ ವಿಗ್ರಹವೆಂದರೆ ಕಾರ್ಕಳದ ವಿನಾಯಕ ಬೆಟ್ಟಿನ ದೇವಾಲಯದ ಶ್ರೀಗಣಪತಿ. ಮೂರು ಅಡಿ ಎತ್ತರವಾಗಿದ್ದು ಪಾಶಾಂಕುಶ, ದಂತ ಮತ್ತು ಲಡ್ಡುಗಳನ್ನು ಧರಿಸಿದ ನಾಗಬಂಧವುಳ್ಳ ದೀರ್ಘ ಬೋಗುಣಿಯಾಕಾರದ ಕಿರೀಟವುಳ್ಳ ಈ ಮೂರ್ತಿ ಕಾರ್ಕಳ ತಾಲೂಕಿನಲ್ಲೇ ದೊಡ್ಡ ಬಿಂಬವಾಗಿದೆ. ಇದರ ಪರಿಚಯವೂ ಹೆಚ್ಚಿನ ಜನರಿಗಿಲ್ಲ. ಇತಿಹಾಸ ಸ್ಥಳವಾದ ಬಿಸರೂರಿನ ಸಮೀಪವಿರುವ ಕಂದಾವರ ದೇವಾಲಯದ ಉಪಸ್ಥಾನ ಮೂರ್ತಿಯಾದ ಗಣೇಶ ವಿಗ್ರಹವೂ ೩' ಎತ್ತರವಾಗಿದ್ದು ಈ ಕಾಲದ ಒಂದು ಉತ್ತಮ ಮೂರ್ತಿಯ ಮಾದರಿಯಾಗಿದೆ. ವಿಜಯನಗರಕಾಲಕ್ಕೆ ಸೇರಿದ ಸುಮಾರು ನಾಲ್ಕು ಸುಂದರವಾದ ಮೂರ್ತಿಗಳು ಬಾರಕೂರಿನಲ್ಲಿವೆ.

ಪಂಚಲೋಹದ ಗಣೇಶಬಿಂಬಗಳು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಚಲೋಹದ ಅನೇಕ ಮೂರ್ತಿಗಳು ಕಂಡು ಬರುತ್ತವೆ. ಮನೆದೇವತೆಯಾಗಿ ಆರಾಧಿಸಲ್ಪಡುವ ಈ ಮೂರ್ತಿಗಳಿಗೆ ಲೆಕ್ಕವಿಲ್ಲವೆನ್ನಬಹುದು. ಇವು ಚಿಕ್ಕವಾದರೂ ಲಕ್ಷಣವಾಗಿದ್ದು ಶಾಸ್ತ್ರೀಯವಾಗಿ ಮಾಡಲ್ಪಟ್ಟವುಗಳಾಗಿವೆ. ಇಂಥ ಮೂರ್ತಿಗಳನ್ನು ಹೊರತಾಗಿ, ದೇವಾಲಯಗಳಲ್ಲೇ ಉಪಸ್ಥಾನಮೂರ್ತಿಯಾಗಿಯೂ ಬಲಿದೇವತೆಯಾಗಿಯೂ ಇರಿಸಲಾದ ಹಲವು ಮೂರ್ತಿಗಳು ಶಿಲ್ಪವೈಖರಿಯಿಂದಲೂ ಪ್ರಾಚೀನತೆಯ ದೃಷ್ಟಿಯಿಂದಲೂ ಗಣನೀಯವಾಗಿವೆ. ಇಲ್ಲಿ ಕೆಲವನ್ನು ಮಾತ್ರ ಉದಾಹರಿಸಿದೆ.

ಬಾರಿಕೂರಿನ ಚೌಳಿಕೇರಿಯ ಗಣಪತಿ ದೇವಾಲಯದಲ್ಲಿರುವ 6″ ಎತ್ತರದ ಚತುರ್ಬಾಹು ಮೂರ್ತಿ ಚೋಳರ ಶಿಲ್ಪವನ್ನು ಸ್ವಲ್ಪವಾಗಿ ನಿರ್ದೇಶಿಸಿ ಸ್ವಲ್ಪ ನೃತ್ಯಭಂಗಿಯಲ್ಲಿದೆ. ಅದೇ ಊರಿನ ಮೂಡುಕೇರಿಯ ಸೋಮನಾಥ ದೇವಾಲಯದಲ್ಲಿರುವ ಸುಮಾರು 7″ ಎತ್ತರದ ದ್ವಿಬಾಹು ಗಣೇಶ ವಿಗ್ರಹವೂ ಕ್ರಿ. ಶ. ಸು. ೧೧ನೆಯ ಶತಮಾನದಿಂದ ಅರ್ವಾಚೀನವಾಗದೆ ಬಲಮುರಿ ಮೂರ್ತಿಯಾಗಿದೆ. ಬಲಗೈಯ್ಯಲ್ಲಿ ದಂತವೂ ಎಡಗೈಯಲ್ಲಿ ಮೋದಕವೂ ಇವೆ. ಸಮಭಂಗಿಯಾಗಿ ನಿಂತ ಈ ಮೂರ್ತಿ ಅಪೂರ್ವವೆನ್ನಬಹುದು. (ಈ ವಿಗ್ರಹಕ್ಕೆ ಬಂಗಾರದ ಕವಚ

ಧರಿಸಿದ್ದರಿಂದ ಇದರ ವಿಶೇಷ ಶಿಲ್ಪಲಕ್ಷಣವನ್ನು ಹೇಳುವುದು ಕಷ್ಟ.) ಕುಂದಾಪುರ ತಾಲ್ಲೂಕಿನ ಉಪ್ಪುಂದ ದುರ್ಗಾಪರಮೇಶ್ವರಿ ದೇವಾಲಯದ ಉಪಸ್ಥಾನ ಮೂರ್ತಿ ಒಂದು ಉತ್ತಮ ಶಿಲ್ಪ. ಸಿಂಹಪೀಠದಮೇಲೆ ಪದ್ಮಪೀಠವನ್ನು ನಿರ್ಮಿಸಿ ಅದರಲ್ಲಿ ೧೦" ಎತ್ತರದ ದಶಭುಜವಲ್ಲಭ ಗಣೇಶನ ಮೂರ್ತಿ ಸ್ಥಾಪಿತ ವಾಗಿದೆ. ಕಾಲಮಾನದಲ್ಲಿ ಎಷ್ಟೆಂದರೂ ಕ್ರಿ.ಶ. ೧೩–೧೪ನೆಯ ಶತಮಾನದ್ದಾಗಿರ ಬಹುದು. ಇದೇ ಊರಿನಲ್ಲಿ ದೇವಾಲಯದ ಅರ್ಚಕರ ಮನೆಯೊಂದರಲ್ಲಿ ಇದೇ ತೆರನಾದ ಶಿಲ್ಪಶೈಲಿಯನ್ನೊಳಗೊಂಡ ಸು. ೫" ಎತ್ತರದ ಲಾವಣ್ಯಮಯಮೂರ್ತಿ ಯುಂಟು. ಇದರಲ್ಲಿ ಶೇಷನ ಹೆಡೆ ವೃಕ್ಷದ ರೀತಿಯಲ್ಲಿ ತೋರಿಸಲ್ಪಟ್ಟಿದೆ. ಇದೇ ಕಾಲಮಾನದ್ದಾಗಬಹುದಾದ ಸು. ೧೧" ಎತ್ತರದ ದಶಭುಜ ಮಹಾಗಣಪತಿಯ (ವಲ್ಲಭ ಗಣಪತಿ) ಅತ್ಯಂತ ಚೈತನ್ಯಮಯಮೂರ್ತಿಯೊಂದು ಉಪಸ್ಥಾನದೇವತೆ ಯಾಗಿ ಉಡುಪಿ ತಾಲೂಕಿನ ಕೆಮ್ಮಣ್ಣೆಂಬ ಊರಿನ ಗಣಪತಿ ದೇವಾಲಯದಲ್ಲಿದೆ. ಇದರ ಕೈಗಳು ಅಡ್ಡಕ್ಕೆ ನಿರ್ದೇಶಿತವಾಗಿವೆ. ಉಪ್ಪೂರಿನ ಗಣಪತಿ ದೇವಾಲಯ ಬಲಿದೇವತೆಯ ಬಿಂಬ ೮" ಎತ್ತರವಾಗಿದ್ದು ಕ್ರಿ. ಶ. ೧೫ನೆಯ ಶತಮಾನದ ಸ್ವಲಕ್ಷಣ ಮೂರ್ತಿ. ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿರುವ ೧೦" ಎತ್ತರದ ಬಲಮುರಿ ಗಣೇಶಬಿಂಬ ಪ್ರಾಚೀನವೇ.

ಮನೆತನದ ದೇವತೆಯಾಗಿ ಕೌಟುಂಬಿಕ ಸಾನ್ನಿಧ್ಯವುಳ್ಳ ಕೆಲವು ಮೂರ್ತಿ ಗಳನ್ನು ಇಲ್ಲಿ ನಮೂದಿಸಬಹುದು. ಪಾದೂರಿನ ತಂತ್ರಿಗಳ ಕುಟುಂಬ ಆರಾಧಿಸುವ ಮಹಾಗಣಪತಿ, ಸಾಸ್ತನದ ಚಡಗರ ಕುಟುಂಬದೇವತೆಯಾದ ಗಣಪತಿ, ತೋಟದ ಸೋಮಯಾಜಿಯವರ ಕುಟುಂಬದ ಮಹಾಗಣಪತಿ, ಅಂತೆಯೇ ಎಡಪ್ಪದವು ತಂತ್ರಿಗಳ ಕುಟುಂಬದ ಗಣಪತಿ ಇವೆಲ್ಲ ಮೂರ್ತಿಗಳು ಎಷ್ಟೆಂದರೂ ಮಧ್ಯಕಾಲೀನವಾಗಿದ್ದು ಗಣೇಶಾರಾಧನೆಯ ವೈಶಿಷ್ಟ್ಯವನ್ನು ತಿಳಿಸುತ್ತವೆ. ಬಾಳಕುದುರು ಮಠದಲ್ಲಿರುವ ಲಕ್ಷ್ಮೀಗಣೇಶ ಮೂರ್ತಿಯೂ ಮಧ್ಯಕಾಲೀನ. ಈ ಸಂದರ್ಭದಲ್ಲಿ ಉಡುಪಿಯ ಐರೋಡಿ ರಾಧಾಕೃಷ್ಣ ಪೈಗಳವರ ಸಂಗ್ರಹ ದಲ್ಲಿರುವ ಮೂರು ಬಿಂಬಗಳ ಉಲ್ಲೇಖವನ್ನು ಮಾಡಿದರೆ ಅಪ್ರಸ್ತುತವಾಗಲಾರದು. ಇವೆಲ್ಲವೂ ಪ್ರಮಾಣದಲ್ಲಿ ದೊಡ್ಡ ವಿಗ್ರಹಗಳಲ್ಲ. ಆದರೆ ಶಿಲ್ಪದ ದೃಷ್ಟಿಯಿಂದ ಸ್ವಲ್ಪ ಮಹತ್ವವುಳ್ಳವು. ಒಂದು ವಿಗ್ರಹ ಉಚ್ಛಿಷ್ಟಗಣಪತಿಯದು. ಇನ್ನೊಂದು ಚತುರ್ಭುಜ ಗಣೇಶನದು. ಮೂರನೆಯ ವಿಗ್ರಹ ದಶಭುಜಗಣೇಶನ ಬಿಂಬ. ಚತುರ್ಭುಜ ಬಿಂಬ ಕಿ.ಶ. ೧೨ನೆಯ ಶತಮಾನಕ್ಕಿಂತ ಅರ್ವಾಚೀನವಲ್ಲ. ಉಚ್ಛಿಷ್ಟ ಗಣೇಶಬಿಂಬಗಳು ದುರ್ಲಭ.

ಉಪಸಂಹಾರ

ಸಹನಾಶಕ್ತಿಯಿಂದ ಜಿಲ್ಲೆಯ ಆದ್ಯಂತ ಪರ್ಯಟನೆ ಮಾಡಿದರೆ ಶಿಲ್ಪ, ಕಲೋಪಾಸನೆ

ಮತ್ತು ಪ್ರಾಚೀನತೆಗಳ ದೃಷ್ಟಿಯಿಂದ ವೈಶಿಷ್ಟ್ಯವುಳ್ಳ ಅನೇಕ ಬಿಂಬಗಳು ದೊರಕಬಹುದು. ದಕ್ಷಿಣ ಕನ್ನಡದ ಗಣೇಶ ವಿಗ್ರಹಗಳನ್ನೆಲ್ಲ ಪರಿಶೀಲಿಸಿದಾಗ ಒಂದೆರಡು ವಿಷಯಗಳು ಸರಿಯಾಗಿ ಮನನವಾಗುವುವು. ಇಲ್ಲಿ ದ್ವಿಭುಜಗಣೇಶಬಿಂಬಗಳು ಬಹುಸಂಖ್ಯೆಯಲ್ಲಿ ಕಂಡುಬರುವುದರಿಂದ ಬಹಳ ಹಿಂದಿನಿಂದಲೇ ಶ್ರೀ ಗಣೇಶಾರಾಧನೆ ಬೇರೂರಿತ್ತೆಂಬುದು ಸ್ಪಷ್ಟವಾಗಬಹುದು. ಎರಡನೆಯದಾಗಿ ಚತುರ್ಭುಜ ಬಿಂಬಗಳಲ್ಲಿ ಪಾಶ, ಅಂಕುಶ, ಕುಠಾರ, ದಂತ, ಮೋದಕ ಧರಿಸಿದ ಮೂರ್ತಿಗಳೇ ಹೆಚ್ಚು. ಬಾಳಕುದುರಿನ ಒಂದು ಮೂರ್ತಿ ಅಭಯಮುದ್ರೆಯನ್ನು ಹೊಂದಿದುದಾಗಿದೆ. ಅನೇಕಾನೇಕ ಕುಟುಂಬಗಳಿಗೆ ಶ್ರೀ ಗಣೇಶ ಕುಲದೇವತೆಯಾಗಿದ್ದಾನೆ. ಮೂರನೆಯದಾಗಿ ಜಿಲ್ಲೆಯಲ್ಲಿ ಬಲಮುರಿ ಗಣೇಶಬಿಂಬಗಳು ಹಲವು ದೊರಕುತ್ತವೆ. ಬಲಮುರಿ ಗಣೇಶನಿಗೇ ಸಾನ್ನಿಧ್ಯವೂ ಮಹತ್ತ್ವವೂ ಹೆಚ್ಚು—ಎಂದು ನಂಬಿಕೆ. ಅಂತೆಯೇ ಜಟಾಮುಕುಟಧಾರಿ ಗಣೇಶಬಿಂಬಗಳೇ ಅಧಿಕಸಂಖ್ಯೆಯಲ್ಲಿವೆ.

ವಿಗ್ರಹಗಳ ಕಾಲಮಾನವನ್ನು ನಿರ್ಧರಿಸುವಾಗ ತುಲನಾತ್ಮಕ ವಿಮರ್ಶನೆಯನ್ನು ಸಾಧ್ಯವಾದಷ್ಟು ಮಾಡಲು ಪ್ರಯತ್ನಿಸಿದೆ. ಅಧಿಕೃತವಾಗಿ ಸ್ವೀಕೃತವಾದ ಧಾರ್ಮಿಕ ಗ್ರಂಥಗಳನ್ನೂ ಇತರ ಆಧಾರಗ್ರಂಥಗಳನ್ನೂ ವಿಮರ್ಶೆ ಬಗ್ಗೆ ಬಳಸಿಕೊಂಡಿದೆ. ದೊರಕಿದ ಶಾಸನಗಳನ್ನೂ ಆಧಾರವಾಗಿರಿಸಿಕೊಂಡು ಸಂಬಂಧಪಟ್ಟ ಅರ್ಚಕಮನೆತನಗಳೊಡನೆ ವಿಚಾರವಿನಿಮಯಮಾಡಿ ಕಾಲಮಾನ ನಿರ್ಧರಿಸಲು ಪ್ರಯತ್ನಮಾಡಿದೆ. ಇದರಲ್ಲಿ ಬದಲಾವಣೆ ಅಸಾಧ್ಯವೆಂಬ ನಿಯಮ ಈ ಬರಹಗಾರರಿಗಿಲ್ಲ.

ಗಣಪತಿ ಅನಾರ್ಯಸಂಪ್ರದಾಯಕ್ಕೆ ಸೇರಿದ ಗ್ರಾಮದೇವತೆಯಾಗಿದ್ದು ಕಾಲಕ್ರಮದಲ್ಲಿ ಆರ್ಯದೇವತೆಗಳ ಸಂಸ್ಕಾರವನ್ನು ಪಡೆದನೆನ್ನುವುದು ನಿರ್ವಿವಾದ. ಆದರೆ ಗಣಪತಿಯ ಕಲ್ಪನೆ ಬೆಳೆದು ಬಂದ ದಾರಿ ಸ್ಪಷ್ಟವಾಗುವುದಿಲ್ಲ. ತಮಿಳಿನಲ್ಲಿ ಗಣೇಶನಿಗೆ 'ಪಿಳ್ಳೆಯಾರ್' ಎಂಬ ಹೆಸರು ಬಳಕೆಯಲ್ಲಿದೆ. 'ಮಗು' ಎಂಬ ಶಬ್ದದ ಗೌರವಪ್ರಯೋಗವಿದು. ಶಿವನ ಮಗು ಎಂದು ಈಗಿನವರು ಕೊಡುವ ಅರ್ಥ. ಆದರೆ ಮೊದಲಿಗೆ 'ಪಿಳ್ಳೆ' ಎಂಬ ಮಾತಿಗೆ 'ಆನೆಯ ಮರಿ' ಎನ್ನುವ ಅರ್ಥವಿದ್ದಿತು. ಆನೆಯ ಮರಿಯನ್ನೇ ದೇವತೆಯೆಂದು ಬಗೆದು ಪೂಜಿಸುತ್ತಿದ್ದ ಕಾಲವೊಂದು ಇದ್ದಿತೇ?

ಪ್ರಾಣಿಗಳನ್ನು ಪೂಜೆಮಾಡುವ ಪದ್ಧತಿಯೇನು ನಮಗೆ ಹೊಸದಲ್ಲ. ಆದರೂ ಬರಿಯ ಆನೆಯ ಮರಿ ದೇವತೆಯಾಗಿ ಜನಪ್ರಿಯವಾಯಿತೆಂದು ಹೇಳುವುದು ಹೆಚ್ಚಿನ ಮಾತು. ಆನೆಗಳೊಂದಿಗೇ ತಮ್ಮ ಬಾಳನ್ನು ಕಳೆಯುವ ಸೋಲಿಗರಿಗೂ ಗಣೇಶನಿಗೂ ಯಾವ ಸಂಬಂಧವೂ ಇಲ್ಲದಿರುವುದು ಗಮನಾರ್ಹ. ಅಥರ್ವ ವೇದದಲ್ಲಿ ಅಗ್ನಿ-ಬೃಹಸ್ಪತಿಗೆ ಆನೆಯ ಕಳೆಯನ್ನು (ಹಸ್ತಿವರ್ಚಸ್) ಸೇರಿಸಿದ್ದಾರೆ; ಸ್ಮಾರ್ತಸಂಪ್ರದಾಯದ ವಿನಾಯಕರಲ್ಲಿ ಗಜಶೀರ್ಷದ ಗಾಂಗೇಯ—ವಿನಾಯಕ ರಿದ್ದರು. ಎಂದರೆ ಆನೆಯ ಮುಖ ಭೂತವಿಶೇಷವೊಂದರ ಲಕ್ಷಣವಾಗಿದ್ದಿತು. ಗಣಪತಿಯ ಗಜಮುಖ ಈ ಹಿನ್ನೆಲೆಯಿಂದ ಬಂದಿರಬಹುದು.

ಗಣಪತಿಗೂ ಆನೆಗೂ ತುಂಬ ಪ್ರಾಚೀನವಾದ ಸಂಬಂಧವಿದೆ. ಹಿಂದಿನ ಕವಿಗಳಿಗೂ ಗಣಪತಿಯೆಂದರೆ ಆನೆಯ ಚಿತ್ರವೇ ಕಣ್ಣಿನ ಮುಂದೆ ಹಾಯುತ್ತಿದ್ದಿತು. ದಂಡಿಯು ದಶಕುಮಾರ ಚರಿತೆಯಲ್ಲಿ "ಹಸ್ತಿವಕ್ತ್ರ ಭಗವಾನ"ನನ್ನು ಪ್ರಸ್ತಾಪಿಸಿದ್ದಾನೆ. ಭವಭೂತಿ ತನ್ನ ಮಹಾವೀರ ಚರಿತೆಯಲ್ಲಿ "ಹೇರಂಬದಂತ ಮುಸಕೋಲ್ಲಿಖಿತೈಕಭಿತ್ತಿ"ಯನ್ನು ಬಣ್ಣಿಸಿದ್ದಾನೆ. ಬಾಣಭಟ್ಟ ತನ್ನ ಕಾದಂಬರಿಯಲ್ಲಿ "ಅವಗಾಹಾಮತೀರ್ಣಗಣಪತಿಗಂಡಸ್ಥಲಗಳಿತಮದಪ್ರಸ್ರವಣ ಸಿಕ್ತಂ" ಎಂದು ಮುಂತಾಗಿ ಬರೆದಿದ್ದಾನೆ. ಏಳನೆಯ ಶತಮಾನದಲ್ಲಿ ಸಿದ್ಧವಾದ ಭಾಸ್ಕರ ವರ್ಮನ ನಿಧನಪುರಶಾಸನದಲ್ಲಿ ಕೂಡ "ಗಣಪತಿಮಿವ ದಾನವರ್ಷಣಮಜಸ್ರಂ" ಎಂಬ ಮಾತನ್ನು ಕಾಣಬಹುದು.

ಅನಾರ್ಯದೇವತೆಯಾದರೂ ಹೀಗೆ ಆರ್ಯಪುರಸ್ಕೃತನಾಗಿ ಸರ್ವಮಾನ್ಯನಾಗಿ ನಿಂತಿರುವುದು ಬಿಡಿಸಲಾಗದ ಒಗಟು. ಸ್ವಭಾವದ ಸಂಕೇತವು ಸತ್ತ್ವಶಾಲಿಯಾದುದರಿಂದಲೇ ಗಣೇಶ ಚಿರಂಜೀವಿಯಾಗಿದ್ದಾನೆ ಎನ್ನಬಹುದು.

—ಎಸ್. ಕೆ. ರಾಮಚಂದ್ರರಾವ್[1]

---

[1] 'ಗಣಪತಿಯ ಕಲ್ಪನೆ', ಸುರಮಾ ಪ್ರಕಾಶನ, ಬೆಂಗಳೂರು; ಪು. ೩೭–೩೮

ವಸ್ತುಕೋಶ

ದೀನಾರ್ ಅಪಮೌಲ್ಯ

ಯುಗೊಸ್ಲಾವಿಯ ಇತ್ತೀಚೆಗೆ ತನ್ನ ಹಣವಾದ ದೀನಾರನ್ನು ಅಪಮೌಲ್ಯ ಮಾಡಿದೆ. ಹೊಸ ಮೌಲ್ಯದಂತೆ ೧೫ ದೀನಾರಿಗೆ ಅಮೆರಿಕದ ಒಂದು ಡಾಲರ್ ಸಮ (ಹಿಂದಿನ ವಿನಿಮಯ ಮೌಲ್ಯ ೧೨.೫ ದೀನಾರ್ = ೧ ಡಾಲರ್). ಬೆಲ್‌ಗ್ರೇಡ್ ಈ ಅಪಮೌಲ್ಯದಿಂದ ತನ್ನ ಆಯ-ವ್ಯಯ ಪಟ್ಟಿಯನ್ನು ಸರಿತೂಗಿಸುವ ಹಾಗೂ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಲ ಪಡೆದುಕೊಳ್ಳುವ ಆಶೆಯನ್ನಿರಿಸಿಕೊಂಡಿದೆ.

ಯುಗೊಸ್ಲಾವಿಯ ಇತ್ತೀಚೆಗೆ ಭಾರಿ ಆರ್ಥಿಕ ಮುಗ್ಗಟ್ಟನ್ನೆದುರಿಸುತ್ತಿದೆ. ಅದರ ಆಯ-ವ್ಯಯ ಪಟ್ಟಿಯಲ್ಲಿನ ಕೊರತೆ ರಾಷ್ಟ್ರಕ್ಕೆ ತುಂಬಾ ಚಿಂತೆಯನ್ನುಂಟು ಮಾಡಿದೆ. ಅದು ವಿದೇಶಗಳಿಗೆ ಪಾವತಿಮಾಡಬೇಕಾಗಿರುವ ಸಾಲದ, ಅದರಲ್ಲೂ ವಿಶ್ವಬ್ಯಾಂಕಿಗೆ ಅದು ಮಾಡಬೇಕಾಗಿರುವ ಪಾವತಿಯ, ದೃಷ್ಟಿಯಿಂದ ಅಪಮೌಲ್ಯ ಈ ರಾಷ್ಟ್ರಕ್ಕೆ ಅನಿವಾರ್ಯವಾಗಿತ್ತು. ೧೯೭೦ರಿಂದ ೧೯೭೫ರ ವರೆಗೆ ಅದು ಹಾಕಿಕೊಂಡಿರುವ ಪಂಚವಾರ್ಷಿಕ ಯೋಜನೆ, ರಾಷ್ಟ್ರದಲ್ಲಿ ಉದ್ಯೋಗ ಸೃಷ್ಟಿ, ಬೆಲೆಯ ನಿಯಂತ್ರಣ ಇವುಗಳನ್ನು ಅಪಮೌಲ್ಯದಿಂದಾಗಿ ಸುಲಭವಾಗಿ ಸಾಧಿಸಬಹುದು ಎನ್ನುವುದು ಇನ್ನೊಂದು ಆಶೆ!

ಯುಗೊಸ್ಲಾವಿಯದ ಅಪಮೌಲ್ಯದ ಪರಿಣಾಮ ಭಾರತದ ಮೇಲೂ ಆಗದಿರುವುದಿಲ್ಲ. ನಮ್ಮ ರಾಷ್ಟ್ರಕ್ಕೂ ಯುಗೊಸ್ಲಾವಿಯಕ್ಕೂ ವಿದೇಶೀ ವಾಣಿಜ್ಯ ರಂಗದಲ್ಲಿ ಹೆಚ್ಚಿನ ಬಾಂಧವ್ಯವಿದೆ. ಆದರೆ ನಮ್ಮ ದೇಶದೊಡನೆ ಮಾಡುತ್ತಿರುವ ವ್ಯಾಪಾರದಲ್ಲಿ ಯುಗೊಸ್ಲಾವಿಯದ್ದು ಋಣಾತ್ಮಕ ಶಿಲ್ಕು. ಭಾರತದ ಬ್ಯಾಂಕುಗಳಿಂದ ನಮ್ಮ ದೇಶದ ರಫ್ತಿಗಾಗಿ ಪಾವತಿ ಮಾಡಲು ಯುಗೊಸ್ಲಾವಿಯ ಪಡೆದುಕೊಂಡಿರುವ ಸಾಲದ ಮೊತ್ತ ೭.೫ ಕೋಟಿ ರೂ.ಗಳನ್ನು ಮುಟ್ಟಿದೆ.

ನಾವು ಯುಗೊಸ್ಲಾವಿಯದಿಂದ ಆಮದು ಮಾಡಿಕೊಳ್ಳುತ್ತಿರುವುದು ಕಡಿಮೆಯಾಗಿದೆ. ಆ ರಾಷ್ಟ್ರದಿಂದ ಇತ್ತೀಚಿನ ವರೆಗೂ ನಾವು ಯಂತ್ರಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದೆವು. ನಾವು ಆ ರಾಷ್ಟ್ರದಿಂದ ಆಮದು ಮಾಡಿಕೊಳ್ಳುವ ಸಾಧ್ಯತೆ ಕಡಿಮೆಯಿದೆ. ಆದರೂ ಭಾರತದ ಪರವಾಗಿ ಇತ್ತೀಚೆಗೆ ಯುಗೊಸ್ಲಾವಿಯಕ್ಕೆ ಭೇಟಿ ನೀಡಿದ್ದ ವಾಣಿಜ್ಯತಂಡ ವ್ಯಾಪಾರವಿಸ್ತರಣೆಯ ಸಾಧ್ಯತೆಗಳ ಬಗ್ಗೆ ಭರವಸೆಯನ್ನಿತ್ತಿದೆ.

ಯೂಗೊಸ್ಲಾವಿಯ ಭಾರತದ ಜೊತೆ ವಾಣಿಜ್ಯಕ್ಕಾಗಿ ಹಾತೊರೆಯುತ್ತಿದೆ ಯೆಂದೇ ಹೇಳಬಹುದು. ಇತ್ತೀಚೆಗೆ ಅದು ವಾಣಿಜ್ಯಕ್ಕಾಗಿ ರೂಪಾಯಿಯಲ್ಲಿ ಪಾವತಿ ಮಾಡುವುದರ ಬದಲು ತನ್ನ ಹಣ (ದೀನಾರ್)ದಲ್ಲಿಯೇ ಪಾವತಿಯ ಸಾಧ್ಯತೆಯ ಬಗ್ಗೆ ಚರ್ಚಿಸುತ್ತಿದೆ. ಈ ಚರ್ಚೆ ಇನ್ನೂ ಯಾವ ಘಟ್ಟವನ್ನೂ ಬಂದು ಮುಟ್ಟಿಲ್ಲ. ಭಾರತ ಯೂಗೊಸ್ಲಾವಿಯದಿಂದ ಹಡಗುಗಳನ್ನು ಕೊಳ್ಳುತ್ತಿದೆ. ಇದಕ್ಕೆ ಸೇ. ೭೦ರಷ್ಟನ್ನು ಡಾಲರ್‌ನಲ್ಲೂ ಉಳಿದುದನ್ನು ರೂಪಾಯಿಯಲ್ಲೂ ಪಾವತಿ ಮಾಡಲಾಗುತ್ತಿದೆ. ರೂಪಾಯಿಯಲ್ಲೇ ಪಾವತಿ ಮಾಡುವ ಸಾಧ್ಯತೆ ಯನ್ನು ಕುರಿತೂ ಚರ್ಚಿಸಲಾಗುತ್ತಿದೆ.

ಅಪಮೌಲ್ಯದಿಂದಾಗಿ ಯೂಗೊಸ್ಲಾವಿಯದ ಅನೇಕ ಸರಕುಗಳು ಸುಲಭ ಬೆಲೆಗೆ ದೊರೆಯುವಂತಾಗಿವೆ. ನಾವು ಯಾವುದಾದರೂ ಹೊಸ ಸರಕನ್ನು ಈ ರಾಷ್ಟ್ರದಿಂದ ಕೊಳ್ಳಬಹುದೇ? ಎನ್ನುವುದು ವಿಚಾರಮಾಡಬೇಕಾದ ವಿಷಯ.

ಭಾರತದಲ್ಲಿ ಬೃಹತ್ ಉದ್ಯಮ ಸಂಸ್ಥೆಗಳು

ಎಕೊನಾಮಿಕ್ ಟೈಂಸ್‌ನ ಸಂಶೋಧನ ಬ್ಯೂರೋ ಇತ್ತೀಚೆಗೆ ಭಾರತದಲ್ಲಿನ ಬೃಹತ್ಸಂಸ್ಥೆಗಳನ್ನು ಕುರಿತ ಸಂಶೋಧನೆಯೊಂದನ್ನು ಪ್ರಕಟಿಸಿದೆ. ಈ ಪ್ರಕಟನೆ ಹೊರಗೆಡಹಿರುವ ಕೆಲವು ಅಂಶಗಳು ಕುತೂಹಲಕಾರಿಯಾಗಿವೆ.

ಖಾಸಗಿರಂಗದ ೧೦೧ ಬೃಹತ್ಸಂಸ್ಥೆಗಳ ನಾಯಕ ಪಟ್ಟವನ್ನು ತಾತಾ ಉಕ್ಕು ಮತ್ತು ಕಬ್ಬಿಣ ಸಂಸ್ಥೆ ಪಡೆಯುತ್ತದೆ. ತಾತಾರವರದೇ ಆದ ಮತ್ತೊಂದು ಸಂಸ್ಥೆ ಟೆಲ್ಕೊ ಎರಡನೆಯ ಸ್ಥಾನ ಪಡೆದುಕೊಳ್ಳುತ್ತದೆ.

ಖಾಸಗಿ, ಸರ್ಕಾರಿ ಎರಡೂ ವಲಯಗಳನ್ನು ಒಟ್ಟಿಗೇ ತೆಗೆದುಕೊಂಡಾಗ ಸರ್ಕಾರಿ ರಂಗದ ಹಿಂದೂಸ್ತಾನ್ ಉಕ್ಕು ಕೈಗಾರಿಕಾ ಸಂಸ್ಥೆ ಭಾರತದಲ್ಲಿನ ಅತ್ಯಂತ ಬೃಹತ್ಸಂಸ್ಥೆ ಎಂದು ತಿಳಿದುಬಂದಿದೆ. ಈ ಸಂಸ್ಥೆಯ ಒಟ್ಟು ಆಸ್ತಿ ಖಾಸಗಿ ರಂಗದ ಬೃಹತ್ ಸಂಸ್ಥೆಗಳ ಪ್ರಥಮ ಹತ್ತರದರ ಆಸ್ತಿಧನವನ್ನು ಒಟ್ಟು ಮಾಡಿದರೆ ಎಷ್ಟಾಗಬಹುದೋ, ಅದಕ್ಕಿಂತ ಹೆಚ್ಚಾಗಿದೆ!

ಈ ಬೃಹತ್ಸಂಸ್ಥೆಗಳ ಬಂಡವಾಳದ ಹೂಡಿಕೆ, ಲಾಭಗಳಿಕೆ, ಉದ್ಯೋಗ ಇವುಗಳನ್ನು ನೋಡಿದಾಗ ನಮಗೆ ಭಾರತದಲ್ಲಿನ ಬೃಹತ್ಸಂಸ್ಥೆಗಳ ಬಗ್ಗೆ ಆಶ್ಚರ್ಯ ವಾಗಬಹುದು. ಆದರೆ ಪ್ರಪಂಚದ ಇತರ ರಾಷ್ಟ್ರಗಳೊಡನೆ ಹೋಲಿಸಿದಾಗ ನಮ್ಮ ಬೃಹತ್ಸಂಸ್ಥೆಗಳು ಕಿರಿಯ ಸಂಸ್ಥೆಗಳೇ!

ಸಂಯುಕ್ತಸಂಸ್ಥಾನವನ್ನು ಬಿಟ್ಟು ಉಳಿದ ರಾಷ್ಟ್ರಗಳ ಬೃಹತ್ಸಂಸ್ಥೆಗಳಿಗೆ ಹೋಲಿಸಿದರೆ, ನಮ್ಮ ದೇಶದ ಹಿಂದೂಸ್ತಾನ್ ಉಕ್ಕು ಕೈಗಾರಿಕಾ ಸಂಸ್ಥೆಗೆ ೧೮ನೆಯ ಸ್ಥಾನ ದೊರೆಯುತ್ತದೆ! ನಮ್ಮ ದೇಶದ ಖಾಸಗೀ ರಂಗದ ಬೃಹತ್ಸಂಸ್ಥೆ ಯಾದ ತಾತಾ ಉಕ್ಕು ಸಂಸ್ಥೆಯ ಆಸ್ತಿ ಅಮೆರಿಕದ ಅತ್ಯಂತ ದೊಡ್ಡ ಸಂಸ್ಥೆಯಾದ ಜನರಲ್ ಮೋಟಾರ್ಸ್ ಆಸ್ತಿಯ ಕೇವಲ ಸೇ. ೧.೫೮ರಷ್ಟಾಗುತ್ತದೆಂದರೆ, ತಾತಾ

ಉಕ್ಕು ಕೈಗಾರಿಕಾ ಸಂಸ್ಥೆಯನ್ನು ಬೃಹತ್ ಕೈಗಾರಿಕಾ ಸಂಸ್ಥೆ ಎಂದು ಕರೆಯುಬಹುದೇ ಎಂಬ ಸಂಶಯ ಉಂಟಾಗುತ್ತದೆ. ಇದರ ವಾರ್ಷಿಕ ವ್ಯವಹಾರವಂತೂ ಜನರಲ್ ಮೋಟಾರ್ಸ್‌ನ ಸೇ. ೦.೭ರಷ್ಟೂ ಅಮೆರಿಕೇತರ ವಿಶ್ವ ಬೃಹತ್ಕೈಗಾರಿಕಾ ಸಂಸ್ಥೆಯಾದ ರಾಯಲ್ ಡಚ್‌ಷೆಲ್‌ನ ಸೇ. ೧.೭ರಷ್ಟೂ ಆಗುತ್ತದೆ!

ಬೃಹತ್ಕೈಗಾರಿಕಾ ಸಂಸ್ಥೆಗಳಲ್ಲಿ ಸರ್ಕಾರೀ ರಂಗದ್ದು ಸಿಂಹಪಾಲು. ೧೦೧ ಬೃಹತ್ಸಂಸ್ಥೆಗಳ ಆಸ್ತಿಯನ್ನು ನೋಡಿದರೆ ಸೇ. ೬೦ಕ್ಕಿಂತಲೂ ಹೆಚ್ಚು ಆಸ್ತಿಯನ್ನು ಸರ್ಕಾರೀ ಕೈಗಾರಿಕೆಗಳೇ ಪಡೆದಿವೆ. ೧೦೧ ಕೈಗಾರಿಕಾ ಬೃಹತ್ಸಂಸ್ಥೆಗಳಲ್ಲಿ ತಾತಾ ಗುಂಪಿಗೆ ೧೦ ಕಂಪನಿಗಳು ಸೇರಿವೆ. ಅವುಗಳ ಒಟ್ಟು ಆಸ್ತಿ ೪೮೬.೪ ಕೋಟಿ ರೂ. ಬಿರ್ಲಾ ಗುಂಪಿಗೆ ೧೧ ಸಂಸ್ಥೆಗಳು ಸೇರಿವೆ. ಅವುಗಳ ಒಟ್ಟು ಆಸ್ತಿ ೩೩೩.೩ ಕೋಟಿ. ಮಫತ್‌ಲಾಲ್ ಗುಂಪಿಗೆ ಮೂರನೆಯ ಸ್ಥಾನ. ಅವು ೫ ಸಂಸ್ಥೆಗಳನ್ನು ಹೊಂದಿವೆ. ಅವುಗಳ ಒಟ್ಟು ಆಸ್ತಿ ೧೨೪.೩ ಕೋಟಿ ರೂ.

೧೯೬೯–೭೦ ಈ ಕೈಗಾರಿಕಾ ಸಂಸ್ಥೆಗಳಿಗೆ ಲಾಭದ ದೃಷ್ಟಿಯಿಂದ ಒಳ್ಳೆಯ ವರ್ಷ. ಹಿಂದಿನ ಎರಡು ವರ್ಷಗಳಲ್ಲಿ ಇದ್ದ ಅಸಮರ್ಪಕಲಾಭಸ್ಥಿತಿ ಈ ವರ್ಷ ಮಾಯವಾಗಿದೆ. ೧೯೬೮–೬೯ರಲ್ಲಿ ಅದು ಒಟ್ಟು ಬಂಡವಾಳನಿಯೋಜನೆಯ ಸೇಕಡಾ ೯.೪ ಇದ್ದುದು ಈ ವರ್ಷ ಅದು ಸೇ. ೧೦.೪ಕ್ಕೆ ಏರಿದೆ. ಕೈಗಾರಿಕಾ ಸಂಸ್ಥೆಗಳು ಚೇತರಿಸಿಕೊಳ್ಳುತ್ತಿರುವುದಕ್ಕೆ ಇದು ಸಾಕ್ಷಿ.

ಕೈಗಾರಿಕಾ ಸಂಸ್ಥೆಗಳ ಬೆಳೆವಣಿಗೆಯನ್ನು ಕುರಿತ ಈ ಅಧ್ಯಯನ ಕುತೂಹಲಕಾರಿಯೂ ವಿಶ್ಲೇಷಕವೂ ಆಗಿದೆ.

—ಸಿ.ಕೆ.ಆರ್.

ಲೋಕಸಭೆ–ವಿಧಾನಸಭೆಗಳ ವಿಸರ್ಜನಾಧಿಕಾರ

ಪ್ರಜಾಪ್ರಭುತ್ವದಲ್ಲಿ ವಿಧಾನಸಭೆಯನ್ನು ಅದರ ಅವಧಿ ತೀರುವ ಮುನ್ನವೇ ವಿಸರ್ಜಿಸುವುದು ಹೆಚ್ಚಾಗಿ ವಾಡಿಕೆಯಲ್ಲಿಲ್ಲ. ಆದರೂ ಸರ್ಕಾರ ಅಸ್ಥಿರವಾಗಿ, ಅಧಿಕಾರಕ್ಕಾಗಿ ಘರ್ಷಣೆ ಒದಗಿ, ಈ ಬಗ್ಗೆ ಮತದಾರರ ಅಭಿಮತದಂತೆ ನಡೆದುಕೊಳ್ಳುವುದು ಅವಶ್ಯವೆನಿಸಿದಾಗ ಅವಧಿ ಪೂರೈಕೆಗೆ ಮುಂಚೆಯೇ ಸಭಾವಿಸರ್ಜನೆ ಮಾಡುವುದು ಸಂಸದೀಯ ಪದ್ಧತಿಯ ಒಂದು ಪುರಸ್ಕೃತ ಸಿದ್ಧಾಂತ. ಕೇಂದ್ರ ಮತ್ತು ಕೆಲವು ರಾಜ್ಯಗಳಲ್ಲಿ ಸಭೆಗಳನ್ನು ವಿಸರ್ಜಿಸಿ ಅಲ್ಲೆಲ್ಲ ಪುನಃ ಚುನಾವಣೆ ನಡೆಸುವ ತೀರ್ಮಾನ ಕೈಕೊಂಡಿರುವ ಈ ಸಂದರ್ಭದಲ್ಲಿ ರವೀಂದ್ರನಾಥ ಮಿಶ್ರ ಅವರು ದೆಹಲಿ ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ 'ದಿ ಇಂಡಿಯನ್ ಪೊಲಿಟಿಕಲ್ ಸೈನ್ಸ್ ರಿವ್ಯೂ'ದ ಪ್ರಚಲಿತ ಸಂಚಿಕೆಯಲ್ಲಿ (ಅಕ್ಟೋಬರ್ ೧೯೭೦–ಮಾರ್ಚ್ ೧೯೭೧) ಬರೆದಿರುವ ಲೇಖನ ಈ ಬಗ್ಗೆ ವಿವೇಚನೆಮಾಡಿದೆ. ಸಂಸತ್ತನ್ನು ವಿಸರ್ಜಿಸುವುದು ರಾಷ್ಟ್ರಪತಿಯ ಮುಖ್ಯ ಹಕ್ಕು. ರಾಜ್ಯದ ವಿಧಾನ ಸಭೆಯ ವಿಚಾರದಲ್ಲಿ ಈ ಅಧಿಕಾರ ಅಲ್ಲಿನ ರಾಜ್ಯಪಾಲರಿಗೆ ದತ್ತವಾಗಿದೆ.

ಆದರೆ ಯಾವ ಸಂದರ್ಭಗಳಲ್ಲಿ ಈ ಸಭೆಗಳನ್ನು ವಿಸರ್ಜಿಸಬಹುದು—ಎಂಬುದು ಪರಿಶೀಲಿಸಬೇಕಾದ ವಿಷಯ. ಭಾರತದ ಸಂವಿಧಾನ ಈ ಬಗ್ಗೆ ಮೌನ ತಳೆದಿದೆ ; ಇದನ್ನು ಕುರಿತ ನಿಯಮಗಳೇನೂ ಇಲ್ಲ. ಆದ್ದರಿಂದ ಇದೊಂದು ವಾದಗ್ರಸ್ತ ವಿಚಾರ.

ರವೀಂದ್ರನಾಥ ಮಿಶ್ರರು ತಮ್ಮ ಲೇಖನದಲ್ಲಿ ಬ್ರಿಟನ್, ಕೆನಡ, ಆಸ್ಟ್ರೇಲಿಯ ಮುಂತಾದ ರಾಷ್ಟ್ರಗಳಲ್ಲಿ ಜಾರಿಯಲ್ಲಿರುವ ಪದ್ಧತಿಯನ್ನು ಪರಿಶೀಲಿಸಿದ್ದಾರೆ. ಪಾರ್ಲಿಮೆಂಟನ್ನು ವಿಸರ್ಜಿಸುವುದು ಬ್ರಿಟಿಷ್ ದೊರೆತನದ ಒಂದು ಮುಖ್ಯ ಹಕ್ಕು ; ಅದರ ಮುಖ್ಯ ಕಾರ್ಯಭಾರ. ಆದರೆ ಅಲ್ಲೂ ಈ ಬಗ್ಗೆ ಇದಮಿತ್ಥಂ ಎಂದು ಹೇಳುವುದು ಸಾಧ್ಯವಿಲ್ಲ. ಕಾಮನ್ಸ್ ಸಭೆಯನ್ನು ವಿಸರ್ಜಿಸಬೇಕೆಂದು ಪ್ರಧಾನ ಮಂತ್ರಿ ನೀಡಿದ ಸಲಹೆಯನ್ನು ದೊರೆ ಒಪ್ಪಲೇಬೇಕೆ ?—ಎಂಬ ಬಗ್ಗೆ ೧೯ನೆಯ ಶತಮಾನದಲ್ಲಿ ವಿಪುಲವಾಗಿ ವಾದ ನಡೆದಿತ್ತು. ಕೆಲವು ಸಂದರ್ಭಗಳಲ್ಲಿ ಪ್ರಧಾನಿಯ ಸಲಹೆಯನ್ನು ನಿರಾಕರಿಸುವ ಅಧಿಕಾರ ದೊರೆಗೆ (ರಾಣಿಗೆ) ಉಂಟೆಂಬುದು ವಿಕ್ಟೋರಿಯ ರಾಣಿಗೂ ಆಕೆಯ ಮಂತ್ರಿಗಳಿಗೂ ನಡೆದ ಪತ್ರ ವ್ಯವಹಾರದಿಂದ ವೇದ್ಯವಾಗುತ್ತದೆ. ದೊರೆಯ ಈ ಹಕ್ಕನ್ನು ಸರ್ ರಾಬರ್ಟ್ ಪೀಲ್, ಲಾರ್ಡ್ ಜಾನ್ ರಸೆಲ್, ಡಿಸ್ರೇಲಿ, ಲಾರ್ಡ್ ಸ್ಯಾಲಿಸ್‌ಬರಿ ಮತ್ತು ಆಸ್ಕ್ವಿತ್ ಇವರು ಸಮರ್ಥಿಸಿದ್ದಾರೆ. ಆದರೆ ಆ ಸಂದರ್ಭಗಳು ಇದುವರೆಗೂ ಬಂದಿಲ್ಲ. ಸಭಾ ವಿಸರ್ಜನೆಯಾಗಬೇಕೆಂದು ಪ್ರಧಾನಿ ಮಾಡಿದ ಸಲಹೆಯನ್ನು ಯಾವ ದೊರೆಯೂ ನಿರಾಕರಿಸಿಲ್ಲ.

ದೊರೆಯ ಈ ಹಕ್ಕಿನ ಬಗ್ಗೆ ಎರಡು ದೃಷ್ಟಿಪಂಥಗಳಿವೆ. ಪ್ರಧಾನಿಯ ಸಲಹೆಯನ್ನು ಪುರಸ್ಕರಿಸಬೇಕೇ ಬೇಡವೇ ಎಂಬ ವಿಚಾರವಾಗಿ ದೊರೆಗೆ ವಿವೇಚನಾಧಿಕಾರವೇ ಇಲ್ಲವೆಂಬುದು ಪ್ರೊ. ಲಾಸ್ಕಿಯ ಅಭಿಪ್ರಾಯ. ಅದಕ್ಕೆ ದೊರೆ ಒಪ್ಪಿಗೆ ನೀಡಲೇಬೇಕು ; ಇದು ಸ್ವಯಂಚಲಿ—ಎನ್ನುತ್ತಾರೆ, ಲಾಸ್ಕಿ. ಅವರು ಸ್ವಯಂಚಾಲನ ತತ್ತ್ವದ ಪ್ರತಿಪಾದಕ.

ಆದರೆ ಜನತೆಯ ಹಿತಕ್ಕಾಗಿ ದೊರೆಗೆ ಈ ಬಗ್ಗೆ ವಿವೇಚನಾಧಿಕಾರವುಂಟು—ಎಂಬುದು ಪ್ರೊ. ಕೀತ್ ವಾದ. ದೊರೆ ಮಂತ್ರಿಗಳ ಸಲಹೆಯಂತೆ ನಡೆದುಕೊಳ್ಳದಿರಬಹುದು. ಅವರೇ ರಾಜೀನಾಮೆ ಕೊಡಬೇಕೆಂದು ಹೇಳಬಹುದು. ಅವರು ರಾಜೀನಾಮೆ ಕೊಡದಿದ್ದರೆ ಅವರನ್ನು ವಜಾ ಮಾಡಬಹುದು. ದೊರೆ ಸಂವಿಧಾನದ ರಕ್ಷಕ. ಅತಿಯಾದ ಬಿರುಸಿನ ಬದಲಾವಣೆಗೆ ಅವನೇ ಅಂತಿಮ ತಡೆ—ಎಂಬುದು ಪ್ರೊ. ಕೀತ್ ಭಾವನೆ. 'ಪ್ರಧಾನಿಯದು ಸಲಹೆ ಮಾತ್ರ. ವಿಶೇಷ ಸಂದರ್ಭಗಳಲ್ಲಿ ಇದನ್ನು ದೊರೆ ತಳ್ಳಿ ಹಾಕಬಹುದು' ಎಂದು ಚರ್ಚಿಲ್ ಕೂಡ ಹೇಳಿದ್ದಾರೆ. ಪಾರ್ಲಿಮೆಂಟಿನಲ್ಲಿ ಸರ್ಕಾರಕ್ಕೆ ಸೋಲುಂಟಾದ ತತ್‌ಕ್ಷಣವೇ ಸಭೆಯನ್ನು ವಿಸರ್ಜಿಸಬೇಕೆಂದು ಪ್ರಧಾನಿ ಸಲಹೆ ಮಾಡಿದರೆ ದೊರೆ ಆದರಂತೆ ನಡೆಯಬೇಕಾದ್ದಿಲ್ಲ ಎಂದು ಸರ್ ಜಾನ್ ಮೇರಿಯಟ್ ಹೇಳುತ್ತಾರೆ.

ಜವಾಬ್ದಾರಿ ಸರ್ಕಾರ ಜಾರಿಯಲ್ಲಿರುವ ಇನ್ನೊಂದು ದೇಶವಾದ ಕೆನಡದಲ್ಲಿ ಈ ಬಗ್ಗೆ ಒಂದು ಸಂಪ್ರದಾಯ ಬೆಳೆದು ಬಂದಿದೆ. ಅಲ್ಲಿ ಒಂದು ಸರ್ಕಾರಕ್ಕೆ ಸಭೆಯಲ್ಲಿ ಸೋಲುಂಟಾದಾಗ ಅದರ ಬದಲು ಇನ್ನೊಂದು ಸರ್ಕಾರವನ್ನು ರಚಿಸಲು ಎಲ್ಲ ಉಪಾಯಗಳನ್ನೂ ಗವರ್ನರ್–ಜನರಲ್ ಪರಿಶೀಲಿಸಿದ ಅನಂತರವೇ ಸಭಾವಿಸರ್ಜನೆಯ ಸಲಹೆಯನ್ನೊಪ್ಪಬೇಕು. ೧೯೨೬ರಲ್ಲಿ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ಪಾರ್ಲಿಮೆಂಟನ್ನು ವಿಸರ್ಜಿಸಬೇಕೆಂದು ಪ್ರಧಾನಿ ಮೆಕೆನ್ಜಿ ಕಿಂಗ್ ಮಾಡಿದ ಸಲಹೆಯನ್ನು ಗವರ್ನರ್-ಜನರಲ್ ಒಪ್ಪಲಿಲ್ಲ. ಪ್ರಧಾನಿಯ ರಾಜೀನಾಮೆಯನ್ನು ಸ್ವೀಕರಿಸಲಾಯಿತು. ಸರ್ಕಾರ ರಚಿಸಬೇಕೆಂದು ವಿರೋಧ ಪಕ್ಷದ ನಾಯಕರಿಗೆ ಆಹ್ವಾನ ಹೋಯಿತು. ಅವರು ಸರ್ಕಾರ ರಚಿಸಿದರು. ಆದರೆ ಕಾಮನ್ಸ್ ಸಭೆಯಲ್ಲಿ ಅವರಿಗೆ ಬಹುಮತ ದೊರಕಲಿಲ್ಲ. ಆಗ ಸಭೆಯನ್ನು ವಿಸರ್ಜಿಸುವುದು ಗವರ್ನರ್-ಜನರಲರಿಗೆ ಅನಿವಾರ್ಯವಾಯಿತು.

'ವಿಸರ್ಜನೆಯ ಅಧಿಕಾರ ಮತದಾರರದು. ಅದು ಮತದಾರರ ಆಜ್ಞೆ ಪಡೆಯಬೇಕೆಂದು ರಾಜಕೀಯ ಸಾರ್ವಭೌಮರಿಗೆ ಮಾಡಿಕೊಂಡ ಮನವಿ. ಆ ಅಧಿಕಾರವನ್ನು ಚಲಾಯಿಸುವಲ್ಲಿ ಅಧ್ಯಕ್ಷರಾಗಲಿ ರಾಜ್ಯಪಾಲರಾಗಲಿ ಹೆಚ್ಚು ವಿವೇಚನೆಯಿಂದ ವರ್ತಿಸಬೇಕು. ವಿಸರ್ಜನಾಧಿಕಾರವೆಂಬುದು ಅತ್ಯಂತ ಅಮೂಲ್ಯವಾದ ಮತ್ತು ತೀವ್ರವಾದ ಅಸ್ತ್ರ. ಆದ್ದರಿಂದ ವಿಶೇಷ ಸಂದರ್ಭಗಳಲ್ಲಿ ಮಾತ್ರ, ಅದರ ಪರಿಣಾಮ ನಿಶ್ಚಿತವಾಗಿರುವಾಗ ಮಾತ್ರ, ಅದನ್ನು ಉಪಯೋಗಿಸಬೇಕು. ರಾಜ್ಯಪಾಲ ಅಥವಾ ರಾಷ್ಟ್ರಪತಿ ನ್ಯಾಯದರ್ಶಿ (ಅಂಪೈರ್) ಇದ್ದಹಾಗೆ. ಆಟಗಾರರು ನಿಯಮ ಪಾಲಿಸಿದರೆ ಮಾತ್ರ ಸಾಲದು; ನಿಜವಾದ ಮನೋಧರ್ಮವೂ ಅವರಲ್ಲಿರುವಂತೆ ನೋಡಿಕೊಳ್ಳುವುದು ಅವನ ಕರ್ತವ್ಯ. ಪಕ್ಷಪಾತಿಯೆಂಬ ದೋಷಾರೋಪಣೆಗೆ ಒಳಗಾಗದಂತೆ ಆತ ಕೆಲಸ ನಿರ್ವಹಿಸಬೇಕು. ಯಾವ ರಾಜಕೀಯ ಪಕ್ಷಕ್ಕೂ ಅನ್ಯಾಯವಾಗದ ಹಾಗೆ ತೂಕದಿಂದ ವರ್ತಿಸಬೇಕು. ಸಂವಿಧಾನಾನುಗುಣವಾಗಿ ಸೂಕ್ತ ನೀತಿಗಳನ್ನು ಪರಿಪಾಲಿಸುವ ಸ್ಥಿರವಾದ ಪ್ರತಿನಿಧಿ ಸರ್ಕಾರ ದೇಶಕ್ಕೆ ಲಭಿಸುವ ಏಕೋದ್ದೇಶದಿಂದ ಆತ ಕಾರ್ಯಪ್ರವೃತ್ತನಾಗಬೇಕು' ಎಂದು ರವೀಂದ್ರನಾಥ ಮಿಶ್ರರ ಲೇಖನ ಕೊನೆಗೊಳ್ಳುತ್ತದೆ.

—ಎಚ್. ಎಸ್. ಕೆ.

ವಿಜಯನಗರ ವಿಚಾರಗೋಷ್ಠಿ :

೧೯೭೦ರ ನವೆಂಬರ್ ೭ರಿಂದ ೧೧ರ ವರೆಗೆ ಹೊಸಪೇಟೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ವಿಜಯನಗರ ಇತಿಹಾಸವನ್ನು ಕುರಿತಾದ ಒಂದು ವಿಚಾರಗೋಷ್ಠಿ ನಡೆಯಿತು. ಕರ್ನಾಟಕದ ಮತ್ತು ಸುತ್ತಮುತ್ತಲಿನ ವಿಶ್ವವಿದ್ಯಾನಿಲಯಗಳಿಂದ ಹಿರಿಯ ಮತ್ತು ಕಿರಿಯ ವಿದ್ವಾಂಸರು ಭಾಗವಹಿಸಿದ್ದು, ವಿಜಯ

ನಗರ ಇತಿಹಾಸದ ಮೇಲೆ ಹೊಸ ಬೆಳಕನ್ನು ಚೆಲ್ಲಲು ಅವಕಾಶವಾಯಿತು. ಈ ವಿಚಾರಗೋಷ್ಠಿಯಲ್ಲಿ ಓದಲಾದ ಮತ್ತು ಚರ್ಚಿಸಲಾದ ಪ್ರಬಂಧಗಳು ವಿಜಯನಗರ ಇತಿಹಾಸದ ಎಲ್ಲ ಮುಖಗಳಿಗೂ ಸಂಬಂಧಿಸಿದವಾಗಿದ್ದುವು. ರಾಜಕೀಯ ಸ್ಥಿತಿ, ಆಡಳಿತ ಕ್ರಮ, ಸಾಮಾಜಿಕ ಸ್ಥಿತಿ, ಧಾರ್ಮಿಕ ಸ್ಥಿತಿ, ಸಾಹಿತ್ಯ ಮತ್ತು ಕಲೆಗಳೇ ಅವುಗಳಲ್ಲಿ ಮುಖ್ಯವಾದವು.

ಈ ವಿಚಾರಗೋಷ್ಠಿಯಿಂದ ಹೊರಹೊಮ್ಮಿದ ಒಂದು ಮುಖ್ಯ ಸಂಗತಿಯೆಂದರೆ ವಿಜಯನಗರದ ಕನ್ನಡ ಉಗಮ. ವಿಜಯನಗರದ ಸಂಗಮವಂಶದವರು ಓರಂಗಲ್ಲಿನ ಕಾಕತೀಯರ ಸಾಮಂತರಾಗಿದ್ದರು ಎಂಬ ವಾದವನ್ನೇ ಪ್ರೊ. ನೀಲಕಂಠಶಾಸ್ತ್ರಿ, ಡಾ. ಎನ್. ವೆಂಕಟರಮಣಯ್ಯ ಮುಂತಾದವರು ಚರಿತ್ರಕಾರರ ಮುಂದಿಟ್ಟಿದ್ದರು. ಅವರು ಕನ್ನಡದವರು ಎಂಬ ವಾದ ಅಲ್ಲಲ್ಲಿ ಕೇಳಿ ಬರುತ್ತಿದ್ದರೂ, ಅದನ್ನು ಸಾಕಷ್ಟು ಬಲವಾಗಿ ಒತ್ತಿ ಹೇಳುವುದು ಕಷ್ಟವೇ ಆಗಿ ಕನ್ನಡಿಗರ ಬಾಯಿ ಕಟ್ಟುತ್ತಿತ್ತು. ಡಾ. ಪಿ. ಬಿ. ದೇಸಾಯಿಯವರು ನೆಲ್ಲೂರಿನ ಗೋಜಲವೀಡು ಶಾಸನವನ್ನು ಪ್ರಕಟಿಸಿ, ಆ ಶಾಸನ ಕ್ರಿ. ಶ. ೧೩೭೪ರದೆಂದೂ ಅದು ಬುಕ್ಕರಾಯನ ಅಜ್ಜನ ಶಾಸನವಲ್ಲವೆಂದೂ ವಿಜಯನಗರದ ರಾಜ ಬುಕ್ಕರಾಯನಿಗೆ ಅದು ಸೇರಿದುದೆಂದೂ ತೋರಿಸಿಕೊಟ್ಟು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಈ ಶಾಸನದಲ್ಲಿ ಬುಕ್ಕರಾಯ ವಿಜಯನಗರದ ಅರಸರ ಬಿರುದುಗಳಾದ 'ಭಾಷೆಗೆ ತಪ್ಪುವ ರಾಯರ ಗಂಡ' ಮತ್ತು 'ಮೂರು ರಾಯರ ಗಂಡ' ಎಂಬ ಬಿರುದುಗಳನ್ನು ಹೊಂದಿರುವುದು ಗಮನಾರ್ಹವಾದುದು ಎಂಬ ಅಂಶವನ್ನು ಅವರು ಖಚಿತಪಡಿಸಿದರು. ಅಧ್ಯಕ್ಷರಾಗಿದ್ದ ಡಾ. ಮಹಾಲಿಂಗಂ ಅವರು ಈ ವಾದವನ್ನೇ ಅನುಮೋದಿಸಿ, ವಿಜಯನಗರ ಕನ್ನಡನಾಡಿನ ಪೈರೇ ಹೊರತು ಆಂಧ್ರದೇಶದ್ದಲ್ಲವೆಂದು ತಿಳಿಸಿದರು.

ಕನ್ನಡ ಉಗಮದ ವಾದಕ್ಕೆ ಪೂರಕವಾಗಿಯೋ ಎಂಬಂತೆ ಡಾ. ಜಿ. ಎಸ್. ಗಾಯಿಯವರು ವಿಜಯನಗರದ ಸುಮಾರು ೫,೦೦೦ ಶಾಸನಗಳ ಪೈಕಿ ೨,೫೦೦ ಕನ್ನಡದಲ್ಲಿಯೂ, ೧,೦೦೦ ತೆಲುಗಿನಲ್ಲಿಯೂ ಇವೆಯೆಂದು ತಿಳಿಸಿದರು. ವಿದ್ಯಾರಣ್ಯರಿಗೂ ವಿಜಯನಗರಕ್ಕೂ ಇದ್ದ ಸಂಬಂಧವನ್ನು ಡಾ. ಜಿ. ಎಸ್. ದೀಕ್ಷಿತರು ಮಾಹಿತಿಗಳ ಸಹಾಯದಿಂದ ಪುನರ್ವಿಮರ್ಶಿಸಿದರು. ವಿಜಯನಗರದ ಸ್ಥಾಪನೆಯಲ್ಲಿ ಧರ್ಮದ ಪಾತ್ರವೇನೂ ಇರಲಿಲ್ಲವೆಂಬ ಆಂಧ್ರದ ಶ್ರೀ ಹನುಮಂತರಾಯರ ವಾದವನ್ನು ಖಂಡಿಸಿ, ಡಾ. ನಂದಿಮಠ ಅವರು ಧರ್ಮದ ರಕ್ಷಣೆಗೋಸ್ಕರ ಸಂಗಮವಂಶ ಸ್ಥಾಪನೆಯಾಯಿತು ಎಂಬ ಶಾಸನದ ಮಾತನ್ನು ಉಲ್ಲೇಖಿಸಿದರು.

ಇವೇ ಅಲ್ಲದೆ ಇನ್ನೂ ಅನೇಕ ಉತ್ತಮ ಪ್ರಬಂಧಗಳನ್ನು ಗೋಷ್ಠಿಯಲ್ಲಿ ಓದಲಾಯಿತು. ಡಾ. ಜಿ. ಎಸ್. ದೀಕ್ಷಿತರ ಮತ್ತು ಅವರ ಸಹೋದ್ಯೋಗಿಗಳ ದುಡಿಮೆಯಿಂದಾಗಿ ಈ ಗೋಷ್ಠಿ ಫಲಪ್ರದವಾಯಿತು.

ಹೊಯ್ಸಳ ವಿಚಾರಗೋಷ್ಠಿ :

ಮೈಸೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಆಶ್ರಯದಲ್ಲಿ ೧೯೭೦ನೆಯ ಡಿಸೆಂಬರ್ ೧೮ರಿಂದ ೨೦ರ ವರೆಗೆ ಹೊಯ್ಸಳ ವಂಶದ ಬಗ್ಗೆ ಒಂದು ವಿದ್ವತ್ಪೂರ್ಣ ಗೋಷ್ಠಿ ನಡೆಯಿತು. ದಕ್ಷಿಣ ಭಾರತದ ಅನೇಕ ವಿಶ್ವವಿದ್ಯಾನಿಲಯಗಳ ವಿದ್ವಾಂಸರು ಇದರಲ್ಲಿ ಭಾಗವಹಿಸಿದ್ದರು. ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರಾಚೀನ ಚರಿತ್ರೆ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥರಾದ ಡಾ. ಟಿ. ವಿ. ಮಹಾಲಿಂಗಂ ಅವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ದೇ. ಜವರೇಗೌಡ ಅವರು ಗೋಷ್ಠಿಯನ್ನು ಉದ್ಘಾಟಿಸಿ ಕರ್ಣಾಟಕದ ಇತಿಹಾಸವನ್ನು ತಿಳಿಯಲು ಮೂಲ ಸಾಮಗ್ರಿಗಳನ್ನು ಎಪಿಗ್ರಾಫಿಯ ಕರ್ಣಾಟಕದ ಬೃಹತ್ ಸಂಪುಟಗಳ ರೂಪದಲ್ಲಿ ಒದಗಿಸಿದ ಖ್ಯಾತ ಶಾಸನತಜ್ಞ ಲೂಯಿ ರೈಸ್ ಅವರ ಭಾವಚಿತ್ರವನ್ನು ಅನಾವರಣ ಮಾಡಿದರು. ಭಾರತೀಯ ಇತಿಹಾಸದಲ್ಲಿ ಕರ್ಣಾಟಕ ಯಾವ ರೀತಿ ತನ್ನ ಪಾತ್ರ ವಹಿಸಿದೆ, ಕರ್ಣಾಟಕದ ವೈಶಿಷ್ಟ್ಯ, ಅದರಲ್ಲಿ ಹೊಯ್ಸಳರ ಪಾತ್ರ ಮುಂತಾದವುಗಳ ಬಗೆಗೆ ಕುಲಪತಿಗಳು ಎಲ್ಲರ ಗಮನವನ್ನೂ ಸೆಳೆದರು. ಅಧ್ಯಕ್ಷ ಭಾಷಣದಲ್ಲಿ, ಡಾ. ಮಹಾಲಿಂಗಂ ಅವರು ಹೊಯ್ಸಳರ ಸಾಧನೆಗಳ ವಿಷಯವನ್ನೂ ಆ ವಿಷಯದಲ್ಲಿ ಆಗಬೇಕಾಗಿರುವ ಸಂಶೋಧನೆಯ ವಿಚಾರವನ್ನೂ ಪ್ರಸ್ತಾಪಿಸಿದರು.

ಈ ಗೋಷ್ಠಿಯಲ್ಲಿ ಸುಮಾರು ಮೂವತ್ತು ಪ್ರಬಂಧಗಳನ್ನು ಓದಿ ಚರ್ಚಿಸಲಾಯಿತು. ಹೊಯ್ಸಳರ ಉಗಮ, ರಾಜಕೀಯ ಇತಿಹಾಸ, ಆಡಳಿತ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ, ವಾಸ್ತುಶಿಲ್ಪ ಮುಂತಾದ ವಿಭಾಗಗಳಲ್ಲಿ ಪ್ರಬಂಧಗಳು ರಚಿತವಾಗಿದ್ದುವು. ಆದರೆ ರಾಜಕೀಯ ಇತಿಹಾಸ ಮತ್ತು ವಾಸ್ತುಶಿಲ್ಪ ವಿಷಯಗಳನ್ನು ಕುರಿತ ಪ್ರಬಂಧಗಳ ಸಂಖ್ಯೆಯೇ ಹೆಚ್ಚು. ಈ ಎಲ್ಲ ಪ್ರಬಂಧಗಳೂ ವೈವಿಧ್ಯಪೂರ್ಣವಾಗಿದ್ದು ಅನೇಕ ವಿಷಯಗಳ ಮೇಲೆ ಬೆಳಕನ್ನು ಚೆಲ್ಲುವಂತಹುವಾಗಿದ್ದುವು. ಈ ಪ್ರಬಂಧಗಳು ಸಧ್ಯದಲ್ಲಿಯೇ ಪ್ರಕಟಗೊಳ್ಳುವ ನಿರೀಕ್ಷೆಯಿದೆ. ಹಾಗಾದಲ್ಲಿ ಹೊಯ್ಸಳರ ಇತಿಹಾಸದ ಬಗೆಗೆ ಸಂಪಾದಿತ ಶ್ರೇಷ್ಠ ಗ್ರಂಥವೊಂದು ಹೊರಬಂದು ಇತಿಹಾಸಕಾರರ ಗಮನವನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ. ಒಟ್ಟಿನಲ್ಲಿ ಹೊಯ್ಸಳ ವಿಚಾರಗೋಷ್ಠಿ ಯಶಸ್ವಿಯಾಗಿ ನಡೆಯಿತೆನ್ನಬಹುದು. ಈ ಗೋಷ್ಠಿಯ ಯಶಸ್ಸಿಗೆ ಕಾರಣರಾದ ಡಾ. ಬಿ. ಷೇಕ್ ಅಲಿ ಮತ್ತು ಅವರ ಸಹೋದ್ಯೋಗಿಗಳು ಅಭಿನಂದನಾರ್ಹರು.

—ಎ. ವಿ. ಎನ್.

ಪುಸ್ತಕ ಲೋಕ

ಸಮಾಜಶಾಸ್ತ್ರ ಪರಿಚಯ, ಲೇಖಕರು: ಡಾ. ಕೆ. ಚಂದ್ರಶೇಖರಯ್ಯ, ಡಾ. ಎ. ಜಿ. ಪ್ರಸೀತ, ಶ್ರೀ ಬಿ. ಎಚ್. ಅಮಾತಿ ಮತ್ತು ಶ್ರೀ ಡಿ. ಎಸ್. ಭಡಂಕರ; ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟಗಳು ೧೫೫; ಬೆಲೆ: ಮೂರು ರೂಪಾಯಿ:

ಸಮಾಜಶಾಸ್ತ್ರ ಪರಿಚಯ ಎಂಬ ಪುಸ್ತಕ ಪಿ.ಯು.ಸಿ. ತರಗತಿಯ ಸಮಾಜಶಾಸ್ತ್ರದ ಪಠ್ಯಪುಸ್ತಕ. ಇದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಪಠ್ಯಪುಸ್ತಕ ಮಾಲಿಯ ಒಂಬತ್ತನೆಯ ಕೃತಿ. ಇದು ಇಲ್ಲಿನ ಪಠ್ಯಕ್ರಮವನ್ನು ಅನುಸರಿಸಿ ಡಾ. ಕೆ. ಚಂದ್ರಶೇಖರಯ್ಯನವರ ನೇತೃತ್ವದಲ್ಲಿ ರಚಿತವಾಗಿದೆ. ನಾಲ್ಕು ಜನ ಗ್ರಂಥಕರ್ತರೂ ತಮ್ಮ ಕಾರ್ಯವನ್ನು ಸಮರ್ಪಕವಾಗಿ ನೆರವೇರಿಸಿದ್ದಾರೆ.

ಈ ಗ್ರಂಥದಲ್ಲಿ ಹದಿನಾಲ್ಕು ಅಧ್ಯಾಯಗಳಿವೆ. ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಶಬ್ದವಿವರಣೆ ಸಮಾಜಶಾಸ್ತ್ರವನ್ನು ಅಭ್ಯಾಸಮಾಡುವವರಿಗೆ ತುಂಬ ಉಪಯುಕ್ತವಾಗುತ್ತದೆ. ಈ ಪದಗಳಿಗೆ ಸಮಾನವಾದ ಇಂಗ್ಲಿಷ್ ಪದಗಳನ್ನು ಕೊಟ್ಟಿರುವುದರಿಂದ ಇಂಗ್ಲಿಷ್ ಮಾಧ್ಯಮವನ್ನು ತೆಗೆದುಕೊಂಡಿರುವ ವಿದ್ಯಾರ್ಥಿಗಳೂ ವಿಷಯಗಳನ್ನು ತಿಳಿಯಲು ಅನುಕೂಲವಾಗುತ್ತದೆ.

ಈ ಪುಸ್ತಕದಲ್ಲಿ ಮೊದಲು ಸಮಾಜಶಾಸ್ತ್ರದ ಬೆಳವಣಿಗೆಯನ್ನು ಸ್ಥೂಲವಾಗಿ ನಿರೂಪಿಸಿ ಅದರ ವಾಚ್ಯ ಮತ್ತು ವಿಷಯ ವ್ಯಾಪ್ತಿಯನ್ನು ವಿವರಿಸಲಾಗಿದೆ. ಸಮಾಜಶಾಸ್ತ್ರಕ್ಕೂ ಮಿಕ್ಕ ಸಮಾಜಶಾಸ್ತ್ರಗಳಿಗೂ ಇರುವ ಸಂಬಂಧವನ್ನು ತಿಳಿಸಿ, ಸಮಾಜದ ರೂಪಕತೆಗಳನ್ನು ವಿವರಿಸಲಾಗಿದೆ. ಸಮಾಜದ ರೂಪಕತೆಗಳನ್ನು ತಿಳಿಸುವಾಗ ಗಿರಿಜನಾಂಗಗಳು, ಗ್ರಾಮ ಮತ್ತು ನಗರಗಳ ಸಾಮಾಜಿಕ ಜೀವನದ ವೈವಿಧ್ಯ ಇವನ್ನು ಸಾಕಷ್ಟು ವಿವರಣೆಗಳೊಂದಿಗೆ ತಿಳಿಸಿರುವರು. ಅನಂತರ ಸಾಮಾಜಿಕ ಸಮೂಹಗಳ ವರ್ಗೀಕರಣವನ್ನು ಸ್ಥೂಲವಾಗಿ ತಿಳಿಸಿ, ಕುಟುಂಬ ಮತ್ತು ವಿವಾಹಗಳ ವಿಷಯವಾಗಿ ಹಲವು ಅಗತ್ಯವಾದ ವಿವರಗಳೊಂದಿಗೆ ನಿರೂಪಿಸಲಾಗಿದೆ. ಈ ಪುಸ್ತಕದ ಕೊನೆಯ ಅಧ್ಯಾಯದಲ್ಲಿ 'ರಾಷ್ಟ್ರದ' ವಿಚಾರವನ್ನು ಸಾಮಾಜಿಕ ದೃಷ್ಟಿಯಿಂದ ವಿವರಿಸಿದ್ದಾರೆ.

ಈ ಪುಸ್ತಕದ ವಸ್ತುನಿರೂಪಣೆ ಸರಳವಾದ ಶೈಲಿಯಲ್ಲಿದ್ದು ವಿಷಯಗ್ರಹಣೆಗೆ ಅನುಕೂಲವಾಗಿದೆ.

ನಮ್ಮಲ್ಲಿ ಪ್ರಕಟವಾಗುತ್ತಿರುವ ಸಮಾಜವಿಜ್ಞಾನದ ಪಠ್ಯಪುಸ್ತಕಗಳಲ್ಲಿ ಹೆಚ್ಚಾಗಿ ಪರೀಕ್ಷೆಯ ದೃಷ್ಟಿಯಿಂದ ಅಲ್ಲಿ ಬರಬಹುದಾದ ಪ್ರಶ್ನೆಗಳಿಗೆ ಉತ್ತರ

ಗಳಾಗುವಂತೆ ವಿಷಯಗಳನ್ನು ಹೊಂದಿಸಿಕೊಂಡು ಬರೆಯುವ ಪ್ರವೃತ್ತಿಯನ್ನು ಕಾಣುತ್ತೇವೆ. ಇದರಿಂದ ವಿಷಯದ ಬಗ್ಗೆ ಒಂದು ಸಂಪೂರ್ಣತೆಯನ್ನು ಪುಸ್ತಕ ಕೊಡಲು ಅಸಮರ್ಥವಾಗುತ್ತದೆ. ಡಾ. ಕೆ. ಚಂದ್ರಶೇಖರಯ್ಯನವರು ಸಮನ್ವಯಿಸಿರುವ ಈ ಪುಸ್ತಕ ಈ ನ್ಯೂನತೆಯಿಂದ ಬಹುಮಟ್ಟಿಗೆ ಮುಕ್ತವಾಗಿರುವುದು ಅಭಿನಂದನೀಯ. ಆದರೂ ಈ ಪುಸ್ತಕದಲ್ಲಿ ಆರ್ಥಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳ ವಿಚಾರವನ್ನು ಸ್ಥೂಲವಾಗಿ ನಿರೂಪಿಸಿ, ಆಧುನಿಕ ಸಾಮಾಜಿಕ ಜೀವನದ ಪ್ರಮುಖ ವಿಷಯವಾದ ಸಾಮಾಜಿಕ ಬದಲಾವಣೆಯ ವಿಚಾರವಾಗಿ ಒಂದು ಅಧ್ಯಾಯವನ್ನು ಸೇರಿಸಬಹುದಾಗಿತ್ತು. ಆಗ ಪುಸ್ತಕಕ್ಕೆ ವಿಷಯನಿರೂಪಣೆಯಲ್ಲಿ ಸಂಪೂರ್ಣತೆ ದೊರೆಯುತ್ತಿತ್ತು. ಪಠ್ಯಪುಸ್ತಕ ಕೇವಲ ಪಠ್ಯಕ್ರಮದಲ್ಲಿ ಸೂಚಿತ ವಿಷಯಗಳಿಗೆ ಸೀಮಿತವಾಗಬೇಕಾದ ಅಗತ್ಯವಿಲ್ಲ. ಆದರೆ ಅದು ಪಠ್ಯಕ್ರಮದ ವಿಷಯಗಳನ್ನು ನಿರೂಪಿಸುವುದು ಅಗತ್ಯ. ವಿಷಯದ ಸಂಪೂರ್ಣತೆಗೆ ಅಗತ್ಯವಾಗಿರುವ ವಿಷಯಗಳಿದ್ದರೆ ಪುಸ್ತಕದ ಉದ್ದೇಶಕ್ಕೆ ಲೋಪಬಾರದು. ಈ ವಿಚಾರ ಪಾಶ್ಚಾತ್ಯ ಲೇಖಕರ ಪಠ್ಯಪುಸ್ತಕಗಳನ್ನು ಅವಲೋಕಿಸಿದರೆ ವಿದಿತವಾಗುತ್ತದೆ. ನಮ್ಮ ಪಠ್ಯಪುಸ್ತಕಗಳ ಲೇಖಕರು ಈ ಪ್ರವೃತ್ತಿಯನ್ನು ಬೆಳಸಿಕೊಳ್ಳಬೇಕಾದ ಅಗತ್ಯವಿದೆ. 'ಸಮಾಜಶಾಸ್ತ್ರ ಪರಿಚಯ' ಇದರಲ್ಲಿ ಒಂದು ಗಣನೀಯವಾದ ಹೆಜ್ಜೆಯನ್ನಿಟ್ಟಿದೆ. ಇದು ಈ ಪುಸ್ತಕದ ಮೊದಲನೆಯ ಮತ್ತು ಹತ್ತನೆಯ ಅಧ್ಯಾಯಗಳ ವಸ್ತುನಿರೂಪಣೆಯಲ್ಲಿ ಕಾಣಬರುತ್ತದೆ.

ಪಾರಿಭಾಷಿಕ ಶಬ್ದಗಳ ಬಗೆಗೆ ನಾವು ಕೆಲವು ಅಂಶಗಳನ್ನು ಗಮನದಲ್ಲಿಡುವುದು ಉತ್ತಮ. ನಮ್ಮ ಮೂರು ವಿಶ್ವವಿದ್ಯಾನಿಲಯಗಳ ಲೇಖಕರೂ ಸಮಾನವಾದ ಪಾರಿಭಾಷಿಕ ಪದಗಳನ್ನು ಉಪಯೋಗಿಸುವುದು ಅನುಕೂಲ. ಇದರಿಂದ ವಿದ್ಯಾರ್ಥಿಗಳಿಗೆ ಗೊಂದಲ ಕಡಿಮೆಯಾಗುತ್ತದೆ. ಇಂಗ್ಲಿಷಿನ 'ಸ್ಟೇಟ್' ಎಂಬ ಪದಕ್ಕೆ ಸಾಧಾರಣವಾಗಿ 'ರಾಜ್ಯ'ವೆಂದು ಉಪಯೋಗಿಸುವುದು ವಾಡಿಕೆ. ಆದರೆ ಇಲ್ಲಿ 'ರಾಷ್ಟ್ರ' ಎಂಬ ಪದವನ್ನು ಬಳಸಲಾಗಿದೆ. ಹಾಗೆಯೇ ಇಂಗ್ಲಿಷಿನ ಬೇಸಿಕ್ ಕಾನ್ಸೆಪ್ಟ್ಸ್ ಎಂಬ ಶಬ್ದಕ್ಕೆ "ಮೂಲ ಪರಿಕಲ್ಪನೆಗಳು" ಎಂದು ಹೇಳಬಹುದು. ಆದರೆ ಈ ಪುಸ್ತಕದಲ್ಲಿ "ಮೂಲ ವಿಚಾರಗಳು" ಎಂಬ ಶಬ್ದವನ್ನು ಬಳಸಲಾಗಿದೆ.

ಒಟ್ಟಿನಲ್ಲಿ 'ಸಮಾಜಶಾಸ್ತ್ರ ಪರಿಚಯ' ನಮ್ಮ ಮೂರು ವಿಶ್ವವಿದ್ಯಾನಿಲಯಗಳ ಪ್ರಿ-ಯೂನಿವರ್ಸಿಟಿ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪುಕಸ್ತವಾಗಿದೆ.

—ಎಚ್. ಎಂ. ಸದಾಶಿವಯ್ಯ

ವಿಜಯನಗರದ ನಿರ್ಣಾಯಕ ಯುದ್ಧ (ರಕ್ಕಸಗಿ—ತಂಗಡಗಿ ಯುದ್ಧ), ಲೇಖಕ : ಎಸ್. ಬಿ. ಕೋಡದ, ಎಂ.ಎ. ; ಪು. ೭೦ ; ಬೆಲೆ : ೨೫ ಪೈಸೆ

ಮುಳುಗುಂದ ನಾಡು, ಲೇಖಕ : ಡಾ. ಶ್ರೀನಿವಾಸ ರಿತ್ತಿ ; ಪು. ೭೮ ; ಬೆಲೆ : ೨೫ ಪೈಸೆ ; ಎರಡೂ ಕರ್ನಾಟಕ ವಿಶ್ವವಿದ್ಯಾಲಯದ ಉಪನ್ಯಾಸ ಗ್ರಂಥಮಾಲೆಯ ಪುಸ್ತಕಗಳು

ಇಲ್ಲಿ ವಿಮರ್ಶಿಸಿರುವ ಎರಡು ಗ್ರಂಥಗಳಲ್ಲಿ ಮೊದಲನೆಯದು ಕೋಡದರವರ 'ವಿಜಯನಗರದ ನಿರ್ಣಾಯಕಯುದ್ಧ'. ಕ್ರಿ. ಶ. ೧೩೩೬ರಲ್ಲಿ ಸ್ಥಾಪಿತಗೊಂಡ ವಿಜಯನಗರ ಸಂಸ್ಥಾನ ವರ್ಷಗಳುರುಳಿದಂತೆ ಸರಸರನೆ ಬೆಳೆದು ದಕ್ಷಿಣಭಾರತದ ಇತಿಹಾಸದಲ್ಲೆ ಅತಿದೊಡ್ಡ ಸಾಮ್ರಾಜ್ಯವೆಂದು ಕೀರ್ತಿ ಪಡೆಯಿತು. ಸಂಗಮ ವಂಶದ ೧ನೆಯ ಹರಿಹರ (ಕ್ರಿ. ಶ. ೧೩೩೬–೫೭), ೧ನೆಯ ಬುಕ್ಕ (ಕ್ರಿ. ಶ. ೧೩೪೪–೭೭), ೨ನೆಯ ಹರಿಹರ (ಕ್ರಿ. ಶ. ೧೩೭೭–೧೪೦೪), ೧ನೆಯ ದೇವರಾಯ (ಕ್ರಿ. ಶ. ೧೪೦೬–೨೨), ೨ನೆಯ ದೇವರಾಯ (ಕ್ರಿ. ಶ. ೧೪೨೨–೪೬), ಸಾಳುವ ವಂಶದ ನರಸಿಂಹ (ಕ್ರಿ. ಶ. ೧೪೮೬–೯೧) ಹಾಗೂ ತುಳುವ ವಂಶದ ಪ್ರಖ್ಯಾತ ಚಕ್ರವರ್ತಿ ಕೃಷ್ಣದೇವರಾಯ (ಕ್ರಿ. ಶ. ೧೫೦೯–೨೯) ದಕ್ಷಿಣ ಭಾರತದ ಮಟ್ಟಿಗಾದರೂ ಐತಿಹಾಸಿಕ ಮಹಾಪುರುಷರೇ ಆಗಿದ್ದಾರೆ. ಕ್ರಿ. ಶ. ೧೫೨೯ರಲ್ಲಿ ಕೃಷ್ಣದೇವರಾಯ ತೀರಿಕೊಂಡ ಅನಂತರ ಗ್ರಹಣಪೀಡಿತವಾದ ವಿಜಯನಗರ ಸಾಮ್ರಾಜ್ಯ ಕ್ರಿ. ಶ. ೧೫೬೫ರಲ್ಲಿ ನಡೆದುಹೋದ ರಕ್ಕಸ–ತಂಗಡಿಯುದ್ಧದ ಪರಿಣಾಮವಾಗಿ ಹೆಚ್ಚುಕಡಿಮೆ ನಾಮಾವಶೇಷವಾದಂತೆಯೇ ಆಯಿತು. ಈ ದುರಂತ ಕಾಳಗಕ್ಕೆ ಕಾರಣಗಳನ್ನು ಹುಡುಕಿ ಈ ಯುದ್ಧಕ್ಕೆ ಸಂಬಂಧಿಸಿದಂತೆ ತಿಳಿದುಬರುವ ಇತರ ಅಂಶಗಳನ್ನೂ ಓದುಗರ ಮುಂದಿಡುವುದು ಕೋಡದರವರ ಮುಖ್ಯ ಉದ್ದೇಶ.

ಅಂತಹ ಸ್ಥೂಲ ಪರಿಚಯವನ್ನು ಒದಗಿಸಿಕೊಡುವಲ್ಲಿ ಕೋಡದರವರು ಬಹುಮಟ್ಟಿಗೆ ಯಶಸ್ವಿಗಳಾಗಿರುವರಾದರೂ, ವಿಷಯದ ನಿರೂಪಣೆಯಲ್ಲಿ ಕೆಲವೊಂದು ಕುಂದುಕೊರತೆಗಳು ಕಂಡುಬರುತ್ತವೆ. ಪುಟ ೧೨ರಲ್ಲಿ ಲೇಖಕರು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾದದ್ದು ೧೩೪೬ರಲ್ಲಿ ಎಂದಿದ್ದಾರೆ. ನಿಜ ಸಂಗತಿ ಎಂದರೆ ವಿಜಯನಗರ ಹುಟ್ಟಿದ್ದು ಕ್ರಿ. ಶ. ೧೩೩೬ರಲ್ಲಿ, ಅದೇ ವರ್ಷದ ಎಪ್ರಿಲ್ ೧೮ರಂದು ೧ನೆಯ ಹರಿಹರ ಪಟ್ಟಾಭಿಷಿಕ್ತನಾದಾಗ.

ವಿಜಯನಗರದ ಅಧಃಪತನಕ್ಕೆ ಧರ್ಮದ್ವೇಷ ಕಾರಣವಲ್ಲ ಎಂದು ತೋರಿಸಿ ಕೊಡಲು ಹೊರಟ ಕೋಡದರವರು ಧರ್ಮದ್ವೇಷದಿಂದಲೇ ಆ ಸಾಮ್ರಾಜ್ಯದ ಪತನವಾಯಿತೆಂದೇ ತೋರಿಸಿಕೊಟ್ಟಂತಾಗಿದೆ! ಇತಿಹಾಸಕಾರ ಪಕ್ಷಪಾತ ಧೋರಣೆ ಯಿಂದ ಏನನ್ನೂ ಹೇಳಬಾರದೆಂಬುದು ಲೇಖಕರ ಧ್ಯೇಯವಾಗಿದ್ದರೂ (ಪುಟ ೬) 'ಬಹಮನಿ ರಾಜ್ಯವು ನೆರೆಯ ಹಿಂದೂಸಾಮ್ರಾಜ್ಯದೊಡನೆ ಯಾವಾಗಲೂ ಕಲಹ ತೆಗೆದು ಕದನಕ್ಕಿಳಿಯುತ್ತಿತ್ತು' ಎಂದು ಏಕಪಕ್ಷೀಯವಾಗಿ ನುಡಿದಿದ್ದಾರೆ. ಬಹಮನಿ–ವಿಜಯನಗರ ಯುದ್ಧಗಳಿಗೆ ಬಹಮನಿಯವರಷ್ಟೇ ವಿಜಯ ನಗರದವರೂ ಕಾರಣರಿದ್ದರೆಂದು ಎಲ್ಲ ಇತಿಹಾಸ ಗ್ರಂಥಗಳಲ್ಲೂ ಸ್ಪಷ್ಟವಾಗಿಯೇ ತೋರಿಸಿಕೊಡಲಾಗಿದೆ.

'ವಿಜಯನಗರದ ನಿರ್ಣಾಯಕ ಯುದ್ಧದ ಪರಿಣಾಮಗಳು ದಕ್ಷಿಣ ಭಾರತದ

ಚರಿತ್ರೆಗೆ ಮಾರಕವಾಗಿ ಪರಿಣಮಿಸಿದವು' ಎನ್ನುತ್ತಾರೆ ಕೋಡದರವರು. ಚರಿತ್ರೆಗೆ ಮಾರಕವಾಗಿ ಪರಿಣಮಿಸಿದವು ಎನ್ನುವುದರ ಅರ್ಥವೇನು ? ಚರಿತ್ರೆಗೆ ಸಾವುಂಟೇ ? ವಿಜಯನಗರ ಆ ಯುದ್ಧದ ಪರಿಣಾಮವಾಗಿ ಬಲಗುಂದಿಹೋಯಿತೇನೋ ಹೌದು. ಆದರೆ ಅದೂ ಕೂಡ ಚರಿತ್ರೆಯ ಬಿಂದು ಅಂಶವಷ್ಟೆ.

ಇಂತಹ ಕೆಲವು ಕೊರತೆಗಳನ್ನು ಬಿಟ್ಟರೆ ಕೋಡದರವರ ಕಿರುಹೊತ್ತಿಗೆ ಕರ್ಣಾಟಕದ ಜನಸಾಮಾನ್ಯರಿಗೆ ಒಂದು ಒಳ್ಳೆಯ ಕೊಡುಗೆಯೆಂದೇ ಹೇಳಬೇಕು.

ಎರಡನೆಯ ಗ್ರಂಥ ಡಾ. ಶ್ರೀನಿವಾಸ ರಿತ್ತಿಯವರ 'ಮುಳುಗುಂದ ನಾಡು'. ಡಾ. ರಿತ್ತಿಯವರು ಶ್ರೇಷ್ಠ ಶಾಸನಸಂಶೋಧಕರೂ ಹೌದು, ಇತಿಹಾಸಜ್ಞರೂ ಹೌದು. ಅಂದಮೇಲೆ 'ಮುಳುಗುಂದ ನಾಡು' ಉತ್ತಮವಾದ, ಅತ್ಯುಪಯುಕ್ತವಾದ ಒಂದು ಪ್ರಬಂಧವೆಂದು ಒತ್ತಿಹೇಳುವುದು ಅನಗತ್ಯ. ಪ್ರಾಚೀನ ಕಾಲದಿಂದಲೂ ಕರ್ಣಾಟಕವು ಗಂಗವಾಡಿ, ಬನವಾಸೆನಾಡು, ಪಲಸಿಗೆನಾಡು, ಪುರಿಗೆರೆ, ಬೆಳ್ವೊಲ ಮುಂತಾದ ಹಲವಾರು ಪ್ರಾಂತಗಳಾಗಿ ವಿಭಕ್ತಗೊಂಡಿದ್ದು, ದೊರೆತಿರುವ ನೂರಾರು ಶಾಸನಗಳು ಕನ್ನಡಿಗರಿಗೆ ಈ ನಾಡುಗಳ ಕುರಿತಾಗಿದ್ದ ಅಪಾರ ಪ್ರೇಮ, ಭಕ್ತಿಗಳಿಗೆ ಸಾಕ್ಷಿಯಾಗಿವೆ. ಈ ಪ್ರಾಂತಗಳು ಹಿಂದಿನಿಂದೂ ತಮ್ಮ ತಮ್ಮವೇ ಆದ ವಿಶಿಷ್ಟ ರೀತಿಗಳಲ್ಲಿ ಕರ್ಣಾಟಕದ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಬೆಳೆವಣಿಗೆಗೆ ಕಾರಣವಾಗಿದ್ದುವು. ಅಂತಹ ಪ್ರಾಂತಗಳಲ್ಲೊಂದಾದ ಮುಳುಗುಂದ ನಾಡಿನ ಬಗೆಗೆ ಶ್ಲಾಘನೀಯ ರೀತಿಯಲ್ಲಿ ಶೈಲಿಯಲ್ಲಿ ಡಾ. ರಿತ್ತಿಯವರು ವಿಚಾರ ಪೂರ್ವಕವಾದ ಪ್ರಬಂಧವನ್ನು ಬರೆದು ಕನ್ನಡಿಗರಿಗೆ ಅಮೂಲ್ಯಸೇವೆ ಸಲ್ಲಿಸಿದ್ದಾರೆ.

ಇನ್ನು, 'ಮುಳುಗುಂದ' ಎಂಬ ಹೆಸರಿನ ಮೂಲವೇನಿರಬಹುದೆಂಬುದನ್ನು ಚರ್ಚಿಸುವಲ್ಲಿ ಲೇಖಕರು 'ಬೆಳ್ವೊಲ'ವೆಂದರೆ ಬಿಳಿಯಹೊಲವಲ್ಲ, 'ಬೆಳೆಯುವ ಹೊಲ' ಎಂದಿದ್ದಾರೆ. ಇದು ಸರಿಯಲ್ಲವೆಂಬುದು ನನ್ನ ಭಾವನೆ. ಬೆಳ್ವೊಲ ಬೆಳ್+ಹೊಲದಿಂದಲೇ ಹುಟ್ಟಿದ್ದು. ಬಿಳಿಯ ಹೊಲವೆಂದೇ ಅದರ ಅರ್ಥ. ತಮಿಳುನಾಡಿನಲ್ಲೂ 'ವೆಣ್ಣಿಲಂ' ಎಂಬ ಊರ ಹೆಸರಿದೆ. ವೆಳ್+ನಿಲಂ ಎಂಬುದೇ 'ವೆಣ್ಣಿಲಂ' ಎಂದಾಗಿರುತ್ತದೆ.

—ಕೊ. ವ್ಯಾ. ರ.

ತರ್ಕಶಾಸ್ತ್ರ ಪರಿಚಯ, ಲೇಖಕರು: ಕೆ. ಡಿ. ತಂಗೋಡ, ಬಿ. ಎಚ್. ಕೊಟಬಾಗಿ, ಸಿ. ಸಿ. ದೀಕ್ಷಿತ; ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಪುಟಗಳು: vii+168; ಬೆಲೆ: ಮೂರು ರೂಪಾಯಿ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಉಚ್ಚವಿದ್ಯಾಭ್ಯಾಸಕ್ಕೂ ಕನ್ನಡವನ್ನೇ ಬಳಸುವ ಯತ್ನಕ್ಕೆ ಪೂರ್ವಭಾವಿಯಾಗಿ ಕೈಗೊಂಡ ಪಠ್ಯಪುಸ್ತಕಗಳ ರಚನೆಯ ಅಂಗವಾಗಿ ಬರೆಯಲಾದ ಈ ಪುಸ್ತಕ ಸುಲಭವಾದ, ಸ್ಪಷ್ಟವಾದ ಭಾಷೆಯಲ್ಲಿ

ಬರೆಯಲ್ಪಟ್ಟಿದೆ. ಒಂದು ವರ್ಷದ ಪ್ರಿ–ಯೂನಿವರ್ಸಿಟಿ ತರಗತಿಗೆ ಇದುವರೆಗೆ ಬರೆಯಲ್ಪಟ್ಟಿರುವ ಪಠ್ಯಪುಸ್ತಕಗಳ ಮಾದರಿಯಲ್ಲೇ ಈ ಪುಸ್ತಕವನ್ನೂ ಬರೆಯಲಾಗಿದೆ. ಬರೆದಿರುವ ಶೈಲಿ, ಪ್ರತಿಯೊಂದು ವಿಷಯಕ್ಕೂ ಕೊಟ್ಟಿರುವ ಯೋಗ್ಯ ಪ್ರಾತಿನಿಧ್ಯ, ಸೂಕ್ತ ಕನ್ನಡ ಪಾರಿಭಾಷಿಕ ಶಬ್ದಗಳ ಬಳಕೆ (ಜೊತೆಯಲ್ಲೇ ಇಂಗ್ಲಿಷ್ ಶಬ್ದಗಳನ್ನೂ ಕಂಸಗಳಲ್ಲಿ ಕೊಟ್ಟಿರುವುದು)—ಇವು ಈ ಪುಸ್ತಕದ ಗುಣಗಳು. ಸಿಲೊಜಿಸಂ ಎಂಬ ಶಬ್ದವನ್ನು 'ತ್ರಿವಾಕ್ಯಾನುಮಾನ'ವೆಂದು ಅನುವಾದಿಸಿರುವುದಂತೂ ತುಂಬ ಸಮರ್ಪಕವಾಗಿದೆ. 'ಸಂಬಂಧಗಳು ಮತ್ತು ಸಂಬಂಧಾನುಮಾನಗಳು' ಎಂಬ ಪ್ರಕರಣ ಮತ್ತು ಅನುಮಾನ ಪ್ರಕರಣಗಳಲ್ಲಿ ತಾರ್ಕಿಕ ವಾಕ್ಯಗಳನ್ನು ಸೂಚಿಸಲು p, q ಎಂಬ ಸಂಕೇತಗಳನ್ನು ಬಳಸಿರುವುದರ ಹೊರತು ಮಿಕ್ಕೆಲ್ಲ ವಿಷಯಗಳಲ್ಲೂ ಈ ಪುಸ್ತಕ ಇದುವರೆಗಿನ ಪಠ್ಯಪುಸ್ತಕಗಳ ಜಾಡನ್ನೇ ಅನುಸರಿಸಿದೆಯೆನ್ನಬಹುದು.

ಉಚ್ಚ ವಿದ್ಯಾಭ್ಯಾಸಕ್ಕೂ ಕನ್ನಡವನ್ನೇ ಬಳಸುವುದರ ಉದ್ದೇಶವೆಂದರೆ ನಾವು ವಿದೇಶೀ ಭಾಷೆಗಳನ್ನು ಬಿಟ್ಟು ನಮ್ಮ ಮಾತೃಭಾಷೆಯಲ್ಲಿಯೇ ಆಲೋಚಿಸಲು ವ್ಯವಹರಿಸಲು ಸಾಧ್ಯವಾಗಿ, ವಿದೇಶೀಯರು ತಮ್ಮ ಭಾಷಾಮಾಧ್ಯಮಗಳ ಮೂಲಕ ಸಾಧಿಸಿರುವ ವೈಚಾರಿಕ ಪ್ರಗತಿಯನ್ನೇ ನಾವೂ ಅಂತಿಮವಾಗಿ ಸಾಧಿಸಬೇಕೆಂಬುದು. ಆದ್ದರಿಂದ ನಾವು ಕನ್ನಡದಲ್ಲಿ ಇದುವರೆಗೆ ಲಭ್ಯವಿಲ್ಲದಿದ್ದ ಪುಸ್ತಕಗಳ ಅನುವಾದ, ಸ್ವತಂತ್ರ ರಚನೆಗಳಿಗೆ ತೊಡಗಿದ್ದೇವೆ. ಪುಸ್ತಕಗಳನ್ನು ಸ್ವತಂತ್ರವಾಗಿ ರಚಿಸುವಾಗ ಇಪ್ಪತ್ತನೆಯ ಶತಮಾನದ ಐದು–ಆರನೆಯ ದಶಕಗಳ ದೃಷ್ಟಿ ಅವುಗಳಲ್ಲಿ ಮೂಡಿ ಬರದಿದ್ದರೆ ಅಂಥ ಪಠ್ಯಪುಸ್ತಕಗಳನ್ನು ಓದುವ ಕನ್ನಡಿಗರ ವೈಚಾರಿಕ ಪ್ರಗತಿ "ಪ್ರಗತಿ" ಎನ್ನಿಸಿಕೊಳ್ಳಲಾರದು. ಈ ದೃಷ್ಟಿಯಿಂದ ಈ ಮೇಲಿನ ಪುಸ್ತಕವಷ್ಟೇ ಅಲ್ಲ, ಇದುವರೆಗೆ ಕನ್ನಡದಲ್ಲಿ ಪ್ರಕಟವಾಗಿರುವ ಇದೇ ಗುಂಪಿನ ತರ್ಕಶಾಸ್ತ್ರದ ಎಲ್ಲಾ ಪುಸ್ತಕಗಳೂ ನಿರಾಸೆಯನ್ನೇ ಉಂಟುಮಾಡುತ್ತವೆ.

ಒಂದೆರಡು ಉದಾಹರಣೆಗಳನ್ನು ಕೊಡುವುದಾದರೆ, ಪಾಶ್ಚಾತ್ಯ ತರ್ಕಶಾಸ್ತ್ರದ ಇತಿಹಾಸವನ್ನು ಬಲ್ಲವರೆಲ್ಲರಿಗೂ 'ತಾರ್ಕಿಕ ವಾಕ್ಯಗಳಲ್ಲಿ ಎರಡೇ ಪದಗಳು (ಟರ್ಮ್ಸ್) ಇರಬೇಕು', 'ಈ ಪದಗಳ ನಡುವೆ ಒಂದೇ ರೀತಿಯ ಸಂಬಂಧ—ವಿಧೇಯತಾಸಂಬಂಧ (ರಿಲೇಷನ್ ಆಫ್ ಪ್ರೆಡಿಕೇಷನ್)–ಸಾಧ್ಯ', 'ಪದಗಳೆಲ್ಲವೂ ವರ್ಗಗಳನ್ನು (ಕ್ಲಾಸಸ್) ಸೂಚಿಸುತ್ತವೆ', 'ಪ್ರತಿಯೊಂದು ಪದಕ್ಕೂ ಗುಣನಿರ್ದೇಶನ (ಕನೋಟೇಷನ್) ಮತ್ತು ವಸ್ತುನಿರ್ದೇಶನ (ಡಿನೋಟೇಷನ್) ಇರುತ್ತದೆ', 'ಪದಗಳೆಲ್ಲಕ್ಕೂ ವ್ಯಾಪ್ತಿ ಇದೆ (ಡಿಸ್ಟ್ರಿಬ್ಯೂಷನ್)' ಮುಂತಾದ ನಂಬಿಕೆಗಳಿಂದಾಗಿ ಹೇಗೆ ಹತ್ತಾರು ಶತಮಾನಗಳ ಕಾಲ ತರ್ಕಶಾಸ್ತ್ರದಲ್ಲಿ ಕಿಂಚಿತ್ತೂ ಪ್ರಗತಿಯಾಗಲಿಲ್ಲವೆಂಬುದು ತಿಳಿದಿರುತ್ತದೆ. ಈ ನಂಬಿಕೆಗಳು ದೋಷಪೂರ್ಣವೆಂದು ಇಪ್ಪತ್ತನೆಯ ಶತಮಾನದ ಆದಿಭಾಗದಿಂದಲೂ ಪಾಶ್ಚಾತ್ಯ ತಾರ್ಕಿಕರು ವಾದಿಸಿ,

ಸಿದ್ಧಾಂತವಾದಿ ತರ್ಕಶಾಸ್ತ್ರದಲ್ಲಿ ಮೂಲಭೂತವಾದ ಬದಲಾವಣೆಗಳನ್ನೇ ಮಾಡಿದ್ದರೂ ಭಾರತದಲ್ಲಿ ಬರೆಯಲಾದ ಬಹುಶಃ ಯಾವ ತರ್ಕಶಾಸ್ತ್ರದ ಪಠ್ಯ ಪುಸ್ತಕಗಳಲ್ಲಿಯೂ ಇದರ ಸುಳಿವು ಕಾಣಿಸುವುದಿಲ್ಲ. ನಾವು ಇನ್ನೂ AEIO ಎಂಬ ನಾಲ್ಕು ವಿಧವಾದ ತಾರ್ಕಿಕ ವಾಕ್ಯಗಳು ಮಾತ್ರ ಇವೆಯೆಂದು ಬೋಧಿಸುತ್ತಿದ್ದೇವೆ. ಕನ್ನಡದಲ್ಲಿ ಹೊಸದಾಗಿ ಬರೆಯುವಾಗಲಾದರೂ ಈ ದೋಷವನ್ನು ನಿವಾರಿಸಿಕೊಳ್ಳಬಹುದಿತ್ತು. ಕೊನೆಯಪಕ್ಷ ಸ್ಟೆಬಿಂಗಳ ಎ ಮಾಡರ್ನ್ ಎಲಿಮೆಂಟರಿ ಲಾಜಿಕ್ ಪುಸ್ತಕದ ಮಾದರಿಯಲ್ಲಾದರೂ ಒಂದು ಪಠ್ಯಪುಸ್ತಕವನ್ನು ರಚಿಸಿದ್ದರೆ ಕನ್ನಡಿಗರಿಗೆ ಮಹದುಪಕಾರವಾಗುತ್ತಿತ್ತು.

ಕನ್ನಡದಲ್ಲಿ ಶಾಸ್ತ್ರಗ್ರಂಥಗಳ, ಪಠ್ಯಪುಸ್ತಕಗಳ ರಚನೆಯಾದ ಮಾತ್ರಕ್ಕೇ ನಮ್ಮ ವೈಚಾರಿಕ ಪ್ರಗತಿಯಾಗುವುದಿಲ್ಲ. ಆಯಾ ಕ್ಷೇತ್ರಗಳಲ್ಲಿ ಇದುವರೆಗೆ ಆಗಿರುವ ಮತ್ತು ಸಮಕಾಲೀನ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕನ್ನಡದಲ್ಲಿ ಪುಸ್ತಕರಚನೆ ಮಾಡಿದರೆ ಮಾತ್ರ ಆ ಕ್ರಮ ಸಾರ್ಥಕವಾಗುತ್ತದೆ. ಇನ್ನು ಮುಂದೆ ಕನ್ನಡದಲ್ಲಿ ಪ್ರಕಟವಾಗುವ ತರ್ಕಶಾಸ್ತ್ರದ ಪಠ್ಯಪುಸ್ತಕಗಳಾದರೂ ಹೊಸ ಜಾಡು ಹಿಡಿಯಲಿ.

ಪುಸ್ತಕದ ಮುದ್ರಣ ಚೆನ್ನಾಗಿದೆ. ಅಲ್ಲಲ್ಲಿ ಇಣುಕುವ ಚಿಕ್ಕ ಪುಟ್ಟ ಅಚ್ಚಿನ ದೋಷಗಳನ್ನೂ ಅನುಸರಿಸಿರುವ ಹಳೆಯ ಜಾಡನ್ನೂ ಮರೆತರೆ ಈ ಪ್ರಯತ್ನ ಮೆಚ್ಚುವಂತಹುದು.

—ಶ್ರೀನಿವಾಸರಾವ್

ಹಿಂದೂ ವಿವಾಹ ಮತ್ತು ವಿಚ್ಛೇದನ, ಲೇಖಕರು: ಎಂ. ಎಸ್. ರಾಮರಾವ್, ಬಿ.ಎಸ್‌ಸಿ., ಎಂ.ಎ., ಬಿ.ಎಲ್., ಅಧ್ಯಾಪಕರು, ಶಾರದಾವಿಲಾಸ ಲಾ ಕಾಲೇಜು, ಮೈಸೂರು; **ಪುಟಗಳು: ೩೭; ಬೆಲೆ: ೭೫ ಪೈಸೆ**

ಶಾರದಾವಿಲಾಸ ಲಾ ಕಾಲೇಜು ಅಧ್ಯಯನ ಸಂಘದ ಕೃಪೆಯಿಂದ ಬೆಳಕು ಕಂಡ ಈ ಪುಟ್ಟ ಕೃತಿ ಚಿಕ್ಕದಾದರೂ ಸುಂದರವಾಗಿದೆ. ಇದು ಹಿಂದೂ ವಿವಾಹಕ್ಕೆ ಸಂಬಂಧಿಸಿದ ಕಾನೂನುಗಳ ಪರಿಚಯವನ್ನು ಓದುಗರಿಗೆ ಮಾಡಿಕೊಡುತ್ತದೆ. ಹಿಂದೂ ವಿವಾಹ ಶಾಸನ ಗಂಡಸರಿಗೆ ಒಬ್ಬರಿಗಿಂತ ಹೆಚ್ಚು ಮಂದಿಯನ್ನು ವಿವಾಹವಾಗಲು ಹಕ್ಕುಳ್ಳ ಸಂಪ್ರದಾಯಕ್ಕೆ ಮುಟ್ಟುಗೋಲು ಹಾಕಿದೆ. ಕಟ್ಟಿಕೊಂಡ ಹೆಂಡತಿಯನ್ನು ವಿನಾಕಾರಣ ಬಿಟ್ಟು ಅವಳಿಗೆ ಗತಿಗೋತ್ರ ಇಲ್ಲದಂತೆ ಮಾಡುವ ದುರ್ನೀತಿಗೆ ತಡೆಕಟ್ಟಿದೆ. ಕಾನೂನಿನಲ್ಲಿ ನಿರ್ದೇಶಿಸಿದ ಕಾರಣಗಳಿಗಾಗಿ ಹಿಂದೂ ಹೆಂಗಸು ಅಥವಾ ಗಂಡಸು ವಿವಾಹ ವಿಚ್ಛೇದನ ಮಾಡಿಕೊಳ್ಳಬಹುದು–ಬಿಡುಗಡೆ ಪಡೆಯಬಹುದು. ಭಾರತ ೧೯೫೫ರ ಹಿಂದೂ ವಿವಾಹ ಶಾಸನವನ್ನು (ದಿ ಹಿಂದೂ ಮ್ಯಾರೇಜ್ ಆಕ್ಟ್ ೧೯೫೫) ಮಾಡುವಾಗ ವಿವಾಹ ವಿಚ್ಛೇದನ ವಿಚಾರದಲ್ಲಿ

ಪಾಶ್ಚಾತ್ಯ ಕಾನೂನನ್ನು ಅನುಸರಿಸಿದೆಯೆನ್ನಬೇಕು. ಹಿಂದೂ ವಿವಾಹ ಶಾಸನ ವಿವಾಹಿತರು ಇಬ್ಬರೂ ಹಿಂದೂಗಳಿದ್ದಾಗ ಮಾತ್ರ ಅನ್ವಯಿಸುತ್ತದೆ. ಅದರಲ್ಲಿ ಯಾರಾದರೊಬ್ಬರು ಹಿಂದೂ ಅಲ್ಲದಿದ್ದರೆ ಅಥವಾ ಇಬ್ಬರೂ ಭಿನ್ನ ಮತೀಯಗಾಗಿದ್ದರೆ ೧೯೫೪ರ ಸ್ಪೆಷಲ್ ಮ್ಯಾರೇಜ್ ಆಕ್ಟ್ ಅಂತಹ ವಿವಾಹ ಸಂಬಂಧ ವಿಚಾರಗಳನ್ನು ಕಾನೂನಿನ ಕಕ್ಷೆಯಲ್ಲಿ ತಂದಿದೆ. ಈ ಪುಸ್ತಕದಲ್ಲಿ ಪ್ರಮಾದದಿಂದ ಈ ಸ್ಪೆಷಲ್ ಮ್ಯಾರೇಜ್ ಆಕ್ಟ್ ೧೯೫೫ರದು ಎಂದು ಹೇಳಿದೆ. ಇದು ಸರಿಯಲ್ಲ. ಈ ಕಾನೂನು ೧೯೫೪ರದು. ಈ ಕೃತಿ ಈ ಎರಡು ಶಾಸನಗಳನ್ನು ಪರಿಶೀಲಿಸಿದೆ. ಈ ವಿವಾಹ ಶಾಸನಗಳು ಬೇಕಾಗಿದ್ದುವೆ? ಬೇಡವಾಗಿದ್ದುವೆ? ಇವು ಸರಿಯಾಗಿವೆಯೇ?—ಇವೆಲ್ಲ ವಿವಾದಾಸ್ಪದ. ಆದರೆ ಮಾನವ ಜೀವನದಲ್ಲಿ ವಿವಾಹ ಅತಿ ಪ್ರಮುಖ ವಿಚಾರಗಳಲ್ಲಿ ಒಂದು. ವಿವಾಹಿತರು ಆ ವಿಚಾರದಲ್ಲಿ ಅವರವರ ಹಕ್ಕುಬಾಧ್ಯತೆಗಳನ್ನು ತಿಳಿದುಕೊಳ್ಳುವುದು ಅಗತ್ಯ. ಅದಕ್ಕೆ ಈ ಪುಸ್ತಕ ಕೈದೀವಿಗೆ.

ಹಿಂದೂ ದತ್ತಸ್ವೀಕಾರ, ಜೀವನಾಂಶ ಮತ್ತು ಪೋಷಣೆ, ಲೇಖಕರು: ಎಂ. ಎಸ್. ರಾಮರಾವ್, ಬಿ.ಎಸ್‌ಸಿ., ಎಂ.ಎ.. ಬಿ.ಎಲ್., ಅಧ್ಯಾಪಕರು, ಶಾರದಾವಿಲಾಸ ಲಾ ಕಾಲೇಜು, ಮೈಸೂರು; ಪುಟಗಳು: ೩೬ ; ಬೆಲೆ: ೭೫ ಪೈಸೆ

ಕನ್ನಡದಲ್ಲಿ ಕಾನೂನಿನ ವಿಚಾರವಾಗಿ ಬರೆಯುವುದು ಸುಲಭವಲ್ಲ. ಶ್ರೀ ರಾಮರಾಯರು ಈ ಕಿರುಹೊತ್ತಿಗೆಯಲ್ಲಿ ಹಿಂದೂ ದತ್ತಸ್ವೀಕಾರದ ವಿಚಾರವಾಗಿ ಮತ್ತು ಪೋಷಣೆಯ ವಿಚಾರವಾಗಿ ಭಾರತ ದಿ ಹಿಂದೂ ಅಡಾಪ್ಷನ್ಸ್ ಅಂಡ್ ಮೇನ್‌ಟಿನೆನ್ಸ್ ಆಕ್ಟ್ ೧೯೫೬ ಮತ್ತು ದಿ ಹಿಂದೂ ಮೈನಾರಿಟಿ ಅಂಡ್ ಗಾರ್ಡಿಯನ್‌ಷಿಪ್ ಆಕ್ಟ್ ೧೯೫೬ ಎಂಬ ಹೆಸರುಗಳಲ್ಲಿ ತಂದ ಕಾಯಿದೆಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಕನ್ನಡದಲ್ಲಿ ಬರೆದಿರುವರು. ಹಲವಾರು ಲೋಪದೋಷಗಳಿದ್ದರೂ ಹಿಂದೂ ಸಮಾಜವನ್ನು ಮೇಲೆತ್ತುವ ಉದ್ದೇಶದಿಂದ ಭಾರತ ಸರಕಾರ ಹಲವಾರು ಕಾಯಿದೆಗಳನ್ನು ನಿರ್ಮಿಸಿದೆ. ಅಂಥ ಕಾಯಿದೆಗಳಲ್ಲಿ ಮೇಲಿನವು ಎರಡು. ಆದರೆ ಕಾನೂನು ಜಾರಿಯಾದ ಬಳಿಕ ಅದರ ಲೋಪದೋಷಗಳನ್ನು ಲೆಕ್ಕಿಸುವುದು ಸರ್ವಸಾಮಾನ್ಯರಿಗೆ ಒಪ್ಪಿದ ವಿಚಾರವಲ್ಲ. ಕಾನೂನು ಏನು ಎಂಬುದನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬನ ಕರ್ತವ್ಯ. ಅದಕ್ಕೆ ಸರಿಯಾದ ಪುಸ್ತಕಗಳು ಬೇಕು. ಮೇಲಿನ ಕೃತಿ ಅವುಗಳಲ್ಲಿ ಒಂದು. ಭಾಷೆ ಸರಳವಾಗಿದೆ. ಓದುಗರಿಗೆ ಸಂಬಂಧಪಟ್ಟ ವಿಚಾರದಲ್ಲಿ ಸರಿಯಾದ ಮಾಹಿತಿ ಈ ಪುಸ್ತಕದಿಂದ ದೊರೆಯುತ್ತದೆ.

—ಕೈಂತಜೆ

ಸಂಪಾದಕೀಯ

'ಉತ್ಪಾದಿಸಿ, ಇಲ್ಲವೇ ವಿನಾಶ' ಎಂಬುದು ಆಧುನಿಕ ಅರ್ಥವ್ಯವಸ್ಥೆಗಳ ಘೋಷವಾಕ್ಯ. ಮಾನವನ ಅಸಂಖ್ಯಾತ ಬಯಕೆಗಳನ್ನು ಪೂರೈಸುವುದಷ್ಟೇ ಅಲ್ಲದೆ ಅವನಿಗೆ ಉದ್ಯೋಗ ದೊರಕಿಸಿಕೊಡುವುದೂ ವರಮಾನವನ್ನೊದಗಿಸುವುದೂ ಅವನು ಸರ್ವದಾ ಪ್ರವರ್ತನಶೀಲನಾಗಿರುವಂತೆ ಮಾಡುವುದೂ ಉತ್ಪಾದನೆಯೇ.

'ಮಾನವಿಕ ಕರ್ಣಾಟಕ'ದ ಪ್ರಥಮ ಸಂಚಿಕೆಯ ಬಿಡುಗಡೆಯ ಸಂದರ್ಭದಲ್ಲಿ ಪ್ರಧಾನ ಸಂಪಾದಕರಾದ ಡಾ. ಹಾ. ಮಾ. ನಾಯಕ ಅವರು ಹೇಳಿದಂತೆ, ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳ—ಮುಖ್ಯವಾಗಿ ಅಮೆರಿಕನ್ ವಿಶ್ವವಿದ್ಯಾನಿಲಯಗಳ—ಪಂಡಿತವರ್ಗಕ್ಕೂ ಇಂಥದೇ ಒಂದು ಘೋಷವಾಕ್ಯವಿದೆ. 'ಪ್ರಕಟಿಸಿ, ಇಲ್ಲವೇ ವಿನಾಶ' ಎಂಬುದು ಆ ವಾಕ್ಯ. ಒಬ್ಬ ಅಧ್ಯಾಪಕನ ಲೆಕ್ಕಕ್ಕೆ ಜಮೆಯಾಗುವ ಪ್ರಬಂಧಗಳ ಸಂಖ್ಯೆಯೆಷ್ಟು—ಎಂಬುದರ ಮೇಲಿಂದಲೇ ಎಷ್ಟೋ ಸಾರಿ ಆತನ ಅಳಿವು ಉಳಿವುಗಳ ನಿರ್ಣಯವಾಗುತ್ತದೆ. ಅನೇಕ ವೇಳೆ ಈ ಪ್ರಕಟನೆಗಳ ಪೈಕಿ ಎಷ್ಟೋ ಕೇವಲ ಜಳ್ಳಾಗಿರಬಹುದು. ಡಾ. ಕುವೆಂಪು ಅವರು ಹೇಳುವಂತೆ ಇದು ಒಂದು ಬಗೆಯ ಆನೆಕಾಲು ರೋಗವೇ ಆಗಬಹುದು.

ಆದರೂ ಚಿಂತನಮಂಥನಗಳಲ್ಲಿ ತೊಡಗಿರಬೇಕಾದ್ದು ವಿಶ್ವವಿದ್ಯಾನಿಲಯದಲ್ಲಿರುವ ಪ್ರತಿಯೊಬ್ಬ ಅಧ್ಯಾಪಕನ ಕರ್ತವ್ಯ. ಬೋಧನೆ—ಸಂಶೋಧನೆಗಳೆರಡೂ ಜೊತೆಜೊತೆಯಲ್ಲಿ ಸಾಗಬೇಕಾದುದು ಅವಶ್ಯ. ಒಂದರಿಂದ ಇನ್ನೊಂದಕ್ಕೆ ಚೈತನ್ಯ. 'ಮಾನವಿಕ ಕರ್ಣಾಟಕ' ಒಂದು ಅಭಿವ್ಯಕ್ತಿ ಮಾಧ್ಯಮ. ಆದರೆ ಆಯಾ ಕ್ಷೇತ್ರಗಳ ವಿದ್ವಾಂಸರು ಬರೆದ ಲೇಖನಗಳನ್ನೊಳಗೊಂಡು ಆಯಾ ಕ್ಷೇತ್ರಗಳ ವಿದ್ವಾಂಸರೇ ಓದುವಂಥ ಪತ್ರಿಕೆ ಇದಲ್ಲ. ಡಾ. ಕುವೆಂಪು ಅವರು ಆಶಿಸಿದಂತೆ ಇದು ಆ ಕ್ಷೇತ್ರಗಳಲ್ಲಿ ಆಸಕ್ತಿಯುಳ್ಳ ಎಲ್ಲರನ್ನೂ ದೃಷ್ಟಿಯಲ್ಲಿಟ್ಟುಕೊಂಡು ಬರೆದ ಪಾಂಡಿತ್ಯಪೂರ್ಣ ಲೇಖನಗಳನ್ನೊಳಗೊಂಡಿದ್ದು, ವಿದ್ವಾಂಸವೃಂದಕ್ಕೂ ಜ್ಞಾನಾಸಕ್ತ ಜನಕ್ಕೂ ಸಂಬಂಧ ಕಲ್ಪಿಸಬಯಸುತ್ತದೆ.

ವಿಶ್ವವಿದ್ಯಾನಿಲಯದ ಈ ಹೊಸ ತ್ರೈಮಾಸಿಕೆಗೆ ದೊರಕಿರುವ ಸ್ವಾಗತ ಉತ್ತೇಜಕವಾಗಿದೆ. ಕೆಲವು ವಿಷಯಗಳಲ್ಲಿ ನಿರೀಕ್ಷೆಗೂ ಮಿಗಿಲಾಗಿ ಅನೇಕ ವಿದ್ವಾಂಸರಿಂದ ಲೇಖನಗಳು ಬಂದಿವೆ. ಆದರೆ ಇನ್ನು ಕೆಲವು ವಿಷಯಗಳಲ್ಲಿ ಲೇಖನಗಳ ಕೊರತೆಯಿದೆ. ಇಂಥ ಒಂದು ಪತ್ರಿಕೆ ಎಲ್ಲ ವಿಷಯಗಳ ಪ್ರತಿನಿಧಿಸ್ವರೂಪವಾಗಿರಬೇಕೆಂದು ಬಯಸುವುದು ಸಹಜ. ಯಾವ ಒಂದು ವಿಷಯವನ್ನು

ಪ್ರತಿನಿಧಿಸದಿದ್ದರೂ ಆ ಅರಕೆ ಪತ್ರಿಕೆಯದು ಮಾತ್ರವಲ್ಲ. ಆ ವಿಷಯದ್ದೂ ಆಗುತ್ತದೆ, ನಾಡಿನದೂ ಆಗುತ್ತದೆ. ಹೀಗಾಗದಂತೆ ಎಲ್ಲ ಶಾಸ್ತ್ರಗಳ ವಿದ್ವಾಂಸರೂ 'ಮಾನವಿಕ ಕರ್ಣಾಟಕ'ವನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕು. ಲೇಖನಗಳನ್ನು ಬರೆದುಕೊಡುವುದರ ಜೊತೆಗೆ ತಂತಮ್ಮ ಕ್ಷೇತ್ರಗಳಲ್ಲಿನ ಅಧುನಾತನ ಪ್ರವೃತ್ತಿಗಳ ಮತ್ತು ಚಟುವಟಿಕೆಗಳ ಬಗ್ಗೆ ಇತರರಿಗೆ ತಿಳಿವಳಿಕೆ ನೀಡಬೇಕು. ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳ ವಾದಗ್ರಸ್ತ ವಿಚಾರಗಳ ಬಗ್ಗೆ ಚರ್ಚೆ ನಡೆಸಬೇಕು. ಅಪರಿಂದ ಇದನ್ನೆಲ್ಲ ನಿರೀಕ್ಷಿಸಲು ಎಲ್ಲರಿಗೂ ಹಕ್ಕುಂಟು. ಕನ್ನಡ ಮಾಧ್ಯಮದ ಯಶಸ್ಸಿಗೂ ಕನ್ನಡದಲ್ಲಿ ವಿಚಾರಸಾಹಿತ್ಯದ ಬೆಳವಣಿಗೆಗೂ ಮಾನಸಲೋಕದ ಈ ಬಗೆಯ ವ್ಯವಹಾರ ಅತ್ಯವಶ್ಯ.

ಈ ಸಂಚಿಕೆಯ ಲೇಖಕರು

೧ ಡಾ. ಎಂ. ಮಾದಯ್ಯ: ಮಾನಸಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದಲ್ಲಿ ರೀಡರ್

೨ ಬಿ. ಕೃಷ್ಣನ್ : ಮಾನಸಗಂಗೋತ್ರಿಯ ಮನಶ್ಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

೩ ಡಾ. ಬಾ. ರಾ. ಗೋಪಾಲ: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಚೀನ ಭಾರತೀಯ ಇತಿಹಾಸದ ರೀಡರ್

೪ ಸಿ. ಎಂ. ಮುನಿರಾಮಪ್ಪ: ಮಾನಸಗಂಗೋತ್ರಿಯ ವಾಣಿಜ್ಯ ವಿಭಾಗದಲ್ಲಿ ರೀಡರ್

೫ ಟಿ. ವಿ. ಸುಬ್ರಹ್ಮಣ್ಯಂ: ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಾಲಯದಲ್ಲಿ ಸಹಾಯಕ ಗ್ರಂಥಪಾಲರು

೬ ಜಿ. ಆರ್. ರಂಗಸ್ವಾಮಯ್ಯ : ಮಾನಸಗಂಗೋತ್ರಿಯ ಇತಿಹಾಸ ವಿಭಾಗದಲ್ಲಿ ಅಧ್ಯಾಪಕರು

೭ ಕೆ. ಜಿ. ರಾಮಕೃಷ್ಣ : ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ವಾಣಿಜ್ಯ ಅಧ್ಯಾಪಕರು

೮ ಎನ್. ಪ್ರಭುಸ್ವಾಮಿ: ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರು

೯ ಕುಕ್ಕಿಲ ಕೃಷ್ಣಭಟ್ಟ : ಕನ್ನಡ ಸಂಸ್ಕೃತ ವಿದ್ವಾಂಸರು, ಕಲಾ ವಿಮರ್ಶಕರು

೧೦ ಶ್ರೀನಿವಾಸರಾವ್: ಮಾನಸಗಂಗೋತ್ರಿಯ ತತ್ತ್ವಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೧೧ ಡಿ. ಎನ್. ಸೀತಾರಾಮಯ್ಯ: ಮಾನಸಗಂಗೋತ್ರಿಯ ಶಿಕ್ಷಣ ವಿಭಾಗದಲ್ಲಿ ರೀಡರ್

೧೨ ಡಾ. ಪಿ. ಗುರುರಾಜ ಭಟ್: ದಕ್ಷಿಣ ಕನ್ನಡ ಜಿಲ್ಲೆಯ ಕಲ್ಯಾಣಪುರದಲ್ಲಿರುವ ಸೇಂಟ್ ಮಿಲ್ಯಾಗ್ರೀಸ್ ಕಾಲೇಜಿನ ಪ್ರಿನ್ಸಿಪಾಲರು

೧೩ ಸಿ.ಕೆ.ಆರ್. : ಸಿ. ಕೆ. ರೇಣುಕಾರ್ಯ, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರು

೧೪ ಎಚ್.ಎಸ್.ಕೆ. : ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಕನ್ನಡ ವಿಶ್ವಕೋಶದ ಮಾನವಿಕ ವಿಭಾಗದ ಸಂಪಾದಕರು; 'ಮಾನವಿಕ ಕರ್ಣಾಟಕ'ದ ಸಂಪಾದಕರಲ್ಲೊಬ್ಬರು

೧೫ ಎ.ವಿ.ಎನ್. : ಡಾ. ಎ. ವಿ. ನರಸಿಂಹಮೂರ್ತಿ, ಮಾನಸಗಂಗೋತ್ರಿಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗದಲ್ಲಿ ರೀಡರ್; 'ಮಾನವಿಕ ಕರ್ಣಾಟಕ'ದ ಸಂಪಾದಕರಲ್ಲೊಬ್ಬರು

೧೬ ಡಾ. ಎಚ್. ಎಂ. ಸದಾಶಿವಯ್ಯ : ಮಾನಸಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರು

೧೭ ಕೊ.ವ್ಯಾ.ರ : ಡಾ. ಕೆ. ವಿ. ರಮೇಶ್, ಡೆಪ್ಯುಟಿ ಸೂಪರಿಂಟೆಂಡಿಂಗ್ ಎಪಿಗ್ರಫಿಸ್ಟ್, ಮೈಸೂರು

೧೮ 'ಕ್ಯೆಂತಜೆ': ಕೆ. ಗೋವಿಂದಭಟ್ಟ, ಮಂಗಳೂರಿನ ವಕೀಲರು

WO 8428—MUPM—2,000+25—12-2-71

ಮಾನವಿಕ ಕರ್ಣಾಟಕ

ವಾರ್ಷಿಕ ಚಂದಾ

(ಅಂಚೆವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	೪ ರೂ.
ಸಾಮಾನ್ಯ ಚಂದಾದಾರರಿಗೆ	೬ ರೂ.
ಸಂಸ್ಥೆಗಳಿಗೆ	೮ ರೂ.
ಆಜೀವ ಸದಸ್ಯತ್ವ	೧೦೦ ರೂ.

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ
ಮೈಸೂರು–೬